ಹುಬ್ಬಳ್ಳಿ
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 30 ಮಾರ್ಚ್ 2026
ಸಂಪುಟ 16, ಸಂಚಿಕೆ 5, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸರ್ಕಾರ ನೀಡುವ ಮಾಹಿತಿ ಮಾತ್ರ ನಂಬಿ | 02
2 ಕ್ಷೇತ್ರಗಳಿಂದ ದಳಪತಿ ಸ್ಪರ್ಧೆ | 02
ನುಸುಳುಕೋರರನ್ನು ಹೊರದಬ್ಬುತ್ತೇವೆ | 02

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಮಘೆ

ದಿನದ ಮಾತು

ಲೋಕದಲ್ಲಿ ಜೀವನವು ಅಸ್ಥಿರ, ಯೌವನ, ಧನ ಅಸ್ಥಿರ. ಹೆಂಡತಿ ಮಕ್ಕಳು ಅಸ್ಥಿರ. ಆದರೆ ಧರ್ಮ, ಕೀರ್ತಿಗಳು ಮಾತ್ರ ಸ್ಥಿರ.

▲ಶ್ರೀ ಶಂಕರಾಚಾರ್ಯರು

ಕೊಲಬಾದಲ್ಲಿ ಅಕ್ಷರಕ್ರಾಂತಿ ಮಾಡಿದ ರೂಬಲ್ ನಾಗಿ

ನೇರ ನೋಟ

•ದು.ಗು. ಲಕ್ಷ್ಮಣ

•ಪುಟ ೬

ಕಿರುಸುದ್ದಿ

ಸಾಹಿತ್ಯ ಅಕಾಡೆಮಿಯಿಂದ ಅಂಬೇಡ್ಕರ್ ವಿಶೇಷ ಪುಸ್ತಕ

•**ಬೆಂಗಳೂರು:** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಎತ್ತಿ ಹಿಡಿಯುವ ಸಲುವಾಗಿ ಅಂಬೇಡ್ಕರ್ ಕುರಿತ ವಿಶೇಷ ಕೃತಿ ಹೊರತರಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಜ್ಜಾಗಿದೆ. ಪುಸ್ತಕ ರಚನೆಗಾಗಿ ಸರ್ಕಾರವು ಅಕಾಡೆಮಿಗೆ 30 ಲಕ್ಷ ರೂ. ವಿಶೇಷ ಅನುದಾನ ನೀಡಿದೆ. ಪುಸ್ತಕವು ಸುಮಾರು 250 ಪುಟಗಳನ್ನು ಹೊಂದಿರಲಿದ್ದು, ಮಕ್ಕಳು ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿರಲಿದೆ.

•ಪುಟ ೪

ಮಾದಕವಸ್ತುಮುಕ್ತ ರಾಜ್ಯ: ಸಿಎಂ ಸಿದ್ದರಾಮಯ್ಯ

•**ಮೈಸೂರು:** ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವುದು ನಮ್ಮ ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಭಾನುವಾರ ಮೈಸೂರಿನಲ್ಲಿ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಮಾತನಾಡಿದ ಅವರು, ಮಾದಕವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಪೊಲೀಸರು ಕಾರ್ಯಪ್ರವೃತ್ತರಾಗಬೇಕು ಎಂದು ಸೂಚಿಸಿದರು.

•ಪುಟ ೩

ಪರಪ್ಪನ ಜೈಲ್ ವಿಡಿಯೋ 3 ಸಿಬ್ಬಂದಿ ಅಮಾನತು

•**ಬೆಂಗಳೂರು:** ಕೆಲ ದಿನಗಳ ಹಿಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಮೂರು ವಿಡಿಯೋಗಳು ತೀವ್ರ ಸಂಚಲನ ಸೃಷ್ಟಿಸಿದ್ದು, ಉದ್ದೇಶಪೂರ್ವಕವಾಗಿ ಡಿಜಿಪಿ ಅಲೋಕ್ ಕುಮಾರ್ ವಿರುದ್ಧವೇ ವಿಡಿಯೋದಲ್ಲಿ ಗಂಭೀರ ಆರೋಪ ಮಾಡಲಾಗಿದೆ. ಇದರ ಬೆನ್ನಲ್ಲೇ ಮೂವರು ಸಿಬ್ಬಂದಿ ಅಮಾನತುಗೊಳಿಸಲಾಗಿದೆ.

•ಪುಟ ೪

ಈಜಲು ತೆರಳಿದ್ದ ನಾಲ್ವರು ಮಕ್ಕಳ ಮೃತ್ಯು

•ಪುಟ ೩

ಶ್ರೀರಾಮನವಮಿ ಪ್ರಸಾದ ಸೇವಿಸಿ 200 ಮಂದಿ ಅಸ್ವಸ್ಥ

•ಪುಟ ೩

ಸಮುದಾಯ ಚಿಕ್ಕದು, ಸಾಧನೆ ದೊಡ್ಡದು

•ಪುಟ ೩

ಪಾಲಕ್ಕಾಡ್ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭರವಸೆ

ಕೇರಳ ಚುಕ್ಕಾಣಿ ನಮ್ದೇ

•**ಪಾಲಕ್ಕಾಡ್:** ಬಿಜೆಪಿಯ ಬಿ-ಟೀಮ್‌ಗಳೆಂದು ಯುಡಿಎಫ್ ಮತ್ತು ಎಲ್‌ಡಿಎಫ್ ಪರಸ್ಪರ ಆರೋಪಿಸುತ್ತ ಕೇರಳ ಜನರ ದಾರಿತಪ್ಪಿಸುತ್ತಿದ್ದಾರೆ. ಬಿಜೆಪಿಯೇ ಕೇರಳದ ನಿಜವಾದ ಎ-ಟೀಮ್ ಎಂಬುದನ್ನು ಎರಡೂ ಬಣಗಳು ಪರೋಕ್ಷವಾಗಿ ಒಪ್ಪಿವೆ. ನಿಮ್ಮೆಲ್ಲರ ಆಶೀರ್ವಾದದೊಂದಿಗೆ ಕೇರಳದಲ್ಲಿ ಮುಂದಿನ ಸರ್ಕಾರ ರಚಿಸಲಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.

ಪಾಲಕ್ಕಾಡ್‌ನಲ್ಲಿ ಆಯೋಜಿಸಿದ್ದ ಬೃಹತ್ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ, ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳೆರಡೂ ದಶಕಗಳಿಂದ ಕೇರಳವನ್ನು ಲೂಟಿ ಮಾಡುತ್ತಲೇ ಬಂದಿವೆ. ಇವುಗಳೆರಡರ ಬಲೆಗೆ ಸಿಲುಕಿರುವ ನಮ್ಮ ಕೇರಳ ಚಡಪಡಿಸುತ್ತಿದೆ ಎಂದು ಹೇಳಿದ್ದಾರೆ.

ಕೇರಳದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮುಂದಿನ ಸರ್ಕಾರವನ್ನು ರಚಿಸಲಿದೆ ಎಂದು ಮೋದಿ ಭವಿಷ್ಯ ನುಡಿದಿದ್ದಾರೆ. ಕೇರಳ ಜನತೆಯ ಆಶೀರ್ವಾದ ಹಾಗೂ ನಿಮ್ಮೆಲ್ಲರ ಬೆಂಬಲದಿಂದ ನಾವಿಲ್ಲಿ ಮುಂದಿನ ಸರ್ಕಾರ ರಚಿಸಲಿದ್ದೇವೆ. ಕೇರಳದಲ್ಲಿ ಜನಸೇವೆ ಮಾಡುವ ಯಾವುದೇ ಅವಕಾಶವನ್ನು ಬಿಟ್ಟುಕೊಡುವುದಿಲ್ಲ ಎಂದು ಪ್ರಧಾನಿ ಮೋದಿ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬದಲಾವಣೆಬಯಸುತ್ತಿದೆಕೇರಳ: ಈ ಬಾರಿ ಕೇರಳದಲ್ಲಿ ವಿಶೇಷವಾದ ಬದಲಾವಣೆಯ ವಾತಾವರಣವನ್ನು ನೋಡುತ್ತಿದ್ದೇನೆ. ಕೇರಳ ಬದಲಾವಣೆಯ ಸಂದೇಶ ರವಾನಿಸುತ್ತಿದೆ.

➡ಪುಟ ೪



- ದಶಕಗಳಿಂದ ಯುಡಿಎಫ್, ಎಲ್‌ಡಿಎಫ್ ಭ್ರಷ್ಟಾಚಾರ
- ಇವೆರಡೂ ಬಣಗಳಿಂದ ಅವಕಾಶವಾದಿ ರಾಜಕೀಯ
- ಬದಲಾವಣೆಯ ಸಂದೇಶ ರವಾನಿಸಿದೆ ಕೇರಳ
- ಬಿಜೆಪಿಯೇ ಕೇರಳದ ಅಸಲಿ ಎ-ಟೀಮ್

ತ್ರಿಶ್ಶೂರ್ ರೋಡ್‌ಶೋ: 50 ಸಾವಿರ ಜನ ಭಾಗಿ!

ಎನ್‌ಡಿಎ ಚುನಾವಣಾ ಪ್ರಚಾರದ ಅಂಗವಾಗಿ ತ್ರಿಶ್ಶೂರ್‌ನಲ್ಲಿ ಆಯೋಜಿಸಿದ್ದ ಬೃಹತ್ ರೋಡ್‌ಶೋನಲ್ಲಿ ಪ್ರಧಾನಿ ಮೋದಿ ಪಾಲ್ಗೊಂಡಿದ್ದು, ರಸ್ತೆಯ ಎರಡೂ ಬದಿಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಅವರನ್ನು ಸ್ವಾಗತಿಸಿದರು. 900 ಮೀ. ದೂರದವರೆಗೆ ವ್ಯಾಪಿಸಿದ್ದ ರೋಡ್‌ಶೋನಲ್ಲಿ 50,000ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರೆಂದು ಬಿಜೆಪಿ ಮೂಲಗಳು ತಿಳಿಸಿವೆ. ತ್ರಿಶ್ಶೂರ್ ಜಿಲ್ಲೆಯ ಎನ್‌ಡಿಎ ಅಭ್ಯರ್ಥಿಗಳಾದ ಪದ್ಮಜಾ ವೇಣುಗೋಪಾಲ್ ಮತ್ತು ಕೆ.ಕೆ. ಅನೀಶ್ ಕುಮಾರ್ ಹಾಗೂ ಕೇಂದ್ರ ಸಚಿವ ಸುರೇಶ್ ಗೋಪಿ ಪ್ರಧಾನಿ ಜತೆಗಿದ್ದರು.

ಹೆಚ್ಚಿದ ಎನ್‌ಡಿಎ ಜನಪ್ರಿಯತೆ

ಕೇರಳದಲ್ಲಿ ಎನ್‌ಡಿಎ ಜನಪ್ರಿಯತೆ ಹೆಚ್ಚಾಗುತ್ತಿದೆ. ಜನರಿಗೆ ಬಿಜೆಪಿಯ ಮೇಲಿನ ವಿಶ್ವಾಸ ಹೆಚ್ಚಾಗುತ್ತಿದೆ. ಭಾರೀ ಸಂಖ್ಯೆಯಲ್ಲಿ ಸೇರಿ ಬಿಜೆಪಿಗೆ ನಿಮ್ಮ ಬೆಂಬಲವನ್ನು ತೋರಿಸಿದ್ದೀರಿ. ಪಾಲಕ್ಕಾಡ್‌ನ ಇಂದಿನ ವಾತಾವರಣವು ಕೇರಳದ ಬಯಕೆಯನ್ನು ತೋರಿಸುತ್ತದೆ. ಕೇರಳದ ಯುವಜನತೆ ಬಿಜೆಪಿ ಮತ್ತು ಎನ್‌ಡಿಎ ಮೇಲೆ ವಿಶ್ವಾಸ ಹೊಂದಿರುವುದಲ್ಲದೆ, ಮಹಿಳೆಯರು ಮತ್ತು ಕೃಷಿಕರೂ ಬಿಜೆಪಿ ಮತ್ತು ಎನ್‌ಡಿಎಯನ್ನು ಪ್ರೀತಿಸುತ್ತಾರೆ ಎಂದು ಮೋದಿ ಹೇಳಿದ್ದಾರೆ.

ಲೂಟಿ ಹಣ ಜನರಿಗೆ ವಾಪಸ್

ಪಿಣರಾಯಿ ಸರ್ಕಾರದ ಮೇಲೆ ಕೇಂದ್ರ ಸರ್ಕಾರದ ಹಣಕಾಸಿನ ನೆರವನ್ನು ದುರ್ಬಳಕೆಯ ಆರೋಪ ಹೊರಿಸಿದ ಮೋದಿ, ನಿಮಗೆ (ಜನರಿಗೆ) ಸೇರಬೇಕಾದ ಹಣವನ್ನು ಭ್ರಷ್ಟಾಚಾರ ನಡೆಸಿ ಲೂಟಿ ಮಾಡಿದ್ದಾರೆ. ಎನ್‌ಡಿಎ ಸರ್ಕಾರ ಅಧಿಕಾರಕ್ಕೇರಿದ ತಕ್ಷಣ ಎಲ್‌ಡಿಎಫ್ ಸರ್ಕಾರ ನಿಮ್ಮಿಂದ ಲೂಟಿ ಮಾಡಿದ ಹಣವನ್ನು ವಾಪಸ್ ನೀಡುವ ಮೂಲಕ ಕೇರಳದ ಆರ್ಥಿಕ ಪ್ರಗತಿ ಯನ್ನು ಉತ್ತೇಜಿಸುತ್ತೇವೆ ಎಂದು ಮೋದಿ ಭರವಸೆ ನೀಡಿದ್ದಾರೆ.

5 ಲಕ್ಷ ಕೋಟಿ ಸಾಲದ ಹೊರೆ!

ಕಳೆದ 10 ವರ್ಷಗಳಲ್ಲಿ ಎಲ್‌ಡಿಎಫ್ ಸರ್ಕಾರ ಕೇರಳವನ್ನು 5 ಲಕ್ಷ ಕೋಟಿ ರೂ. ಸಾಲದ ಹೊರೆಗೆ ದೂಡಿದೆ. ಕಳೆದೊಂದು ದಶಕದಲ್ಲಿ ಕೇರಳದ ಸಾಲದ ಹೊರೆ ದ್ವಿಗುಣಗೊಂಡಿದೆ. ಜನರ ಹಣವೆಲ್ಲವೂ ಎಲ್‌ಡಿಎಫ್ ಜೇಬನ್ನು ಸೇರಿಕೊಂಡಿದೆ ಎಂದು ಮೋದಿ ಆರೋಪಿಸಿದ್ದಾರೆ.

ಧ್ವನಿವರ್ಧಕದಲ್ಲಿ ಹೊಗೆ, ಆತಂಕ

ಮೋದಿ ರ್‍ಯಾಲಿ ಆರಂಭಕ್ಕೂ ಮುನ್ನ ಧ್ವನಿವರ್ಧಕದಲ್ಲಿ ಹೊಗೆ ಕಂಡುಬಂದಿದ್ದು, ಸ್ವಲ್ಪ ಸಮಯ ಆತಂಕ ಸೃಷ್ಟಿಸಿತ್ತು. ಧ್ವನಿವರ್ಧಕದಿಂದ ಹೊಗೆ ಬಂದಿರುವುದನ್ನು ಪೊಲೀಸರು ದೃಢೀಕರಿಸಿದ್ದಾರೆ. ಜಿಲ್ಲೆಯ ಕೋಟ್ಟ ಮೈದಾನದಲ್ಲಿ ಮೋದಿ ಆಗಮಿಸುವ ಮುನ್ನ ಈ ಘಟನೆ ನಡೆದಿತ್ತು.

ಎಲ್ಲಾ ವಲಯಗಳಿಗೂ ನಿರಂತರ ಪೂರೈಕೆ, ಯಾವುದೇ ಆತಂಕ ಬೇಡ ಎಂದ ಸಚಿವ

ಆಟೋ ಎಲ್‌ಪಿಜಿಗಿಲ್ಲ ಕೊರತೆ: ಮುನಿಯಪ್ಪ



•**ಬೆಂಗಳೂರು:** ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ವಿಶೇಷವಾಗಿ ಆಟೋ ಎಲ್‌ಪಿಜಿಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದ್ದಾರೆ.

ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳು (ಎಎಲ್‌ಡಿಎಸ್) ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 31 ಕೇಂದ್ರಗಳು ಬೆಂಗಳೂರು ನಗರವೊಂದರಲ್ಲೇ ಇವೆ. ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ (ಒಎಂಸಿಎಸ್) ಐಒಸಿಎಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ 77.74 ರೂ. ದರದಲ್ಲಿ ಆಟೋ ಎಲ್‌ಪಿಜಿ ಪೂರೈಸುತ್ತಿವೆ ಎಂದು ಮಾಹಿತಿ ನೀಡಿದ್ದಾರೆ.

ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ವಿತರಿಸಲಾಗಿದೆ. ಇಸ್ರೇಲ್-ಇರಾನ್ ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ ಎಂದು ವಿವರಿಸಿದ್ದಾರೆ.

ವಿದ್ಯುತ್-ಸೌರ ಸ್ಟವ್ ಬಳಸಿ

ಸಾರ್ವಜನಿಕರು, ವಾಣಿಜ್ಯ ಬಳಕೆದಾರರು ಅನಾವಶ್ಯಕವಾಗಿ ಮುಂಗಡ ಕಾಯ್ದಿರಿಸದೆ ಸರ್ಕಾರದೊಂದಿಗೆ ಸಹಕರಿಸುವಂತೆ ಹಾಗೂ ವಾಣಿಜ್ಯ ಬಳಕೆದಾರರು ಸಾಧ್ಯವಾದಷ್ಟು ವಿದ್ಯುತ್ ಸ್ಟವ್, ಸೌರ ಆಧಾರಿತ ಅಡುಗೆ ವ್ಯವಸ್ಥೆ ಬಳಸುವಂತೆ ಸಚಿವ ಕೆ.ಎಚ್.ಮುನಿಯಪ್ಪ ಮನವಿ ಮಾಡಿದ್ದಾರೆ. ಹೆಚ್ಚು ದರ ವಸೂಲಿ ಮಾಡಿ ಕಾಳಸಂತೆಯಲ್ಲಿ ಗೃಹಬಳಕೆ, ವಾಣಿಜ್ಯ ಬಳಕೆ, ಆಟೋ ಎಲ್‌ಪಿಜಿಗಳನ್ನು ಮಾರಾಟ ಮಾಡುವುದು ಕಂಡುಬಂದಲ್ಲಿ ಕಾನೂನು ಕ್ರಮವಲ್ಲದೆ ಪರವಾನಗಿ ರದ್ದುಗೊಳಿಸುವ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಸಿಲಿಂಡರ್ ಪೂರೈಕೆ ಭರವಸೆ ದೊರೆತಿರುವುದರಿಂದ ರಾಜ್ಯದಲ್ಲಿ ಎಲ್‌ಪಿಜಿ ಪೂರೈಕೆ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಗಮನಾರ್ಹವಾಗಿ ಸುಧಾರಿಸುವ ನಿರೀಕ್ಷೆ ಇದೆ. ಶಿಕ್ಷಣ ಸಂಸ್ಥೆ, ವಸತಿ ನಿಲಯ, ಆಸ್ಪತ್ರೆ ಮತ್ತು ಇತರೆ ಅವಶ್ಯಕ ಸಂಸ್ಥೆಗಳಿಗೆ ಪ್ರತಿದಿನ 4200 ಸಿಲಿಂಡರ್ ಹಂಚಿಕೆ ಮಾಡಲಾಗಿದೆ. ಸರ್ಕಾರಿ, ಪಿಎಸ್‌ಯು ಸಂಸ್ಥೆ, ವಿಮಾನ ನಿಲ್ದಾಣ, ರೈಲು, ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳಿಗೆ 1200 ಸಿಲಿಂಡರ್ ಹಂಚಲಾಗಿದೆ.

➡ಪುಟ ೪

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಆರೋಪಿ ತಪ್ಪೊಪ್ಪಿಗೆ

ನಾನು ತಪ್ಪು ಮಾಡಿದ್ದೇನೆ: ಶಾರೀಕ್

•**ಬೆಂಗಳೂರು/ಮಂಗಳೂರು:** ನಾಲ್ಕು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರೀಕ್ ತಪ್ಪೊಪ್ಪಿಕೊಂಡಿದ್ದಾನೆ.



ಈತನ ತಪ್ಪೊಪ್ಪಿಗೆ ಅರ್ಜಿಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಿಶೇಷ ನ್ಯಾಯಾಲಯ ಅಂಗೀಕರಿಸಿದೆ. ನಾನು ತಪ್ಪು ಮಾಡಿದ್ದೇನೆ. ನನಗೆ ಪಶ್ಚಾತ್ತಾಪ ವಾಗಿದೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ ಎಂದು ತಪ್ಪೊಪ್ಪಿಗೆಯಲ್ಲಿ ಹೇಳಿಕೊಂಡಿದ್ದಾನೆ.

ಪ್ರಕರಣ ಸಂಬಂಧ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಶಾರೀಕ್, 2025ರ ಡಿಸೆಂಬರ್‌ನಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 229 ಅಡಿಯಲ್ಲಿ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ಈ ಅರ್ಜಿಯನ್ನು ಅಂಗೀಕರಿಸಿದೆ.

ಏಪ್ರಿಲ್ 10ಕ್ಕೆ ಶಿಕ್ಷೆ ಪ್ರಕಟ

ಮೂರು ತಿಂಗಳ ಹಿಂದೆ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿದ್ದು ಏಪ್ರಿಲ್ 10ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಿದೆ. ಕುಕ್ಕರ್ ಬಾಂಬ್ ಸ್ಫೋಟ ಕುರಿತಂತೆ ಎನ್‌ಐಎ ಅಧಿಕಾರಿಗಳು ತನಿಖೆ ನಡೆಸಿದ್ದರು.

ಪ್ರಕರಣ ಹಿನ್ನೆಲೆ: 2022ರ ನವೆಂಬರ್ 19ರಂದು ಶಿವಮೊಗ್ಗ ಮೂಲದ 27 ವರ್ಷದ ಶಾರೀಕ್, ಆಟೋರಿಕ್ಷಾದಲ್ಲಿ ಸಾಗಿಸುತ್ತಿದ್ದ ಪ್ರೆಶರ್ ಕುಕ್ಕರ್ ಬಾಂಬ್ ಅವನ ಮಡಿಲಲ್ಲೇ ಸ್ಫೋಟಗೊಂಡ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ. ಚಿಕಿತ್ಸೆ ಬಳಿಕ ಶಾರೀಕ್‌ನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಕುಕ್ಕರ್‌ನಲ್ಲಿ ಐಇಡಿ ಇಟ್ಟು ಸ್ಫೋಟ ಮಾಡಿದ್ದೇನೆ. ಮೂರು ತಿಂಗಳ ವಿಚಾರಣೆ ಬಳಿಕ ನ್ಯಾಯಾಲಯವು ಈ ಅರ್ಜಿಯನ್ನು ಮಾನ್ಯಗೊಳಿಸಿದೆ.

ಮಧ್ಯಪ್ರಾಚ್ಯ ಯುದ್ಧ: ಅಮೆರಿಕಕ್ಕೆ ಇರಾನ್ ಖಡಕ್ ಎಚ್ಚರಿಕೆ

ಭೂ ದಾಳಿ ನಡೆದರೆ ಪ್ರತಿದಾಳಿ

•**ದುಬೈ:** ಅಮೆರಿಕ ಭೂ ದಾಳಿ ನಡೆಸಿದರೆ ಅದರ ಸೈನಿಕರನ್ನು ಬೆಂಕಿಗೆ ತಳ್ಳಲಾಗುತ್ತದೆ ಎಂದು ಇರಾನ್‌ನ ಉನ್ನತ ಅಧಿಕಾರಿಯೊಬ್ಬರು ಕಠಿಣ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ, ತಿಂಗಳಿನಿಂದ ಮುಂದುವರಿದಿರುವ ಯುದ್ಧಕ್ಕೆ ತೆರೆ ಎಳೆಯಲು ಪ್ರಾದೇಶಿಕ ದೇಶಗಳ ರಾಜತಾಂತ್ರಿಕರು ಪಾಕಿಸ್ತಾನದಲ್ಲಿ ಸಭೆ ಸೇರಿದ್ದಾರೆ.



ಅಮೆರಿಕ ಮಧ್ಯಪ್ರಾಚ್ಯಕ್ಕೆ ಹೆಚ್ಚುವರಿ ಸೈನಿಕರನ್ನು ಕಳುಹಿಸುವುದಯನ್ನು ಮಾತುಕತೆಯ ವಿರೋಧಿ ಕ್ರಮವೆಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್ ಟೀಕಿಸಿದ್ದಾರೆ. ಇರಾನ್ ತನ್ನ ಭೂಮಿಯಲ್ಲಿ ಯಾವುದೇ ಅಮೆರಿಕ ಪಡೆಗಳನ್ನು ಎದುರಿಸಲು ಸಿದ್ಧವಿದ್ದು, ಅಮೆರಿಕ ಸೈನಿಕರು ಹಾಗೂ ಅದರ ಮಿತ್ರ ರಾಷ್ಟ್ರಗಳ ವಿರುದ್ಧ ಕಠಿಣ ಪ್ರತಿಕ್ರಿಯೆ ನೀಡುವುದಾಗಿ ತಿಳಿಸಿದ್ದಾರೆ. ಇದರ ನಡುವೆ, ಪಾಕಿಸ್ತಾನದಲ್ಲಿ ಸೌದಿ ಅರೇಬಿಯಾ, ಟರ್ಕಿ ಮತ್ತು ಈಜಿಪ್ಟ್ ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ನಲ್ಲಿ ಅಮೆರಿಕ ಹಾಗೂ ಇಸ್ರೇಲ್ ಪ್ರತಿನಿಧಿಗಳು ಇಲ್ಲದೇ ಮಾತುಕತೆ ನಡೆಸುತ್ತಿದ್ದಾರೆ. ಆದರೆ ಯುದ್ಧ ಶಮನದ ಲಕ್ಷಣಗಳು ಕಾಣಿಸುತ್ತಿಲ್ಲ. ಇಸ್ರೇಲ್ ಮತ್ತು ಅಮೆರಿಕ ಇರಾನ್ ಮೇಲೆ ದಾಳಿಗಳನ್ನು ಮುಂದುವರಿಸುತ್ತಿದ್ದು, ಇರಾನ್ ಪ್ರಾದೇಶಿಕವಾಗಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿದೆ.

➡ಪುಟ ೪

ಅಮೆರಿಕದ ಅತ್ಯಾಧುನಿಕ ಕಣ್ಗಾವಲು ವಿಮಾನ ಧ್ವಂಸ?

ಯುದ್ಧಭೂಮಿಯಲ್ಲಿ ಸೈನಿಕರ ಕಣ್ಣು, ಕಿವಿಯಂತೆ ಕೆಲಸ ಮಾಡುವ ಅಮೆರಿಕದ ಕಣ್ಗಾವಲು ವಿಮಾನ ಇ3-ಸೆಂಟ್ರಿ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿ ನಾಶಪಡಿಸಿದೆ. ಈ ದಾಳಿಯಲ್ಲಿ ಅಮೆರಿಕದ 10 ಯೋಧರು ಗಾಯಗೊಂಡಿದ್ದಾರೆ. ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ವಾಯುನೆಲೆಯಲ್ಲಿ ಈ ಘಟನೆ ನಡೆದಿದೆ. ಅಮೆರಿಕದ ನಿಯತಕಾಲಿಕೆ ವಾಲ್ ಸ್ಟ್ರೀಟ್ ಜರ್ನಲ್ ಈ ಮಾಹಿತಿ ಬಹಿರಂಗಪಡಿಸಿದೆ.

ಹಿಂದಿ ಕೈಬಿಟ್ಟದ್ದು ಸರಿಯಲ್ಲ



ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿಕೆ

•**ಬೆಂಗಳೂರು:** ಕೇವಲ ರಾಜಕೀಯ ವಿರೋಧಕ್ಕಾಗಿ, ಕೇಂದ್ರ ಸರ್ಕಾರದ ಮೇಲಿನ ದ್ವೇಷಕ್ಕಾಗಿ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟ ಆಡುತ್ತಿರುವ ರಾಜ್ಯ ಸರ್ಕಾರದ ತೀರ್ಮಾನ ವಿವೇಕರಹಿತ ಹಾಗೂ ಆಘಾತಕಾರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅವರು, ಹಿಂದಿ ಭಾಷೆ ಏಕಾಏಕಿ ಕೈಬಿಡುವ ನಿಲುವು ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ. ಅದರಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದ ಹಠಾತ್ ನಿಲುವು ವಿದ್ಯಾರ್ಥಿಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

➡ಪುಟ ೪

ರಾಜ್ಯದಲಿ ಬೇಸಿಗೆ ಮಳೆ ಚೇತರಿಕೆ

•**ಬೆಂಗಳೂರು:** ಕರ್ನಾಟಕದ ಒಳನಾಡಿನಾದ್ಯಂತ ಸಮುದ್ರ ಮಟ್ಟದಿಂದ ಸರಾಸರಿ 900 ಮೀಟರ್ ಎತ್ತರದಲ್ಲಿ ಚಂಡಮಾರುತದ ಪ್ರಸರಣದಿಂದಾಗಿ ರಾಜ್ಯದಲ್ಲಿ ಬೇಸಿಗೆ ಮಳೆ ಚೇತರಿಕೆ ಕಂಡಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ರಾಜ್ಯದ ಕರಾವಳಿ ಮತ್ತು ಒಳನಾಡಿನಲ್ಲಿ ಇನ್ನೂ ಒಂದು ವಾರ ಮಳೆಯಾಗುವ ಸಾಧ್ಯತೆಗಳಿವೆ. ಕಳೆದ 2-3 ಮೂರು ವಾರಗಳಿಂದ ರಾಜ್ಯದ ಅಲ್ಲಲ್ಲಿ ಚದುರಿದಂತೆ ಮಳೆ ಸುರಿಯುತ್ತಿದೆ.

•ವಿವರ ಪುಟ ೩

ಕಿರುಸುದ್ದಿ

ಕಳೆದ ಮೊಬೈಲ್ ಮರಳಿ ವಾರಸುದಾರರಿಗೆ ಹಸ್ತಾಂತರ



ಗೋಕರ್ಣ: ಪ್ರವಾಸಿಗರು ಕಳೆದುಕೊಂಡಿದ್ದ ಎರಡುವರೆ ಲಕ್ಷ ರೂಪಾಯಿ ಮೌಲ್ಯದ ಮೊಬೈಲ್‌ನ್ನು ಪ್ರವಾಸಿ ಮಿತ್ರ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ವಾರಸುದಾರರಿಗೆ ಮರಳಿಸಿದ ಘಟನೆ ಯಾಣದಲ್ಲಿ ನಡೆದಿದೆ. ಪುಣೆಯ ಒಟ್ಟು 12 ಜನರು ಇಲ್ಲಿಗೆ ಪ್ರವಾಸಕ್ಕೆ ಬಂದಿದ್ದು, ವಿವಿಧೆಡೆ ಫೋಟೋ ತೆಗೆದುಕೊಳ್ಳುತ್ತಾ ಅತ್ತಿತ್ತ ತಿರುಗಾಡಿದ್ದು, ಮೊಬೈಲ್ ಎಲ್ಲೋ ಮರೆತು ಬಿಟ್ಟಿದ್ದು, ಹುಡುಕಾಡಿದರು ದೊರೆತಿರಲಿಲ್ಲ. ನಂತರ ಪ್ರವಾಸಿ ಮಿತ್ರ ಸಿಬ್ಬಂದಿಗೆ ವಿಷಯ ತಿಳಿಸಿ ದೂರವಾಣಿ ಸಂಖ್ಯೆ ನೀಡಿ ತೆರಳಿದ್ದರು. ಬಳಿಕ ಮೊತ್ತೊರ್ವ ಪ್ರವಾಸಿಗರಿಗೆ ಈ ಮೊಬೈಲ್ ಸಿಕ್ಕಿದ್ದು, ಇದನ್ನ ಪ್ರವಾಸಿ ಮಿತ್ರ ಸಿಬ್ಬಂದಿಗೆ ನೀಡಿದ್ದರು. ನಂತರ ಪ್ರವಾಸಿಗರನ್ನ ದೂರವಾಣಿ ಮೂಲಕ ಸಂಪರ್ಕಸಿದಾಗ ಕುಮಟಾ ತಲುಪಿದ್ದರು, ವಾಪಸ್ ಬಂದು ಮೊಬೈಲ ಪಡೆದು ತೆರಳಿದ್ದಾರೆ. ಈ ವೇಳೆ ಪ್ರವಾಸಿ ಮಿತ್ರ, ಶೇಖರ ಹರಿಕಂತ್ರ,, ಅರಣ್ಯ ಇಲಾಖೆಯ ಗಾರ್ಡ್ ವಿನೋದಾ ಮರಾಠಿ ಸ್ಥಳೀಯರಾದ ಸೀತಾರಾಮ ಮರಾಠಿ,ಮಲ್ಲಿಕಾರ್ಜುನ ನಾಯ್ಕ ಹಾಜರಿದ್ದರು. ಬೆಲೆಬಾಳುವ ಮೊಬೈಲನ್ನ ಸುರಕ್ಷಿತವಾಗಿ ಮರಳಿಸಿದ ತಂಡಕ್ಕೆ ಪ್ರವಾಸಿಗರು ಅಭಿನಂದಿಸಿ ಕೃತಜ್ಞತೆ ಸಲ್ಲಿಸಿದ್ದಾರೆ.

ಇಂದು ಚೌಡೇಶ್ವರಿ ದೇವಿಯ ವರ್ಧಂತಿ ಉತ್ಸವ

ಕುಮಟಾ: ಪಟ್ಟಣದ ಚಿತ್ರಿಗಿಯ ಕಲ್ಲುಗುಡ್ಡದ ಶ್ರೀಚೌಡೇಶ್ವರಿ ದೇವಿಯ 18 ನೇ ವರ್ಧಂತಿ ಉತ್ಸವ ಕಾರ್ಯಕ್ರಮ ಮಾ. 30 ಹಾಗೂ 31ರಂದು ಆಯೋಜಿಸಲಾಗಿದೆ. ಮಾ. 30ರಂದು ಬೆಳಿಗ್ಗೆ 9.30 ರಿಂದ ಗಣಪತಿ ಪೂಜನದೊಂದಿಗೆ ಆರಂಭಗೊಂಡು ಅಥರ್ವಶೀರ್ಷ ಹವನ, ಧನ್ವಂತರಿ ಹವನ, ಮೃತ್ಯುಂಜಯ ಹವನ, ರಾಕ್ಷೋಘ್ನ, ಅಘೋರಾಸ್ತ್ರ ಸುದರ್ಶನ, ವಾಸ್ತುಬಲಿ, ದೇವಿಯ ಪಲ್ಲಕ್ಕಿ ಉತ್ಸವ ಮುಂತಾದ ಕಾರ್ಯಕ್ರಮಗಳು ಇರಲಿದ್ದು, ಮರುದಿನ ಮಾ.31 ರಂದು ನವಗ್ರಹ ಶಾಂತಿ, ದುರ್ಗಾಶಾಂತಿ, ರುದ್ರ ಹವನಾದಿ ಹೋಮ, ಪೂರ್ಣಾಹುತಿ ಬಳಿಕ ಸರ್ವಾಲಂಕೃತ ಚೌಡೇಶ್ವರಿಗೆ ಮಹಾಪೂಜೆ, ಅನ್ನಸಂತರ್ಪಣೆ ಮುಂತಾದವು ನಡೆಯಲಿದೆ. ರಾತ್ರಿ 9.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಂಕೋಲ ಅಲಗೇರಿಯ ಸಣ್ಣಮ್ಮ ಬೊಮ್ಮಯ್ಯ ದೇವನಾಟ್ಯ ಮಂಡಳಿಯಿಂದ 'ಗರತಿ ಹೆಣ್ಣಿಗೆ ಗರ್ವದ ಗಂಡ' ಎಂಬ ಸಾಮಾಜಿಕ ನಾಟಕ ಹಾಗೂ ಜೂನಿಯರ್ ಅಪ್ಪು ಅವರಿಂದ ಕಲಾಪ್ರದರ್ಶನ ಇರಲಿದೆ ಎಂದು ದೇವಸ್ಥಾನದ ವರ್ಧಂತಿ ಉತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಭ್ರಮದ ಜಾತ್ರೆ



ಮುಂಡಗೋಡ: ಪಟ್ಟಣದಲ್ಲಿ ಬಸವಣ್ಣ ಮತ್ತು ವೀರಭದ್ರೇಶ್ವರ ನೂತನ ರಥೋತ್ಸವ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.ಬಸವಣ್ಣ ಮತ್ತು ವೀರಭದ್ರೇಶ್ವರ ಜಾತ್ರೆ, ರಥೋತ್ಸವಕ್ಕೆ ಬಂಕಾಪುರದ ಅರಳೆಲೇ ಹಿರೇಮಠದ ರೇವಣಸಿದ್ದೇಶ್ವರ ಶಿವಾಚಾರ್ಯ, ಪಂ.ವೆ.ಮೂ. ರುದ್ರಮುನಿ ಸ್ವಾಮಿಗಳು ಹಿರೇಮಠ ಇವರ ಅಮೃತ ಹಸ್ತದಿಂದ ಹಾಗೂ ಶಾಸಕ ಶಿವರಾಮ ಹೆಬ್ಬಾರ, ಗಣ್ಯಮಾನ್ಯರಿಂದ ಮಹಾರಥೋತ್ಸವಕ್ಕೆ ಚಾಲನೆ ನೀಡಲಾಯಿತು. ರಥೋತ್ಸವದ ಮೆರವಣಿಗೆಯು ದೇವಸ್ಥಾನದ ಮುಂಭಾಗದಿಂದ ವಾದ್ಯವೈಭವಗಳೊಂದಿಗೆ ರಥೋತ್ಸವವು ಬನ್ನಿ ಮಹಾಂಕಾಳಿ ದೇವಿಯ ದೇವಸ್ಥಾನದವರೆಗೂ ಭಕ್ತವೃಂದದೊಂದಿಗೆ ದೇವಸ್ಥಾನದವರೆಗೂ ಮರಳಿತು. ಭಕ್ತರು ಉತ್ತತ್ತಿ, ಬಾಳೆಹಣ್ಣುಗಳನ್ನು ರಥಕ್ಕೆ ಭಕ್ತರು ಎಸೆಯುವ ದೃಶ್ಯ ಕಂಡು ಬಂದಿತು. ಈ ವಿಜೃಂಭಣೆಯ ರಥೋತ್ಸವಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ತಾಲೂಕಿನ ಹಾಗೂ ಬೇರೆ ಊರಿನಿಂದ ಬಂದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಬಸವಣ್ಣ ಮತ್ತು ವೀರಭದ್ರೇಶ್ವರ ದರ್ಶನ ಪಡೆದು ಪುನೀತರಾದರು. ಡೊಳ್ಳು ಕುಣಿತ ಜನಮನ ಸೆಳೆಯಿತು.



ಗೋಕರ್ಣ: ಹಾಲಕ್ಕಿ ಒಕ್ಕಲಿಗ ಸಮಾಜದ ಬಹು ವಿಶೇಷ ವಿಶಿಷ್ಟ ಸುಗ್ಗಿ ಹಬ್ಬಕ್ಕೆ ಈ ಭಾಗದಲ್ಲಿ ಅಣಿಯಾಗುತ್ತಿದ್ದು, ಇದೇ ಮೊದಲ ಬಾರಿ ಬೇಲೆಹಿತ್ತಲಿನ ಯುವಕರ ತಂಡ ಸುಗ್ಗಿ ಕುಣಿತಕ್ಕೆ ಬೇಕಾಗುವ ತುರಾಯಿ, ಹಾರ ಮತ್ತಿತರ ಪರಿಕರ ತಯಾರಿಕೆಯಲ್ಲಿ ತೊಡಗಿಕೊಂಡಿದೆ.

ಸುಗ್ಗಿ ಹಬ್ಬಕ್ಕೆ ಯುವಕರಿಂದ ಸಿದ್ಧತೆ

ಗೋಕರ್ಣ: ಹಾಲಕ್ಕಿ ಒಕ್ಕಲಿಗ ಸಮಾಜದ ಬಹು ವಿಶೇಷ ವಿಶಿಷ್ಟ ಸುಗ್ಗಿ ಹಬ್ಬಕ್ಕೆ ಈ ಭಾಗದಲ್ಲಿ ಅಣಿಯಾಗುತ್ತಿದ್ದು, ಇದೇ ಮೊದಲ ಬಾರಿ ಬೇಲೆಹಿತ್ತಲಿನ ಯುವಕರ ತಂಡ ಸುಗ್ಗಿ ಕುಣಿತಕ್ಕೆ ಬೇಕಾಗುವ ತುರಾಯಿ, ಹಾರ ಮತ್ತಿತರ ಪರಿಕರ ತಯಾರಿಕೆಯಲ್ಲಿ ತೊಡಗಿಕೊಂಡಿದೆ. ಇನ್ನೆರಡು ದಿನದಲ್ಲಿ ಈ ಭಾಗದ ಸುಗ್ಗಿ ಹಬ್ಬ ಪ್ರಾರಂಭವಾಗಲಿದೆ.

ಪ್ರತಿ ಬಾರಿ ಸುಗ್ಗಿ ವೇಷಕ್ಕಾಗಿ ಅಂಕೋಲಾ ಬಡಗೇರಿಯ ಇದೇ ಸಮಾಜದವರು ತಯಾರಿಸುವ ಹಾರತುರಾಯಿ ತರುವುದು ವಾಡಿಕೆಯಾಗಿದೆ. ಆದರೆ ಈ ಬಾರಿ ಬೇಲೆಹಿತ್ತಿಲಿನ ಕೆಲವು ಯುವಕರು ಮಾತ್ರ ತಾವೇ ಸ್ವತಃ ತುರಾಯಿ ಸಿದ್ದಪಡಿಸುತ್ತಿದ್ದು, ಎಲ್ಲರ ಗಮನ ಸೆಳೆಯುತ್ತಿದ್ದಾರೆ. ಐದಾರು ಜನರ ತಂಡ ತಮಗೆ ಬೇಕಾದ ರೀತಿಯಲ್ಲಿ ವಿಶೇಷವಾದ ಪೋಷಾಕುಗಳನ್ನ ಸಿದ್ದಗೊಳಿಸುತ್ತಿದ್ದಾರೆ. ಪ್ಲಾಸ್ಟಿಕ್ ಹೂವುಗಳನ್ನ ತೆಂಗಿನಗರಿಯ ಕಡ್ಡಿಗೆ ಅಚ್ಚುಕಟ್ಟಾಗಿ ಜೋಡಿಸಿ ಆಕರ್ಷಕ ತುರಾಯಿ ಮಾಡುತ್ತಿದ್ದಾರೆ. ಇದರ ಮೇಲೆ ಮತ್ತಿತರ ಅಲಂಕಾರಿಕ ವಸ್ತುಗಳನ್ನ ಜೋಡಿಸುತ್ತಿದ್ದು, ಸುಗ್ಗಿ ಹಬ್ಬಕ್ಕೆ ಹೊಸ ಮೆರಗು ತಂದಿದ್ದಾರೆ. 50ಕ್ಕೂ ಹೆಚ್ಚು ಪ್ಲಾಸ್ಟಿಕ್ ಹೂವುಗಳನ್ನ ಬಳಸಿ ತುರಾಯಿ ಮಾಡಲಾಗುತ್ತದೆ. ನವೀನ ಗೌಡ, ನಿತಿನ ಗೌಡ, ರವೀಂದ್ರ ಗೌಡ ಮತ್ತಿತರು ಈ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಈ ಬಗ್ಗೆ ನಾಗಾರಜ ಗೌಡ ಮಾತನಾಡಿ, ಇದೇ ಪ್ರಥಮ ಬಾರಿಗೆ ನಾವು ಪೋಷಾಕು ತಯಾರಿಗೆ ಸಜ್ಜಾಗಿದ್ದು, ಮುಂದೆ ಬೇರೆಯವರು ಬೇಡಿಕೆ ಇಟ್ಟರೆ ಅವರಿಗೂ ತಯಾರಿಸಿ ಕೊಡುತ್ತೇವೆ ಎನ್ನುತ್ತಾರೆ.



ಕುಮಟಾ: ಸ್ಥಳೀಯ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮಹಿಳಾ ಸಬಲೀಕರಣ ಘಟಕದ ಅಡಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಪ್ರೇರಣಾ ಕಾರ್ಯಕ್ರಮ ನಡೆಯಿತು. ಡಾ.ಎ.ವಿ.ಬಾಳಿಗಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ನಿವೃತ್ತ ಪ್ರಾ.ವಿದ್ಯಾ ತಲಗೇರಿ ಮತ್ತಿತರರಿದ್ದರು.

ಸೋರಿಕೆ ತಡೆಗಟ್ಟಲು ಇಲಾಖೆ ಬದ್ಧ | ಅಧಿಕಾರಿಗಳ ಭರವಸೆ

ಪ್ರತಿಭಟನೆ ಕೈಬಿಟ್ಟ ಹೋರಾಟ ಸಮಿತಿ

ಬನವಾಸಿ: ಶ್ರೀ ಕ್ಷೇತ್ರ ಬನವಾಸಿ ಮಧುಕೇಶ್ವರ ದೇವಸ್ಥಾನ ಸೋರಿಕೆ ತಡೆಗಟ್ಟಲು ಪುರಾತತ್ವ ಇಲಾಖೆ ಬದ್ಧವಾಗಿದ್ದು, ಈ ಕೂಡಲೇ ಜಾತ್ರೆ ಮುಗಿದ ತಕ್ಷಣವೇ ಕೆಲಸ ಆರಂಭಿಸುವುದಾಗಿ ಹೇಳಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವಿರುದ್ಧವಾಗಿ ಪ್ರತಿಭಟನೆ ನಡೆಸಲು ಸಜ್ಜುಗೊಂಡ ಬನವಾಸಿ ನೂತನ ತಾಲೂಕು ರಚನೆ ಹೋರಾಟ ಸಮಿತಿ ಮಾ. 30ರಂದು ರಾತ್ರಿ, 9ಗಂಟೆಗೆ ದೇವಸ್ಥಾನ ಎದುರು ನಡೆಯಲಿರುವ ಪ್ರತಿಭಟನೆ ಕೈ ಬಿಟ್ಟಿದೆ ಎಂದು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್. ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಮಾ. 28ರಂದು ರಾತ್ರಿ ಒಂಬತ್ತು ಗಂಟೆಗೆ ದೂರವಾಣಿಯಲ್ಲಿ ಇಲಾಖೆಯ ಹಾವೇರಿ ಕಚೇರಿಯ ಅಧಿಕಾರಿಗಳು ಕನ್ಸರ್ವೇಷನ್ ಅಸಿಸ್ಟೆಂಟ್ (ಸಿ. ಎ.) ರಾಕೇಶ್ ಬಿ. ಎಸ್. ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ ಯವರೊಂದಿಗೆ ಮಾತನಾಡಿ, ತಾವು ಮೇಲಿನ ಅಧಿಕಾರಿ ಇಲಾಖೆ ಅಧೀಕ್ಷಕರಾದ ರಮೇಶ್ ಮೂಲಿಮನಿ ಯವರ ಹೇಳಿಕೆಯಂತೆ ತಮಗೆ ಹೇಳುತ್ತಿದ್ದೇನೆ, ಅವರು ಕೂಡ ದೆಹಲಿ ಅಧಿಕಾರಿಗಳ ಜೊತೆಗೆ ಮಾತನಾಡಿ ಈ ಹೇಳಿಕೆ ಬಿಡುಗಡೆ ಮಾಡುತ್ತಿದ್ದೇವೆ ಎಂದರು.

ಇದನ್ನು ನಂಬಬಹುದೇ ಎಂದು ಮರು ಪ್ರಶ್ನೆ ಹಾಕಿದಾಗ,'ಗಾಡ್ ಪ್ರಾಮಿಸ್'ಆಗಿ ಹೇಳುತ್ತೇವೆ, ನಮಗೆ ಕೂಡ ನಿಮ್ಮ ಬಳಿ ಹೇಳಿ ಹೇಳಿ ಸಾಕಾಗಿದೆ. ಶಾಶ್ವತ ಕೆಲಸ ಆಗುವಂತ ಪ್ರಪೋಸಲ್ ದೆಹಲಿ ಆಫೀಸ್ ನಲ್ಲಿ ಪ್ರೋಸೆಸ್‌ನಲ್ಲಿದೆ. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಈ ಬಗ್ಗೆ ಅತ್ಯಂತ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ನಾವು ನಂಬಬಹುದಲ್ಲವೇ ಎಂದು ಕೇಳಿದಾಗ ನಂಬಿ ಸರ್



- ಶ್ರೀ ಕ್ಷೇತ್ರ ಬನವಾಸಿ ಮಧುಕೇಶ್ವರ ದೇವಸ್ಥಾನ ಸೋರಿಕೆ ತಡೆಗಟ್ಟಲು ಪುರಾತತ್ವ ಇಲಾಖೆ ಬದ್ಧ
- ಜಾತ್ರೆ ಮುಗಿದ ತಕ್ಷಣವೇ ಕೆಲಸ ಆರಂಭ

ಹೋರಾಟ ಕೈಬಿಡಿ ಎಂದು ಹೇಳಿದರು. ರಾಕೇಶ್ ಅವರ ಮಾತಿನಲ್ಲಿ ಸೌಮ್ಯತೆ ಮತ್ತೆ ಕೆಲಸ ಮಾಡೇ ಮಾಡುತ್ತೇವೆ ಎಂಬ ಛಲವಿತನ ಅರಿತು ಈ ಪ್ರತಿಭಟನೆ ಕೈ ಬಿಡಲಾಗಿದೆ ಎಂದು ಸಮಿತಿ ತಿಳಿಸಿದೆ. ಅಲ್ಲದೆ ರಾಕೇಶ್ ಅವರು ಕೆಲಸ ಪ್ರಯತ್ನದ ವಿವರ ಮಾಹಿತಿ ಫೈಲ್ ಗಳೊಂದಿಗೆ ಸೋಮವಾರ ಸಂಜೆ ಬನವಾಸಿಗೆ ಬಂದು ಹೋರಾಟ ಸಮಿತಿಯವರಿಗೆ ಮನವರಿಕೆ ಮಾಡುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಮೊದಲೇ ಶಾಸಕ ಶಿವರಾಮ ಹೆಬ್ಬಾರ ಅವರಲ್ಲಿ ಹೋರಾಟ ಸಮಿತಿ ಕೇಳಿದಾಗ ಅವರು ಕೆಲಸ ಮಾಡಿಸುವ ನಿಮ್ಮ ಹೋರಾಟ ಸರಿ ಇದ್ದರೂ ಜಾತ್ರಾ ದಿನ ಬೇಡವಾಗಿತ್ತು, ಆದು ಹೋರಾಟ ಸಮಿತಿ ಚರ್ಚೆ ಮಾಡಿ ಮುಂದುವರಿಯಲಿ ಎಂದು, ಪುರಾತತ್ವ ಇಲಾಖೆ ಅಧಿಕಾರಿಗಳಿಗೆ ಕೇಳಿ ಮುನ್ನಡೆ ಇಡಿ ಎನ್ನುವ ಅಭಿಪ್ರಾಯ ತಿಳಿಸಿ, ಜಾತ್ರಾ ದಿನ ಭಕ್ತಾದಿಗಳಿಗೆ ತೊಂದರೆ ಆಗದಿರಲಿ ಎಂದು ತಿಳಿಸಿದರು. ಅದೇ ವೇಳೆಗೆ ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುಧಾಕರ್ ಹೇಮಾದ್ರಿ, ಉಪಾಧ್ಯಕ್ಷ ಪ್ರಕಾಶ್ ಬಂಗ್ಲೆ ಮತ್ತು ಸಮಿತಿಯ ಪದಾಧಿಕಾರಿಗಳು ಜಾತ್ರೆ ದಿನ ಹೋರಾಟ ಬೇಡ, ಇನ್ನು ಉಳಿದ ದಿನ ಮಾಡಿ ನಾವೂ ನಿಮ್ಮೊಡನಿದ್ದೇವೆ ಎಂದರು.

ಪೊಲೀಸ್ ಇಲಾಖೆಯ ಕಾರ್ಯ ಶ್ಲಾಘನೀಯ. ಈ ನಿಟ್ಟಿನಲ್ಲಿಬನವಾಸಿಪೊಲೀಸಠಾಣೆಪಿಎಸ್ ಐಮಹಾಂತೇಶ ಕಂಬಾರ ಅವರ ಕಾರ್ಯ ಶ್ಲಾಘನೆ ಮಾಡುತ್ತೇವೆ ಎಂದು ಹೋರಾಟ ಸಮಿತಿ ಹೇಳಿಕೊಂಡಿದೆ.

ಮಹಾಂತೇಶ ಅವರು ದೇವಸ್ಥಾನಕ್ಕೆ ಬಂದು ವಿಷಯ ಅರಿತು, ಕಾರವಾರ ಎಸ್‌ಪಿ, ಶಿರಸಿ ಡಿವೈಎಸ್‌ಪಿ. ಹಾಗೂ ಸಿಪಿಐ ಮಾರ್ಗದರ್ಶನದಲ್ಲಿ ಕಾರ್ಯ ಪ್ರವರ್ತರಾಗಿ ಹಾವೇರಿ ಸಿ ಎ ಅವರ ಬಳಿ ಮಾತನಾಡಿ ಹಾಗೆಯೇ ಧಾರವಾಡ ಅಧೀಕ್ಷಕರಲ್ಲಿ ಮಾತನಾಡಿದ್ದಲ್ಲದೆ ದೆಹಲಿ ಮೂಲದಿಂದ ವಿಷಯ ಮನವರಿಕೆ ಮಾಡಿ ಹೋರಾಟ ಸಮಿತಿಗೆ ಮನವರಿಕೆ ಮಾಡಿದರು. ಕೆಲಸ ಅಂದರೆ ಇದಪ್ಪ ಎನ್ನುವ ರೀತಿಯಲ್ಲಿ ಅವರು ಮಾಡಿದ ಕಾರ್ಯ ಶ್ಲಾಘನೀಯ ಎಂದು ಹೋರಾಟ ಸಮಿತಿ ಹೇಳಿದೆ.

ಈ ಬಗ್ಗೆ ಹೋರಾಟ ಸಮಿತಿಗೆ ಸಹಕಾರ ನೀಡಿದ ಸಂಘ ಸಂಸ್ಥೆ ಗಳಿಗೆ, ಬನವಾಸಿ ಸೀಮಾ ಭಕ್ತರಿಗೆ, ವೈದಿಕ ವೃಂದದವರಿಗೆ ಹಾಗೂ ವಿಶೇಷ ವಾಗಿ ನಮ್ಮ ಸುದ್ದಿ ಪ್ರಕಟಿಸಿ ಕಾರ್ಯ ಆಗುವಂತೆ ಮಾಡಿದ ಪತ್ರಕರ್ತ ಬಂಧುಗಳಿಗೆ ರಾಜಕೀಯ ಮುಖಂಡರುಗಳಿಗೆ ಅಭಿನಂದಿಸಿದೆ. ಮುಂದೆ ಅಧಿಕಾರಿಗಳ ಭೇಟಿ ನಂತರ ಹೋರಾಟ ಸಮಿತಿ ಮರು ನಿರ್ಣಯ ಮಾಡಲಿದೆ. ಸ್ಥಳೀಯ ಇಲಾಖಾ ನೌಕರರಾದ ಕಿರಣ್ ಭಟ್ ಅವರ ಕಾರ್ಯ ಕೂಡ ಶ್ಲಾಘನೀಯ ಎಂದು ತಿಳಿಸಿದೆ.

ಸಾಮಾಜಿಕ ಜಾಲತಾಣಗಳು ಸಹ ಸುಂದರ ಬದುಕು ಕಟ್ಟಿಕೊಳ್ಳಲು ಸಹಕಾರಿ

ದಾಂಡೇಲಿ: ಸಾಮಾಜಿಕ ಜಾಲತಾಣಗಳ ಮೂಲಕ ಜ್ಞಾನ ಸಂಪಾದನೆ ಹಾಗೂ ಉದ್ಯೋಗ ಭದ್ರತೆಯೊಂದಿಗೆ ನಾವು ನಮ್ಮ ಬದುಕನ್ನು ಕಟ್ಟಿಕೊಳ್ಳಬೇಕೆ ವಿನಹಃ ಸಾಮಾಜಿಕ ಜಾಲತಾಣಗಳ ಮೂಲಕ ನಾವು ನಮ್ಮ ಬದುಕನ್ನು ಕಳೆದುಕೊಳ್ಳಬಾರದು. ಇಂದಿನ ದಿನಮಾನಗಳಲ್ಲಿ ಸಾಮಾಜಿಕ ಜಾಲತಾಣಗಳು ಈ ದೇಶದ ಲಕ್ಷಾಂತರ ಜನರ ಬದುಕಿಗೆ ದಾರಿದೀಪವಾಗಿದೆ. ಉತ್ತಮ ಉದ್ದೇಶವನ್ನಿಟ್ಟುಕೊಂಡು ಸಾಮಾಜಿಕ ಜಾಲತಾಣವನ್ನು ಬಳಕೆ ಮಾಡಬೇಕು. ಸಾಮಾಜಿಕ ಜಾಲತಾಣಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಕೂಡ ಅಪಾಯಕಾರಿಯಾಗಿದೆ ಎಂದು ಪತ್ರಕರ್ತ ಸಂದೇಶ್ ಎಸ್.ಜೈನ್ ಹೇಳಿದರು.

ಅವರು ಅಂಬೇವಾಡಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಸಾಮಾಜಿಕ ಜಾಲತಾಣಗಳು ಮತ್ತು ಯುವಜನತೆ ಎಂಬ ವಿಷಯದ ಗುಂಪುಚರ್ಚೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಇನ್ನೋರ್ವ ಸಂಪನ್ಮೂಲ ವ್ಯಕ್ತಿ ಉಪನ್ಯಾಸಕ ಅಜೀತ್ ಅಂಬಿಗ ಅವರು ಸಾಮಾಜಿಕ ಜಾಲತಾಣಗಳ ಹುಟ್ಟು ಬೆಳವಣಿಗೆ ಹಾಗೂ ಸಾಧಕ-ಬಾಧಕ ಬಗ್ಗೆ ವಿವರಿಸಿದರು.

ಉಪನ್ಯಾಸಕ ಬಸವರಾಜ ಹೂಲಿಕಟ್ಟಿಯವರು ನಮ್ಮ ಜ್ಞಾನಮಟ್ಟ ವಿಸ್ತಾರಗೊಳಿಸಲು ಸಾಮಾಜಿಕ ಜಾಲತಾಣಗಳು ಪರಿಣಾಮಕಾರಿಯಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ಎಂ.ಡಿ.ಒಕ್ಕುಂದ ಅವರು ಮಾತನಾಡಿ, ಅತಿಯಾದರೆಅಮೃತವು ವಿಷ ಎಂಬ ಅರಿವಿನೊಂದಿಗೆ ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡಬೇಕು ಎಂದರು.

ವಿದ್ಯಾರ್ಥಿನಿ ಶಾರದ ದೇಸಾಯಿ ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು. ರಕ್ಷಿತಾ ಭಜಂತ್ರಿ ಪರಿಚಯಿಸಿದರು. ವಸುಂದರಾ ದಳವಿ ವಂದಿಸಿದರು.



ನ್ಯಾಯಾಲಯಗಳ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ

ಭಟ್ಕಳ: ಇಲ್ಲಿನ ನ್ಯಾಯಾಲಯದ ಸಂಕೀರ್ಣದಲ್ಲಿ ನೂತನ ನ್ಯಾಯಾಲಯಗಳ ಕಟ್ಟಡಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ವಿಬು ಖಬ್ರು ಅವರು ಶಂಕುಸ್ಥಾಪನೆ ನೆರವೇರಿಸುವುದರ ಮೂಲಕ ಶುಭ ಹಾರೈಸಿದರು.

ಉತ್ತರಕನ್ನಡ ಜಿಲ್ಲಾನ್ಯಾಯಾಂಗ ಇಲಾಖೆ, ಉತ್ತರ ಕನ್ನಡ ಜಿಲ್ಲಾ ಲೋಕೋಪಯೋಗಿ ಇಲಾಖೆ ಹಾಗೂ ಭಟ್ಕಳ ತಾಲೂಕಾ ವಕೀಲರ ಸಂಘ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಧಾರ್ಮಿಕ ವಿಧಿ ವಿದಾನಗಳ ಮೂಲಕ ಪೂಜೆ ಸಲ್ಲಿಸಿ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ನ್ಯಾಯಾಧೀಶ ಸಚಿನ ಶಂಕರ ಮಗದಮ್ ವಹಿಸಿದ್ದರು.

ಈ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಾದ ಎಸ್.ಜಿ. ಪಂಡಿತ್, ಅನಂತ ರಾಮನಾಥ ಹೆಗಡೆ, ವಿಶೇಷ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಕೆ.ಎಸ್.ಭರತ ಕುಮಾರ, ಉತ್ತರ ಕನ್ನಡ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಪರಮೇಶ್ವರ ಪ್ರಸನ್ನ ಬಿ., ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್., ಭಟ್ಕಳದ ಹಿರಿಯ ನ್ಯಾಯಾಲಯದ ನ್ಯಾಯಾಧೀಶ ಕಾಂತ ಕುರಣಿ, ಪ್ರಧಾನ ನ್ಯಾಯಾಲಯದ ನ್ಯಾಯಾಧೀಶೆದೀಪಾ ಅರಳಗುಂಡಿ, ಹೆಚ್ಚುವರಿ ನ್ಯಾಯಾಲಯದ ನ್ಯಾಯಾಧೀಶೆ ಧನವತಿ, ನಗರಸಭಾ ಆಯುಕ್ತ ಬಾಬಾಸಾಹೇಬ್ ಮಾನೆ, ಸಹಾಯಕ ಆಯುಕ್ತ ಪ್ರವೀಣ ಕರಾಂಡೆ, ತಹಶೀಲ್ದಾರ್ ನಾಗೇಂದ್ರ ಕೋಳಶೆಟ್ಟಿ, ಭಟ್ಕಳ ಬಾರ್ ಅಸೋಸಿಯೇಶನ್ ಅಧ್ಯಕ್ಷ ಈಶ್ವರ ಎಂ. ನಾಯ್ಕ, ಕಾರ್ಯದರ್ಶಿ ನಾಗೇಶ ಗದ್ದೆಮನೆ, ಉಪಾಧ್ಯಕ್ಷ ಆರ್.ಜಿ.ನಾಯ್ಕ, ಕಟ್ಟಡ ಸಮಿತಿ ಅಧ್ಯಕ್ಷ ಎಂ.ಎಲ್.ನಾಯ್ಕ, ಗೌರವಾಧ್ಯಕ್ಷ ಜೆ.ಡಿ.ನಾಯ್ಕ, ಪಿ.ಡಬ್ಲ್ಯು.ಡಿ. ಕಾರವಾರದ ಕಾರ್ಯನಿರ್ವಾಹಕ ಇಂಜಿನಿಯರ್ ಮಲ್ಲಿಕಾರ್ಜುನ ಹೆಚ್., ಭಟ್ಕಳದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸುಜಯ್ ಮುಂತಾದವರು ಉಪಸ್ಥಿತರಿದ್ದರು. ನ್ಯಾಯವಾದಿಗಳಾದ ನಾಗರಾಜ ಈ.ಎಚ್. ಕಾರ್ಯಕ್ರಮ ನಿರ್ವಹಿಸಿದರು. ಪಲ್ಲವಿ ಕಿಣಿ ಮತ್ತು ತೇಜಸ್ವೀ ಕಿಣಿ ಯಕ್ಷಗಾನದ ರೀತ್ಯಾ ಸ್ವಾಗತ ನೃತ್ಯ ಮಾಡಿದರು. ಕಾನಮದ್ಲು ದುರ್ಗಾಶ್ರೀಚಂಡೆ ತಂಡದವರಿಂದ ಢಕ್ಕೆ ಕುಣಿತ ಕಾರ್ಯಕ್ರಮಕ್ಕೆ ಮೆರಗು ನೀಡಿತು.



ಕವಿ ಫಾಲ್ಗುಣ ಗೌಡಗೆ ಪ್ರಶಸ್ತಿ ಪ್ರದಾನ



ಅಂಕೋಲಾ: ಶ್ರೀ ವಿಶ್ವ ವೀರಾಂಜನೇಯ ಸಂಸ್ಥಾನಂ, ಹೇಮಪುರ ಮಹಾಪೀಠಂ, ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ ಬಂಗಾರಮಕ್ಕಿ, ಹೊನ್ನಾವರ ಇವರು ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ ನಿಮಿತ್ತ ನಡೆದ ಸಾಹಕತ್ಯೋತ್ಸವ ಕಾರ್ಯಕ್ರಮದಲ್ಲಿ ಅಂಕೋಲಾ ತಾಲೂಕಿನ ಅಚವೆಯ ಕವಿ, ಕಥೆಗಾರ ಫಾಲ್ಗುಣ ಗೌಡ ಅವರಿಗೆ 'ಶ್ರೀ ವಚನ ವೀರಾಂಜನೇಯ ಜಾನಪದ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀ ಮಾರುತಿ ಗುರೂಜಿ, ಶ್ರೀ ಸ್ವಾಮಿ ವಿನಯಾನಂದ ಸರಸ್ವತಿ ಶ್ರೀ ರಾಮಕೃಷ್ಣ ಆಶ್ರಮ ಶಿವಮೊಗ್ಗ ಇವರು ವಹಿಸಿದ್ದರು. ವೇದಿಕೆಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಾಗರಿಕ ಪತ್ರಿಕೆಯ ಸಂಪಾದಕರಾದ ಕೃಷ್ಣಮೂರ್ತಿ ಹೆಬ್ಬಾರ, ಕೆರೆಮನೆ ಶಿವಾನಂದ ಹೆಗಡೆ, ಡಾ.ರಾಮಕೃಷ್ಣ ಗುಂದಿ, ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮಾಸ್ಕೇರಿ ಎಂ.ಕೆ.ನಾಯಕ, ಜಿ.ಜಿ.ಹೆಗಡೆ ಬಾಳಗೋಡ ಮುಂತಾದವರಿದ್ದರು.

ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮ

ಗೋಕರ್ಣ: ಇಲ್ಲಿನ ಸೇವಾ ಭಾರತೀ ಹಾಗೂ ಪತಂಜಲಿ ಯೋಗ ಸಮಿತಿ ಇವರ ಸಹಯೋಗದಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಹಾಗೂ ತಿಳುವಳಿಕೆ ಕಾರ್ಯಕ್ರಮ ಬುಧವಾರ ಕವಳೇ ಮಠದಲ್ಲಿ ನಡೆಯಿತು.

ಖ್ಯಾತ ವೈದ್ಯ ಕುಮಟಾದ ಡಾ. ಜಿ.ಜಿ. ಹೆಗಡೆ, ರಾಜ್ಯ ಪ್ರಶಸ್ತಿ ಪುರಸ್ಕೃತೆ ಸಮಾಜ ಸೇವಕಿ ಸಾವಿತ್ರಿ ಗಾಯತ್ರಿ, ಮೋಹನ ಗುನಗ, ಡಾ. ಶೀಲಾ ಹೊಸ್ಮನೆ,ಡಾ. ಉಮೇಶ ಹೊಸ್ಮನೆ ಉಪಸ್ಥಿತರಿದ್ದರು. ಪತಂಜಲಿ ಯೋಗ ಸಮಿತಿಯ ನಾಗೇಂದ್ರ ಭಟ್,ಸೇವಾ ಭಾರತಿ ಸಂಸ್ಥೆಯ ರಾಜೀವ ಬೈಲಕೇರಿ,ಗಣಪತಿ ಬಟ್ಟು, ವೇ.ಗಣೇಶ್ವ ದೀಕ್ಷಿತ್, ರೂಪಶ್ರೀ ಕೂರ್ಸೆ ಹಾಗೂ ಉಳಿದ ಸದಸ್ಯರು ನಿರ್ವಹಿಸಿದರು. ಡಾ.ಜಿ.ಜಿ. ಹೆಗಡೆ ಹಾಗೂ ಮೋಹನ ಗುನಗರವರನ್ನ ಸನ್ಮಾನಿಸಿ ಗೌರವಿಸಲಾಯಿತು.

ಸ್ವಚ್ಛತಾ ಆಂದೋಲನದ ಪೂರ್ವಭಾವಿ ಸಭೆ

ಹಳಿಯಾಳ: ಪುರಸಭೆ ವತಿಯಿಂದ ಹಳಿಯಾಳ ತಾಲೂಕು ವ್ಯಾಪ್ತಿಯ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೈಗೊಳ್ಳಲಿರುವ ಸ್ವಚ್ಚತಾ ಆಂದೋಲನದ ಪೂರ್ವಭಾವಿ ಸಭೆಯನ್ನು ಪುರಭವನದಲ್ಲಿ ಮಾ.27ರಂದು ಶಾಸಕ ಆರ್.ವಿ. ದೇಶಪಾಂಡೆಯವರಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶಾಸಕರ ಸಮ್ಮುಖದಲ್ಲಿ ಎಲ್ಲಾ ಸರ್ಕಾರಿ ಅಧಿಕಾರಿಗಳು ಹಾಗೂ ಪ್ರಮುಖ ಸಂಘ ಸಂಸ್ಥೆಗಳ ಸದಸ್ಯರ ಸಹಭಾಗಿತ್ವದಲ್ಲಿ ಸ್ವಚ್ಚತೆ ಕೇವಲ ಸರ್ಕಾರಿ ಕಾರ್ಯಕ್ರಮವಲ್ಲ,ಅದು ಪ್ರತಿಯೊಬ್ಬ ನಾಗರಿಕನ ಸಾಮಾಜಿಕ ಜವಾಬ್ದಾರಿಯಾಗಿದೆ ಎಂದರು.

ಪಟ್ಟಣದ ಪ್ರಮುಖ ರಸ್ತೆ, ಕಾಲೋನಿ, ಸಾರ್ವಜನಿಕ ಸ್ಥಳಗಳು, ಶಾಲಾ-ಕಾಲೇಜು ಆವರಣಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಮೂಲಗಳ ಸುತ್ತಮುತ್ತ ಸ್ವಚ್ಚತೆ ಕಾಪಾಡುವ ಕುರಿತು ಚರ್ಚಿಸಲಾಯಿತು.

ಕಸದ ಸಮರ್ಪಕ ವಿಲೇವಾರಿ, ಪ್ಲಾಸ್ಟಿಕ್ ಬಳಕೆ ನಿಯಂತ್ರಣ, ಚರಂಡಿ ವ್ಯವಸ್ಥೆಯ ನಿರ್ವಹಣೆ, ಸಾರ್ವಜನಿಕರಲ್ಲಿ ಸ್ವಚ್ಚತಾ ಜಾಗೃತಿ ಮೂಡಿಸುವ ಕಾರ್ಯ ಹಾಗೂ ಪ್ರತಿಯೊಂದು ವಾರ್ಡ್ ಮಟ್ಟದಲ್ಲಿ ಸ್ವಚ್ಚತಾ ಅಭಿಯಾನವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ಶಾಸಕ ಆರ್ ವಿ ದೇಶಪಾಂಡೆ ನೀಡಿದರು.ಮತ್ತು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂಸಾರ್ವಜನಿಕರುಒಗ್ಗಟ್ಟಿನಿಂದ ಭಾಗವಹಿಸಿದಾಗ ಮಾತ್ರ ಸ್ವಚ್ಚತಾ ಆಂದೋಲನ ಯಶಸ್ವಿಯಾಗುತ್ತದೆ. ಆರೋಗ್ಯಕರ, ಸುಂದರ ಮತ್ತು ಸ್ವಚ್ಚ ಪರಿಸರ ನಿರ್ಮಾಣವೇ ಈ ಸ್ವಚ್ಚತಾ ಹೀ ಸೇವಾ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದು ಸಭಿಕರನ್ನುದ್ದೇಶಿಸಿ ಮಾತನಾಡಿದರು.



ರಂಗಭೂಮಿಯ ಮೂಲಕ ಸತ್ಯ ಪ್ರಸ್ತುತಪಡಿಸಿ

ಸಿದ್ದಾಪುರ: ರಂಗಭೂಮಿ ಮತ್ತು ಪ್ರೇಕ್ಷಕರ ನಡುವಿನ ಸಂಬಂಧ ಉತ್ತಮವಾಗಿರಬೇಕು. ಈ ಹಿನ್ನೆಲೆಯಲ್ಲಿ ರಂಗಭೂಮಿಯ ಮೂಲಕ ಸತ್ಯವನ್ನು ಪ್ರಸ್ತುತಪಡಿಸಬೇಕು. ರಂಗಭೂಮಿಯ ಜೊತೆ ಸಮುದಾಯ ನಿಲ್ಲಬೇಕು ಎಂದು ಹಿರಿಯ ರಂಗಕರ್ಮಿ, ರಂಗವಿಮರ್ಶಕ ಕಿರಣಭಟ್ಟ ಹೊನ್ನಾವರ ಹೇಳಿದರು.

ಅವರು ಸ್ಥಳೀಯ ರಂಗಸೌಗಂಧ ಸಂಸ್ಥೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ತಾಲೂಕಿನ ವಾಜಗದ್ದೆಯ ಶ್ರೀ ದುರ್ಗಾವಿನಾಯಕ ಸಭಾಭವನದಲ್ಲಿ ಆಯೋಜಿಸಿರುವ ಮೂರು ದಿನಗಳ ಜಿಲ್ಲಾ ರಂಗೋತ್ಸವದ ಎರಡನೆಯ ದಿನ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ ಹುಲಿಮನೆ ಸೀತಾರಾಮ ಶಾಸ್ತ್ರಿಗಳು ಉತ್ತರ ಕನ್ನಡ ಕಂಡ ಮೊಟ್ಟಮೊದಲ ಹಾಗೂ ಕೊನೆಯ ವ್ಯಾಪಾರಿ ರಂಗತಂಡವನ್ನು ಕಟ್ಟಿದ ಮಹನೀಯರು. ಕಷ್ಟಗಳೇ ಬದುಕಾಗಿದ್ದ ವಿಸ್ತಾರ ಅನುಭವದ ಅವರ ಜೀವನವೇ ಒಂದುಸತ್ಯವಾದನಾಟಕ. ನಮ್ಮಜಿಲ್ಲೆಯಲ್ಲಿನಾಟಕಗಳನ್ನು ವೃತ್ತಿಪರವಾಗಿ ಆಯ್ಕೆಮಾಡಿಕೊಂಡ ರಂಗತಂಡಗಳಿಲ್ಲ, ಸಿದ್ದಾಪುರದ ರಂಗಸೌಗಂಧ ಮತ್ತು ಒಡ್ಡೋಲಗ ತಂಡಗಳು ರಂಗಭೂಮಿಯನ್ನು ವೃತ್ತಿಪರವಾಗಿ ಸ್ವೀಕರಿಸಿ ಸಾಂಪ್ರದಾಯಿಕವಲ್ಲದ, ಹೊಸತರದ ನಾಟಕಗಳನ್ನು ಕಟ್ಟುವ ಮೂಲಕ ನವೀನತೆಯನ್ನು ಸಾದರಪಡಿಸುತ್ತಿವೆ ಎಂದರು.



ಅತಿಥಿ, ರಂಗವಿಮರ್ಶಕ ಗೋಪಾಲ ಹೆಗಡೆ ಹುಲಿಮನೆ ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಜೊತೆಗಿನ ಒಡನಾಟವನ್ನು ಸ್ಮರಿಸಿಕೊಳ್ಳುತ್ತ ಮರಾಠಿ ರಂಗಭೂಮಿಯಲ್ಲಿ ಪ್ರಸಿದ್ಧವಾಗಿದ್ದ ಸಂಗೀತ ನಾಟಕಗಳ ಪ್ರದರ್ಶನವನ್ನು ಕನ್ನಡದಲ್ಲಿ ಆರಂಭಿಸಿದ್ದು ಆದ್ಯ ರಂಗಾಚಾರ್ಯ ವರದಾಚಾರ್ಯರು. ಬಹುತೇಕ ವೃತ್ತಿರಂಗಭೂಮಿಯಲ್ಲಿ ಸಂಗೀತ ನಾಟಕಗಳ ಪ್ರದರ್ಶನ ಹೆಚ್ಚು, ವೈಚಾರಿಕತೆ, ಉತ್ಕೃಷ್ಟ ಸಾಹಿತ್ಯವನ್ನು ಒಳಗೊಂಡ, ವೃತ್ತಿರಂಗಭೂಮಿಗೆ ಭಿನ್ನವಾದ ನಾಟಕಗಳನ್ನು ಆಧುನಿಕ ರಂಗಭೂಮಿ ಪ್ರದರ್ಶಿಸುತ್ತಿದೆ ಎಂದರು.

ರಂಗಸೌಗಂಧದ ಅಧ್ಯಕ್ಷ ಗಣಪತಿ ಹೆಗಡೆ ಹುಲಿಮನೆ ಸ್ವಾಗತಿಸಿದರು. ಗಣಪತಿ ಹೆಗಡೆ ಗುಂಜಗೋಡ ನಿರೂಪಿಸಿದರು. ನಾಗಪತಿ ಭಟ್ಟ ವಡ್ಡಿನಗದ್ದೆ ವಂದಿಸಿದರು. ನಂತರ ಸಾಗರದ ಸ್ಪಂದನ ತಂಡದವರಿಂದ ಪ್ರಾಣ ಪದ್ಮಿನಿ ಐತಿಹಾಸಿಕ ನಾಟಕ ಪ್ರದರ್ಶನಗೊಂಡಿತು.

ವಿಡಿಐಟಿ ವಿದ್ಯಾರ್ಥಿಗಳ ಸಾಧನೆ

ಹಳಿಯಾಳ: ಕೆಎಲ್ ಎಸ್ ವಿಡಿಐಟಿ ಹಳಿಯಾಳದ ವಿದ್ಯಾರ್ಥಿಗಳು ಹುಬ್ಬಳ್ಳಿಯ ಜೈನ್ ತಾಂತ್ರಿಕ ಮಹಾವಿದ್ಯಾಲಯವು ಆಯೋಜಿಸಿದ್ದ 'ವೈಭವ 2026' ರಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಮಿನಿಟ್ ಮಾಸ್ಟರ್ ಸ್ಪರ್ಧೆಯಲ್ಲಿ ಆದರ್ಶ ಮತ್ತು ಅಭಯ್ ಪ್ರಥಮ ಸ್ಥಾನ ಗಳಿಸಿದ್ದಾರೆ. ಎಐ ಪ್ರಮೋಟ್ ಬ್ಯಾಟಲ್ ಸ್ಪರ್ಧೆಯಲ್ಲಿ ಮಾನಸಿ, ಕೃತಿಕಾ, ಆದರ್ಶ್, ಅಭಯ ಗೌರಿ ದ್ವಿತೀಯ, ಬಿಲ್ಡ್ ಥಾನ್ ಸ್ಪರ್ಧೆಯಲ್ಲಿ ಅಭಯ್, ಆದಿತ್ಯ, ಅನಂತ, ಓಂಕಾರ್ ಪ್ರಥಮ ಸ್ಥಾನ ಪಡೆದರು. ಕೀರ್ತಿ, ಸ್ನೇಹಾ, ವರ್ಷಾ ನೃತ್ಯ ಪ್ರದರ್ಶಿಸಿ ನೆರೆದವರ ಮೆಚ್ಚುಗೆಗೆ ಪಾತ್ರ ರಾದರು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ಜೈನ್ ಮಹಾ ವಿದ್ಯಾಲಯ ಆಯೋಜಿಸಿದ್ದ ತಾಂತ್ರಿಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾಗಿರುವುದು ಹರ್ಷ ತಂದಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹೇಳಿದ್ದಾರೆ. ಡಾ. ಸ್ನೇಹಾ ಕುಲಕರ್ಣಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.



ಅಕಾಲಿಕ ಮಳೆಗೆ ಬೆಳೆಗಳು ನೀರುಪಾಲು

ಕುಮಟಾ: ತಾಲೂಕಿನ ವಿವಿಧ ಭಾಗಗಳಲ್ಲಿ ಶನಿವಾರ ರಾತ್ರಿ ಸುರಿದ ಅಕಾಲಿಕ ಮಳೆಯು ರೈತರ ಬದುಕಿಗೆ ದೊಡ್ಡ ಹೊಡೆತ ನೀಡಿದೆ. ಇತ್ತೀಚೆಗೆ ಗದ್ದೆ ಕೊಯ್ದು ಬೆಳೆ ಸಂಗ್ರಹಿಸಲು ಸಿದ್ಧರಾಗಿದ್ದ ರೈತರು ಮಳೆಯ ಅಬ್ಬರದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕುಮಟಾ ಪಟ್ಟಣ, ಬಾಡ, ಕಾಗಾಲ, ಕಡ್ಲೆ, ದೀವಗಿ, ಕೂಜಳ್ಳಿ, ವಾಲ್ಗಳ್ಳಿ ಭಾಗಗಳಲ್ಲಿ ಅಕಾಲಿಕವಾಗಿ ಮಳೆಸುರಿದಿದೆ.

ಶನಿವಾರ ರಾತ್ರಿ ಅಕಸ್ಮಾತ್ ಆರಂಭವಾದ ಮಳೆ ಹಲವು ಗಂಟೆಗಳ ಕಾಲ ನಿರಂತರವಾಗಿ ಸುರಿದು, ಹೊಲಗಳಲ್ಲಿ ಇಡಲಾಗಿದ್ದ ಬೆಳೆ ಸಂಪೂರ್ಣವಾಗಿ ತೋಯ್ದು ಹಾನಿಗೊಳಗಾಗಿದೆ. ಗದ್ದೆ ಕೊಯ್ದು ಒಣಗಲು ಹಾಕಿದ್ದ ಧಾನ್ಯ ಮಳೆಗೆ ಆಹುತಿಯಾಗಿದ್ದು, ರೈತರು ನಿರೀಕ್ಷಿಸಿದ್ದ ಆದಾಯ ಕೈತಪ್ಪುವ ಭೀತಿ ಎದುರಾಗಿದೆ.

ಹತ್ತಾರು ದಿನಗಳ ಪರಿಶ್ರಮದ ನಂತರ ಕೊಯ್ಲಿಗೆ ಸಿದ್ಧವಾಗಿದ್ದ ಬೆಳೆ ಹಾನಿಗೊಳಗಾದ ಪರಿಣಾಮ ರೈತರಲ್ಲಿ



ಆತಂಕಹೆಚ್ಚಾಗಿದೆ. ಕೆಲವೆಡೆ ಹೊಲಗಳಲ್ಲಿ ನೀರು ನಿಂತು ಬೆಳೆ ಕುಸಿದು ಬಿದ್ದಿರುವ ದೃಶ್ಯ ಕಂಡುಬಂದಿದೆ. ಇತರ ಬೆಳೆಗಳಾದ ತೆಂಗು, ತರಕಾರಿ ಹಾಗೂ ಮಿಶ್ರ ಬೆಳೆಗಳಿಗೂ ಮಳೆಯ ಪರಿಣಾಮದಿಂದ ಹಾನಿ ಸಂಭವಿಸಿರುವುದಾಗಿ ರೈತರು ತಿಳಿಸಿದ್ದಾರೆ.

ಈ ಅಕಾಲಿಕ ಮಳೆ ರೈತರಲ್ಲಿ ಮಡುಗಟ್ಟಿದದುಃಖಕ್ಕೆಕಾರಣವಾಗಿದ್ದು, ಆರ್ಥಿಕ ನಷ್ಟದ ಭಾರದಿಂದ ಅವರು ಸಂಕಷ್ಟಕ್ಕೊಳಗಾಗಿದ್ದಾರೆ. ಈಗಾಗಲೇ ಬೆಲೆ ಏರಿಳಿತ, ಕಾರ್ಮಿಕ ಕೊರತೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದ ರೈತರಿಗೆ ಈ ಮಳೆ ಮತ್ತೊಂದು ಹೊಡೆತ ನೀಡಿದೆ.

ಸ್ಥಳೀಯ ರೈತರು ಸರ್ಕಾರ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ನಷ್ಟದ ಅಂದಾಜು ಮಾಡಿ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ. ಬೆಳೆ ವಿಮೆ ಯೋಜನೆಯಡಿ ಪರಿಹಾರ ನೀಡುವುದರ ಜೊತೆಗೆ ರೈತರಿಗೆ ಆರ್ಥಿಕ ನೆರವು ಒದಗಿಸಬೇಕೆಂಬ ಬೇಡಿಕೆ ಹೆಚ್ಚಾಗಿದೆ. ಅಕಾಲಿಕ ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಅಸ್ತವ್ಯಸ್ತಗೊಂಡಿದ್ದು, ಮುಂದಿನ ದಿನಗಳಲ್ಲಿ ಹವಾಮಾನ ಸ್ಥಿರವಾಗಿರದಿದ್ದರೆ ಇನ್ನಷ್ಟು ನಷ್ಟ ಸಂಭವಿಸುವ ಭೀತಿ ವ್ಯಕ್ತವಾಗುತ್ತಿದೆ.

ರಾಜ್ಯಾದ್ಯಂತ ಬೇಸಿಗೆ ಮಳೆ ಚೇತರಿಕೆ

• **ಬೆಂಗಳೂರು:** ಕರ್ನಾಟಕದ ಒಳನಾಡಿನಾದ್ಯಂತ ಸಮುದ್ರ ಮಟ್ಟದಿಂದ ಸರಾಸರಿ 900 ಮೀಟರ್ ಎತ್ತರದಲ್ಲಿ ಚಂಡಮಾರುತದ ಪ್ರಸರಣದಿಂದಾಗಿ ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಚೇತರಿಕೆ ಕಂಡಿದೆ.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ರಾಜ್ಯದ ಕರಾವಳಿ ಮತ್ತು ಒಳನಾಡಿನಲ್ಲಿ ಇನ್ನೂ ಒಂದು ವಾರ ಮಳೆಯಾಗುವ ಸಾಧ್ಯತೆಗಳಿವೆ. ಕಳೆದ 2-3 ಮೂರು ವಾರಗಳಿಂದ ರಾಜ್ಯದ ಅಲ್ಲಲ್ಲಿ ಚದುರಿದಂತೆ ಮಳೆ ಸುರಿಯುತ್ತಿದೆ. ಕೆಲವೆಡೆ ಆಲಿಕಲ್ಲು ಮಳೆಯಾಗಿದ್ದರೆ, ಇನ್ನೂ ಕೆಲವೆಡೆ ಗುಡುಗು-ಸಿಡಿಲು ಸಹಿತ ಗಾಳಿ ಮಳೆಯಾಗುತ್ತಿದೆ. ಶನಿವಾರ ರಾತ್ರಿ ಮತ್ತು ಭಾನುವಾರ ರಾಜಧಾನಿ ಬೆಂಗಳೂರಿನಲ್ಲಿಯೂ ವರ್ಷಧಾರೆಯಾಗಿ ವಾತಾವರಣ ತಂಪಾಗಿದೆ. ಅಲ್ಲದೇ ರಾಜ್ಯದ ಕರಾವಳಿ, ಮೈಸೂರು, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ ಹಲವೆಡೆ ಮಳೆ ಬಿದ್ದಿದೆ.

ಸಾಧಾರಣ ಮಳೆಯ ಸಂಭವ: ಹವಾಮಾನ ಮುನ್ಸೂಚನೆ ಪ್ರಕಾರ, ಏ.4ರವರೆಗೆ ರಾಜ್ಯದ ಹಲವೆಡೆ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದೆ. ಕೆಲವೆಡೆ ಸಂಜೆ ಹಾಗೂ ರಾತ್ರಿ ವೇಳೆ ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ. ಒಂದೆರಡು ಕಡೆ ಬಿರುಗಾಳಿ, ಆಲಿಕಲ್ಲು ಸಹಿತ ಮಳೆಯಾಗುವ ಮುನ್ಸೂಚನೆಗಳಿವೆ. ಏ.2ರ ವರೆಗೆ ಕರಾವಳಿಯ ಮೂರು ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಸಾಧಾರಣ ಅಥವಾ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ನಂತರದ ಎರಡು ದಿನ ಉಡುಪಿ ಮತ್ತ ದಕ್ಷಿಣ ಕನ್ನಡ ಜಿಲ್ಲೆಗಳ ಒಂದೆರಡು ಕಡೆ ಹಗುರ ಮಳೆ ಸುರಿಯುವ ಸಾಧ್ಯತೆಯಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಕಲಬುರಗಿ, ವಿಜಯಪುರ, ಬೀದರ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಒಂದೆರಡು ಕಡೆ ಸಾಧಾರಣ ಮಳೆ ಸುರಿಯಲಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಚಾಮರಾಜನಗರ, ಮೈಸೂರು, ಕೋಲಾರ, ತುಮಕೂರು, ಬೆಂಗಳೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಲವಾದ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ರಾಜಮುಡಿ ಉತ್ಸವ



ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ ಭಾನುವಾರ ಮುಂಜಾನೆಯಲ್ಲಿ ರಾಜಮುಡಿ ಉತ್ಸವ ವೈಭವದಿಂದ ನೆರವೇರಿತು. ಮಳೆಯನ್ನೂ ಲೆಕ್ಕಿಸದೆ ದರ್ಶನಕ್ಕೆ ಸೇರಿದ್ದ ಭಕ್ತಸ್ತೋಮ.

ಸಮುದಾಯ ಚಿಕ್ಕದು ಸಾಧನೆ ದೊಡ್ಡದು

• **ಬೆಂಗಳೂರು:** ವಿಶ್ವದಾದ್ಯಂತ ಅಂದಾಜು 4 ಲಕ್ಷ ಮಂದಿ ಹವ್ಯಕ ಬ್ರಾಹ್ಮಣರಿರುವ ಈ ಸಮಾಜವು ಅತೀ ದೊಡ್ಡ ಸಮುದಾಯವಲ್ಲ. ಆದರೆ, ಹವ್ಯಕರ ಸಾಧನೆ ಮಾತ್ರ ಗಗನಮುಖಿಯಾಗಿದೆ ಎಂದು ವಿಮರ್ಶಕ, ಕವಿ ಮತ್ತು ಪ್ರಬಂಧಕಾರ ಚಿಂತಾಮಣಿ ಕೊಡ್ಲೆಕೆರೆ ಹೇಳಿದರು.

ನಗರದ ಮಲ್ಲೇಶ್ವರದ ಶ್ರೀ ಅಖಿಲ ಹವ್ಯಕ ಮಹಾಸಭಾ ವತಿಯಿಂದ ಹವ್ಯಕ ಪತ್ರಿಕೆ ವಜ್ರಮಹೋತ್ಸವ ವಿಶೇಷಾಂಕ ಲೋಕಾರ್ಪಣೆ ಮತ್ತು ಸಂಸ್ಥಾಪನೋತ್ಸವ ಹವ್ಯಕ ವಿಶೇಷ ಪ್ರಶಸ್ತಿ, ಪಲ್ಲವ ಪುರಸ್ಕಾರ ಪ್ರದಾನ ಸಮಾರಂಭವನ್ನು ಭಾನುವಾರ ಅವರು ಉದ್ಘಾಟಿಸಿದರು. ಕಡು ಬಡತನವನ್ನು ಕಂಡ, ಅತ್ಯಂತ ಸಣ್ಣ ಸಮುದಾಯವಾಗಿರುವ ಹವ್ಯಕರು ರಾಜಕೀಯವಾಗಿ ನಿರ್ಣಾಯಕರಲ್ಲ. ಆದರೂ, ಹಲವು ನಾಯಕರು ನಮ್ಮ ಸಮಾಜದಿಂದ ಬಂದಿದ್ದಾರೆ. ಕ್ರೀಡೆ, ಕಲಾ ಪ್ರಕಾರಗಳಲ್ಲಿ, ಯಕ್ಷಗಾನ ಹೀಗೆ ಅನೇಕ ಕ್ಷೇತ್ರಗಳಲ್ಲಿ ಅಸಾಮಾನ್ಯ ಸಾಧನೆಯನ್ನು ಮಾಡಿದ್ದಾರೆ ಎಂದು ಉಲ್ಲೇಖಿಸಿದರು.

ಮಹಾಲಕ್ಷ್ಮಿಪುರಬ್ರಾಹ್ಮಣಸಭಾಅಧ್ಯಕ್ಷರಾಘವೇಂದ್ರ ಭಟ್ ಮಾತನಾಡಿ, ನಮ್ಮ ಸಂಸ್ಕೃತಿ, ಸಂಸ್ಕಾರಗಳೇ ನಮ್ಮ ಜೀವನದ ಮೂಲಾಧಾರ. ಬ್ರಾಹ್ಮಣರಿಗೆ ಶಾಸ್ತ್ರಜ್ಞಾನ, ಸಂಸ್ಕಾರ ಹಾಗೂ ಆಚರಣೆಗಳು ಬಹಳ ಮುಖ್ಯವಾಗಿವೆ. ಇವುಗಳ ಮೂಲಕ ಸಮಾಜದ ಉನ್ನತಿ ಮತ್ತು ಉತ್ತಮ ಜೀವನ ಸಾಧ್ಯವಾಗುತ್ತದೆ ಎಂದರು. ಇದೇ ವೇಳೆ ಹವ್ಯಕ ಪತ್ರಿಕೆಯಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿದವರನ್ನು ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ, ಆರ್ಥಿಕ ತಜ್ಞ ಗೋಪಾಲಕೃಷ್ಣ ಹೆಗಡೆ ಸೇರಿದಂತೆ ಇತರರಿದ್ದರು.



ಹವ್ಯಕ ವಿಶೇಷ ಪ್ರಶಸ್ತಿ ಪ್ರದಾನ

ಹವ್ಯಕ ವಿಭೂಷಣ: ಮೂಡಂಬೈಲು ಗೋಪಾಲ ಕೃಷ್ಣ ಶಾಸ್ತ್ರಿ, ಎಸ್. ಶಂಭು ಭಟ್ ಕಡತೋಕ
ಹವ್ಯಕ ಭೂಷಣ: ನೀರ್ನಳ್ಳಿ ಗಣಪತಿ, ಡಾ.ವೈ.ವಿ. ಕೃಷ್ಣಮೂರ್ತಿ, ಉಮೇಶ ಬಂದಗದ್ದೆ
ಹವ್ಯಕ ಶ್ರೀ: ಪೂರ್ಣಿಮಾ ಕೆ.ಭಟ್, ಸುಚೇತನ ಭಟ್, ಆನಂದ ಹೆಗಡೆ, ಪ್ರತ್ಯೂಷ ಕುಮಾರ್
ಹವ್ಯಕ ಸೇವಾಶ್ರೀ: ಡಾ.ಬಿ.ವಿ. ನರಹರಿ ರಾವ್, ಬೋನಂತಾಯ ಶಿವಶಂಕರ ಭಟ್, ಕೃಷ್ಣಮೂರ್ತಿ ಹೆಗಡೆ ತ್ಯಾಗಲಿ

ಕಿರುಸುದ್ದಿ

ಸರ್ಕಾರದಿಂದ ಜನರಿಗೆ ಅನುಕೂಲ ಇಲ್ಲ: ಬಿವೈವಿ

• **ದಾವಣಗೆರೆ:** ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯದಿಂದ ಜನ ಬೇಸತ್ತಿದ್ದಾರೆ. ಸಿಎಂ ಸಿದ್ದರಾಮಯ್ಯರಿಂದ ರಾಜ್ಯಕ್ಕೆ ಯಾವುದೇ ಅನುಕೂಲವಾಗಿಲ್ಲ. ಪಂಚ ರಾಜ್ಯಗಳ ಚುನಾವಣೆ ನಂತರ ಹೈಕಮಾಂಡ್ ನಿರ್ಧಾರಕ್ಕೆ ಮಣಿಯುವ ಅನಿವಾರ್ಯತೆಯಲ್ಲಿರುವುದು ಅವರ ಮಾತಿನಿಂದಲೇ ಗೊತ್ತಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ರಾಜಕೀಯ ದಿಕ್ಕು ಬದಲಾಯಿಸುವ ಶಕ್ತಿ ಪ್ರಸ್ತ ಉಪಚುನಾವಣೆಗೆ ಇದೆ. ಎರಡೂ ಉಪಚುನಾವಣೆಗಳಲ್ಲಿ ಜನಾದೇಶ ಬಿಜೆಪಿ ಪರವಾಗಿ ಬರಲಿದೆ ಎಂದರು.



ವೃದ್ಧನ ಹತ್ಯೆ ಮಾಡಿ ಸುಟ್ಟ ದುಷ್ಕರ್ಮಿಗಳು

• **ವಿಜಯಪುರ:** ಜಿಲ್ಲೆಯ ಭೀಮಾತೀರದ ಇಂಡಿ ತಾಲೂಕಿನ ತೆನಹಳ್ಳಿ ಗ್ರಾಮದಲ್ಲಿ ದುಷ್ಕರ್ಮಿಗಳು ವೃದ್ಧನ ಬರ್ಬರ ಹತ್ಯೆಗೈದು, ಸುಟ್ಟು ಹಾಕಿರುವ ಘಟನೆ ನಡೆದಿದೆ. ಗುರುಬಸಯ್ಯ ರೇವಯ್ಯ ಹಿರೇಮಠ (72) ಮೃತಪಟ್ಟ ವೃದ್ಧ. ಗುರುಬಸಯ್ಯ ಈತನಿಗೆ ಹತ್ಯೆಗೈದು ಮುಖಕ್ಕೆ ಬೆಂಕಿ ಹಚ್ಚಿ ದುಷ್ಕರ್ಮಿಗಳು ಪರಾರಿಯಾಗಿದ್ದು, ಹತ್ಯೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇಂಡಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಘಟನೆ ನಡೆದಿದೆ.

ಈಜಲು ತೆರಳಿದ್ದ ನಾಲ್ವರು ಮಕ್ಕಳು ಮೃತ್ಯು

• **ಯಾದಗಿರಿ:** ಕೃಷಿ ಹೊಂಡದಲ್ಲಿ ಈಜಲು ಹೋದ ನಾಲ್ವರು ಮಕ್ಕಳು ಮೃತಪಟ್ಟ ಘಟನೆ ಜಿಲ್ಲೆಯ ಸುರಪುರ ತಾಲೂಕಿನ ನಗನೂರ ಗ್ರಾಮದಲ್ಲಿ ಭಾನುವಾರ ನಡೆದಿದೆ. ಕಿರಣ (6), ಬಸಮ್ಮ (11), ಶರತ್ (6), ಹನುಮೇಶ್ (7) ಮೃತಪಟ್ಟ ನತದೃಷ್ಟ ಮಕ್ಕಳು. ಶಾಲೆಗೆ ರಜೆ ಇದ್ದ ಕಾರಣಕ್ಕೆ ಮಕ್ಕಳು ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದರು. ಹೊಂಡದಲ್ಲಿ ನೀರು ಹೆಚ್ಚಿದ್ದ ಕಾರಣ ಹೊರಗೆ ಬರಲಾರದೆ ಮುಳುಗಿದ್ದಾರೆ. ಮಕ್ಕಳನ್ನು ಕಳೆದುಕೊಂಡ ಪಾಲಕರ ಆಕ್ರಂದನ ಮುಗಿಲು ಮುಟ್ಟಿದೆ. ಕೆಂಭಾವಿ ಪೊಲೀಸರು ಸ್ಥಳಕ್ಕೆ ಆಗಮಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆತ್ಮಹತ್ಯೆಗೆ ಯತ್ನ: ಇಬ್ಬರ ಸಾವು

• **ಆನೇಕಲ್:** ಸಾಲ ಬಾಧೆ ತಾಳಲಾಗದೆ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದು, ತಾಯಿ, ಮಗಳು ಮೃತರಾಗಿರುವ ಘಟನೆ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯ ಮಳ್ಳೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ತಾಯಿ ಆಶಾ (50), ಮಗಳು ವರ್ಷಿತಾ (35) ಸ್ಥಳದಲ್ಲಿಯೇ ಮೃತರಾದವರು. ಪುತ್ರ ಮೋಹನ್ ಗೌಡ (27), ಹಾಗೂ ಮೊಮ್ಮಗ ಮಾಯನ್ ಗೌಡ (11) ಸ್ಥಿತಿ ಗಂಭೀರ ಸ್ಥಿತಿಯಲ್ಲಿರುವುದರಿಂದ ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನು ಮೋಹನ್ ಗೌಡ ತನ್ನ ತಾಯಿ, ಅಕ್ಕ ಹಾಗೂ ಅಕ್ಕನ ಮಗನ ಕತ್ತು ಕೊಯ್ದು ಬಳಿಕ ತಾನೂ ಆತ್ಮಹತ್ಯೆಗೆ ಯತ್ನ ಮಾಡಿದ್ದಾನೆ ಎಂದು ಪ್ರಥಮಿಕವಾಗಿ ತಿಳಿದು ಬಂದಿದೆ. ಚೀಟಿ ವ್ಯವಹಾರ ಸೇರಿದಂತೆ ಬೇರೆ ಬೇರೆ ವ್ಯವಹಾರವನ್ನು ನಡೆಸುತ್ತಿದ್ದರು. ಮೋಹನ್ ಗೌಡ ಕೋಟ್ಯಂತರ ರೂಪಾಯಿ ಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ. ಸಾಲಗಾರರ ಉಪಟಳದಿಂದ ಮನನೊಂದು ಮೋಹನ್ ಗೌಡ ಈ ರೀತಿ ಮಾಡಿದ್ದಾನೆ ಎಂದು ಹೇಳಲಾಗಿದೆ ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಡ್ರಗ್ಸ್ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ: ಸಿದ್ಧರಾಮಯ್ಯ

ಮಾದಕವಸ್ತು ಮುಕ್ತ ರಾಜ್ಯ

• **ಮೈಸೂರು:** ಕರ್ನಾಟಕವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವುದು ನಮ್ಮ ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ನಡೆದ ಮೈಸೂರು ಘಟಕದ 46ನೇ ತಂಡದ ಸಿವಿಲ್ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಂಡು, ತರಬೇತಿ ಪೂರ್ಣಗೊಳಿಸಿದ ಎಲ್ಲ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಶುಭ ಹಾರೈಸಿ ಮಾತನಾಡಿದ ಅವರು, ಮಾದಕವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಪೊಲೀಸರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಮಾದಕವಸ್ತು ತಯಾರಕರು, ಮಾರಾಟ ಮಾಡುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಪ್ರಸ್ತುತ ಸಮಾಜದಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತಿವೆ. ಅದರಲ್ಲೂ ಇಂದು ಯುವಕ ಮತ್ತು ಯುವತಿಯರು ಹೆಚ್ಚಿನ ಪ್ರಮಾಣದಲ್ಲಿ ಮಾದಕವಸ್ತುಗಳಿಗೆ ದಾಸರಾಗಿರುವುದನ್ನು ಕಾಣಬಹುದಾಗಿದೆ. ಮಾದಕವಸ್ತು ಮುಕ್ತ ಸಮಾಜವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಸಮಾಜದಲ್ಲಿ ಕಾನೂನು ವ್ಯವಸ್ಥೆಗಳನ್ನು ಕಾಪಾಡಬೇಕಾದದ್ದು ಪೊಲೀಸ್ ಇಲಾಖೆಯ ಕರ್ತವ್ಯವಾಗಿದೆ ಎಂದರು.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಸಾರ್ಥಕವಾಗಬೇಕಾದರೆ ಪ್ರತಿಯೊಬ್ಬರಿಗೂ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಸಿರಬೇಕು. ಹಾಗೂ ನಿರ್ಭಯವಾಗಿ ಬದುಕುವಂತಹ ವಾತಾವರಣವಿರಬೇಕು ಸಮಾಜದಲ್ಲಿ ಸಮಾನ ನ್ಯಾಯ ವಿತರಣೆ ಬಹಳ ಮುಖ್ಯ ಎಂದು ತಿಳಿಸಿದರು.

ತರಬೇತಿ ಸಮಯದಲ್ಲಿ ತಮಗೆ ಹೇಳಿ ಕೊಟ್ಟಿರುವ ವಿಷಯಗಳನ್ನು ಜೀವನದಲ್ಲಿ ಪಾಲನೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ ಇಂತಹ ಅಪರಾಧಗಳನ್ನು ತಡೆಗಟ್ಟುವ ಪ್ರಯತ್ನವನ್ನು ಮಾಡಬೇಕು ಎಂದು ಹೇಳಿದರು.

ಪೊಲೀಸ್ ಅಧಿಕಾರಿಗಳಿಗೆ ಮೊದಲನೆಯದಾಗಿ ಧೈರ್ಯ ಇರಬೇಕು. ಧೈರ್ಯವನ್ನು ಪ್ರದರ್ಶಿಸುವಂತಹ ಕೆಲಸವನ್ನು ತಾವೆಲ್ಲರೂ ಮಾಡುತ್ತೀರಿ ಎಂಬ ನಂಬಿಕೆ ನಮಗಿದೆ. ಇಂದು 327 ಪೊಲೀಸ್ ಸೇವೆಗೆ ಸೇರ್ಪಡೆಯಾಗುತ್ತಿದ್ದೀರಿ. ನಾವು ಈ ವರ್ಷದ ಬಜೆಟ್‌ನಲ್ಲಿ ಹೇಳಿರುವ ಹಾಗೆ ಖಾಲಿ ಇರುವ 8000 ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಸರ್ಕಾರ ಸದಾ ಕಾಲ ನಿಮ್ಮ ಜತೆಗೆ ಇರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ ಮಹದೇವಪ್ಪ, ಪಶು ಸಂಗೋಪನೆ ಸಚಿವ ವೆಂಕಟೇಶ್, ಶಾಸಕ ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ಪೊಲೀಸ್ ಮಹಾ ನಿರ್ದೇಶಕ ಡಾ.ಎಂ. ಎ. ಸಲೀಂ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ದೇವ ಜ್ಯೋತಿ ರೇ, ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕ ವಿಷ್ಣುವರ್ಧನ್, ಉಪನಿರ್ದೇಶಕ ಚನ್ನಬಸವಣ್ಣ ಹಾಗೂ ಹಿರಿಯ ಪೊಲೀಸ ಅಧಿಕಾರಿಗಳು ಇದ್ದರು.



ಪ್ರಾಮಾಣಿಕವಾಗಿ ಕೆಲಸ ಮಾಡಿ

ಪೊಲೀಸ್ ಇಲಾಖೆ ಎಷ್ಟೇ ಕಷ್ಟವಾದರೂ ನ್ಯಾಯ ವಿತರಣೆಯಲ್ಲಿ ನ್ಯಾಯವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ಮಾಡಬೇಕು. ಯಾವುದೇ ಕಾರಣಕ್ಕೂ ನ್ಯಾಯ ವಿತರಣೆ ಮಾಡುವ ಕೆಲಸದಲ್ಲಿ ಯಾರ ಜತೆಯಲ್ಲೂ ರಾಜಿ ಆಗಬಾರದು ಹಾಗೂ ಆಸೆ ಆಮಿಷಗಳಿಗೆ ಬಲಿಯಾಗದೆ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಕಿವಿ ಮಾತು ಹೇಳಿದರು. ಇಂದು ನಿರ್ಗಮನ ಪಥ ಸಂಚಲನ ಕರ್ನಾಟಕ ಪೊಲೀಸ್ ಅಕಾಡೆಮಿ ಘಟಕದ 46ನೇ ತಂಡ ತರಬೇತಿಯನ್ನು ಪಡೆದು ಸೇವೆಗೆ ಸೇರುತ್ತಿರುವ ಸಂದರ್ಭ ಇದಾಗಿದೆ. ಪೊಲೀಸ್ ಎಂದರೆ ಶಿಸ್ತು, ಸಂಯಮ, ವಿನಯ, ಪ್ರಾಮಾಣಿಕತೆ ಹಾಗೂ ಮಾನವೀಯತೆ ಇರುವ ವ್ಯಕ್ತಿಗಳಾಗಿರಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟ ಸಲ್ಲ: ಕಾಗೇರಿ

• **ಶಿರಸಿ:** ಕರ್ನಾಟಕದ ಶಾಲಾ ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿಯಲ್ಲಿ ಕೈಗೊಂಡಿರುವ ಬದಲಾವಣೆಗಳು ಅತ್ಯಂತ ದುರದೃಷ್ಟಕರ ಮತ್ತು ವಿದ್ಯಾರ್ಥಿ ವಿರೋಧಿಯಾಗಿವೆ. ದಶಕಗಳಿಂದಲೂ ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಯಲ್ಲಿದ್ದ ತ್ರಿಭಾಷಾ ಸೂತ್ರಕ್ಕೆ ಕೊಡಲಿ ಪೆಟ್ಟು ನೀಡಿರುವ ಶಿಕ್ಷಣ ಸಚಿವ ಮಧು ಬಂಗಾರಪ್ಪನವರ ಅಪ್ರಬುದ್ಧ ನಿರ್ಧಾರವು ರಾಜ್ಯದ ಶೈಕ್ಷಣಿಕ ಘನತೆಗೆ ದೊಡ್ಡ ಧಕ್ಕೆ ತಂದಿದೆ ಎಂದು ಮಾಜಿ ಶಿಕ್ಷಣ ಸಚಿವರೂ ಆಗಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಹೇಳಿಕೆ ನೀಡಿರುವ ಅವರು, ತೃತೀಯ ಭಾಷೆಯ ಅಂಕಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಕೇವಲ ಗ್ರೇಡ್ ಪದ್ಧತಿಗೆ ಸೀಮಿತಗೊಳಿಸಿರುವುದು ಮತ್ತು ಒಟ್ಟು ಅಂಕಗಳನ್ನು 625ರಿಂದ 525ಕ್ಕೆ ಇಳಿಸಿರುವುದು ಶಿಕ್ಷಣ ಕ್ಷೇತ್ರದಲ್ಲಿ ಅರಾಜಕತೆಯನ್ನು ಸೃಷ್ಟಿಸುತ್ತಿದೆ. ನಮ್ಮ ರಾಜ್ಯದ ಮಕ್ಕಳು ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್ ಅನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿ ಅಥವಾ ಸಂಸ್ಕೃತವನ್ನು ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ಕಲಿಯುತ್ತಿದ್ದರು. ಆದರೆ, ಈಗ ತೃತೀಯ ಭಾಷೆಯು ಲೆಕ್ಕಕ್ಕುಂಟು ಆಟಕ್ಕಿಲ್ಲ ಎಂಬ ಸ್ಥಿತಿಗೆ ತಲುಪಿದ್ದು, ಇದು ಮಕ್ಕಳ ಭಾಷಾ ಸಾಮರ್ಥ್ಯವನ್ನು ತೀವ್ರವಾಗಿ ಕುಂಠಿತಗೊಳಿಸಲಿದೆ ಎಂದಿದ್ದಾರೆ.

ಶಿಕ್ಷಣ ಇಲಾಖೆಯು ಕೇವಲ ಅಂಕಗಳ ಕಡಿತದ ಮೇಲೆ ಗಮನ ಹರಿಸುತ್ತಿದೆಯೇ ಹೊರತು, ಗುಣಮಟ್ಟದ ಕಲಿಕೆಯ ಮೇಲಲ್ಲ ಎಂಬುದು ಈ ನಿರ್ಧಾರದಿಂದ ಸ್ಪಷ್ಟವಾಗುತ್ತದೆ. ಸಾರ್ವಜನಿಕವಾಗಿ ಅಥವಾ ಶಿಕ್ಷಣ ತಜ್ಞರ ಜತೆ ಯಾವುದೇ ಪೂರ್ವಭಾವಿ ಚರ್ಚೆ ನಡೆಸದೆ, ಏಕಾಏಕಿ ಇಂತಹ ಮಹತ್ವದ ಬದಲಾವಣೆಗಳನ್ನು ಜಾರಿಗೊಳಿಸುತ್ತಿರುವುದು ಸಚಿವರ ಸರ್ವಾಧಿಕಾರಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದರು.

ರಾಜಕೀಯಪ್ರಯೋಗ ಶಾಲೆಯಲ್ಲ

ಶಿಕ್ಷಣ ಕ್ಷೇತ್ರವು ರಾಜಕೀಯ ಪ್ರಯೋಗಶಾಲೆಯಲ್ಲ. ಒಬ್ಬ ಮಾಜಿ ಶಿಕ್ಷಣ ಸಚಿವನಾಗಿ ನಾನು ಈ ಕ್ರಮವನ್ನು ತೀವ್ರವಾಗಿ ಖಂಡಿಸುತ್ತೇನೆ. ಸಚಿವರ ಈ ಅಪ್ರಬುದ್ಧ ನಿರ್ಧಾರವು ನಮ್ಮ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಿನ್ನಡೆ ಅನುಭವಿಸುವಂತೆ ಮಾಡಲಿದೆ. ರಾಜ್ಯದ ಮುಖ್ಯಮಂತ್ರಿಗಳು ಇಂತಹ ಗಂಭೀರ ಶೈಕ್ಷಣಿಕ ವಿಚಾರಗಳ ಬಗ್ಗೆ ಗಮನಹರಿಸುವ ಬದಲು, ಕೇವಲ ಅಧಿಕಾರ ಹಸ್ತಾಂತರದ ಚಿಂತೆಯಲ್ಲೇ ಮುಳುಗಿರುವುದು ರಾಜ್ಯದ ದೌರ್ಭಾಗ್ಯವಾಗಿದೆ. ಸರ್ಕಾರವು ಕೂಡಲೇ ಈ ಆದೇಶವನ್ನು ರದ್ದುಗೊಳಿಸಬೇಕು ಹಾಗೂ ಭಾಷಾ ತಜ್ಞರು ಮತ್ತು ಸಾಹಿತಿಗಳ ಸಮ್ಮುಖದಲ್ಲಿ ಪಾರದರ್ಶಕ ಚರ್ಚೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಬೇಕೆಂದು ಎಂದರು.

ಬೆಳಗಾವಿ ರೈತನ ಸಾಧನೆ ಮೆಚ್ಚಿದ ಮೋದಿ

• **ಬೆಳಗಾವಿ:** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಬೆಳಗಾವಿ ತಾಲೂಕಿನ ಬೋಡಕ್ಯಾನಟ್ಟಿ ಗ್ರಾಮದ ರೈತ ಶಿವಲಿಂಗಪ್ಪ ಸಾತಪ್ಪ ಹುದ್ದಾರ ಮೀನು ಸಾಕಾಣಿಕೆಯಲ್ಲಿ ಯಶಸ್ಸು ಕಂಡಿದ್ದಾರೆ. ಇವರ ಸಾಧನೆಯ ಬಗ್ಗೆ ಪ್ರಧಾನಿ ಮೋದಿ ಅವರ ಮೆಚ್ಚುಗೆಯಿಂದ ಹುದ್ದಾರ ಕುಟುಂಬದಲ್ಲಿ ಸಂತಸ ಇಮ್ಮಡಿಗೊಂಡಿದೆ.

ಬೆಳಗಾವಿ ತಾಲೂಕಿನ ಬೋಡಕ್ಯಾನಟ್ಟಿ ಪುಟ್ಟ ಗ್ರಾಮದಲ್ಲಿ ಶಿವಲಿಂಗಪ್ಪ ತಮ್ಮ ಪುತ್ರ ರಾಜು ಅವರ ನೆರವಿನಿಂದ ತಮ್ಮ ಒಂದು ಎಕರೆಯಲ್ಲಿ ಕೃಷಿ ಹೊಂಡದಲ್ಲಿ ಬಯೋಫ್ಲಾಕ್ ತಂತ್ರಜ್ಞಾನ ಬಳಸಿ ಕುಚ್ಚು (ಮರಲ್) ಮೀನು ಸಾಕಾಣಿಕೆ ಮಾಡಿ, ಲಕ್ಷ ಲಕ್ಷ ಆದಾಯ ಗಳಿಸುತ್ತಿದ್ದಾರೆ.

ರೈತನ ಸಾಧನೆಯ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮನ್ ಕಿ ಬಾತ್‌ನಲ್ಲಿ ಶಿವಲಿಂಗಪ್ಪ ಹುದ್ದಾರ ಅವರ ಯಶಸ್ವಿ ಮೀನುಗಾರಿಕೆಯ ಸಾಧನೆಯ ಬಗ್ಗೆ ದೇಶಕ್ಕೆ ತಿಳಿಸಿದ್ದಾರೆ. ದೇಶದಲ್ಲಿರುವ ಎಲ್ಲ ರೈತರು ಇದೇ ರೀತಿಯಲ್ಲಿ ವಿಭಿನ್ನ ರೀತಿಯಲ್ಲಿ ಕೃಷಿ ಪ್ರಾರಂಭ ಮಾಡುವಂತೆ ಸಲಹೆ ನೀಡಿದರು. ಹೀಗೆ ಮಾಡುವುದರಿಂದ ಆರ್ಥಿಕವಾಗಿ ಸದೃಢರಾಗಬಹುದು. ಅಲ್ಲದೇ, ದೇಶದ ಆರ್ಥಿಕ ಶಕ್ತಿಗೂ ದೊಡ್ಡ ಕೊಡುಗೆ ನೀಡಬಹುದಾಗಿದೆ ಎಂದು ಸಲಹೆ ನೀಡಿದರು.

ಶಿವಲಿಂಗಪ್ಪ ಸಾತಪ್ಪ ಹುದ್ದಾರ ಅವರು ಸಾಂಪ್ರದಾಯಿಕ ಕೃಷಿಯ ಬದಲಿಗೆ ಬೇರೆ ಮಾರ್ಗವನ್ನು ಆಯ್ದುಕೊಂಡಿದ್ದಾರೆ. ಅವರು ಮೀನು ಸಾಕಾಣಿಕೆಯಲ್ಲಿ ಯಶಸ್ಸು ಕಂಡಿದ್ದಾರೆ. ಇದಕ್ಕಾಗಿ ತರಬೇತಿಯನ್ನೂ ಪಡೆದಿದ್ದಾರೆ. ಇದರಿಂದ ಉತ್ತಮ ಆದಾಯ ಗಳಿಸುತ್ತಿದ್ದಾರೆ. ನಮ್ಮ ಆರ್ಥಿಕತೆಯನ್ನು ಬಲಿಷ್ಠಗೊಳಿಸಲು ಇವರೆಲ್ಲರ ಪ್ರಯತ್ನ ಪ್ರಶಂಸನೀಯ. ಸಮಾಜದಲ್ಲಿನ ಸಣ್ಣ ಸಣ್ಣ ಪ್ರಯತ್ನವೂ ಕೂಡ ದೊಡ್ಡ ಬದಲಾವಣೆ ತರುತ್ತದೆ ಎಂದು ಮೋದಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಧಾನಿಗಳು ನಮ್ಮ ಮೀನುಗಾರಿಕೆಯ ಬಗ್ಗೆ ಮನ್ ಕಿ ಬಾತ್‌ನಲ್ಲಿ ಮಾತನಾಡಿದ್ದಕ್ಕೆ ಬಹಳಷ್ಟು ಖುಷಿ ಆಗುತ್ತಿದೆ. ಇದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ. ಆದರೆ, ನಮ್ಮ ಮೀನು ಸಾಕಾಣಿಕೆ ಸಾಧನೆ ಪ್ರಧಾನಿಗಳವರೆಗೂ ಮುಟ್ಟಿದೆ. ಇದು ನಮಗೆ ಇನ್ನಿಲ್ಲದ ಸಂತಸ ತಂದಿದೆ ಎಂದು ರೈತ ರಾಜು ತಿಳಿಸಿದರು.



ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲು

• **ಕಲಬುರಗಿ:** ರಾಜ್ಯದ ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಗೆಲುವು ಸಾಧಿಸಲಿದ್ದು, ಕಾಂಗ್ರೆಸ್ ಪಕ್ಷಕ್ಕೆ ಸೋಲಿನ ಕಹಿ ಅನುಭವವಾಗಲಿದೆ ಎಂದು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ನಗರದ ಐವನ ಶಾಹಿ ಅತಿಥಿ ಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆಯಲ್ಲಿ ಈ ಹಿಂದೆ ಅಲ್ಪ ಮತಗಳ ಅಂತರದಲ್ಲಿ ಸೋತಿದ್ದೇವೆ. ಈ ಬಾರಿ ಅದನ್ನು ಸರಿಪಡಿಸಲಿದ್ದೇವೆ. ಒಳಮೀಸಲಾತಿ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೊಂದಲ ಸೃಷ್ಟಿಸಿದ್ದು, ಇದರಿಂದ ದಲಿತರು ಹಾಗೂ ಅಲ್ಪಸಂಖ್ಯಾತರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದಾರೆ. ದಾವಣಗೆರೆಯಲ್ಲಿ 70-80 ಸಾವಿರ ಮುಸ್ಲಿಂ ಸಮುದಾಯದವರಿದ್ದಾರೆ. ಈ ಬಾರಿ ಟಿಕೆಟ್ ಕೇಳಿದ್ದರೂ ನೀಡಿಲ್ಲ, ಬದಲಾಗಿ ಶ್ರೀಮಂತರಿಗೆ ಟಿಕೆಟ್ ನೀಡಿದ್ದಾರೆ. ಇದು ಆ ಸಮುದಾಯಕ್ಕೆ ಮಾಡಿದ ಅನ್ಯಾಯವಾಗಿದ್ದು, ಈ ಬಾರಿ ಅವರು ಬಿಜೆಪಿಗೆ ಬೆಂಬಲ ನೀಡಲಿದ್ದಾರೆ ಎಂದು ಹೇಳಿದರು.

ಮೈಸೂರಿನಲ್ಲಿ ಪತ್ತೆಯಾದ 12 ಕೋಟಿ ಮೌಲ್ಯದ ಮಾದಕ ವಸ್ತು ಕುರಿತು ಮಾತನಾಡಿ, ಅಧಿಕಾರದ ಮದ ಏರಿದೆ. ಜವಾಬ್ದಾರಿಯುತ ಆಡಳಿತ ಕಾಣುತ್ತಿಲ್ಲ, ಗೃಹ ಸಚಿವ ಪರಮೇಶ್ವರ ಅವರಂತು ಏನೆ ಕೇಳಿದರೂ, ನಾನು ತಿಳಿದುಕೊಂಡು ಮಾತನಾಡುತ್ತೇನೆ ಅಂತ ಹೇಳುತ್ತಾರೆ. ಉಡಾಫೆ ಉತ್ತರ ನೀಡುವ ಮೂಲಕ ಅಧಿಕಾರದ ಮದ ಜಾಸ್ತಿಯಾಗಿದೆ. ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಎಲ್ಲರೂ ಮದದ ರಾಜಕಾರಣ ಮಾಡುತ್ತಿದೆ ಎಂದರು.

ಮೋದಿ 'ಧುರಂಧರ' ನಾಯಕ

ಮಧ್ಯಪ್ರಾಚ್ಯದಲ್ಲಿ ಯುದ್ಧ ನಡೆದಿದೆ. ಹಾರ್ಮೋಜ್ ಜಲಸಂಧಿಯಿಂದ ಯಾವುದೇ ಹಡಗುಗಳು ಬರುತ್ತಿಲ್ಲ. ನಿನ್ನೆಯಷ್ಟೆ ಪಾಕಿಸ್ತಾನದ ಹಡಗನ್ನು ಹೊಡೆದುರುಳಿಸಿದ್ದಾರೆ. ಆದರೆ, ಭಾರತದ ಹಡಗನ್ನು ಸುರಕ್ಷಿತವಾಗಿ ಬಿಟ್ಟಿದ್ದಾರೆ. ಅವರೊಂದಿಗಿನ ನಮ್ಮ ಸಂಬಂಧ, ಒಳ್ಳೆಯ ಬಾಂಧವ್ಯ. ಸಂಯಮ ನಾಯಕತ್ವದಿಂದ ದೇಶದ ಸಮಸ್ಯೆಗಳನ್ನು ತಮ್ಮ ಬುದ್ಧಿವಂತಿಕೆಯಿಂದ ಎದುರಿಸುತ್ತಿದ್ದಾರೆ, ಮೋದಿ ಸರೆಂಡರ್ ಎಂದು ಹೇಳುವುದು ಎಷ್ಟು ಸರಿ. ಸಂಯಮ ಶರಣಾಗತಿ ಅಲ್ಲ, ಹೀಗಾಗಿ ಮೋದಿ ಇಸ್ ನಾಟ್ ಎ ಸರೆಂಡರ್ ನಾಯಕ, ಮೋದಿ ಇಸ್ ಎ ಧುರಂಧರ ನಾಯಕ. ಈ ಮಾತನ್ನು ದೇಶದ ಜನರು ಅರ್ಥ ಮಾಡಿಕೊಂಡಿದ್ದು, ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು ಎಂದರು.



ಕಳೆದ ನಾಲ್ಕು ವರ್ಷಗಳಲ್ಲಿ ಎಸ್ಸಿಪಿ/ಟಿಎಸ್ಪಿಗೆ 1.58 ಲಕ್ಷ ಕೋಟಿ ಮೀಸಲಿಟ್ಟಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಅದರಲ್ಲಿ 78 ಸಾವಿರ ಕೋಟಿ ಹಣ ಬೇರೆ ಇಲಾಖೆಗಳಿಗೆ ವರ್ಗಾಯಿಸಲಾಗಿದೆ. ಉಳಿದ ಹಣದಲ್ಲಿ 52 ಸಾವಿರ ಕೋಟಿ ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಬೇರೆ ಕಡೆಗೆ ಬಳಸುವುದು ದಲಿತರಿಗೆ ಮಾಡಿದ ಅನ್ಯಾಯ.
■ **ಛಲವಾದಿ ನಾರಾಯಣಸ್ವಾಮಿ,** ವಿಪಕ್ಷ ನಾಯಕ

ನೀರು ಬಂದಿತು ಜೀವ ಅರಳಿತು...

▸ **ಮೇಘಾ ಪ್ರಮೋದ್**

ಇದು ಡೋಂಗ್ರಿಪಾಡ ಎಂಬ ಹಳ್ಳಿಯಲ್ಲಿ ಏಳು ದಶಕಗಳ ಕಾಯುವಿಕೆ ಕೊನೆಗೊಂಡು ಹಳ್ಳಿಯ ಜನರು ಸಂತೋಷದಿಂದ ನಲಿದಾಡಿದ ಕಥೆ. ಮನೆ ಮನೆಗೂ ನೀರನ್ನು ತಲುಪಿಸುವ ಸೋಲಾರ್ ಪಂಪ್ ಅನ್ನು ತದೇಕ ಚಿತ್ತರಾಗಿ ದೃಷ್ಟಿಸಿ ನೋಡುತ್ತಿದ್ದ ಶಾಂತಾಬಾಯಿ ಖಂಜೋಡೆ ಅವರ ಕಣ್ಣೀರು ನಿಲ್ಲಲೇ ಇಲ್ಲ.

ಮುಂಬೈಯಿಂದ ಕೇವಲ 80 ಕಿಮೀ ದೂರದಲ್ಲಿರುವ ಪಾಲ್ಘರ್ ಜಿಲ್ಲೆಯ ಈ ಹಳ್ಳಿಯ ಜನರು ಕಳೆದ 72 ವರ್ಷಗಳಿಂದ ಕುಡಿಯುವ ನೀರಿನ ನಿರೀಕ್ಷೆಯಲ್ಲಿದ್ದರು. ಗರ್ಭಿಣಿ ಅಥವಾ 12 ವರ್ಷದ ಬಾಲಕಿಯೇ ಇರಬಹುದು, ಬೆಟ್ಟದ ಮೇಲೆ ಇರುವ ಡೊಂಗ್ರಿಪಾಡ ಹಳ್ಳಿಯಿಂದ ಉಬ್ಬುತಗ್ಗಾದ ರಸ್ತೆಯಲ್ಲಿ ಒಂದೂವರೆ ಕಿಮೀ ನಷ್ಟು ದೂರದಲ್ಲಿ ಕೆಳಗೆ ಇದ್ದ ಬಾವಿಯಿಂದ ನೀರು ತರುವುದು ಅನಿವಾರ್ಯವಾಗಿತ್ತು.

ಹಾಗೆಯೇ ಮಳೆಗಾಲದಲ್ಲಂತೂ ಓಡಾಡುವ ರಸ್ತೆಯೂ ಮುಚ್ಚಿಹೋಗುತ್ತಿತ್ತು. ನೀರು ಇಲ್ಲದೇ, ವಿದ್ಯುತ್ ಇಲ್ಲದೇ, ಸರ್ಕಾರಿ ಶಾಲೆಯೂ ಇಲ್ಲದ 33 ಪರಿವಾರಗಳ ಈ ಸೇವಾಬಸ್ತಿಯಲ್ಲಿ ಕೇವಲ 7 ರೈತರು ತಮ್ಮ ಗದ್ದೆಗಳಲ್ಲಿ ಬೇಸಾಯ ಮಾಡಬಹುದಾಗಿತ್ತು. ಆದರೆ ಇಂದು ಈ ಕಥೆಯನ್ನು ಓದುತ್ತಿರುವ ಓದುಗರಿಗೆ ಆಶ್ಚರ್ಯವಾಗಬಹುದು...! ಇಂದು ಈ ಹಳ್ಳಿಯಲ್ಲಿ ಆಸ್ಟ್ರೋಟರ್ಫ್ ಆಟದ ಮೈದಾನವಿದೆ, ಮಹಿಳೆಯರಿಗೆ ಹೊಲಿಗೆ ಕಲಿಯಲು ತರಬೇತಿ ಕೇಂದ್ರವಿದೆ.

ಪುಟ್ಟ ಮಕ್ಕಳಿಗೆ ಮಾಧವ ಬಾಲ ಸಂಸ್ಕಾರ ಕೇಂದ್ರವಿದೆ ಹಾಗೂ ಕಂಪ್ಯೂಟರ್ ತರಬೇತಿಯನ್ನೂ ನೀಡಲಾಗುತ್ತಿದೆ, ಅಧ್ಯಯನಕ್ಕಾಗಿ ಒಂದು ಚಿಕ್ಕ ಪುಸ್ತಕಾಲಯವೂ ಇದೆ. ಹಾಗೆಯೇ, ಎಲ್ಲಕ್ಕಿಂತ ಮುಖ್ಯವಾದ ಅಂಶವೆಂದರೆ ಅದು ನೀರು. ಈಗ ಪ್ರತೀ ಎಂಟು ಮನೆಗಳ ಮಧ್ಯದಲ್ಲಿ ಒಂದುನಲ್ಲಿ ಇದೆ ಅಷ್ಟೇ ಅಲ್ಲ ಪ್ರತೀ ಮನೆಗೂ ವಿದ್ಯುತ್ ಪೂರೈಕೆ ಆಗುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾದ ಡಾ.ಕೇಶವ ಬಲಿರಾಮ್ ಹೆಡ್ಗೇವಾರ್ ಅವರ ಸ್ಮರಣಾರ್ಥವಾಗಿ ಭಯಂದರ್‌ನಲ್ಲಿ ನಡೆಯುತ್ತಿರುವ ಕೇಶವ ಸೃಷ್ಟಿ ಎಂಬ ಬಹುಮುಖಿ ಪ್ರಕಲ್ಪದ ಮೂಲಕ ನಡೆಯುತ್ತಿರುವ ಗ್ರಾಮ ವಿಕಾಸ ಯೋಜನೆಯಿಂದ ಇವೆಲ್ಲ ಸಾಧ್ಯವಾಗಿದೆ. ಈ ವಿಕಾಸ ಯಾತ್ರೆಯಲ್ಲಿ ಹೆಜ್ಜೆ ಹೆಜ್ಜೆಗೂ ಗ್ರಾಮವಾಸಿಗರ ಸಹಾಯ ದೊರಕಿತು.

ನೀರಿನ ಟ್ಯಾಂಕ್‌ನಿಂದ ಮನೆಗಳಿಗೆ ಪೈಪ್‌ಲೈನ್ ಎಳೆಯುವುದರಿಂದ ಹಿಡಿದು ಸಮಾಜ ಮಂದಿರದ ನಿರ್ಮಾಣದ ತನಕ ರಾತ್ರಿ-ಹಗಲು ಎನ್ನದೇ ಶ್ರಮಸೇವೆ ಮಾಡುವ ಮೂಲಕ ಕಾರ್ಯಗಳನ್ನು ಪೂರ್ಣಗೊಳಿಸಿದರು. ಇಷ್ಟೇ ಅಲ್ಲದೆ ಅಭಿವೃದ್ಧಿಯು ಗ್ರಾಮವನ್ನು ಪ್ರವೇಶಿಸಿದಂತೆಲ್ಲ ಗ್ರಾಮಸ್ಥರ ಸಹಕಾರವೂ ಕೂಡ ಹೆಚ್ಚುತ್ತಾ ಹೋಯಿತು ಎಂದು ಡೊಂಗ್ರಿಪಾಡ ಗ್ರಾಮದ ವಿಕಾಸ ಯಾತ್ರೆಯ ಶಿಲ್ಪಿಯಾದ ಮುಂಬೈ ಮಹಾನಗರದ ಹಿಂದಿನ ಕಾರ್ಯವಾಹ ವಿಮಲ್ ಕೇಡಿಯಾ ಅವರು ಹೇಳುತ್ತಾರೆ. ಹಳ್ಳಿಯ ಜನ ಒಂದು ಸಮಿತಿಯನ್ನು ರಚಿಸಿ ಒಂದು ನಿಶ್ಚಿತ ಮೊತ್ತವನ್ನು ಈ ಎಲ್ಲಾ ಕೆಲಸಗಳಿಗಾಗಿ ಠೇವಣಿ ಮಾಡಲು ನಿರ್ಧರಿಸಿದರು. ಒಂದೂವರೆ ಕಿಮೀ ಕೆಳಗೆ ಇದ್ದ ಬಾವಿಯಿಂದ ನೀರಿನ ಟ್ಯಾಂಕ್ ತನಕ ಪೈಪ್ ಲೈನ್ ಹಾಗೂ ಮನೆ ಮನೆಗೂ ನೀರನ್ನು ತಲುಪಿಸುವ ಹಾಗೂ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸುವ ಕೆಲಸವನ್ನು ಪುಣೆಯ ಗ್ರಾಮ್ ಉರ್ಜಾ ಎಂಬ ಖಾಸಗಿ ಕಂಪೆನಿಯು ಮಾಡಿತು.

ಈ ಪ್ರಮುಖ ವೆಚ್ಚದ ನಂತರ ಗ್ರಾಮವಾಸಿಗಳು ಕೇಶವ ಸೃಷ್ಟಿಯಿಂದ ಏನನ್ನೂ ತೆಗೆದುಕೊಳ್ಳಲಿಲ್ಲ. ನದಿಯಿಂದ ಹೊಲಗಳಿಗೆ ನೀರನ್ನು ಹಾಯಿಸುವ ವ್ಯವಸ್ಥೆ ಹಾಗು ಮುಂದಿನ ಎಲ್ಲಾ ನಿರ್ವಹಣೆಯ ವೆಚ್ಚವನ್ನು ಹಳ್ಳಿಗರೇ ಭರಿಸಲು ನಿರ್ಧರಿಸಿದರು. ಪ್ರಕೃತಿಯು ಡೊಂಗ್ರಿಪಾಡ ಗ್ರಾಮಕ್ಕೆ ಅಗಾಧವಾದ ಸೌಂದರ್ಯವನ್ನು ನೀಡಿತ್ತು.

ಪ್ರತಿಷ್ಠಿತ ಲೇಖಕರಾದ ರತನ್ ಶಾರದಾರವರು ಡೊಂಗ್ರಿಪಾಡದ ಈ ವಿಕಾಸಯಾತ್ರೆಗೆ ಅಕ್ಷರ ರೂಪ ನೀಡಲು ಅಲ್ಲಿಗೆ ಬಂದಾಗ, ಅವರ ಪತ್ನಿ ಶ್ಯಾಮಾಜಿ ಕುತೂಹಲದಿಂದ ಅಲ್ಲಿನ ಮಹಿಳೆಯರಲ್ಲಿ, ನಿಮಗೆ ಮುಂದೆ ಇನ್ನೇನು ಬೇಕು? ಎಂದು ಕೇಳಿದಾಗ ಅಲ್ಲಿನ ವನವಾಸಿ ಪರಿವಾರಗಳು ನಮಗೆ ಏನು ಬೇಕಿತ್ತೋ ಅದೆಲ್ಲವೂ ಸಿಕ್ಕಿದೆ, ಇನ್ನು ನಮ್ಮ ಮುಂದಿನ ದಾರಿಯನ್ನು ನಾವೇ ನಿರ್ಧರಿಸುತ್ತೇವೆ ಎಂದು ಹೇಳಿದ ಈ ಒಂದು ಘಟನೆ ಡೊಂಗ್ರಿಪಾಡ ಗ್ರಾಮದ ಪರಿವರ್ತನೆಯನ್ನು ನಮಗೆ ಅರ್ಥ ಮಾಡಿಸುತ್ತದೆ.



ಸೇವಾಗಾಥ
ಕಥೆ-1

ಶ್ರೀರಾಮನವಮಿ ಪ್ರಸಾದ ಸೇವಿಸಿ 200 ಮಂದಿ ಅಸ್ವಸ್ಥ

• **ದೇವನಹಳ್ಳಿ:** ಶ್ರೀರಾಮನವಮಿ ಅನ್ನ ಪ್ರಸಾದ ಸ್ವೀಕರಿಸಿದ 200ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ತಾಲೂಕಿನ ಕುಂದಾಣ ಹೋಬಳಿ, ಜಾಲಿಗೆ ಗ್ರಾಪಂ ವ್ಯಾಪ್ತಿಯ ಬೆಟ್ಟೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಶ್ರೀರಾಮನವಮಿ ಹಿನ್ನೆಲೆಯಲ್ಲಿ ಪ್ರತಿವರ್ಷದಂತೆ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಭಕ್ತರಿಗೆ ಅನ್ನ ಪ್ರಸಾದ ವಿತರಣೆ ಮಾಡಲಾಯಿತು. ಗ್ರಾಮದ ಜನರು ಪ್ರಸಾದ ಸ್ವೀಕರಿಸಿದ ಕೆಲವು ಗಂಟೆಯಲ್ಲೇ ವಾಂತಿಭೇದಿ ಕಾಣಿಸಿಕೊಂಡು ತೀವ್ರವಾಗಿ ಅಸ್ವಸ್ಥಗೊಂಡರು. ಗ್ರಾಮದಿಂದ ಆಂಬುಲೆನ್ಸ್ ಮೂಲಕ ತೀವ್ರವಾಗಿ ಅಸ್ವಸ್ಥಗೊಂಡವರನ್ನು ತಾಲೂಕು ಆಸ್ಪತ್ರೆಗೆ ದಾಖಲಿಸಲಾಯಿತು.



ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಲಕ್ಷ್ಮೀಪತಿರೆಡ್ಡಿ ಅವರು ಗ್ರಾಮದಲ್ಲಿ ನಡೆದ ಶ್ರೀರಾಮನವಮಿ ಸಂದರ್ಭದಲ್ಲಿ ಆಹಾರ ತಯಾರಿಸಲಾಗಿದೆ. ಈ ಸಂದರ್ಭದಲ್ಲಿ ಪಾತ್ರೆಗಳಲ್ಲಿ ಉಂಟಾಗಿರುವ ವ್ಯತ್ಯಯದಿಂದಾಗಿ ಆಹಾರ ವಿಷವಾಗಿ ಪರಿಣಮಿಸಿದೆ ಎಂದು ತಿಳಿಸಿದ್ದಾರೆ. ಗ್ರಾಮದ ಅಸ್ವಸ್ಥಗೊಂಡವರನ್ನು ಖಾಸಗಿ ಮತ್ತು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಯಾವುದೇ ಆತಂಕವಿಲ್ಲ, ಎಲ್ಲರೂ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆಂದು ತಿಳಿದು ಬಂದಿದೆ.


ಆರು ಆರೋಪಿಗಳ ಬಂಧನ

• **ಬೆಂಗಳೂರು:** ಸಿಸಿಬಿ ವಿಶೇಷ ವಿಚಾರಣಾ ದಳವು ಉದ್ಯೋಗಾಕಾಂಕ್ಷಿಗಳಿಗೆ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ಕೋಟ್ಯಂತರ ರೂಪಾಯಿ ವಂಚಿಸುತ್ತಿದ್ದ ಜಾಲವನ್ನು ಭೇದಿಸಿ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲಾ ನ್ಯಾಯಾಲಯಗಳಲ್ಲಿ ಖಾಲಿ ಇರುವ ಎಸ್‌ಡಿಎ, ಎಫ್‌ಡಿಎ, ಪ್ರೊಸೆಸ್ ಸರ್ವರ್, ಪೀವನ್ ಹಾಗೂ ಡ್ರೈವರ್ ಹುದ್ದೆಗಳನ್ನು ಕೊಡಿಸುವುದಾಗಿ ನಂಬಿಸಿ ಸುಮಾರು 450ಕ್ಕೂ ಹೆಚ್ಚು ಜನರಿಂದ ಹಣ ವಸೂಲಿ ಮಾಡಿದ್ದ ಆರು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಿಂದ ಒಟ್ಟು 38 ಲಕ್ಷ ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ. ಈ ವಂಚಕ ಜಾಲವು ಸಹಕಾರ ನಗರದಲ್ಲಿರುವ ದೀಕ್ಷಾ ಎಜುಕೇಶನ್ ಅಕಾಡೆಮಿ ಮತ್ತು ಆಶೀರ್ವಾದ್ ಎಂಟರ್‌ಪ್ರೈಸಸ್ ಕಚೇರಿಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿತ್ತು. ಉದ್ಯೋಗಾಕಾಂಕ್ಷಿಗಳನ್ನು ಸೆಳೆಯಲು ಏಜೆಂಟರುಗಳನ್ನು ನೇಮಿಸಿಕೊಂಡಿದ್ದ ಈ ತಂಡ, ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿಗಳನ್ನು ಆನ್‌ಲೈನ್ ಮತ್ತು ನಗದು ರೂಪದಲ್ಲಿ ಪಡೆದುಕೊಳ್ಳುತ್ತಿತ್ತು. ನಂಬಿಕೆ ಹುಟ್ಟಿಸಲು ಅಭ್ಯರ್ಥಿಗಳಿಂದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿಸಿಕೊಂಡು, ಗ್ರೀನ್‌ಶೀಟ್, ಎಂಬ ಫಾರ್ಮೆಟ್‌ನಲ್ಲಿ ಸಹಿ ಹಾಗೂ ಹೆಬ್ಬೆರಳಿನ ಗುರುತುಗಳನ್ನು ಪಡೆಯುತ್ತಿದ್ದರು.

ಈ ಜಾಲದ ಅಸಲಿಯತ್ತು ಏನೆಂದರೆ, ಅಭ್ಯರ್ಥಿಗಳಿಗೆ ನ್ಯಾಯಾಲಯದ ನಕಲಿ ಸಹಿ ಮತ್ತು ಸೀಲು ಇರುವ ಉದ್ಯೋಗ ಆಯ್ಕೆ ಪಟ್ಟಿ ಹಾಗೂ ಆದೇಶ ಪ್ರತಿಗಳನ್ನು ನೀಡಿ ವಂಚಿಸಲಾಗುತ್ತಿತ್ತು. ಈ ಸಂಬಂಧ ಸಿಸಿಬಿ ಮತ್ತು ಕೊಡಿಗೇಹಳ್ಳಿ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು ತನಿಖೆ ಚುರುಕುಗೊಂಡಿದೆ. ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಇತರ ಸಹಚರರ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಈ ಕಾರ್ಯಾಚರಣೆಯು ಅಪರ ಪೊಲೀಸ್ ಆಯುಕ್ತ ಅಜಯ್ ಹಿಲೋರಿ ಮತ್ತು ಡಿಸಿಪಿ ಶ್ರೀಹರಿಬಾಬು ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆದಿದೆ.

ರಾಮ ಬಾಣ



ಸರ್ಕಾರದಿಂದ ಜನಪರ ಕೆಲಸ: ಉಗ್ರಪ್ಪ

• **ದಾವಣಗೆರೆ:** ಪ್ರಸಕ್ತ ಉಪಚುನಾವಣೆಯ ಫಲಿತಾಂಶವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರಲಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರವು ಸದಾ ಜನಪರ ಕೆಲಸ ಮಾಡುವ ಮೂಲಕ ಜನರ ವಿಶ್ವಾಸಕ್ಕೆ ಪಾತ್ರವಾಗಿದೆ. ಆದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಜನರಿಗೆ ನೀಡಿದ ಭರವಸೆ ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಕೇವಲ ಮಾತಿನಲ್ಲಿ ಮರಳು ಮಾಡುವ ಮೂಲಕ ಮತ ಹಾಕಿಸಿಕೊಂಡು ಜನರನ್ನು ವಂಚಿಸುತ್ತಿದೆ ಎಂದು ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಂಧನ ಬೆಲೆಗಳನ್ನು ಏರಿಸುತ್ತಲಿದೆ. ಕೋವಿಡ್ ಸಮಯದಲ್ಲಿ ಪಿಎಂ ಕೇರ್ ಫಂಡ್ ಮೂಲಕ ಸಾವಿರಾರು ಕೋಟಿ ರೂ. ಸಂಗ್ರಹಿಸಿದ್ದರೂ, ಅದರ ಯಾವುದೇ ಲೆಕ್ಕಾಚಾರ ಈವರೆಗೂ ಜನರಿಗೆ ಸಿಕ್ಕಿಲ್ಲ. ಅದಕ್ಕೆ ಆದಾಯ ತೆರಿಗೆ ಇಲಾಖೆಯಾಗಲಿ, ಇಡಿ ಯಾಗಲಿ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದರು.

ಮಳೆಗಾಲದಲ್ಲಿ ಜಾಗ್ರತೆ ಇರಲಿ: ರಾಜೇಂದ್ರ

• **ಬೆಂಗಳೂರು:** ಮಳೆಗಾಲದ ಹಿನ್ನೆಲೆಯಲ್ಲಿ ರಸ್ತೆ, ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ಸಮಗ್ರ ಪರಿಶೀಲನೆ ನಡೆಸಿ ಯಾವುದೇ ತೊಂದರೆ ಉಂಟಾಗದಂತೆ ಮುಂಚಿತವಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ತಿಳಿಸಿದರು. ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಳೆಗಾಲದ ಸಂದರ್ಭದಲ್ಲಿ ಯಾವುದೇ ಅನಾಹುತಗಳು ಸಂಭವಿಸದಂತೆ ಮುಂಚಿತವಾಗಿ ಅಗತ್ಯ ಕ್ರಮಗಳನ್ನು ಕೈಗೊಂಡು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿದುಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಯಾವುದೇ ಪ್ರದೇಶದಲ್ಲಿ ಪ್ರವಾಹ ಉಂಟಾಗದಂತೆ ವಿಶೇಷ ಗಮನ ಹರಿಸಬೇಕು ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಯಾವುದೇ ಕೆಲಸವನ್ನು ಪ್ರೀತಿಯಿಂದ ಮಾಡಿದಾಗ ಮಾತ್ರ ಪ್ರಗತಿ ಕಾಣಲು ಸಾಧ್ಯ
- ಕಿರಣ್ ಕೊಡ್ಲಿ
- ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎಂಬುದು ಹಳೆಯ ಗಾದೆ . ಕೆಲಸ ಸಿಗುವ ಆಸೆ, ಸಂಬಳದ ಮೇಲೆ ಪ್ರೀತಿ ಎಂಬುದು ಲೇಟೆಸ್ಟ್ ತಗಾದೆ!

ದಿನ ಭವಿಷ್ಯ

ಮೇಷ ಭಾವುಕ ಸನ್ನಿವೇಶ. ನಿಮ್ಮ ಮನಸ್ಸಿನ ದೌರ್ಬಲ್ಯ ಎಲ್ಲರಿಗೂ ತಿಳಿಯದಂತೆ ಎಚ್ಚರ ವಹಿಸಿ. ಕೌಟುಂಬಿಕ ಅಶಾಂತಿ ಹೆಚ್ಚಲು ಅವಕಾಶ ಕೊಡಬೇಡಿ.

ವೃಷಭ ನಿಮ್ಮ ಪ್ರಗತಿಗೆ ಅಡ್ಡಿ ತರುತ್ತಿರುವ ವಿಷಯ ಪರಿಹರಿಸಿಕೊಳ್ಳಿ. ನಿಮ್ಮ ಬಗ್ಗೆ ಕೆಲವರು ಈರ್ಷ್ಯೆ ತೋರುವರು. ಅವರಿಂದ ಟೀಕೆ ಕೇಳುವಿರಿ.

ಮಿಥುನ ಸ್ವಂತ ವ್ಯವಹಾರದಲ್ಲಿ ಎಚ್ಚರದಿಂದ ಹೆಜ್ಜೆ ಇಡಿ. ಸಮೀಪ ಬಂಧುಗಳ ಅಸಹಕಾರ ಎದುರಿಸುವಿರಿ. ಮನೆಯಲ್ಲಿ ಬಿಗು ವಾತಾವರಣ ಸಂಭವ.

ಕಟಕ ಕೆಲಸದ ಒತ್ತಡದಿಂದ ಹೊರಬಂದು ಕುಟುಂಬ ಸದಸ್ಯರ ಜತೆ ಕಾಲ ಕಳೆಯಿರಿ. ಅವರ ಸಂತೋಷಕ್ಕೂ ಗಮನ ಕೊಡಿ. ಧನವ್ಯಯ.

ಸಿಂಹ ಕಠಿಣವೆಂದು ಭಾವಿಸಿದ ಕಾರ್ಯ ಸುಲಭದಲ್ಲಿ ಪೂರ್ಣ. ಆದರೂ ಏನೋ ಕೊರಗು ಉಳಿಯಲಿದೆ. ಬಂಧು ಜತೆ ತಿಕ್ಕಾಟ ಸಂಭವ.

ಕನ್ಯಾ ಕಾಯುತ್ತಿದ್ದ ಅವಕಾಶವೊಂದು ಇಂದು ಸಿಗುವುದು. ಆದರೆ ಅದರಿಂದ ನಿಮಗೆ ಹೆಚ್ಚು ಲಾಭವಾಗದು. ಕೌಟುಂಬಿಕ ವೈಮನಸ್ಸು.

ತುಲಾ ಹೆಚ್ಚು ಉತ್ಸಾಹದ ದಿನ. ಸಣ್ಣ ವಿಷಯಕ್ಕೆ ಅತಿಯಾದ ಪ್ರಾಮುಖ್ಯತೆ ಕೊಡಬೇಡಿ. ಸಂಘರ್ಷಕ್ಕಿಂತ ಹೊಂದಾಣಿಕೆ ಒಳಿತು. ಆರ್ಥಿಕ ಉನ್ನತಿ.

ವೃಶ್ಚಿಕ ಹೊಸ ವ್ಯವಹಾರಕ್ಕೆ ಈಗಲೆ ಕೈಹಾಕದಿರಿ. ವಿಘ್ನಗಳು ಕಾಡಬಹುದು. ನಿಮ್ಮ ತಪ್ಪು ತಿದ್ದಿಕೊಳ್ಳಿ. ಟೀಕೆಗೆ ಅವಕಾಶ ಕೊಡಬೇಡಿ.

ಧನು ಗುರಿ ಸಾಧನೆಗೆ ಕೆಲವರು ಅಡ್ಡಗಾಲು ಹಾಕುವರು. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಬಂಧುಗಳ ಜತೆ ಜಗಳವಾಡದಿರಿ.

ಮಕರ ವಿರೋಧಿಗಳ ಮನಸ್ಸನ್ನೂ ಇಂದು ಒಲಿಸಬಲ್ಲಿರಿ. ಇದು ನಿಮ್ಮ ವ್ಯವಹಾರವನ್ನು ಸುಲಲಿತಗೊಳಿಸಲಿದೆ. ಆರ್ಥಿಕ ಸ್ಥಿತಿ ಉನ್ನತಿ.

ಕುಂಭ ನಿಮ್ಮ ನಿಲುವಿನಲ್ಲಿ ಬದಲಾವಣೆ ತರುವ ಬೆಳವಣಿಗೆ. ನಿಮ್ಮ ಮೂಗಿನ ನೇರಕ್ಕೆ ವ್ಯವಹರಿಸಬೇಡಿ. ಇತರರ ಮಾತಿಗೂ ಬೆಲೆಯಿರಲಿ.

ಮೀನ ಕೆಲಸದ ಒತ್ತಡದಿಂದ ಮುಕ್ತಿ. ಸ್ವಲ್ಪ ಮಟ್ಟಿನ ನಿರಾಳತೆ. ಮನೆಯಲ್ಲೂ ಪೂರಕ ಬೆಳವಣಿಗೆ. ಮಕ್ಕಳ ಸಾಧನೆಯಿಂದ ತೃಪ್ತಿ. ಖರ್ಚು ಹೆಚ್ಚಬಹುದು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 7,4,2,5

ವಿದ್ಯುತ್-ಸೌರ ಸ್ಟವ್ ಬಳಸಿ

ಪುಟ ೧ ➜ ಹೋಟೆಲ್, ಡಾಬಾ, ರೆಸ್ಟೋರೆಂಟ್, ಕ್ಯಾಂಟೀನ್, ಕೆಫೆ, ಬೇಕರಿ, ಸಮುದಾಯ ಅಡುಗೆ ಕೇಂದ್ರ, ಪಿ.ಜಿ, ವಸತಿನಿಲಯಗಳಿಗೆ 17,500 ಸಿಲಿಂಡರ್, ಬೀಜ ಸಂಸ್ಕರಣೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ 6000, ಇತರ ಅವಶ್ಯಕತೆ ಆಧಾರದ ಮೇಲೆ 563 ಸಿಲಿಂಡರ್ ಸೇರಿದಂತೆ ಒಟ್ಟು 29,463 ವಾಣಿಜ್ಯ ಸಿಲಿಂಡರ್ ನಿತ್ಯ ವಿತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಸರಣಿ ಅಪಘಾತ: ಚಾಲಕನಿಗೆ ಥಳಿತ

• **ನೆಲಮಂಗಲ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ- ಕುಣಿಗಲ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಸಂಜೆ ಸರಣಿ ಅಪಘಾತ ಸಂಭವಿಸಿದೆ. ಹಾಸನದಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಪುಷ್ಪಕ್ ಪ್ಲಸ್ ಇವಿ ಬಸ್ ಓವರ್ ಟೇಕ್ ಮಾಡಲು ಹೋಗಿ ಎರಡು ಕಾರುಗಳಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಒಂದು ಕಾರಿನ ಹಿಂಭಾಗ ನಜ್ಜುಗುಜ್ಜಾಗಿದ್ದು ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಈ ವೇಳೆ ಚಾಲಕ ಮತ್ತು ಉಳಿದ ವಾಹನಗಳ ಚಾಲಕರು, ಪ್ರಯಾಣಿಕರ ಮಧ್ಯೆ ವಾಗ್ವಾದ ನಡೆದಿದ್ದು, ಬಸ್ ಚಾಲಕನಿಗೆ ಥಳಿಸಿದ್ದಾರೆ. ಸಾಮಾನ್ಯವಾಗಿ ಭಾನುವಾರ ಊರಿನಿಂದ ಬೆಂಗಳೂರಿಗೆ ಬರುವ ವಾಹನಗಳ ಸಂಖ್ಯೆ ಈ ಹೆದ್ದಾರಿಯಲ್ಲಿ ಜಾಸ್ತಿ ಇರುತ್ತದೆ ಎಂದು ಸ್ಥಳೀಯರು ಕಿಡಿಕಾರಿದ್ದಾರೆ. ಚಾಲಕ ಮತ್ತು ಸವಾರರ ಮಧ್ಯೆ ಜಗಳ ನಡೆದ ಪರಿಣಾಮ ಹೆದ್ದಾರಿಯಲ್ಲಿ ಕೆಲವು ಗಂಟೆಗಳ ಕಾಲ ಕಿಲೋಮೀಟರ್‌ಗಟ್ಟಲ್ಲೇ ವಾಹನಗಳ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಸಮಿತಿ ರಚಿಸಿದ ಸರ್ಕಾರ | 30 ಲಕ್ಷ ರೂ. ಅನುದಾನ | 250 ಪುಟದ ಪುಸ್ತಕ

ಸಾಹಿತ್ಯ ಅಕಾಡೆಮಿಯಿಂದ ಅಂಬೇಡ್ಕರ್ ವಿಶೇಷ ಕೃತಿ

▸ ದೇವಿತಾ ಸಿ.ಎಸ್.

ದಿಗಂತ ವಿಶೇಷ

• **ಬೆಂಗಳೂರು:** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಎತ್ತಿ ಹಿಡಿಯುವ ಸಲುವಾಗಿ ಅಂಬೇಡ್ಕರ್ ಕುರಿತ ವಿಶೇಷ ಕೃತಿ ಹೊರತರಲು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಜ್ಜಾಗಿದೆ.

ಅಂಬೇಡ್ಕರ್ ಅವರ ಬರವಣಿಗೆ, ಆಲೋಚನಾ ಕ್ರಮದ ಅರಿವು ದೇಶಕ್ಕೆ ಎಷ್ಟು ಮುಖ್ಯವೆಂಬುದು ಇಂದು ಎಲ್ಲರಿಗೂ ಅರ್ಥವಾಗಿದೆ. ಕನ್ನಡಿಗರು ಮಹಾತ್ಮ ಗಾಂಧಿ ಅವರನ್ನು ತಿಳಿದಷ್ಟು ಅಂಬೇಡ್ಕರ್ ಬಗ್ಗೆ ತಿಳಿಯಲು ಸಾಧ್ಯವಾಗಿಲ್ಲ. ಅಂಬೇಡ್ಕರ್ ಹುಟ್ಟು, ಬೆಳವಣಿಗೆ, ಶಿಕ್ಷಣ, ವೃತ್ತಿ, ಸಾಮಾಜಿಕ ಹೋರಾಟ, ರಾಜಕೀಯ ಜೀವನ ಸೇರಿದಂತೆ ಅವರ ಜೀವಿತ ಕಾಲದಲ್ಲಿ ಮಾಡಿದ ಮಹತ್ವಪೂರ್ಣ ಸಾಧನೆಗಳು ಪುಸ್ತಕದಲ್ಲಿ ಇರಲಿವೆ.

ಸರ್ಕಾರದಿಂದಲೇ ಸಮಿತಿ ರಚನೆ: ಸರ್ಕಾರವೇ ಪುಸ್ತಕ ರಚನಾ ಸಮಿತಿ ರೂಪಿಸಿದ್ದು, ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್ ಹಾಗೂ ಡಾ. ರವಿಕುಮಾರ್ ನೀಹಾ ಸಂಪಾದಕರಾಗಿ, ಇಂದೂಧರ ಹೊನ್ನಾಪುರ, ಡಾ. ಎಲ್.ಹನುಮಂತಯ್ಯ, ಡಾ. ಬಂಜಗೆರೆ ಜಯಪ್ರಕಾಶ್, ದು.ಸರಸ್ವತಿ ಅವರು ಸಲಹಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ. ಅವರ ಸಲಹೆ ಮೇರೆಗೆ 20 ವಿಷಯ ಆಯ್ಕೆ ಮಾಡಿಕೊಂಡು, ಯಾವ ಲೇಖಕರಿಂದ ಬರೆಸಬೇಕು ಎಂದು ತೀರ್ಮಾನಿಸಲಾಗುವುದು. ಪುಸ್ತಕ ರಚನೆಗಾಗಿ ಸರ್ಕಾರವು ಅಕಾಡೆಮಿಗೆ 30 ಲಕ್ಷ ರೂ. ವಿಶೇಷ ಅನುದಾನ ನೀಡಿದೆ. ಪುಸ್ತಕವು ಸುಮಾರು 250 ಪುಟಗಳನ್ನು ಹೊಂದಿರಲಿದ್ದು, ಮಕ್ಕಳು ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿರಲಿದೆ.

20 ವಿಷಯ, 20 ಲೇಖನ

ಅಂಬೇಡ್ಕರ್ ಅವರು ಮಹಿಳೆಯರ ಸ್ವಾತಂತ್ರ್ಯ, ಸಮಾನ ಅವಕಾಶ, ಕಾರ್ಮಿಕರ ಕಲ್ಯಾಣಕ್ಕಾಗಿ ನೀಡಿದ ಕೊಡುಗೆ ಅನನ್ಯ. ಜತೆಗೆ, ಮಹಿಳಾ ಮೀಸಲಾತಿ ವಿಧೇಯಕ ಅಂಗೀಕಾರವಾಗದ ಕಾರಣ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ನೀಡಿದ ಚೇತನ ಅಂಬೇಡ್ಕರ್ ವಿಷಯವಲ್ಲದೆ ಅವರ ಧಾರ್ಮಿಕ ನಿಲುವು, ಬೌದ್ಧ ಧಮ್ಮ ಸ್ವೀಕಾರ, ಸಾಮಾಜಿಕ ಸುಧಾರಣೆ, ಇತಿಹಾಸದ ದಾಖಲೆ, ರಾಜಕೀಯ, ಪತ್ರಿಕೋದ್ಯಮ ಜೀವನ ಆಧಾರದಲ್ಲಿ 20 ವಿಷಯ ಕುರಿತು 20 ಲೇಖನಗಳು ಈ ಪುಸ್ತಕದಲ್ಲಿರಲಿವೆ.

ಅಂಬೇಡ್ಕರ್ ಜಯಂತಿಗೆ ಲೋಕಾರ್ಪಣೆ



ಪುಸ್ತಕ ರಚನೆ ಕಾರ್ಯ ಚುರುಕುಗೊಳಿಸಲಾಗಿದ್ದು, 2026ರ ಏ.14 (ಅಂಬೇಡ್ಕರ್ ಜಯಂತಿ)ರಂದು ಲೋಕಾರ್ಪಣೆಗೊಳಿಸುವ ಉದ್ದೇಶವಿದೆ. ಅದೇ ವೇಳೆ ಪುಸ್ತಕದ ಡಿಜಿಟಲ್ ಆವೃತ್ತಿಯನ್ನೂ ಲೋಕಾರ್ಪಣೆಗೊಳಿಸಲು ಅಕಾಡೆಮಿ ನಿರ್ಧರಿಸಿದೆ.

10 ಸಾವಿರ ಪ್ರತಿ ಮುದ್ರಣ

ಒಂದೇ ಬಾರಿ ಪುಸ್ತಕದ 10 ಸಾವಿರ ಪ್ರತಿಗಳನ್ನು ಮುದ್ರಿಸಲು ನಿರ್ಧರಿಸಲಾಗಿದೆ. ಇವುಗಳನ್ನು ಜನರಿಗೆ ತಲುಪಿಸುವುದೇ ಮುಖ್ಯ ಉದ್ದೇಶವಾಗಿರುವುದರಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉಚಿತವಾಗಿ ಒದಗಿಸುವುದು ಅಥವಾ 20-30 ರೂ.ಗೆ ದರ ನಿಗದಿ ಮಾಡುವ ಆಲೋಚನೆಯಿದೆ.

ಅಂಬೇಡ್ಕರ್ ಕುರಿತ ಪ್ರಮುಖ ಅಂಶಗಳನ್ನು ಅತಿ ಸರಳ ಭಾಷೆಯಲ್ಲಿ ಪುಸ್ತಕದಲ್ಲಿ ಅಳವಡಿಸಲಾಗುವುದು. ಅಂಬೇಡ್ಕರ್ ಕುರಿತು ಎಷ್ಟು ಪುಸ್ತಕ ಬಂದರೂ ಕಡಿಮೆಯೇ. ಅದರಂತೆ, ಇದು ಪುಸ್ತಕ ರಚನೆಯಲ್ಲ, ಚಳವಳಿ.
■ **ಪ್ರೊ.ಎಲ್.ಎನ್. ಮುಕುಂದರಾಜ್,** ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಪರಪ್ಪನ ಜೈಲ್ ವಿಡಿಯೋ ಮೂರು ಸಿಬ್ಬಂದಿ ಅಮಾನತು

• **ಬೆಂಗಳೂರು:** ಕೆಲ ದಿನಗಳ ಹಿಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಮೂರು ವಿಡಿಯೋಗಳು ತೀವ್ರ ಸಂಚಲನ ಸೃಷ್ಟಿಸಿದ್ದು, ಉದ್ದೇಶಪೂರ್ವಕವಾಗಿ ಡಿಜಿಪಿ ಅಲೋಕ್ ಕುಮಾರ್ ವಿರುದ್ಧವೇ ವಿಡಿಯೋದಲ್ಲಿ ಗಂಭೀರ ಆರೋಪ ಮಾಡಲಾಗಿದೆ. ಇದರ ಬೆನ್ನಲ್ಲೇ ಮೂವರು ಸಿಬ್ಬಂದಿ ಅಮಾನತುಗೊಳಿಸಲಾಗಿದೆ.

ವಿಡಿಯೋ ವೈರಲ್ ಆದ ಬೆನ್ನಲ್ಲೇ ಡಿಜಿಪಿ ಅಲೋಕ್ ಕುಮಾರ್ ಜೈಲಿನ ಮೂವರು ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶಿಸಿದ್ದಾರೆ. ಕೈದಿಗಳಿದ್ದ ಬ್ಯಾರಕ್ ನೋಡಿಕೊಳ್ಳುತ್ತಿದ್ದ ಶಿವಾನಂದ ಕರ್ಲಬಟ್ಟಿ, ನಿರಂಜನ್ ಎ. ಕಾಮತ್ ಮತ್ತು ಹನುಮಂತಪ್ಪ ಹಡಪದ್ ಅವರನ್ನು ಅಮಾನತುಗೊಳಿಸಿದ್ದಾರೆ.

ಮತ್ತೊಂದೆಡೆ ವಿಡಿಯೋ ವೈರಲ್ ಆಗುತ್ತಿದ್ದಂತೆ ಪೊಲೀಸ್ ಅಧಿಕಾರಿಗಳು ಜೈಲಿನ ಮೇಲೆ ದಾಳಿ ನಡೆಸಿ, 9 ಮೊಬೈಲ್‌ಗಳು ಮತ್ತು 6 ಸಿಮ್ ಕಾರ್ಡ್‌ಗಳು, ಇಯರ್‌ಬಡ್ಸ್, ಚಾರ್ಜರ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಜೊತೆಗೆ, ಕೇಂದ್ರ ಕಾರಾಗೃಹದ 1ನೇ ಬ್ಯಾರಕ್‌ನಲ್ಲಿ ಪರಿಶೀಲನೆ ನಡೆಸಿದಾಗ ಡ್ರೇನೇಜ್ ಮಾರ್ಗದಲ್ಲಿ ಮೊಬೈಲ್‌ಗಳು ಪತ್ತೆಯಾಗಿವೆ. ಹಾಲಿನ ಪ್ಯಾಕೆಟ್‌ಗಳಲ್ಲಿ ಸುತ್ತಿ ಅಡಗಿಸಲಾಗಿದ್ದ ಮೊಬೈಲ್‌ಗಳನ್ನು ಅಧಿಕಾರಿಗಳು ಕೈದಿಗಳಿಂದ ಹೊರತೆಗೆಸಿದ್ದಾರೆ.

ಜೈಲಿನಲ್ಲಿ ಸುತ್ತಮುತ್ತಲಿನ ಕೆಲವು ಕಡೆಗಳಲ್ಲಿ ಏರ್‌ಟೆಲ್ ಸಿಗ್ನಲ್‌ಗಳು ಸಿಗುತ್ತಿರುವ ಮಾಹಿತಿ ಲಭ್ಯವಾಗಿದ್ದು, ಅದನ್ನು ಸರಿಪಡಿಸಲು ಸಂಬಂಧಪಟ್ಟವರಿಗೆ ಅಲೋಕ್ ಕುಮಾರ್ ಸೂಚಿಸಿದ್ದಾರೆ.

ಜೈಲಾಧಿಕಾರಿಗಳೇ ಷಡ್ಯಂತ್ರ?: ಕಾರಾಗೃಹದಲ್ಲಿ ಅಲೋಕ್ ಕುಮಾರ್ ಅವರು ಕೈಗೊಂಡಿದ್ದ ಕಟ್ಟುನಿಟ್ಟಿನ ಕ್ರಮದಿಂದಾಗಿ ಕೆಲ ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಕೈದಿಗಳು ಮಾತ್ರವಲ್ಲದೆ, ಜೈಲಿನ ಅಧಿಕಾರಿಗಳೇ ಅಲೋಕ್ ಕುಮಾರ್ ವಿರುದ್ಧ ಷಡ್ಯಂತ್ರ ರೂಪಿಸುತ್ತಿದ್ದರು.

ಈ ಬೆನ್ನಲ್ಲೇ ಅದಕ್ಕೆ ಪ್ರತಿಕಾರ ತೀರಿಸಿಕೊಳ್ಳುವ ಉದ್ದೇಶ ದಿಂದ ಈ ವಿಡಿಯೋ ಮಾಡಿ ಹರಿಬಿಟ್ಟಿದ್ದಾರೆ. ಇದರಲ್ಲಿ ಜೈಲು ಸಿಬ್ಬಂದಿ ಕೈವಾಡವೂ ಇದೆ ಎಂಬುದು ತಿಳಿದುಬಂದಿದೆ.

ಏನಿದು ಪ್ರಕರಣ

ಕಳೆದ ಶನಿವಾರ ರಾತ್ರಿ 9 ಗಂಟೆ ಸುಮಾರಿಗೆ ವೆಬ್‌ಪೋರ್ಟಲ್‌ನಲ್ಲಿ ಪರಪ್ಪನ ಅಗ್ರಹಾರ ಜೈಲಿನಿಂದ ಚಿತ್ರೀಕರಿಸಿದ್ದಂತಹ ಐಪಿಎಲ್ ಮ್ಯಾಚ್ ಇದೆ ಎಂದು ಹೇಳಿವುದರ ಜೊತೆಗೆ ಜೈಲಿನಲ್ಲಿ ಮೊಬೈಲ್, ಟಿವಿ- ನೆಟ್‌ಫ್ಲಿಕ್ಸ್ ಸೌಲಭ್ಯಗಳಿವೆ ಎಂಬ ಮೂರು ವಿಡಿಯೋಗಳನ್ನು ಅಪ್ಲೋಡ್ ಮಾಡಲಾಗಿತ್ತು. ಈ ಮೊಬೈಲ್‌ಗಳನ್ನು ಡಿಜಿಪಿ ಅಲೋಕ್ ಕುಮಾರ್ ಅವರೇ ತಂದು ಕೊಟ್ಟಿದ್ದಾರೆ ಎಂದು ವಿಡಿಯೋದಲ್ಲಿರುವ ವ್ಯಕ್ತಿಗಳು ಆರೋಪಿಸಿದ್ದರು. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿತ್ತು.

ಹಿಂದಿ ಕೈಬಿಟ್ಟದ್ದು ಸರಿಯಲ್ಲ

ಪುಟ ೧ ➜ ಕಳೆದ ಹಲವು ದಶಕಗಳಿಂದ ದೇಶದಲ್ಲೇ ಮಾದರಿ ಶಿಕ್ಷಣದಲ್ಲಿ ತ್ರಿಭಾಷಾ ನೀತಿ ಹೊಂದಿರುವ ಕರ್ನಾಟಕದಲ್ಲಿ ಯಾವುದೇ ಪೂರ್ವಾಪರ ಚರ್ಚೆ, ಶಿಕ್ಷಣ ತಜ್ಞರ ಸಲಹೆ, ಪ್ರತಿಪಕ್ಷಗಳ ನಿಲುವು ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹಿಂದಿ ಭಾಷೆ ಕೈಬಿಡುವ ನಿರ್ಧಾರ ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ ಎಂದಿದ್ದಾರೆ.

ನಾವು ಕನ್ನಡ ಭಾಷೆಯಲ್ಲಿ ಕಲಿಕೆಗೆ ವಿರೋಧ ವ್ಯಕ್ತಪಡಿಸುತ್ತಿಲ್ಲ. ಕನ್ನಡ ನಮ್ಮ ಮಾತೃ ಭಾಷೆ. ಕನ್ನಡವು ನಮ್ಮ ಬೋಧನಾ ಭಾಷೆಯಾಗಿ, ಜಾಗತಿಕ ದೃಷ್ಟಿಕೋನದಿಂದ ಇಂಗ್ಲಿಷ್ ಕಲಿಕೆಗೂ ನಮ್ಮ ಅಭ್ಯಂತರವಿಲ್ಲ. ಹಾಗೆಯೇ ಕನ್ನಡಿಗರು ದೇಶದ ಅನೇಕ ರಾಜ್ಯಗಳಿಗೆ ಉದ್ಯೋಗ ಅರಸಿ ಹೋದಾಗ ಕನಿಷ್ಠ ಮಟ್ಟದ ಹಿಂದಿ ಭಾಷಾ ಜ್ಞಾನ ಇರಬೇಕಾಗುತ್ತದೆ. ಕೇಂದ್ರ ಸರ್ಕಾರದ ಉದ್ಯೋಗಗಳಿಗೆ ಸೇರ್ಪಡೆಗೊಳ್ಳುವ ಕರ್ನಾಟಕದ ಯುವ ಸಮೂಹವು ರಾಷ್ಟ್ರಮಟ್ಟದಲ್ಲಿ ಹಿಂದೆ ಬೀಳಬಾರದು ಎಂಬ ಕಾಳಜಿ ನಮ್ಮದು ಎಂದು ಅಭಿಪ್ರಾಯಿಸಿದ್ದಾರೆ.

ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಅನುಸರಿಸಲಾಗುತ್ತಿರುವ ತ್ರಿಭಾಷಾ ಸೂತ್ರವೂ ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್‌ನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿಯನ್ನು ರಾಷ್ಟ್ರೀಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ. ಆದರೂ ಹಿಂದಿ ಭಾಷೆಯನ್ನು ಕೈಬಿಡುವುದಾದರೆ ಇದರ ಬಗೆಗೆ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಎಲ್ಲ ಭಾಷೆಯ ಸಾಹಿತಿಗಳು ಸೇರಿದಂತೆ ಸಾರ್ವಜನಿಕವಾಗಿ ವ್ಯಾಪಕ ಚರ್ಚೆ ನಡೆಸುವ ಅಗತ್ಯವಿದೆ ಎಂದು ವಿಜಯೇಂದ್ರ ಹೇಳಿದ್ದಾರೆ.

ಕೇರಳ ಚುಕ್ಕಾಣಿ ನಮ್ದೇ

ಪುಟ ೧ ➜ ಯುವಜನರು, ಮಹಿಳೆಯರು ಮತ್ತು ಕೃಷಿಕರು ಬಿಜೆಪಿಗೆ ಬೆಂಬಲವಾಗಿ ನಿಂತಿದ್ದಾರೆ ಎಂದು ರಾಜ್ಯದಲ್ಲಿ ಹೆಚ್ಚುತ್ತಿರುವ ಬಿಜೆಪಿ ಜನಪ್ರಿಯತೆಯನ್ನು ಮೋದಿ ಉಲ್ಲೇಖಿಸಿದ್ದಾರೆ.

ಕೇರಳದಲ್ಲಿ ಮಾತ್ರ ಬದ್ಧವೈರಿಗಳು: ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳು ಕೇರಳದಲ್ಲಿ ಮಾತ್ರ ಪರಸ್ಪರ ಬದ್ಧವೈರಿಗಳಂತೆ ಪೈಪೋಟಿ ನಡೆಸುತ್ತವೆ. ಆದರೆ ಕೇರಳ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ಸ್ನೇಹ ಹೊಂದಿವೆ. ಕೇರಳ ಜನತೆಯ ಕಣ್ಣಿಗೆ ಮಣ್ಣೆರಚುವುದಕ್ಕಾಗಿ ಬದ್ಧವೈರಿಗಳಂತೆ ನಾಟಕವಾಡುತ್ತವೆ. ಕಾಂಗ್ರೆಸ್ ಮತ್ತು ಎಡಪಕ್ಷಗಳು ಪರಸ್ಪರ ಬೈಯುತ್ತವೆ. ಇವೆರಡೂ ಬಣಗಳ ಬಗ್ಗೆ ಕೇರಳದ ಮಹಾಜನತೆ ಎಚ್ಚರದಿಂದ ಇರಬೇಕೆಂದು ಮೋದಿ ಹೇಳಿದ್ದಾರೆ.

ಭಯ ಹುಟ್ಟಿಸಿದೆ ಬಿಜೆಪಿ ಬೆಳವಣಿಗೆ: ಕೇರಳದಲ್ಲಿ ಹೆಚ್ಚುತ್ತಿರುವ ಬಿಜೆಪಿ ಜನಪ್ರಿಯತೆಯು ಯುಡಿಎಫ್ ಮತ್ತು ಎಲ್‌ಡಿಎಫ್ ಬಣಗಳಲ್ಲಿ ಭಯ ಹುಟ್ಟಿಸಿದೆ. ಬಿಜೆಪಿ ಏನಾದರೂ ಅಧಿಕಾರಕ್ಕೇರಿದರೆ ತಮ್ಮ ಕೆಟ್ಟ ಕೆಲಸಗಳೆಲ್ಲವೂ ಬಯಲಿಗೆಳೆಯುತ್ತಾರೆ ಎಂಬ ಭಯ ಇವೆರಡೂ ಬಣಗಳಿಗಿವೆ ಎಂದು ಮೋದಿ ಹೇಳಿದ್ದಾರೆ.

ಸಮರ್ಥ್ ಮತಯಾಚನೆ



• **ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಭಾನುವಾರ ಜಾಲಿನಗರ ಹಾಗೂ ಸುರೇಶ್ ನಗರ ಭಾಗಗಳಲ್ಲಿ ಕಾಲ್ನಡಿಗೆ ಮೂಲಕ ಮನೆ-ಮನೆಗೆ ತೆರಳಿ ಮತಯಾಚನೆ ನಡೆಸಿದರು.

ಈ ವೇಳೆ ಹಿರಿಯರೊಂದಿಗೆ ಸಮಾಲೋಚನೆ ನಡೆಸಿದ ಅವರು, ಹಿರಿಯರ ಅನುಭವ ಹಾಗೂ ಯುವಜನರ ಆಲೋಚನೆಗಳು ಒಟ್ಟಿಗೆ ಮೈದಳೆದಾಗಲೇ ನಿಜವಾದ ಅಭಿವೃದ್ಧಿ ಸಾಧ್ಯ. ನನ್ನ ತಾತನವರ ಮಾರ್ಗದರ್ಶನವೇ ನನಗೆ ಪ್ರೇರಣೆಯಾಗಿದೆ. ತಾತನವರು ಸಚಿವರು, ಸಂಸದರು ಹಾಗೂ ಶಾಸಕರಾಗಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ಜನಮನದಲ್ಲಿ ಶಾಶ್ವತ ಸ್ಥಾನ ಗಳಿಸಿದ್ದಾರೆ. ಅವರ ಆದರ್ಶಗಳನ್ನು ಅನುಸರಿಸಿ ನಾನು ಕೂಡ ಜನಸೇವೆಯಲ್ಲಿ ತೊಡಗಿದ್ದೇನೆ ಎಂದರು.

ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ತಾತನವರೇ ನನಗೆ ಸ್ಫೂರ್ತಿ. ಅವರಂತೆ ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ನಿಭಾಯಿಸುತ್ತೇನೆ. ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದ ನನಗೆ ಮತ ನೀಡಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅವಕಾಶ ನೀಡಬೇಕು ಎಂದು ಅವರು ಮನವಿ ಮಾಡಿದರು.

ಭೂ ದಾಳಿ ನಡೆದರೆ, ಪ್ರತಿದಾಳಿಗೆ ಸಿದ್ಧ

ಪುಟ ೧ ➜ ತಿಂಗಳಿನಿಂದ ಮುಂದುವರಿದಿರುವ ಈ ಯುದ್ಧದಲ್ಲಿ 3,000ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸಿದ ದಾಳಿಯಿಂದ ಯುದ್ಧ ಆರಂಭವಾಗಿ, ನಂತರ ಇರಾನ್ ಇಸ್ರೇಲ್ ಹಾಗೂ ಗಲ್ಫ್ ಪ್ರದೇಶದ ಅರಬ್ ರಾಷ್ಟ್ರಗಳ ಮೇಲೆ ಪ್ರತಿದಾಳಿ ನಡೆಸಿದೆ. ಇಸ್ರೇಲ್‌ನ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿ ಇರಾನ್ ಭಾನುವಾರ ಮತ್ತಷ್ಟು ದಾಳಿಗಳನ್ನು ನಡೆಸಿದೆ. ಇದೇ ವೇಳೆ ಟೆಹ್ರಾನ್ ನಗರದಲ್ಲಿ ಸ್ಫೋಟಗಳ ಶಬ್ದಗಳು ಕೇಳಿಬಂದಿವೆ.

ನಿರ್ಬಂಧ ಸಡಿಲಿಸಿದ ಇರಾನ್: ಈ ನಡುವೆ, ಹಾರ್ಮುಜ್ ಸಮುದ್ರ ಮಾರ್ಗದಲ್ಲಿ ಸಾಗುವ ವಾಣಿಜ್ಯ ಹಡಗುಗಳ ಮೇಲಿನ ಕೆಲವು ನಿರ್ಬಂಧಗಳನ್ನು ಇರಾನ್ ಸಡಿಲಿಸಿದೆ. ಪಾಕಿಸ್ತಾನದ ಧ್ವಜ ಹೊಂದಿರುವ 20 ಹಡಗುಗಳಿಗೆ ಸಂಚಾರಕ್ಕೆ ಅನುಮತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಈ ಮಾತುಕತೆಗಳು ಅಮೆರಿಕ ಮತ್ತು ಇರಾನ್ ನಡುವಿನ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡುವಲ್ಲಿ ಪರಿಣಾಮಕಾರಿಯಾಗಿಲ್ಲ. ಯುದ್ಧ ನಿರ್ಣಾಯಕ ಹಂತ ತಲುಪಿದೆ ಎಂದು ಅಮೆರಿಕ ಹೇಳುತ್ತಿದ್ದರೂ, ಇರಾನ್ ನಾಯಕರು ಸಾರ್ವಜನಿಕವಾಗಿ ಮಾತುಕತೆಗಳನ್ನು ತಳ್ಳಿಹಾಕುತ್ತಿದ್ದಾರೆ. ಒಟ್ಟಿನಲ್ಲಿ, ಈ ಯುದ್ಧ ತೀವ್ರಗೊಳ್ಳುತ್ತಿದ್ದು, ರಾಜತಾಂತ್ರಿಕ ಪ್ರಯತ್ನಗಳು ಇನ್ನೂ ಫಲ ನೀಡಿಲ್ಲ. ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಉದ್ವಿಗ್ನತೆ ಹೆಚ್ಚುತ್ತಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಸಂಕೀರ್ಣವಾಗುವ ಸಾಧ್ಯತೆ ಇದೆ.

ಸಾವಿನ ಸಂಖ್ಯೆ ಹೆಚ್ಚಳ: ಈ ಯುದ್ಧದಲ್ಲಿ ಸಾವಿನ ಸಂಖ್ಯೆ ನಿರಂತರವಾಗಿ ಏರುತ್ತಿದೆ. ಇರಾನ್‌ನ್ 1,900ಕ್ಕೂ ಹೆಚ್ಚು ಮಂದಿ, ಇಸ್ರೇಲ್ 19, ಲೆಬನಾನ್ 1,100 ಕ್ಕೂ ಹೆಚ್ಚು, ಇರಾಕ್‌ನಲ್ಲಿ 80 ಭದ್ರತಾ ಸಿಬ್ಬಂದಿ, ಗಲ್ಫ್ ರಾಷ್ಟ್ರಗಳಲ್ಲಿ 20 ಮತ್ತು ವೆಸ್ಟ್ ಬ್ಯಾಂಕ್‌ನಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ಜಾತಿಗಣತಿ ವರದಿ ವಿಳಂಬಕ್ಕೆ ಒಳಮೀಸಲಾತಿ ಗೊಂದಲವೇ ಕಾರಣ

▸ ವೀರಣ್ಣ ಬಳಿಗಾರ

ದಿಗಂತ ವಿಶೇಷ

• **ಬೆಂಗಳೂರು:** ಒಳಮೀಸಲಾತಿ ಗೊಂದಲ ಬಗೆಹರೆಯದ ಕಾರಣ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿ ನಡೆಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ವರದಿ ವಿಳಂಬವಾಗುವ ಸಾಧ್ಯತೆ ಇದ್ದು, ಮೇ ತಿಂಗಳ ಒಳಗೆ ಸಮೀಕ್ಷೆ ವರದಿಯನ್ನು ಸರ್ಕಾರ ಸ್ವೀಕರಿಸುವುದು ಅನುಮಾನವಾಗಿದೆ.

ಪರಿಶಿಷ್ಟ ಜಾತಿಗಳಿಗೆ ಒಳಮೀಸಲು ಹಂಚಿಕೆ ಮಾಡುವುದು ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದ್ದು, ಮಾ.27ರಂದು ನಿಗದಿಯಾಗಿದ್ದ ವಿಶೇಷ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲು ಸರ್ಕಾರ ತೀರ್ಮಾನಿಸಿತ್ತು. ಆದರೆ, ಉಪಚುನಾವಣೆ ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆ ಕಾರಣ ಒಳಮೀಸಲಾತಿ ಘೋಷಣೆ ಮುಂದಕ್ಕೆ ಹೋಗಿರುವುದರಿಂದ ಜಾತಿಗಣತಿ ವರದಿ ಇನ್ನಷ್ಟು ಮುಂದಕ್ಕೆ ಹೋಗಲಿದೆ.



ಈ ಹಿಂದೆ ಕಾಂತರಾಜ್ ಆಯೋಗ ಸಲ್ಲಿಸಿದ ವರದಿಯನ್ನು ಅನುಷ್ಠಾನಗೊಳಿಸಲು ಸಾಕಷ್ಟು ಕ್ರಮ ವಹಿಸಿದರೂ ಕೂಡಾ ಪ್ರಬಲ ಸಮುದಾಯಗಳ ವಿರೋಧದಿಂದ ಸ್ವೀಕರಿಸಲಾಗಲಿಲ್ಲ, ಇನ್ನೂ ಮಧುಸೂದನ್ ನಾಯ್ಕ ಅವರ ನೇತೃತ್ವದಲ್ಲಿ ನಡೆಸಿರುವ ವರದಿ ವಿಶ್ಲೇಷಣೆ ಹಂತದಲ್ಲಿದ್ದು, ಕೇಂದ್ರ ಸರ್ಕಾರದ ಜನಗಣತಿಯ ಪೂರ್ವದಲ್ಲೇ ಸ್ವೀಕರಿಸಿದರೆ ಉತ್ತಮ ಎಂದು ಹಿಂದುಳಿದ ನಾಯಕರು ಹೇಳಿದ್ದಾರೆ.

ಮಧುಸೂದನ್ ಆಯೋಗ ಸಲ್ಲಿಸಲಿರುವ ವರದಿಯು ಮುಂದಿನ ಎರಡು ದಶಕಗಳವರೆಗೆ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳ ಹಾಗೂ ಸಾಮಾನ್ಯ ವರ್ಗದ ಜನರ ಜೀವನಮಟ್ಟ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಅರ್ಹತೆ ಸೇರಿದಂತೆ ಹಲವು ಮಹತ್ವದ ವಿಷಯಗಳು ವರದಿಯಲ್ಲಿ ಇವೆ. ಇದರ ಆಧಾರದ ಮೇಲೆ ಹಿಂದುಳಿದ ವರ್ಗಗಳ ಮೀಸಲಾತಿ ವರ್ಗೀಕರಣ ಮರು ಪ್ರತಿಷ್ಠಾಪನೆ ಆಗಲಿದೆ. ಆದರೆ, ಸದ್ಯದ ರಾಜಕೀಯ ಸ್ಥಿತಿಗತಿಯಲ್ಲಿ ವರದಿ ವಿಳಂಬ ಎಂದು ಹೇಳಲಾಗುತ್ತಿದೆ.

ಶೇ.90ರಷ್ಟು ಸಮೀಕ್ಷೆ: ಸೆ.21ರಿಂದ ನ.10ರವರೆಗೆ 51 ದಿನಗಳ ಕಾಲ ರಾಜ್ಯಾದ್ಯಂತ 1.5 ಲಕ್ಷ ಶಿಕ್ಷಕರು ಹಾಗೂ ಸರ್ಕಾರಿ ನೌಕರರು ಸಮೀಕ್ಷೆ ನಡೆಸಿದ್ದು, ಶೇ.90ಕ್ಕೂ ಹೆಚ್ಚು ಗುರಿ ಸಾಧಿಸಲಾಗಿದೆ. ರಾಜ್ಯಾದ್ಯಂತ ಶೇ.97.51ರಷ್ಟು ಗುರಿ ತಲುಪಿದ್ದರೆ, ಜಿಬಿಎ ವ್ಯಾಪ್ತಿಯಲ್ಲಿ ಶೇ.60ರಷ್ಟು ಗುರಿ ಸಾಧನೆ ಆಗಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ. ರಾಜ್ಯದಲ್ಲಿ ಸುಮಾರು 6.50 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಸಮೀಕ್ಷೆ ವೇಳೆ ಶೇ.4.22 ಕುಟುಂಬಗಳು ಸಮೀಕ್ಷೆಯಲ್ಲಿ ಭಾಗವಹಿಸಲು ನಿರಾಕರಿಸಿದ್ದರೆ, 34.49 ಲಕ್ಷ ಮನೆಗಳು ಖಾಲಿ ಅಥವಾ ಬೀಗ ಹಾಕಿದ್ದವು. ಈ ಗಣತಿಗೆ ಸುಮಾರು 180 ಕೋಟಿ ರೂ.ಗಳ ವೆಚ್ಚ ಮಾಡಲಾಗಿದೆ.

ವರದಿಯ ದತ್ತಾಂಶ ವಿಶ್ಲೇಷಣೆ

ಈಗಾಗಲೇ ಗಣತಿ ಕಾರ್ಯ ಮುಗಿದು 4 ತಿಂಗಳೇ ಗತಿಸಿದ್ದು, ಸಮೀಕ್ಷೆಯೊತ್ತರ ದತ್ತಾಂಶ ವಿಶ್ಲೇಷಣೆ ಕಾರ್ಯ ಪ್ರಗತಿಯಲ್ಲಿದೆ. ಆನ್‌ಲೈನ್ ಮೂಲಕವೇ ಗಣತಿ ಕಾರ್ಯ ಕೈಗೊಂಡಿದ್ದು, ಅಂಕಿ-ಸಂಖ್ಯೆಗಳ ವಿಶ್ಲೇಷಣೆ ನಡೆಸಿ, ಅವುಗಳ ಮೇಲೆ ವರದಿಯನ್ನು ಸಿದ್ಧಪಡಿಸುತ್ತಿದೆ ಆಯೋಗವು ತಿಳಿಸಿದೆ.



ಹಿಂದುಳಿದ ವರ್ಗಗಳ ಆಯೋಗವು ಈಗಾಗಲೇ ಸಮೀಕ್ಷೆ ಮುಗಿಸಿ. ಅಂಕಿ-ಅಂಶಗಳ ಅಧ್ಯಯನ ನಡೆಸಿದೆ. ವರದಿ ಬೇಗನೇ ಸರ್ಕಾರಕ್ಕೆ ಸಲ್ಲಿಕೆ ಆಗುವ ನಿರೀಕ್ಷೆ ಇದೆ. ವರದಿ ಬರುವ ಮೊದಲು ಈ ಬಗ್ಗೆ ಏನನ್ನೂ ಹೇಳಲಾರೆ.
■ **ಶಿವರಾಜ್ ತಂಗಡಗಿ,** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಕಿರುಸುದ್ದಿ

ಜಾಲತಾಣದಲ್ಲಿ ಶಿಕ್ಷಕನ ಆಡಿಯೋ ವೈರಲ್

◆ **ಸಿಂದಗಿ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಬೇಕಾದ ಕೇಂದ್ರಗಳ ವ್ಯವಸ್ಥೆ ಮಾಡಿ ಕೊಡುವುದಾಗಿ ಸುಮಾರು 30ಕ್ಕೂ ಅಧಿಕ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡಿ, ಅವರು ಕೇಳಿದ ಪರೀಕ್ಷಾ ಕೇಂದ್ರಕ್ಕೆ ಪರೀಕ್ಷಾ ದಾಖಲಾತಿ ನೀಡುವ ಭರವಸೆಯನ್ನು ಸಿಂದಗಿ ಸರ್ಕಾರಿ ಆದರ್ಶ ಶಾಲೆಯ ಶಿಕ್ಷಕ ರಮೇಶ ಚಟ್ಟರಕಿ ನೀಡಿದ್ದರೂ ಎಂಬ ಸಂಭಾಷಣೆ ಮತ್ತು ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ಪ್ರಕರಣ ಇದೀಗ ಬೆಳಕಿಗೆ ಬಂದಿದೆ. ಈ ಕುರಿತು ಮಾಧ್ಯಮದೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮಹಾಂತೇಶ ಯಡ್ರಾಮಿ ಮಾತನಾಡಿ, ಸಾಮಾಜಿಕ ಜಾಲತಾಣದಲ್ಲಿ ಈ ವಿಷಯದ ಕುರಿತು ವೈರಲ್ ಆಗಿದೆ. ಅದಕ್ಕೆ ಸಂಬಂಧಿಸಿದಂತೆ ಶಿಕ್ಷಕ ರಮೇಶ ಚೆಟ್ಟರಕಿ ಅವರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ. ಮತ್ತು ಮೇಲಾಧಿಕಾರಿಗಳ ಆದೇಶದ ಮೇರೆಗೆ ಶಾಲೆಯ ಶಿಕ್ಷಕನ ಈ ಕಾರ್ಯಕ್ಕೆ ಏನು ಮಾಡಿದ್ದಾರೆ ಎಂದು ಮುಖ್ಯೋಪಾಧ್ಯಾಯರಿಗೂ ಒಂದು ನೋಟಿಸ್ ನೀಡಿ ಎಂದು ಹೇಳಿದ ಕಾರಣ ಅವರಿಗೊಂದು ಜಾರಿ ಮಾಡಿಲಾಗಿದೆ. ಮಕ್ಕಳ ಪಾಲಕರು ನನಗೆ ಕರೆ ಮಾಡಿ ಇದರಲ್ಲಿ ಮಕ್ಕಳದ್ದೇ ತಪ್ಪಿದೆ ಎಂದು ಮಕ್ಕಳೇ ಒಪ್ಪಿಕೊಳ್ಳುತ್ತಿದ್ದಾರೆ ಬನ್ನಿ ಎಂದು ಕರೆದರೂ ನಾನು ಹೋಗಿಲ್ಲ. ಅದಕ್ಕೆ ಸಂಬಂಧಿಸಿದಂತೆ ಶಿಕ್ಷಕ ರಮೇಶ ಚೆಟ್ಟರಕಿ ಲಿಖಿತವಾಗಿ ಕಾರಣ ನೀಡಬೇಕು ಎಂದು ತಿಳಿಸಿದ್ದೇನೆ. ಮಕ್ಕಳು ಯಾವ ಕೇಂದ್ರಕ್ಕೆ ದಾಖಲಾಗುತ್ತಾರೆ ಎಂಬುವುದು ಪರೀಕ್ಷಾ ಮಂಡಳಿಯ ಕಾರ್ಯ. ನಮಗೂ ಮತ್ತು ಡಿಡಿಪಿಐ ಅವರಿಗೂ ಮಾಹಿತಿ ಇರುವುದಿಲ್ಲ. ಆದರೆ, ಪರೀಕ್ಷೆಗೆ ಮುಂಚೆ ಪ್ರವೇಶ ಪತ್ರಗಳು ಶಾಲೆಯ ಲಾಗಿನ್‌ಗೆ ಬರುತ್ತವೆ. ಬಹುಶಃ ಅದನ್ನು ಗಮನಿಸಿ ನಾನೇ ಮಾಡಿಸಿದ್ದೇನೆ ಎಂಬುದಾಗಿ ಹೇಳಿ ದುರುಪಯೋಗ ಪಡಿಸಿಕೊಂಡಿರಬಹುದು ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಇದರ ಕುರಿತಾಗಿ ಮೇಲಾಧಿಕಾರಿಗಳ ಆದೇಶದ ಮೇರೆಗೆ ಮಂಗಳವಾರ 3ಜನರ ತಂಡವೊಂದನ್ನು ರಚಿಸಿ ತನಿಖೆ ಮಾಡಿ ವಿವರವಾದ ವರದಿಯನ್ನು ನೀಡಲಾಗುವುದು ಎಂದರು.



ಪರೀಕ್ಷಾ ಕೇಂದ್ರ ಬದಲಾವಣೆಗೆ ವಿದ್ಯಾರ್ಥಿಗಳಿಂದ ಹಣ ವಸೂಲಿ

ಕಪ್ಪು ಚಿರತೆ ಓಡಾಟ: ಜನರಲ್ಲಿ ಆತಂಕ

◆ **ಭಟ್ಕಳ:** ಪಟ್ಟಣದ ನವಾಯತ್ ಕಾಲೋನಿಯಲ್ಲಿ ಶನಿವಾರ ರಾತ್ರಿ ಕಪ್ಪು ಚಿರತೆಯೊಂದು ಕಾಣಿಸಿಕೊಂಡು ಕೆಲಕಾಲ ಜನರ ಆತಂಕಕ್ಕೆ ಕಾರಣವಾಯಿತು. ರಾತ್ರಿ ಮರಿಯಂ ಅಲಿ ಮಸೀದಿಯಿಂದ ಪ್ರಾರ್ಥನೆ ಮುಗಿಸಿ ಹೊರ ಬಂದಿದ್ದ ಹಸನ್ ಎನ್ನುವವರು ಮರಿಯಂ ಅಲಿ ಮಸೀದಿಯ ಹಿಂಭಾಗದ ಮೂಲಕ ತಮ್ಮ ಮನೆಗೆ ಮರಳುತ್ತಿರುವಾಗ ಹತ್ತಿರದಲ್ಲಿಯೇ ಇದ್ದ ಪೊದೆಯೊಂದರಿಂದ ಕಪ್ಪು ಚಿರತೆ ನುಗ್ಗಿ ಬಂದಿದ್ದು, ಇವರ ಮೇಲೆರಗುವುದಕ್ಕೆ ಸ್ವಲ್ಪದರಲ್ಲಿಯೇ ತಪ್ಪಿ ಹೋಯಿತು ಎನ್ನಲಾಗಿದೆ. ಗಾಬರಿಯಿಂದ ಅವರು ತಪ್ಪಿಸಿಕೊಂಡಿದ್ದು ಅವರ ಮಗ ಇದನ್ನು ಕಂಡಿರುವುದಾಗಿಯೂ ಹೇಳಿದ್ದಾರೆ. ಘಟನೆಯಾದ ಒಂದು ಗಂಟೆಯ ನಂತರ ಕಪ್ಪು ಚಿರತೆಯೊಂದು ಮಸೀದಿಯಿಂದ ಸ್ವಲ್ಪವೇ ದೂರದಲ್ಲಿರುವ ಬಶೀರ್ ಎನ್ನುವ ಮನೆ ಮುಂದೆ ಕಾಣಿಸಿಕೊಂಡಿರುವುದಾಗಿಯೂ ತಿಳಿದು ಬಂದಿದೆ.

ಸುದ್ದಿ ತಿಳಿದು ತಕ್ಷಣ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆಯ ಸಿಬ್ಬಂದಿ, ಅಧಿಕಾರಿಗಳು ಸುತ್ತಮುತ್ತ ಎಲ್ಲಾ ಕಡೆಗಳಲ್ಲಿಯೂ ಶೋಧ ಮಾಡಿದರಾದರೂ ಎಲ್ಲಿಯೂ ಚಿರತೆ ಪತ್ತೆಯಾಗಿಲ್ಲ. ಆದರೂ ಕೂಡಾ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಟಾರ್ಚ್ ಮೂಲಕ ಪೊದೆಗಳನ್ನೆಲ್ಲ ಹುಡುಕಿದ್ದು ನಂತರ ಪಟಾಕಿ ಸಿಡಿಸಿದರಾದರೂ ಚಿರತೆ ಸುಳಿವು ದೊರೆತಿರುವುದಿಲ್ಲ. ಸಾಗರ ರಸ್ತೆ, ಕಡವಿನಕಟ್ಟೆಯ ಕಡೆಯಿಂದ ಚಿರತೆ ಬಂದಿರುವ ಸಾಧ್ಯತೆ ಇದೆ ಎನ್ನುವುದು ಇಲಾಖೆಯ ವಾದವಾಗಿದೆ. ಅರಣ್ಯ ಇಲಾಖೆ ಈ ಭಾಗದಲ್ಲಿನ ಜನರಿಗೆ ಜಾಗ್ರತರಾಗಿರುವಂತೆ ತಿಳಿಸಿದೆ.

ಶ್ರೀರಾಮನವಮಿ ಬೃಹತ್ ಶೋಭಾಯಾತ್ರೆಗೆ ಚಾಲನೆ

ಓಲೈಕೆ ರಾಜಕಾರಣ ಹೆಚ್ಚಾಗಿದೆ: ಬಿವೈವಿ

◆ **ಹುಬ್ಬಳ್ಳಿ:** ರಾಜ್ಯದಲ್ಲಿ ಅಖಂಡ ಹಿಂದು ಸಮಾಜ ಸದ್ಯ ಶಾಂತಿಯುತವಾಗಿದೆ ಎಂದರೆ ಅದು ಸಮಾಜದ ದೌರ್ಬಲ್ಯ ಎಂದು ಭಾವಿಸುವುದು ಸರಿಯಲ್ಲ. ರಾಜ್ಯ ಸರ್ಕಾರ ಹಿಂದುಗಳನ್ನು ಗೌರವಯುತವಾಗಿ ಓಡಾದಂತ ದುಸ್ಥಿತಿ ನಿರ್ಮಾಣ ಮಾಡಿದೆ. ಓಲೈಕೆ ರಾಜಕಾರಣ ಹೆಚ್ಚಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿಕಾರಿದರು.

ಶ್ರೀಶಕ್ತಿಯುವಕಮಂಡಳ, ಶ್ರೀರಾಮನವಮಿಉತ್ಸವ ಸಮಿತಿ ವತಿಯಿಂದ ಶ್ರೀರಾಮನವಮಿ ಅಂಗವಾಗಿ ಬಾನಿ ಓಣಿಯಲ್ಲಿ ಹಮ್ಮಿಕೊಂಡಿದ್ದ ಶ್ರೀರಾಮನವಮಿ ಬೃಹತ್ ಶೋಭಾಯಾತ್ರೆ ಹಾಗೂ ಛತ್ರಪತಿ ಶಿವಾಜಿ ಮಹರಾಜರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೀಗಾಗಿ ಹಿಂದುಗಳ ಒಗ್ಗಟ್ಟಿನಿಂದ ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕಿದೆ. ಸಂಭ್ರಮದಿಂದ ಗಣೇಶ ಹಬ್ಬ ಮಾಡಲು ಸಾಧ್ಯವಾಗುತ್ತಿಲ್ಲ, ರಾಜ್ಯ ಸರ್ಕಾರದ ಆಚರಣೆಗೂ ರಾಜಕೀಯವಾಗಿ ತೊಂದರೆ ಕೊಡುವ ಕೆಲಸ ಸರ್ಕಾರದಿಂದ ಆಗುತ್ತಿದೆ. ಅಲ್ಪಸಂಖ್ಯಾತರ ಓಲೈಕೆಯಿಂದಾಗಿ ಹಿಂದು ಮಹಿಳೆಯರಿಗೆ ರಕ್ಷಣೆ ಇಲ್ಲದಾಗಿದೆ. ಇಂತಹ ದುಷ್ಟ ಶಕ್ತಿ ಸಂಹಾರ ಮಾಡುವ ದಿನ ದೂರ ಉಳಿದಿಲ್ಲ ಎಂದರು.

ಸಂಸದ ಜಗದೀಶ ಶೆಟ್ಟರ್ ಮಾತನಾಡಿ, ಜಗತ್ತಿನಾದ್ಯಂತ ಇಂದು ನಿರಂತರವಾಗಿ ಯುದ್ಧಗಳು ನಡೆಯುತ್ತಿವೆ. ಈ ಮಧ್ಯೆಯೂ ನಾವೆಲ್ಲರೂ ಸುರಕ್ಷಿತವಾಗಿದ್ದೇವೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಕಾರಣ ಎಂದರು.

ಪ್ರಭು ಶ್ರೀರಾಮ, ಛತ್ರಪತಿ ಶಿವಾಜಿ ಮಹಾರಾಜರ ಆದರ್ಶ, ಗುಣಗಳನ್ನು ಪ್ರಧಾನಿ ಮೋದಿ ಅಳವಡಿಸಿಕೊಂಡು ಹಿಂದುಗಳ ರಕ್ಷಣೆ ನಿಂತಿದ್ದಾರೆ ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಮೂರುಸಾವಿರ ಮಠದ ಸ್ವಾಮೀಜಿ ಡಾ.ಗುರುಸಿದ್ದ ರಾಜಯೋಗೀಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು. ಹೂಲಿಕಟ್ಟಿಯ ಭಾರ್ಗವಾನಂದ ಗಿರಿ ಮಹಾರಾಜರು, ಜೈನ ಮುನಿ ಪುಣ್ಯಸಾಗರ ಮಹರಾಜರು ಸಾನ್ನಿಧ್ಯ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್, ಶ್ರೀರಾಮನವಮಿ ಉತ್ಸವ ಸಮಿತಿ ಅಧ್ಯಕ್ಷ ಸುಬ್ರಮಣ್ಯ ಶಿರಕೋಳ, ಉಪಾಧ್ಯಕ್ಷ ಮಲ್ಲಪ್ಪ ಶಿರಕೋಳ, ಮೇಯರ್ ಜ್ಯೋತಿ ಪಾಟೀಲ, ಲಿಂಗರಾಜ ಪಾಟೀಲ, ಜಯತೀರ್ಥ ಕಟ್ಟಿ, ವೆಂಕಟೇಶ ಕಾಟವೆ, ಡಾ.ಮಲ್ಲಿಕಾರ್ಜುನ ಬಾಳಿಕಾಯಿ, ತಿಪ್ಪಣ್ಣ ಮಜ್ಜಗಿ, ರಮೇಶ ಕದಂ, ಸಂಜಯ ಬಡಸ್ಕರ, ಸುಭಾಷಸಿಂಗ್ ಜಮಾದಾರ ಇತರರು ಇದ್ದರು.



ಶೋಭಾಯಾತ್ರೆ
ವೇದಿಕೆ ಕಾರ್ಯಕ್ರಮದ ಬಳಿಕ ಮೂರುಸಾವಿರ ಮಠದ ಡಾ.ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಶ್ರೀರಾಮ ನವಮಿ ಬೃಹತ್ ಶೋಭಾಯಾತ್ರೆಗೆ ಚಾಲನೆ ನೀಡಿದರು. ಶ್ರೀರಾಮ, ಹನುಮಂತ, ಛತ್ರಪತಿ ಶಿವಾಜಿ ಮಹರಾಜರು ಹಾಗೂ ಭಗೀರಥ ಮಹರ್ಷಿಗಳ ಮೂರ್ತಿಗಳ ಭವ್ಯ ಮೆರವಣಿಗೆ ಸಡಗರ ಸಂಭ್ರಮದಿಂದ ನಡೆಯಿತು. ಮೆರವಣಿಗೆಯುದ್ದಕ್ಕೂ ಜೈ ಶ್ರೀರಾಮ, ಜೈ ಜೈ ಶ್ರೀರಾಮ ಘೋಷಣೆ ಮೊಳಗಿದವು.

'ಮನ್ಮಹಾಸ್ಯಂದನ' ಮಹಾರಥೋತ್ಸವ ಇಂದು

◆ **ಬನವಾಸಿ:** ದಕ್ಷಿಣ ಕಾಶಿ, ಕದಂಬರ ಕುಲದೈವ ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀ ಕ್ಷೇತ್ರ ಬನವಾಸಿಯ ಶ್ರೀ ಉಮಾ ಮಧುಕೇಶ್ವರ ದೇವರ 'ಮನ್ಮಹಾಸ್ಯಂದನ' ಮಹಾರಥೋತ್ಸವ (ದೊಡ್ಡ ತೇರು) ಮಾ.30ರಂದು ಅತ್ಯಂತ ವಿಜೃಂಭಣೆಯಿಂದ ಜರುಗಲಿದೆ.

ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಹೊಂದಿರುವ ಅತಿ ದೊಡ್ಡ ಹಾಗೂ ಅತಿ ಭಾರ ಹೊಂದಿರುವ ಇಲ್ಲಿಯ ಮಹಾರಥೋತ್ಸವವನ್ನು ನೋಡಲು ರಾಜ್ಯ ಹಾಗೂ ಹೊರ ರಾಜ್ಯದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಲಿದ್ದಾರೆ.

ಈ ಬಾರಿಯ ರಥೋತ್ಸವದ ತಾಂತ್ರಿಕತೆಯನ್ನು ವೇ.ಮೂ. ಶ್ರೀನಿಧಿ ಮಂಗಳೂರು ಅವರು ನಿರ್ವಹಿಸಲಿದ್ದು, ಮಾ.23ರಂದು ಶ್ರೀ ಮಹಾಗಣಪತಿ ಪೂಜೆ, ಮೃತ್ತಿಕಾ ಹರಣ, ಅಂಕುರಾರೋಪಣದೊಂದಿಗೆ ಆರಂಭ ಗೊಂಡಿರುವ ಜಾತ್ರಾ ಮಹೋತ್ಸವ ಕಳೆದ ಒಂದು ವಾರದಿಂದ ಸಂಭ್ರಮದಿಂದ ನಡೆಯುತ್ತಿದೆ.

ಮಂಗಳವಾರ 24ರಂದು ಧ್ವಜಾರೋಹಣ, ಭೇರಿತಾಡನ, ಮಹಾಬಲಿ ನಡೆದಿದ್ದು ಯಾಗಶಾಲಾ ಪ್ರವೇಶ, ಕೌತುಕ ಬಂಧನ ಮತ್ತು ಶಿಬಿಕಾ ಯಂತ್ರೋತ್ಸವ ನಡೆದಿದ್ದು, ಪ್ರತಿನಿತ್ಯವೂ ಭಕ್ತರು ಹಗಲೋತ್ಸವದ ತೇರು, ತಿರುಗುಣಿ ತೇರುಗಳನ್ನು ಎಳೆಯದು ಸಂಭ್ರಮಿಸಿದ್ದಾರೆ. ನಿತ್ಯವೂ ಜಪ, ಹೋಮ-ಹವನಗಳು ನಡೆಯುತ್ತಿವೆ. ವೃಷಭ ಯಂತ್ರೋತ್ಸವ, ಪುಷ್ಪಮಂಜರಿ ಯಂತ್ರೋತ್ಸವ, ಸಿಂಹ ಯಂತ್ರೋತ್ಸವವೂ ಕೂಡ ಜರುಗಿದೆ. ಭಾನುವಾರ ರಾತ್ರಿ ಜನಸಾಗರದ ನಡುವೆ ಅದ್ದೂರಿಯಾಗಿ ಹೂವಿನ ತೇರು ಎಳೆದು ಭಕ್ತಿ ಮೆರೆದಿದ್ದಾರೆ. ಮಾ.30ರಂದು ಬೆಳಗ್ಗೆ ದೇವರ ಪಲ್ಲಕ್ಕಿ ಉತ್ಸವದ ಬಳಿಕ ಶ್ರೀ ಉಮಾಮಧುಕೇಶ್ವರ ದೇವರು ರಥರೂಢರಾಗಲಿದ್ದಾರೆ. ಬೆಳಗ್ಗೆ 11 ಗಂಟೆಯ ಬಳಿಕ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ದರ್ಶನ ಪಡೆಯಲಿದ್ದಾರೆ. ರಾತ್ರಿ12 ಗಂಟೆಗೆ ಮಹಾ ಮಂಗಳರಾತಿಯ ಬಳಿಕ ಮಹಾರಥೋತ್ಸವಕ್ಕೆ ಚಾಲನೆ ದೊರೆಯಲಿದೆ.



ಮಧ್ಯರಾತ್ರಿ ಆರಂಭಗೊಳ್ಳುವ ಮಹಾರಥೋತ್ಸವ ಮರುದಿನ ಬೆಳಗಿನ ಜಾವ ಮುಕ್ತಾಯವಾಗಲಿದೆ. ಏ.1ರಂದು ಅವಭೃಥ ತೀರ್ಥ ಸ್ನಾನದೊಂದಿಗೆ ಜಾತ್ರೆಯ ವಿಧಿವಿಧಾನಗಳು ಸಂಪನ್ನಗೊಳ್ಳಲಿವೆ ಎಂದು ಶ್ರೀಮಧುಕೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಸುಧಾಕರ ಹೇಮಾದ್ರಿ ತಿಳಿಸಿದ್ದಾರೆ.

ಒಂದೇ ದಿನ ವಿವಿಧೆಡೆ ಪ್ರತ್ಯೇಕ ಅಪಘಾತ

ಐವರ ಸಾವು, ಹಲವರಿಗೆ ಗಾಯ

◆ **ಸಿಂಧನೂರು:** ತಾಲೂಕಿನ ವಿವಿಧೆಡೆ ಪ್ರತ್ಯೇಕ ಅಪಘಾತದಲ್ಲಿ ಐವರು ಮೃತಪಟ್ಟಿದ್ದು, ಹಲವರು ಗಾಯಗೊಂಡಿರುವ ಘಟನೆ ನಡೆದಿದೆ.

ಲಾರಿಗೆ ಬೈಕ್ ಡಿಕ್ಕಿ, ಇಬ್ಬರ ಸಾವು: ಕುನ್ನಟಗಿ ಕ್ಯಾಂಪಿನ ಪೆಟ್ರೋಲ್ ಬಂಕ್ ಬಳಿ ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮವಾಗಿ ಸ್ಥಳದಲ್ಲಿಯೇ ಇಬ್ಬರು ಮೃತಪಟ್ಟ ಘಟನೆ ಶನಿವಾರ ಸಂಜೆ ನಡೆದಿದೆ. ಮಲ್ಲನಗೌಡ ಕಣ್ಣೂರು (37),ವಿರೂಪಾಕ್ಷಿ 38) ಮೃತ ಬೈಕ್ ಸವಾರರಾಗಿದ್ದಾರೆ. ಇವರು ಸಿಂಧನೂರಿನಿಂದ ತಮ್ಮ ಸ್ವಗ್ರಾಮವಾದ ಕಣ್ಣೂರು ಕಡೆಗೆ ಹೊರಟಿರುವಾಗ ಮಾರ್ಗ ಮಧ್ಯೆ ಕುನ್ನಟಗಿ ಕ್ಯಾಂಪ್‌ನ ಪೆಟ್ರೋಲ್ ಬಂಕ್ ಬಳಿ ಪಂಚರ್ ಆಗಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದು, ಸ್ಥಳದಲ್ಲೇ ಇಬ್ಬರು ಮೃತಪಟ್ಟಿದ್ದಾರೆ.

ಘಟನಾ ಸ್ಥಳಕ್ಕೆ ಗ್ರಾಮೀಣ ಪಿಎಸ್ಐ ಸೇರಿ ಪೊಲೀಸರು ಭೇಟಿ ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬಸ್‌ಗೆ ಬೈಕ್ ಡಿಕ್ಕಿ: ಓರ್ವ ಸಾವು : ಖಾಸಗಿ ಬಸ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಬೈಕ್ ಸವಾರ ಮೃತಪಟ್ಟಿದ್ದು, ಇನ್ನಿಬ್ಬರಿಗೆ ಗಂಭೀರ ಗಾಯಗಳಾದ ಘಟನೆ ಶನಿವಾರ ತಡರಾತ್ರಿ ರಾಯಚೂರು ಮುಖ್ಯ ರಸ್ತೆಯ ಆರ್.ಎಚ್.ಕ್ಯಾಂಪ್ 3ರ ಕ್ರಾಸ್ ಬಳಿ ನಡೆದಿದೆ. ಮಹೆಬೂಬಿಯಾ ಕಾಲೋನಿ ನಿವಾಸಿ ಸೈಯದ್ ಯಾಸೀನ್ ಬುಡ್ಡಸಾಬ (19) ಮೃತ ದುರ್ದೈವಿ. ಸೋಹೇಲ್ ಹುಸೇನ್ ಭಾಷಾ, ನಬೀ ರಸೂಲ್ ಖಾಜಾಸಾಬ್ ಎನ್ನುವವರಿಗೆ ಗಂಭೀರ ಗಾಯಗಳಾಗಿದ್ದು,ರಾಯಚೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಈ ಕುರಿತು ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಟ್ರ್ಯಾಕ್ಟರ್ ಪಲ್ಟಿ: ಇಬ್ಬರು ಮೃತ್ಯು: ತಿಪ್ಪೆಗೊಬ್ಬರ ತುಂಬಿಕೊಂಡು ಹೊಲಕ್ಕೆ ಹೊರಟ್ಟಿದ್ದ ಟ್ರ್ಯಾಕ್ಟರ್ ಪಲ್ಟಿಯಾಗಿ ಕೆರೆಗೆ ಬಿದ್ದಿದ್ದು, ಸ್ಥಳದಲ್ಲೇ ಇಬ್ಬರು ಮೃತಪಟ್ಟ ಘಟನೆ ಶನಿವಾರ ಮಧ್ಯಾಹ್ನ ತಾಲೂಕಿನ 4ಮೈಲ್ ಕ್ಯಾಂಪ್ ಬಳಿ ನಡೆದಿದೆ.

4ಮೈಲ್ ಕ್ಯಾಂಪ್ ನಿವಾಸಿ ವಿರುಪನಗೌಡ ಅಯ್ಯನಗೌಡ (50), ವಿರುಪಾಪೂರು ಗ್ರಾಮದ ನಿವಾಸಿ ಸುಖಮುನಿಯಪ್ಪ ಸಂತೇರ್ (30) ಮೃತಪಟ್ಟಿದ್ದಾರೆ.

ತಿಪ್ಪೆಗೊಬ್ಬರವನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಹೊಲಕ್ಕೆ ಸಾಗಿಸುತ್ತಿದ್ದಾಗ ಟ್ರ್ಯಾಕ್ಟರ್ ಪಲ್ಟಿಯಾಗಿ ಮಾರ್ಗ ಮಧ್ಯೆ ಬರುವ ಕೆರೆಗೆ ಮುಗುಚಿ ಬಿದ್ದಿದೆ. ಇಬ್ಬರು ಸಹ ಕೆರೆಯ ನೀರಿನಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಘಟನಾ ಸ್ಥಳಕ್ಕೆ ಗ್ರಾಮೀಣ ಠಾಣೆ ಪೊಲೀಸರು ಭೇಟಿ ನೀಡಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಲು ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯ ಶವಗಾರಕ್ಕೆ ರವಾನಿಸಲಾಗಿದೆ.

ಪಂಜಾಬ್ ರಾಜ್ಯಪಾಲ ಗುಲಾಬಚಂದ್ ಕಟಾರಿಯಾ ಅಭಿಮತ

ಮಹಾವೀರರ ತತ್ವಗಳಿಂದ ವಿಶ್ವದಲ್ಲಿ ಶಾಂತಿ

◆ **ಬೆಳಗಾವಿ:** ಭಗವಾನ್ ಮಹಾವೀರರು ಮಾನವ ಕಲ್ಯಾಣಕ್ಕಾಗಿ ಅನೇಕ ತತ್ವಗಳನ್ನು ಬೋಧಿಸಿದ್ದಾರೆ. ಅವುಗಳಲ್ಲಿ ಸತ್ಯ, ಅಹಿಂಸೆ ಮತ್ತು ಅಪರಿಗ್ರಹ ಈ ಮೂರು ತತ್ವಗಳನ್ನು ನಾವೆಲ್ಲರೂ ಪಾಲಿಸಿದರೆ ವಿಶ್ವದೆಲ್ಲೆಡೆ ಶಾಂತಿ ನೆಲೆಸಲಿದೆ ಎಂದು ಪಂಜಾಬ್ ರಾಜ್ಯದ ರಾಜ್ಯಪಾಲ ಗುಲಾಬಚಂದ್ ಕಟಾರಿಯಾ ಅಭಿಪ್ರಾಯ ವ್ಯಕ್ತಪಡಿಸಿದರು.

ಭಾನುವಾರ ಬೆಳಗಾವಿಯಲ್ಲಿ ಭಗವಾನ್ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವದ ಅಂಗವಾಗಿ ಮಹಾವೀರ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಬಹುಮಾನ ವಿತರಣೆ ಸಮಾರಂಭ ಉದ್ಘಾಟಿಸಿ ಹಾಗೂ ಪದ್ಮಶ್ರೀ ಪ್ರಶಸ್ತಿ ವಿಜೇತ ಡಾ.ಪ್ರಭಾಕರ ಕೋರೆ ಅವರಿಗೆ ಸನ್ಮಾನ ಮಾಡಿ ಸಮಾರಂಭ ಉದ್ದೇಶಿಸಿ ಅವರು ಮಾತನಾಡಿದರು.

ಇಂದು ಭಾರತ ದೇಶ ಇಡಿ ವಿಶ್ವಕ್ಕೆ ಮಾನವತಾವಾದಿ ದಾರಿ ತೋರಿಸುತ್ತಿದೆ. ಎಲ್ಲ ರಾಷ್ಟ್ರಗಳ ಜೊತೆ ಬಂಧುತ್ವದ ಭಾವನೆಗಳನ್ನು ಬೆಳೆಸುತ್ತಿದೆ. ಕೊರೋನಾ ಕಾಲದಲ್ಲಿ ಎರಡು ಲಸಿಕೆ ಕಂಡು ಹಿಡಿದು ಅವುಗಳನ್ನು ಇಡಿ ವಿಶ್ವಕ್ಕೆ ಉಚಿತವಾಗಿ ನೀಡಿ ಕೋಟ್ಯಾಂತರ ಜನರ ಜೀವನ ರಕ್ಷಣೆ ಮಾಡಿದೆ. ನಮ್ಮ ಭಾರತದ ವೈಜ್ಞಾನಿಕರು ಅನೇಕ ಸಂಶೋಧನೆ ನಡೆಸಿದ್ದಾರೆ. ಈ ಸಂಶೋಧನೆಗಳು ಮಾನವ ಕಲ್ಯಾಣಕ್ಕಾಗಿ ಮೀಸಲಿಡಲಾಗಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಪ್ರಭಾಕರ ಕೋರೆ ಅವರು, ಭಗವಾನ್ ಮಹಾವೀರರು ತಮ್ಮ ಸಂಪೂರ್ಣ ಜೀವನ ಮನುಷ್ಯರ ಕಲ್ಯಾಣಕ್ಕಾಗಿ ಮೀಸಲಿಟ್ಟು, ವಿಶ್ವದ ಶಾಂತಿಗೆ ಶ್ರಮಿಸಿದ್ದರು. ಇಂದು ಜೈನ ಸಮಾಜದ ವತಿಯಿಂದ ನನ್ನನ್ನು ಸನ್ಮಾನಿಸಿ ಗೌರವಿಸಿದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ರಾಜ್ಯಪಾಲರ ಧರ್ಮಪತ್ನಿ ಅನಿತಾ ಗುಲಾಬಚಂದ ಕಟಾರಿಯಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಿರಿಯ ನ್ಯಾಯವಾದಿ ರವಿರಾಜ ಪಾಟೀಲ ಅತಿಥಿಗಳನ್ನು ಸ್ವಾಗತಿಸಿದರು. ಶಾಸಕ ಅಭಯ ಪಾಟೀಲ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷ ಸುನಿಲ ಹನಮಣ್ಣವರ, ಕಟಾರಿಯಾ ಫೌಂಡೇಶನ್ ರಾಷ್ಟ್ರೀಯ ಅಧ್ಯಕ್ಷ ಲಲಿತ ಸಂಘವಿ ಕಟಾರಿಯಾ, ಆದಾಯ ಇಲಾಖೆ ನಿವೃತ್ತ ಆಯುಕ್ತ ನರೇಂದ್ರ ಜೈನ, ಸಂತೋಷ ನರೇಂದ್ರ ಜೈನ, ಜಿತೋ ಕೆಕೆಜಿ ವಲಯ ಚೇರಮನ ಪ್ರವೀಣ ಭಾಫನಾ, ಭರತೇಶ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನೋದ ದೊಡ್ಡಣ್ಣವರ, ಮಾಜಿ ಶಾಸಕ ಸಂಜಯ ಪಾಟೀಲ, ಮಹಾಪೌರ ಪ್ರೀತಿ ಕಾಮಕರ, ಉಪ ಮಹಾಪೌರ ಹನುಮಂತ ಕೊಂಗಾಲಿ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.



ಬೈಕ್ ರ್‍ಯಾಲಿಗೆ ಚಾಲನೆ
ಬೆಳಗಾವಿ: ಭಗವಾನ್ ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವದ ವತಿಯಿಂದ ಬೆಳಗಾವಿಯಲ್ಲಿ ಅಹಿಂಸಾ ಬೈಕ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಬೈಕ್ ರ್‍ಯಾಲಿಯನ್ನು ಪಂಜಾಬ್ ರಾಜ್ಯದ ರಾಜ್ಯಪಾಲ ಗುಲಾಬಚಂದ ಕಟಾರಿಯಾ ದಂಪತಿ ಹಸಿರು ನಿಶಾನೆ ತೋರುವ ಮೂಲಕ ರ್‍ಯಾಲಿಗೆ ಚಾಲನೆ ನೀಡಿದರು. ಈ ರ್‍ಯಾಲಿಯು ಸಿಪಿಎಡ್ ಮೈದಾನದಿಂದ ಪ್ರಾರಂಭಗೊಂಡು ಹನುಮಾನ್ ನಗರ, ಕ್ಲಬ್ ರೋಡ್, ಚನ್ನಮ್ಮ ಸರ್ಕಲ್, ಕಾಲೇಜ್ ರೋಡ್, ಬೋಗಾರವೇಸ, ಪ್ಯಾಟಸನ, ಮಹಾತ್ಮಾ ಫುಲೆ ರೋಡ್ ಮುಖಾಂತರ ಮಹಾವೀರ ಭವನಕ್ಕೆ ತಲುಪಿತು.

ನಗನೂರಿನಲ್ಲಿ ಹೃದಯ ವಿದ್ರಾವಕ ಘಟನೆ

ಈಜಲು ಹೋದ ನಾಲ್ವರು ಮಕ್ಕಳು ಮೃತ್ಯು

◆ **ಯಾದಗಿರಿ:** ಯಪ್ಪಾ ಯಾರನ್ನ ಮಗಾ ಅಂತ್ ಕರಿಲೋ, ದೇವ್ರೇ ಹೆತ್ತ ಹೊಟ್ಟಿ ಮ್ಯಾಲ್ ಯಾಕ್ ಹಿಂಗ್ ಹೊಡದಿ ಶಿವನೇ... ನಾ ಏನ್ ನಿಂಗಾ ಅನ್ಯಾಯ ಮಾಡಿದ್ದ ಹೇಳೋ ಯಪ್ಪಾ'' ಹಣೆಗೆ ಕೈಯಿಂದ ಹೊಡೆದುಕೊಳ್ಳುತ್ತಾ, ಯಾರು ಎಷ್ಟೇ ಸಮಾಧಾನ ಪಡಿಸಿದರೂ ಹೀಗೆ ಹೆತ್ತ ಒಡಲುಗಳು ಆಕ್ರಂದಿಸುತ್ತಿರುವ ದೃಶ್ಯ ಎಂಥ ಕಲ್ಲೆದೆಯನ್ನೂ ಕರಗುವಂತೆ ಮಾಡಿತ್ತು.

ಭಾನುವಾರ ಜಿಲ್ಲೆಯ ಸುರಪುರ ತಾಲೂಕಿನ ನಗನೂರು ಗ್ರಾಮದಲ್ಲಿನ ಜಮೀನಿನ ಕೃಷಿ ಹೊಂಡದಲ್ಲಿ ಈಜಲೂ ಹೋಗಿದ್ದ ನಾಲ್ಕು ಕಂದಮ್ಮಗಳು ನೀರನ್ನು ಮುಳುಗಿ ಧಾರುಣ ಅಂತ್ಯ ಕಂಡಿವೆ.

ಒಂದೇ ಕುಟುಂಬದ ಕಿರಣ (6), ಬಸಮ್ಮ (11), ಶರತ್ (6), ಹನುಮೇಶ್ (7) ಈಜಾಡಿ ಬರುತ್ತೇವೆ ಎಂದು ಹೇಳಿ ಹೋದವರು ಎಂದೂ ಬಾರದ ಲೋಕಕ್ಕೆ ಪಯಣ ಬೆಳೆಸಿವೆ. ಬೇಸಿಗೆ ರಜೆ ಇದ್ದ ಕಾರಣ ಗ್ರಾಮದ ಸಮೀಪದಲ್ಲಿನ ಕೃಷಿ ಹೊಂಡದಲ್ಲಿ ಈಜಾಡಲು ಹೋಗಿದ್ದಾರೆ. ಒಳಗಡೆ ಧುಮಕಿ ಹೊಡೆಯುತ್ತಿದ್ದಂತೆ ಆಳ ತಲುಪಿ ಮೇಲೆ ಏಳಲು ಆಗದೆ ನೀರಲ್ಲೇ ಉಸಿರುಗಟ್ಟಿವೆ. ಹೊಂಡದ ಮೇಲೆ ಒಬ್ಬ ಬಾಲಕ ಇದನ್ನು ನೋಡಿ ಜೋರಾಗಿ ಕಿರುಚಿಕೊಂಡಿದ್ದಾನೆ.

ತಕ್ಷಣ ಸುತ್ತಮುತ್ತಲಿನ ಜನ ಹೊಂಡದತ್ತ ಧಾವಿಸಿ ಬಂದಿದ್ದಾರೆ. ಹೊಂಡಕ್ಕೆ ಬಿದ್ದು ಮಕ್ಕಳನ್ನು ರಕ್ಷಣೆ ಮಾಡಬೇಕುನ್ನುವಷ್ಟರೊಳಗೆ ಪ್ರಾಣಪಕ್ಷಿ ಹಾರಿದೆ. ಹೊಂಡದೊಳಗೆ ಹೊಂಚು ಹಾಕಿ ಕುಳಿತಿದ್ದ ಜವರಾಯ ಭಾನುವಾರ ಇನ್ನೂ ಪ್ರಪಂಚವೇ ಅರಿಯದ ಮುದ್ದು ಮಕ್ಕಳ ಪ್ರಾಣ ಕಸಿದುಕೊಂಡಿದ್ದು ದುರಂತವೇ ಸರಿ.

ಮಕ್ಕಳನ್ನು ಕಳೆದುಕೊಂಡ ತಾಯಂದಿರ ಆಕ್ರಂದನ ಮುಗಿಲು ಮುಟ್ಟಿತ್ತು. ಇಡೀ ನಗನೂರ ಗ್ರಾಮದಲ್ಲಿ ಸ್ಮಶಾನ ಮೌನ ಆವರಿಸಿದ್ದು, ಹೆತ್ತೊಡಲಿನ ಸಂಕಟ ಯಾರೂ ಸಹ ಸಮಾಧಾನ ಹೇಳುವ ಸ್ಥಿತಿಯಲ್ಲಿರಲಿಲ್ಲ. ಅತ್ತ ಮಕ್ಕಳ ಶವಗಳನ್ನು ಕಂಡ ಗ್ರಾಮಸ್ಥರ ಕಣ್ಣಾಲೆಗಳು ಹಸಿಯಾಗಿದ್ದವು. ಪಂಚನಾಮೆಗೆ ಬಂದಿದ್ದ ಪೊಲೀಸರು ಮತ್ತು ಅಧಿಕಾರಿಗಳು ಸಹ ಈ ಅಕಾಲಿಕ ಸಾವಿಗೆ ಕಣ್ಣೀರಿಟ್ಟರು.



> ಬೇಸಿಗೆ ವೇಳೆ ಮಕ್ಕಳ ಸುರಕ್ಷತೆಗೆ ಪಾಲಕರು ಜಾಗೃತಿ ವಹಿಸಬೇಕು. ನದಿ, ಹಳ್ಳ, ಬಾವಿ ಹೀಗೆ ಈಜಲು ತೆರಳಿದಾಗ ಸುರಕ್ಷತಾ ಕ್ರಮ ಅನುಸರಿಸುವುದು ಅತ್ಯವಶ್ಯವಾಗಿದೆ.
> ■ **ಪೃಥ್ವಿಕ್ ಶಂಕರ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

40ನೇ ಪತ್ರಕರ್ತರ ರಾಜ್ಯ ಸಮ್ಮೇಳನ

ಅರ್ಥಪೂರ್ಣ ಸಮ್ಮೇಳನಕ್ಕೆ ಕೈಜೋಡಿಸಿ: ತಗಡೂರು

◆ **ಬೀದರ್:** ಐತಿಹಾಸಿಕ ಹಾಗೂ ಅರ್ಥಪೂರ್ಣ ಸಮ್ಮೇಳನದ ಯಶಸ್ಸಿಗೆ ಸರ್ವರೂ ಕೈ ಜೋಡಿಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮನವಿ ಮಾಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನದ ವಿವಿಧ ಸಮಿತಿಗಳ ಪೂರ್ವ ತಯಾರಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಮ್ಮೆಲ್ಲರ ಕೋರಿಕೆ ಮೇರೆಗೆ ನಾವು ರಾಯಚೂರು ಬಿಟ್ಟು ಇಲ್ಲಿ ಸಮ್ಮೇಳನ ಮಾಡಲಿಕ್ಕೆ ಅನುಮತಿ ನೀಡಿದ್ದೇವೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರು, ವಿಧಾನಸಭೆ, ವಿಧಾನ ಪರಿಷತ್ ಸಭಾಪತಿ ಸೇರಿದಂತೆ ರಾಜ್ಯಮಟ್ಟದ ಎಲ್ಲ ಪತ್ರಿಕೆಗಳ ಸಂಪಾದಕರನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಗಿದೆ ಎಂದರು.

ಸಮ್ಮೇಳನ ಸಂದರ್ಭದಲ್ಲಿ ಜರುಗಲಿರುವ ರಾಜ್ಯ ಸಾಮಾನ್ಯ ಸಭೆ ಸಂದರ್ಭದಲ್ಲಿ ತಮ್ಮೆಲ್ಲರ ಕೋರಿಕೆಯಂತೆ ತಾವು ಕಳುಹಿಸುವ ಪದಾಧಿಕಾರಿಗಳ ಪಟ್ಟಿಗೆ ಅನುಮೋದನೆ ನೀಡಲಾಗುವುದು. ಇತ್ತೀಚೆಗೆ ಹೊಸ ಜಾಹಿರಾತು ನೀತಿಯಿಂದ ಪತ್ರಿಕೆಗಳ ಸಂಪಾದಕರಿಗೆ ಆಗುತ್ತಿರುವ ತೊಂದರೆ ಬಗೆಹರಿಸಲು ಮುಖ್ಯಮಂತ್ರಿಗಳಿಗೆ ಈಗಾಗಲೇ ಮನವಿ ಸಲ್ಲಿಸಲಾಗಿದ್ದು, ಸಮ್ಮೇಳನ ಸಂದರ್ಭದಲ್ಲೂ ಸಿಎಂಗೆ ಈ ಕುರಿತು ಬಹಿರಂಗವಾಗಿ ಮನವಿ ಮಾಡುವುದಾಗಿ ಭರವಸೆ ನೀಡಿದರು.

ಹಿರಿಯರು ಹಾಗೂ ಮಾಜಿ ಜಿಲ್ಲಾಧ್ಯಕ್ಷರ ಸಲಹಾ ಸಮಿತಿ, ಪ್ರವಾಸ, ಆಹಾರ, ಮೆರವಣಿಗೆ, ವಸ್ತು ಪ್ರದರ್ಶನ ಮಾರಾಟ ಮಳಿಗೆ, ಪ್ರತಿನಿಧಿಗಳ ನೋಂದಣಿ ಹಾಗೂ ಕಿಟ್ ವಿತರಣಾ ಸಮಿತಿಗಳ ತಯಾರಿ ಕುರಿತು ಪೂರ್ವ ಸಿದ್ಧತಾ ಸಭೆ ಜರುಗಿತು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಸಂಘದ ಮಾಜಿ ಜಿಲ್ಲಾಧ್ಯಕ್ಷ ಬಾಬುವಾಲಿ, ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ, ಸಂಘದ ಮಾಜಿ ರಾಜ್ಯ ಉಪಾಧ್ಯಕ್ಷ ಭವಾನಿಸಿಂಗ್ ಠಾಕೂರ್, ಮಾಜಿ ಜಿಲ್ಲಾಧ್ಯಕ್ಷರಾದ ಬಸವರಾಜ ಕಾಮಶೆಟ್ಟಿ, ಮಾಳಪ್ಪ ಅಡಸಾರೆ, ಸಿದ್ರಾಮಯ್ಯ ಸ್ವಾಮಿ, ಅಶೋಕಕುಮಾರ ಕರಂಜಿ, ಡಿ.ಕೆ ಗಣಪತಿ, ಪತ್ರಕರ್ತರಾದ ಅಪ್ಪಾರಾವ ಸೌದಿ, ಡಾ.ರಜನೀಶ ವಾಲಿ, ಶಶಿ ಪಾಟೀಲ, ಪೃಥ್ವಿರಾಜ, ಶಶಿ ಶೆಂಬೆಳ್ಳಿ, ಶಶಿ ಬಂಬುಳಗಿ, ವಿಜಯಕುಮಾರ ಬೆಳ್ದೆ, ದೀಪಕ ಮನ್ನಳ್ಳಿ, ಗೋಪಿಚಂದ್ ತಾಂದಳೆ, ಮಾರೂತಿ ಬಾವಿದೊಡ್ಡಿ, ಶ್ರೀಕಾಂತ ಬಿರಾದಾರ, ನಂದಕುಮಾರ ಕರಂಜೆ, ವಿಜಯಕುಮಾರ ಅಷ್ಟೂರೆ, ಅಜಯ ಭೋಸ್ಲೆ, ಬಸವರಾಜ ಪವಾರ ಸೇರಿದಂತೆ ವಿವಿಧ ಸಮಿತಿಗಳ ನೂರಕ್ಕೂ ಅಧಿಕ ಸದಸ್ಯರು ಇದ್ದರು. ಶಿವಕುಮಾರ ಸ್ವಾಮಿ ಸ್ವಾಗತಿಸಿ, ನಿರೂಪಿಸಿದರು.



ನಕಲಿ ಬಂಗಾರ ನೀಡಿ 10 ಲಕ್ಷ ರೂ. ವಂಚಿಸಿದ್ದ ಆರೋಪಿ ಬಂಧನ

◆ **ಸಿದ್ದಾಪುರ:** ಬೆಳಗಾವಿ ಜಿಲ್ಲೆಯ ಮೂಡಲಗಿಯ ಕುರಿ ವ್ಯಾಪಾರ ಹಾಗೂ ಮಟನ್ ಅಂಗಡಿಯ ಆಕಾಶ ಅಬುಬಕ್ಕರ್ ಕಲಾಲ್(24) ಎಂಬ ವ್ಯಕ್ತಿಗೆ ಅಸಲಿ ಬಂಗಾರವೆಂದು ನಂಬಿಸಿ ನಕಲಿ ಬಂಗಾರದ ನಾಣ್ಯಗಳನ್ನು ನೀಡಿ ಲಕ್ಷಾಂತರ ರೂಪಾಯಿ ದೋಚಿದ್ದ ಅಂತರ ಜಿಲ್ಲಾ ವಂಚಕನನ್ನು ಸಿದ್ದಾಪುರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ. ಬಂಧಿತನಿಂದ 10 ಲಕ್ಷ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ವಾಹನ ವಶಪಡಿಸಿಕೊಳ್ಳಲಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಮುದ್ದೇಶನಹಳ್ಳಿಯ ನಿವಾಸಿಯಾದ 34 ವರ್ಷದ ಗಜೇಂದ್ರ ಹಾಲೇಶಪ್ಪ ಕೊರಚರ ಎಂಬಾತನೇ ಬಂಧಿತ ಆರೋಪಿ. ಈತ ಫಿರ್ಯಾದಿದಾರರಿಗೆ ಸುಮಾರು ಒಂದು ಕೆ.ಜಿ.ತೂಕದ ಅಸಲಿ ಬಂಗಾರದ ನಾಣ್ಯಗಳನ್ನು ನೀಡುವುದಾಗಿ ನಂಬಿಸಿ, ಅವರಿಂದ 10 ಲಕ್ಷ ರೂ.ಗಳನ್ನು ಪಡೆದುಕೊಂಡು ನಕಲಿ ಬಂಗಾರದ ಬಿಲ್ಲೆಗಳನ್ನು ನೀಡಿ ವಂಚಿಸಿದ್ದನು. ಈ ಕುರಿತು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ 23-2-2026 ರಂದು ಪ್ರಕರಣ ದಾಖಲಾಗಿತ್ತು.

ಈ ಘಟನೆ ಕುರಿತಂತೆ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಅಧೀಕ್ಷಕ ದೀಪನ್ ಎಂ.ಎನ್. ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ ಅವರ ಮಾರ್ಗದರ್ಶನದಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿತ್ತು.



ಈ ತಂಡವು ಬನವಾಸಿ, ಆನವಟ್ಟಿ, ಶಿಕಾರಿಪುರ ಮತ್ತು ಶಿರಾಳಕೊಪ್ಪದಂತಹ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ, ಖಚಿತ ಬಾತ್ಮಿ ಹಾಗೂ ಮೊಬೈಲ್ ಟವರ್ ಡಂಪ್ ತಾಂತ್ರಿಕ ಮಾಹಿತಿಯ ಸಹಾಯದಿಂದ ಆರೋಪಿಯನ್ನು ಪತ್ತೆ ಹಚ್ಚಿದೆ. ಬಂಧಿತನಿಂದ ವಂಚಿಸಿದ ಸಂಪೂರ್ಣ 10 ಲಕ್ಷ ರೂ. ನಗದು ಮಾತ್ರವಲ್ಲದೆ, ಕೃತ್ಯಕ್ಕೆ ಬಳಸಿದ್ದ ಬಜಾಜ್ ಡಿಸ್ಕವರಿ ಮೋಟಾರ್ ಸೈಕಲ್ ಮತ್ತು ಒಂದು ಮೊಬೈಲ್ ಸೆಟ್ ಅನ್ನು ಜಪ್ತಿ ಮಾಡಲಾಗಿದೆ. ಕಾರ್ಯಾಚರಣೆಯಲ್ಲಿ ಶಿರಸಿ ಉಪವಿಭಾಗದ ಡಿವೈಎಸ್ಪಿ ಗೀತಾ ಪಾಟೀಲ್ ಅವರ ನೇತೃತ್ವದಲ್ಲಿ ಸಿದ್ದಾಪುರ ಸಿಪಿಐ ಜೆ.ಬಿ.ಸೀತಾರಾಮ, ಪಿಎಸ್ಐ ಶಾಂತಿನಾಥ ಕೆ. ಪಾಸಾನೆ ಹಾಗೂ ಸಿಬ್ಬಂದಿಗಳಾದ ರಮೇಶ ಕೂಡಲ, ಚೇತನಕುಮಾರ್, ಸಂತೋಷ ತಳವಾರ, ಮೋಹನ ಗಾವಡಿ, ಮಣಿಕಂಠ, ಪ್ರಶಾಂತ, ರೋಹಿತ ಮತ್ತು ಗಿರೀಶ ಪಾಲ್ಗೊಂಡಿದ್ದರು.

8,000 ಕಿಮೀ. ಓಟದ ಗುರಿ

◆ **ರಾಯಬಾಗ:** ರಾಜಸ್ಥಾನದ ಸಾಹಸಿ ಯುವಕ ಸುನೀಲ ರೇಸರ್ ಕಾಶ್ಮೀರದಿಂದ ಕನ್ಯಾಕುಮಾರಿಗೆ ಮತ್ತು ಕನ್ಯಾಕುಮಾರಿಯಿಂದ ಸಾಂಗ್ಲಿಯಾ ಧುನಿ ರಾಜಸ್ಥಾನ ಸುಮಾರು ಎಂಟು ಸಾವಿರ ಕಿಲೋಮೀಟರ್ ಪ್ರಯಾಣವನ್ನು ಓಟದ ಮೂಲಕ ಪೂರ್ಣಗೊಳಿಸುವ ಗುರಿ ಹೊಂದಿದ್ದಾರೆ.

ಅವರು ಡಿಸೆಂಬರ್ 21, 2025ರಿಂದ ತಮ್ಮ ಪ್ರಯಾಣ ಪ್ರಾರಂಭಿಸಿದ್ದು, ಈಗಾಗಲೇ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ 5075 ಕಿಲೋಮೀಟರ್ ದೂರವನ್ನು ಓಟದ ಮೂಲಕ ಪೂರ್ಣಗೊಳಿಸಿದ್ದಾರೆ. ಪ್ರಸ್ತುತ ಬೆಂಗಳೂರು, ದಾವಣಗೆರೆ,ಹುಬ್ಬಳ್ಳಿ,ಧಾರವಾಡ,ಬೆಳಗಾವಿ, ನಿಪ್ಪಾಣಿ, ಕೊಲ್ಹಾಪುರ ಮಾರ್ಗ ಮೂಲಕ ರಾಜಸ್ಥಾನಕ್ಕೆ ತೆರಳುತ್ತಿರುವಾಗ ನಿಪ್ಪಾಣಿಯಲ್ಲಿ ಅವರನ್ನು ಅಪಾರ ಸಂಖ್ಯೆಯ ನಾಗರಿಕರು ಸ್ವಾಗತಿಸಿದರು. ಈಗಾಗಲೇ ಸುನಿಲ್ ಅವರ ಹೆಸರು ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಮತ್ತು ವರ್ಲ್ಡ್ ವೈಡ್ ವೆಬ್‌ನಲ್ಲಿಯೂ ದಾಖಲಾಗಿದೆ. ಬಾಲ್ಯದಿಂದಲೂ ಕ್ರೀಡೆಗಳ ಬಗ್ಗೆ ಒಲವು ಹೊಂದಿದ್ದ ಸುನೀಲ್, ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ವಿವಿಧ ದಾಖಲೆಗಳನ್ನು ಮುರಿಯಲು ಪ್ರಯತ್ನಿಸಿದ್ದಾರೆ. ಬಾವನಸೌಂದತ್ತಿ ಗ್ರಾಮದ ಆದರ್ಶ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಈರಗೌಡ ಪಾಟೀಲ್ ಪ್ರಯಾಣಕ್ಕೆ ಶುಭ ಹಾರೈಸಿದರು. ಮಹಾದೇವ ಮಂಗಸೂಳೆ, ಅಣ್ಣಾಸಾಬ ಮಗದುಮ, ಅರಿಹಂತ ಮಗದುಮ, ಎಸ್.ಪಿ. ಪಾಟೀಲ, ಉತ್ತಮ ಕಾಮಗೌಡ, ಮಾಧ್ಯಮ ಪ್ರತಿನಿಧಿ ಸಂತೋಷ ಗಿರಿ ಸೇರಿದಂತೆ ರಾಜಸ್ಥಾನ ರಾಜ್ಯದ ಯುವಕರು ಉಪಸ್ಥಿತರಿದ್ದರು.



ಸಂಪಾದಕೀಯ

ಕಳ್ಳರ ಮೊರೆಹೋದ ಇರಾನ್!

ಹೌತಿ ಭಯೋತ್ಪಾದಕರು ಅಧಿಕೃತವಾಗಿ ಮಧ್ಯಪ್ರಾಚ್ಯ ಯುದ್ಧದಲ್ಲಿ ಇರಾನಿಗೆ ಬೆಂಬಲ ನೀಡುವುದರೊಂದಿಗೆ ಅನೇಕರ ಯುದ್ಧ ವಿಶ್ಲೇಷಣೆಗಳಿಗೆ ಅಸಲಿ ಉತ್ತರ ನೀಡಿದೆ. ಏಕೆಂದರೆ ಆರಂಭದಲ್ಲಿ ಅಮೆರಿಕಾದ ತೈಲದಾಸೆ, ಎಕನಾಮಿಕ್ ಹಿಟ್ಮನ್ ಗುಣ, ಇಸ್ರೇಲಿನ ಆಕ್ರಮಣಕಾರಿ ಸ್ವಭಾವ ಮುಂತಾದ ಕಾರಣಗಳನ್ನು ಕೊಡುತ್ತಿದ್ದವರಿಗೆ ಇದೀಗ ಹೌತಿ ಇರಾನಿಗೆ ಬೆಂಬಲ ನೀಡುವುದರೊಂದಿಗೆ, ಈ ಯುದ್ಧವು ಜಿಹಾದ್ ಆಗಿ ಬದಲಾಗಿದೆ ಎಂದು ಜಗತ್ತು ಒಪ್ಪಿಕೊಳ್ಳಲೇಬೇಕಾಗಿದೆ.

ಜಗತ್ತಿನ ಅತ್ಯಂತ ಅಪಾಯಕಾರಿ ಭಯೋತ್ಪಾದಕ ಗುಂಪುಗಳಲ್ಲಿ ಯೆಮನ್‌ನ ಹೌತಿ ಒಂದು. ಇಡೀ ಜಗತ್ತು ಮತದ ಆಧಾರದಲ್ಲಿ ಆಡಳಿತಕ್ಕೊಳಪಡಬೇಕೆಂದು ನಂಬುವ ಕಟ್ಟರ್‌ಪಂಥೀಯ ಹೌತಿಗಳು ಶಸ್ತ್ರಾಸ್ತ್ರ ಹೋರಾಟವೊಂದೇ ಅದಕ್ಕೆ ಮಾರ್ಗ ಎನ್ನುತ್ತದೆ. ಅದಕ್ಕಾಗಿ ಅವರು ಮುಸ್ಲಿಮರನ್ನು ಹತ್ಯೆಗೈಯಲೂ ಹೇಸುವುದಿಲ್ಲ. ಯೆಮನ್ ಆಡಳಿತದ ವಿರುದ್ಧ ಹುಟ್ಟಿಕೊಂಡ ಈ ಸಂಘಟನೆಯನ್ನು ಆರಂಭದಿಂದಲೂ ಇರಾನ್ ಪೋಷಿಸಿತು. ಸ್ವತಃ ಇರಾನ್ ಅದನ್ನು ಆರಂಭಿಸಿತು ಎಂದು ಕೂಡ ಹೇಳಲಾಗುತ್ತದೆ. ಜೊತೆಗೆ ಮತ, ರಾಜತಾಂತ್ರಿಕತೆ, ಮಾನಸಿಕತೆಯಲ್ಲಿ ಅದು ಇರಾನಿನ ಪಡಿಯಚ್ಚು. ಹಿಂದೆ ಗಾಜಾ ಯುದ್ಧದಲ್ಲಿ ಹೌತಿಗಳು ಪೂರ್ಣ ಶಕ್ತಿಯನ್ನು ಹಾಕಿದ್ದರು. ಇಸ್ರೇಲಿಯರಿಂದ ಪೆಟ್ಟುತಿಂದರೂ ಇದೀಗ ಚೇತರಿಸಿಕೊಂಡಂತೆ ಮತ್ತೆ ಯುದ್ಧರಂಗಕ್ಕಿಳಿದಿದೆ. ಒಂದೆಡೆ ಮಹಾನ್ ರಾಜತಾಂತ್ರಿಕ ಮುಖವಾಡವನ್ನು ಹೊದ್ದು ಯುದ್ಧದಲ್ಲಿ ಜಿದ್ದಿನಿಂದ ಹೋರಾಟ ನಡೆಸುತ್ತಿರುವ ಇರಾನ್, ಇನ್ನೊಂದೆಡೆ ಅಂಥ ಇರಾನಿಗೆ ನೇರ ಬೆಂಬಲ ನೀಡುವ ತರಬೇತಿಯಿಲ್ಲದ, ಕೌಶಲ್ಯರಹಿತ ಜಿಹಾದಿಗಳು ಈ ಯುದ್ಧದ ಸ್ವರೂಪವನ್ನು ಮಾತ್ರವಲ್ಲ, ವ್ಯಾಖ್ಯಾನವನ್ನೂ ಬದಲಿಸಲಿದೆ. ಯೆಮನ್‌ಗಾಗಲೀ, ಹೌತಿಗಳಿಗಾಗಲೀ ಇಸ್ರೇಲ್ ಎಂದಿಗೂ ಕಂಟಕವಾಗಿರಲಿಲ್ಲ. ಇಸ್ರೇಲಿಗೆ ತಲೆಕೆಡಿಸಿಕೊಳ್ಳಲು ನೂರಾರು ಸಂಗತಿಗಳಿವೆ. ಆದರೆ ಹೌತಿಗಳು ಇಸ್ರೇಲಿನ ವಿರುದ್ಧ ಸದಾ ಕಾಲುಕೆರೆದು ಜಗಳಕ್ಕೆ ನಿಲ್ಲುತ್ತದೆ. ಅಮೆರಿಕದ ವಿರುದ್ಧ ಕೂಡ ಹೌತಿಗಳು ಹಿಂದಿನಿಂದಲೂ ಕೆಂಡಕಾರುತ್ತಲೇ ಬಂದಿದೆ. ಹಿಂದಿನಿಂದಲೂ ಹೌತಿಗಳದ್ದು 'ಡೆತ್ ಟು ಅಮೇರಿಕಾ, ಡೆತ್ ಟು ಇಸ್ರೇಲ್' ಎಂಬ ಘೋಷಣೆಯನ್ನು ಧ್ಯೇಯವಾಕ್ಯದಂತೆ ಪಾಲಿಸಿಕೊಂಡು ಬಂದಿರುವುದರಲ್ಲೇ ಅದರ ಮಾನಸಿಕತೆ ಎದ್ದು ಕಾಣುತ್ತದೆ. ಹೀಗೆ ಹೇಳಿಕೊಳ್ಳುವ ಹೌತಿಗಳು ಕೆಂಪು ಸಮುದ್ರದಲ್ಲಿ ಸಾಗುವ ವ್ಯಾಪಾರಿ ಹಡಗುಗಳ ಮೇಲೆ ದಾಳಿ ಮಾಡಿ ಸಂಪತ್ತನ್ನು ಸಂಗ್ರಹಿಸುತ್ತಿತ್ತು ಎಂದರೆ ಇವರನ್ನು ಕಡಲ್ಗಳ್ಳರೆನ್ನದೆ ಇನ್ನೇನನ್ನಬೇಕು? ಇಂಥವರು ಇಂದು ಇರಾನಿನ ಪರ ನಿಂತಿದ್ದಾರೆ. ಇರಾನಿಗೂ ಈಗ ಇಂಥವರ ಸಹವಾಸ ಬೇಕಿದೆ. ನೇರ ಯುದ್ಧದಲ್ಲಿ ಬಲಾಢ್ಯ ಪಡೆಗಳನ್ನು ಎದುರಿಸಲಾಗದ ಇರಾನ್ ಕಳ್ಳರ ಮೊರೆಹೋಗಿದೆ.

ಪ್ರಸಕ್ತ ಯುದ್ಧದಲ್ಲಿ ಭಾರತ ಯಾರ ಪರ ಎನ್ನುವುದನ್ನು ಸ್ಪಷ್ಟಪಡಿಸಬೇಕೆನ್ನುವುದು ಹುಚ್ಚುತನದ ಪ್ರಶ್ನೆ. ಎಲ್ಲೋ ನಡೆಯುವ ಯುದ್ಧದಲ್ಲಿ, ಅದರ ಪರಿಣಾಮಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಮಾತ್ರ ಈಗ ತಟಸ್ಥ ದೇಶಗಳ ಮುಖ್ಯ ಉದ್ದೇಶವೇ ಹೊರತು, ಇತ್ತಂಡಗಳಲ್ಲಿ ಒಂದು ಬಣ ಸೇರಿ ಅದನ್ನು ವಿಶ್ವಯುದ್ಧದ ಮಟ್ಟಿಗೆ ಬೆಳೆಸುವುದಲ್ಲ. ಆದರೆ ಹೌತಿಗಳ ಸೇರ್ಪಡೆ ಯುದ್ಧವನ್ನು ರಾಕ್ಷಸಿತನಕ್ಕೆ ಕೊಂಡೊಯ್ಯುತ್ತದೆ ಎಂಬುದು ಸತ್ಯ.

ಕೊಲಬಾದಲ್ಲಿ ಅಕ್ಷರಕ್ರಾಂತಿ ಮಾಡಿದ ರೂಬಲ್ ನಾಗಿ

ಕೊಳೆಗೇರಿಯ ಮಕ್ಕಳಿಗೆ ಶಿಕ್ಷಣದ ಹಾದಿ ತೋರಿದ ರೂಬಲ್ ನಾಗಿಯ ಸಾಧನೆ ಆದರ್ಶನೀಯ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಅದು ಮುಂಬೈ ಮಹಾನಗರಿಯ ಕೊಲಬಾ ಕೊಳೆಗೇರಿಯಲ್ಲಿ ಸದ್ದಿಲ್ಲದೆ ನಡೆದ ಶಿಕ್ಷಣ ಕ್ರಾಂತಿ. 30 ವರ್ಷಗಳ ಹಿಂದೆ ಆ ಕೊಳೆಗೇರಿಯ ಮುರುಕು ಗುಡಿಸಲುಗಳಲ್ಲಿ ಹರಿದ ಬಟ್ಟೆ ತೊಟ್ಟು, ಎಣ್ಣೆಕಾಣದ ಕೆದರಿದ ತಲೆಗೂದಲು ಹರಡಿಕೊಂಡ ಮಕ್ಕಳಿಗೆ ಶಿಕ್ಷಣವೆಂಬುದು ಮರೀಚಿಕೆಯಾಗಿತ್ತು. ಪೋಷಕರೊಂದಿಗೆ ಮಕ್ಕಳೂ ಹೊಟ್ಟೆಪಾಡಿಗಾಗಿ ದುಡಿಯಲೇಬೇಕಿದ್ದ ಅನಿವಾರ್ಯತೆ, ಅಂತಹ ಕೆಟ್ಟ ಬಡತನ.

ಆದರೆ ಅಲ್ಲೊಂದು ಸದ್ದಿಲ್ಲದ ಶಿಕ್ಷಣ ಕ್ರಾಂತಿಯೇ ನಡೆದುಹೋಯಿತು. ಕೊಳೆಗೇರಿಯ ಮುರುಕು ಗುಡಿಸಲ ಗೋಡೆಗಳ ಮೇಲೆ ಬಣ್ಣದ ಚಿತ್ತಾರಗಳು ಕಂಗೊಳಿಸಿದವು. ಬಣ್ಣ ಬಳಿದ ಆ ಒಡಕಲು ಗೋಡೆಗಳ ಮೇಲೆ ಬರೆಯಲಾದ ವಿಜ್ಞಾನ, ಗಣಿತ, ಚರಿತ್ರೆ, ಭಾಷೆಯ ಪಾಠಗಳು, ವಿಜ್ಞಾನದ ಚಿತ್ರಗಳು ಅಲ್ಲಿನ ಶಿಕ್ಷಣ ವಂಚಿತ ಬಡಮಕ್ಕಳನ್ನು ಆಕರ್ಷಿಸಿದವು. ಸಣ್ಣ ಪುಟ್ಟ ಕೆಲಸಕ್ಕೆ ಹೋಗುತ್ತಿದ್ದ ಮಕ್ಕಳು ಆ ಗೋಡೆಗಳ ಕೆಳಗೇ ಕುಳಿತು ಶಿಕ್ಷಣದ ಓನಾಮ ಕಲಿಯತೊಡಗಿದರು. ಶಿಕ್ಷಣ ಕೇಂದ್ರ ಎಂಬ ನಿಶ್ಚಿತ ಸ್ಥಾನವೇ ಅಲ್ಲಿರಲಿಲ್ಲ. ಕೆಲವೆಡೆ ಆ ಕೊಳೆಗೇರಿಯ ಮನೆಗಳೇ ಶಾಲೆಗಳಾಗಿ ಬದಲಾಗುತ್ತಿತ್ತು. ಕ್ರಮೇಣ ಇಡೀ ಕೊಳೆಗೇರಿಯನ್ನು ಸ್ವಚ್ಛವಾಗಿಡುವ, ಕೊಳೆಕಸ ಗಲೀಜು ಇರದಂತೆ ನೋಡಿಕೊಳ್ಳುವ ಹೊಣೆಯನ್ನು ಇದೇ ಬಡಮಕ್ಕಳು ಖುಷಿಯಿಂದ ನಿರ್ವಹಿಸಿದರು. ಮಕ್ಕಳ ಈ ಶಿಕ್ಷಣ ಕೈಂಕರ್ಯಕ್ಕೆ ಪೋಷಕರೂ ಕ್ರಮೇಣ ಕೈಜೋಡಿಸಿದರು.

ಕೊಳೆಗೇರಿಯ ಆ ಮಕ್ಕಳ ಮನದಲ್ಲಿ ಶಿಕ್ಷಣ ಕಲಿಕೆಯ ಕನಸು ಬಿತ್ತಿ ಆಕರ್ಷಿಸಿ ಪ್ರೇರಣೆ ನೀಡಿದ್ದು ರೂಬಲ್ ನಾಗಿ ಆರ್ಟ್ ಫೌಂಡೇಶನ್ (ಆರ್ ಎನ್‌ಎಫ್) ಎಂಬ ಒಂದು ಸರ್ಕಾರೇತರ ಖಾಸಗಿ ಸಂಸ್ಥೆ. ವಾಸ್ತವವಾಗಿ ಅದೊಂದು ಕಲೆಗೆ ಸಂಬಂಧಿಸಿದ ಸಂಸ್ಥೆಯಾಗಿದ್ದರೂ ಕೊಳೆಗೇರಿ ಶಿಕ್ಷಣ ವಂಚಿತ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದ ಪರಿಣಾಮವೇ ಶಿಕ್ಷಣ ವಂಚಿತರು ಅಕ್ಷರವಂತರಾದರು. ಅನೇಕರು ವಿದ್ಯಾವಂತರಾದರು. ಶಿಕ್ಷಣವಂಚಿತ ಬಡಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕನಸು ಕಂಡು, ಅದನ್ನು ನನಸು ಮಾಡಿದವರು 45ರ ಹರೆಯದ ಜಮ್ಮು-ಕಾಶ್ಮೀರ ಮೂಲದ ರೂಬಲ್ ನಾಗಿ ಎಂಬ ಕಲಾವಿದೆ ಹಾಗೂ ಶಿಕ್ಷಣಪ್ರೇಮಿ.

ರೂಬಲ್ ನಾಗಿ ಹುಟ್ಟಿದ್ದು ಕಾಶ್ಮೀರ ಕಣಿವೆಯ ಒಂದು ಪುಟ್ಟ ಗ್ರಾಮದಲ್ಲಿ. ಆಕೆಯ ತಂದೆ ಕರ್ನಲ್ ಗ್ಯಾನ್‌ಸಿಂಗ್ ಸೂಡಾನ್, ತಾಯಿ ರಸ್ ವಿಂದರ್ ಕೌರ್. ಕರ್ನಲ್ ಗ್ಯಾನ್‌ಸಿಂಗ್ ಭಾರತೀಯ ಸೇನಾಪಡೆಯಲ್ಲಿ ಅಧಿಕಾರಿಯಾಗಿದ್ದರಿಂದ ಆಗಾಗ ವರ್ಗಾವಣೆ, ಹಾಗಾಗಿ ಬೇರೆ ಬೇರೆ ಸ್ಥಳಗಳಿಗೆ ಅಲೆದಾಟ. ಪುಟ್ಟ ಬಾಲಕಿಯಾಗಿದ್ದ ರೂಬೆಲ್‌ಗೆ ಹೀಗಾಗಿ ಇಡೀ ಭಾರತದ ವಿವಿಧೆಡೆಯ ಜನಜೀವನ, ರೀತಿನೀತಿ, ಸಂಸ್ಕೃತಿ ಪರಂಪರೆಯನ್ನು ಹತ್ತಿರದಿಂದ ನೋಡುವ, ತಿಳಿಯುವ ಅವಕಾಶ ಅಯಾಚಿತವಾಗಿಯೇ ದೊರಕಿತ್ತು. ರಾಜಕೀಯ ವಿಜ್ಞಾನದಲ್ಲಿ ಪದವಿ ಮುಗಿಸಲಾಗದಿದ್ದರೂ ಲಂಡನ್‌ನ ಪ್ರತಿಷ್ಠಿತ ಸ್ಲೇಡ್ ಸ್ಕೂಲ್ ಆಫ್ ಫೈನ್ ಆರ್ಟ್ಸ್ ಮತ್ತು ಸೊತೆಬೀಸ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್‌ನಲ್ಲಿ ಯುರೋಪಿಯನ್ ಕಲೆಯನ್ನು ಅಧ್ಯಯನ ಮಾಡಿದರು. ಮುಂಬೈನಲ್ಲಿ ತನ್ನದೇ ಆದ ರೂಬಲ್ ನಾಗಿ ಆರ್ಟ್ ಫೌಂಡೇಶನ್ ಪ್ರಾರಂಭಿಸಿದರು. ಈ ಸಂಸ್ಥೆಗೆ ಒಂದು ದಿನ ಚಿತ್ರಕಲೆ ವೀಕ್ಷಿಸಲು ಕೊಳೆಗೇರಿಯ ಹುಡುಗಿಯೊಬ್ಬಳು ಬಂದಿದ್ದಳು. ಆ ಹುಡುಗಿಗೆ ಕಲೆ ಎಂದರೆ ಏನೆಂದೇ ತಿಳಿದಿರಲಿಲ್ಲ. ತನ್ನ ಬಟ್ಟೆ ಗಲೀಜಾಗಿರುವುದೇ ಕಲೆ ಎಂದು ಆಕೆ ಭಾವಿಸಿದ್ದಿರಬಹುದು. ಕುತೂಹಲದಿಂದ ಬಣ್ಣದ ಚಿತ್ತಾರಗಳನ್ನು ನೋಡಲು ಬಂದಿದ್ದಳಷ್ಟೆ.

ಆದರೆ ರೂಬಲ್‌ಗೆ ಆ ಹುಡುಗಿಯನ್ನು ನೋಡಿದ ಬಳಿಕ ಮನದಲ್ಲಿ ಹೊಳೆದ ವಿಚಾರಗಳೇ ಬೇರೆ. ತನ್ನ ಕಲಾ ಸಂಸ್ಥೆ ಇರುವುದು ಕೇವಲ ವಿವಿಧ ಕಲಾವಿದರ ಚಿತ್ರಪ್ರದರ್ಶನಕ್ಕೆ ಅಷ್ಟೇ ಆಗಬಾರದು. ಕೊಳೆಗೇರಿಯ ಶಿಕ್ಷಣ ವಂಚಿತ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಮೂಡಿಸಲು ಈ ಕಲೆ ಮಾಧ್ಯಮವಾಗಬೇಕು ಎಂದುಕೊಂಡರು. ಇಂತಹುದೊಂದು ವಿಚಾರದ ಹುಳು ತಲೆಯಲ್ಲಿ ಹೊಕ್ಕಿದ್ದೇ ತಡ ಮತ್ತೆ ರೂಬಲ್ ಮರುಯೋಚಿಸಲಿಲ್ಲ. ಮುಂಬೈಯ ಕೊಲಾಲಾ ಕೊಳೆಗೇರಿಯನ್ನೇ ತನ್ನ ಕನಸನ್ನು ನನಸಾಗಿಸುವ ಮೊದಲ ತಾಣವನ್ನಾಗಿ ಮಾಡಿಕೊಂಡರು.. ಅಲ್ಲಾದರೋ ಬಹುತೇಕ ನಿವಾಸಿಗಳು ಬಟ್ಟೆ ಒಗೆದು ಒಣಗಿಸಿ, ಇಸ್ತ್ರಿ ಹಾಕಿಕೊಡುವ ದೋಭಿ ವೃತ್ತಿಯ ಮಂದಿ. ಅವರ ಮಕ್ಕಳು, ಹೆಂಗಸರು ಇನ್ನಾರದೋ ಮನೆಕೆಲಸ ಮಾಡಿ ಹೊಟ್ಟೆ ಹೊರೆಯುತ್ತಿದ್ದರು. ರೂಬೆಲ್ ಮೊದಲು ಅಲ್ಲಿನ ಒಂದು ಲಕ್ಷಕ್ಕೂ ಹೆಚ್ಚು ಗುಡಿಸಲುಗಳ ಗೋಡೆಗಳಿಗೆ ಬಣ್ಣ ಹೊಡೆದು ವಿವಿಧ ಬಗೆಯ ಚಿತ್ರ ಚಿತ್ತಾರಗಳನ್ನು ರಚಿಸಿದರು. ಬಣ್ಣ ಬಣ್ಣದ ಚಿತ್ತಾರಗಳ ಗೋಡೆಗಳನ್ನು ನೋಡಿ ಕುತೂಹಲದಿಂದ ಅಲ್ಲಿಗೆ ಬಂದ ಮಕ್ಕಳಿಗೆ ಕ್ರಮೇಣ ಅಕ್ಷರ ಕಲಿಸಿ, ಜೊತೆಗೆ ಗಣಿತ, ವಿಜ್ಞಾನ, ಇತಿಹಾಸದ ಸರಳ ಪಾಠಗಳನ್ನೂ ಶಿಕ್ಷಕರ ಮೂಲಕ ಕಲಿಸುವ ವ್ಯವಸ್ಥೆ ಮಾಡಿದರು. ನೋಡನೋಡುತ್ತಾ ಕಲಿಯುವ ಆಸಕ್ತಿ ಹೊಂದಿ ಬರುವವರ ಸಂಖ್ಯೆ ಬೆಳೆಯತೊಡಗಿತು.



ಆದರೆ ಇದೇನೂ ಹೇಳಿದಷ್ಟು ಸುಲಭವಾಗಿರಲಿಲ್ಲ. ಬಡತನ ರೇಖೆಗಿಂತ ಕೆಳಗಿದ್ದ ಅಲ್ಲಿನ ನಿವಾಸಿಗಳಿಗೆ ಎರಡು ಹೊತ್ತಿನ ಹಸಿವು ನೀಗಿಸಿಕೊಳ್ಳುವುದೇ ದೊಡ್ಡ ಸಾಹಸವಾಗಿತ್ತು. ಇದನ್ನರಿತ ರೂಬೆಲ್ ತನ್ನ ಸಂಸ್ಥೆಯ ಮೂಲಕ ಎಲ್ಲ ಮನೆಗಳಿಗೆ ಅಗತ್ಯ ರೇಶನ್ ಪದಾರ್ಥಗಳನ್ನು ಪೂರೈಕೆ ಮಾಡಿ ಮೊದಲು ಹಸಿವೆಯ ಚಿಂತೆಯನ್ನು ದೂರಗೊಳಿಸಿದರು. ಹೊಟ್ಟೆ ತುಂಬಿದ ಬಳಿಕ ಅಕ್ಷರ ಕಲಿಕೆ, ವಿಜ್ಞಾನ, ಗಣಿತ, ಇತಿಹಾಸ, ನಾಡು-ನುಡಿಯ ಬಗ್ಗೆ ವಿದ್ಯಾಭ್ಯಾಸ.

ರೂಬಲ್ ನಾಗಿ ಆರ್ಟ್ ಫೌಂಡೇಶನ್ (ಆರ್‌ಎನ್‌ಎಫ್) ಇದೀಗ ದೇಶದಾದ್ಯಂತ 100ಕ್ಕೂ ಹೆಚ್ಚು ಶಿಕ್ಷಣ ವಂಚಿತ ಬಡ ಸಮುದಾಯಗಳು ವಾಸಿಸುವೆಡೆ 800ಕ್ಕೂ ಹೆಚ್ಚು ಕಲಿಕಾಕಾಂದ್ರ ಸ್ಥಾಪಿಸಿ ಅಕ್ಷರವಂಚಿತರನ್ನು ಸಾಕ್ಷರರಾಗಿರೂಪಿಸುವ ಅದ್ಭುತ ಕಾರ್ಯ ನಿರ್ವಹಿಸುತ್ತಿದೆ. ಆರ್‌ಎನ್‌ಎಫ್ ಕಲಿಕಾ ಕೇಂದ್ರಗಳೆಂದರೆ ಅಲ್ಲಿ ಬೆಂಚುಗಳಿಲ್ಲ. ಶಿಕ್ಷಕಿಗೆ ಕೂರಲು ಕುರ್ಚಿಯಿಲ್ಲ. ಅಲ್ಲಿಗೆ ಬರುವ ಮಕ್ಕಳಿಗೆ ಪೆನ್ಸಿಲ್ ಎಂದರೆ ಏನೆಂಬುದೇ ಗೊತ್ತಿಲ್ಲ. ಹರಕಲು ಚಾಪೆಗಳೇ ಮಕ್ಕಳಿಗೆ ಬೆಂಚು. ಆದರೆ ಅಲ್ಲಿ ಕಲಿಸಲಾಗುವ ಶಿಕ್ಷಣ ಮಾತ್ರ ಅತ್ಯಂತ ಸಮಗ್ರ, ಸಮೃದ್ಧ. ಸಾವಿರಾರು ಬಡಮಕ್ಕಳು ಸಾಕ್ಷರವಂತರಾಗಲು ರೂಬಲ್ ಸದ್ದಿಲ್ಲದೆ ಕೆಲಸ ಮಾಡಿದ್ದಾರೆ.

ರೂಬಲ್ ಅವರ ಈ ಸದ್ದಿಲ್ಲದ ಶಿಕ್ಷಣ ಕ್ರಾಂತಿ ಅದೆಷ್ಟು ಪ್ರಭಾವಿ ಹಾಗೂ ಪರಿಣಾಮಕಾರಿಯಾಗಿತ್ತೆಂದರೆ, ಶಿಕ್ಷಣ ವಂಚಿತ ಮಕ್ಕಳಲ್ಲಿ ಕಲಿಕೆಯ ಅಭಿರುಚಿ ಮೂಡಿಸಿದ ಮಹೋನ್ನತ ಕಾರ್ಯಕ್ಕಾಗಿ 2026ರ ಜಾಗತಿಕ ಶಿಕ್ಷಕ ಪ್ರಶಸ್ತಿ (Global Teacher Prize 2026) ಆಕೆಯನ್ನರಸಿಕೊಂಡು ಬಂದಿತ್ತು. ಅದೊಂದು ಶಿಕ್ಷಣ ರಂಗದ ನೊಬೆಲ್ ಪ್ರಶಸ್ತಿ ಎಂದೇ ಖ್ಯಾತವಾಗಿದೆ. ಆ ಪ್ರಶಸ್ತಿಗೆ ಭಾರತವೂ ಸೇರಿದಂತೆ 139 ದೇಶಗಳಿಂದ 5 ಸಹಸ್ರ ಅರ್ಜಿಗಳು ಬಂದಿದ್ದವು. ಆದರೆ ಕೊನೆಯ ಹಂತದಲ್ಲಿ ಆಯ್ಕೆಯಾಗಿದ್ದು ಆರ್‌ಎನ್ ಎಫ್ ಸಂಸ್ಥೆ. ಆ ಪ್ರಶಸ್ತಿಯ ನಗದು ಮೊತ್ತವೇ ಬರೋಬ್ಬರಿ ಒಂದು ದಶಲಕ್ಷ ಅಮೆರಿಕನ್ ಡಾಲರ್ (ಸುಮಾರು 9,48,64,200 ರೂ.ಗಳು) ದುಬೈಯಲ್ಲಿ ಕಳೆದ ಫೆ. 5ರಂದು ವರ್ಲ್ಡ್ ಗವರ್ನ್‌ಮೆಂಟ್ಸ್ ಸಮ್ಮಿಟ್ ನಡೆದಿದ್ದಾಗ ದುಬೈಯ ಯುವರಾಜಕುಮಾರ ಶೇಖ್ ಹಮ್ದನ್ ಬಿನ್ ಮಹಮ್ಮದ್ ಬಿನ್ ರಶೀದ್ ಅಲ್ ಮುಕ್ತುಮ್ ಈ ಪ್ರಶಸ್ತಿ ವಿಜೇತೆ ರೂಬಲ್ ಹೆಸರನ್ನು ಘೋಷಿಸಿದಾಗ, ವೇದಿಕೆಯ ಮುಂಭಾಗದಲ್ಲಿದ್ದ ರೂಬಲ್ ಆನಂದಭಾಷ್ಪದಿಂದ ಎದೆತುಂಬಿ ಹೇಳಿದ್ದೇನು ಗೊತ್ತೆ: ''India won. ಭಾರತ್ ಕಾ ವಿಜಯ್'' (ಕನ್ನಡದ ಬೂಕರ್ ಪ್ರಶಸ್ತಿ ವಿಜೇತೆಯಿಂದ ಇಂತಹ ಪ್ರತಿಕ್ರಿಯೆ ಕೇಳಿಬಂದಿರಲಿಲ್ಲ. ತನ್ನ ಕೃತಿಯನ್ನು ಅನುವಾದಿಸಿದ ಸಹಲೇಖಕಿಯನ್ನೂ ಆಕೆ ಆ ಸಂದರ್ಭದಲ್ಲಿ ಸ್ಮರಿಸಿಕೊಂಡಿರಲಿಲ್ಲ. ಬಿಡಿ, ಆ ವಿಚಾರ ಬೇರೆ!). ಪ್ರಶಸ್ತಿ ಸ್ವೀಕರಿಸಿದ ರೂಬಲ್ ತನಗೆ ದೊರಕಿದ ಅಷ್ಟೂ ಪ್ರಶಸ್ತಿ ಮೊತ್ತವನ್ನು ಶಿಕ್ಷಣ ವಂಚಿತ ಬಡಮಕ್ಕಳ ಅಂಧಕಾರದ ಬದುಕಲ್ಲಿ ಬೆಳ್ಳಿರೇಖೆ ಮೂಡಿಸಲು ಬಳಸಿಕೊಳ್ಳುವುದಾಗಿ ಘೋಷಿಸಿದರು. ಆಕೆ ಆ ಉನ್ನತ ಪ್ರಶಸ್ತಿಗೆ ಎಷ್ಟು ಅರ್ಹಳು ಎನ್ನುವುದಕ್ಕೆ ಇದೊಂದೇ ನಿದರ್ಶನ ಸಾಕಲ್ಲವೆ?

ರೂಬಲ್ ಫೌಂಡೇಶನ್ ನೆರವಿನಿಂದ ಅಕ್ಷರವಂತರಾದ ಹಲವರು ಈಗ ಋಣ ತೀರಿಸುತ್ತಿದ್ದಾರೆ. ಮಯೂರ್ ಎಂಬ ಯುವಕ ತನ್ನದೇ ಸ್ವಂತ ಕಲಾ ತರಗತಿಗಳನ್ನು ನಡೆಸುವುದರ ಜೊತೆಗೆ ಸಣ್ಣ ಪ್ರಮಾಣದ ಮುದ್ರಣ ವ್ಯವಹಾರವನ್ನೂ ಆರಂಭಿಸಿದ್ದಾನೆ. 'ಕಲಿಕೆ ಎಂಬುದು ಎಲ್ಲಿ ಬೇಕಾದರೂ ಸಂಭವಿಸಬಹುದು. ಆದರೆ ನೀವು ಅದನ್ನು ಆಸಕ್ತಿಕರವಾಗಿಸಬೇಕು' ಎಂದು ಕಿವಿ ಮಾತು ಹೇಳುವ ರೂಬಲ್, ''ಕೊಳೆಗೇರಿಗಳಲ್ಲಿ ಕಾರ್ಯನಿರ್ವಹಿಸುವಾಗ ಕೇವಲ ಮಕ್ಕಳೊಂದಿಗಷ್ಟೇ ಅಲ್ಲ, ಅಲ್ಲಿನ ಇಡೀ ನಿವಾಸಿಗಳೊಂದಿಗೆ ಉತ್ತಮ ಸಂಬಂಧಗಳನ್ನು ಬೆಸೆಯಬೇಕಾಗುತ್ತದೆ. ಯಾರಿಗೋ ಹಣದ ನೆರವು ಬೇಕಿರುತ್ತದೆ. ಇನ್ನಾರೋ ಮನೆಯಲ್ಲಿ ಆಹಾರ ಪದಾರ್ಥಗಳಿಲ್ಲದೆ ತೊಳಲಾಡುತ್ತಿರುತ್ತಾರೆ. ಮತ್ತಿನ್ಯಾರೋ ಸಂಕಟದಲ್ಲಿರುತ್ತಾರೆ. ಇಂಥವರೆಲ್ಲರ ಅವಶ್ಯಕತೆಗಳನ್ನು ಸಕಾಲಕ್ಕೆ ಪೂರೈಸಿದಲ್ಲಿ ನಾವು ನಮ್ಮ ಕೆಲಸವನ್ನು ಸುಸೂತ್ರವಾಗಿ ಮುಂದುವರಿಸಬಹುದು'' ಎಂದು ವಿವರಿಸುತ್ತಾರೆ. ಮನೆಗೆಲಸ ನಿರ್ವಹಿಸುವ ತಾಯಿಯೊಬ್ಬಳ ಏಳು ವರ್ಷದ ಮಗಳು ಖುಷಿಗೆ ಇಂತಹ ಶಾಲೆಗೆ ಬರುವುದೆಂದರೆ ಎಲ್ಲಿಲ್ಲದ ಖುಷಿ. ತಾನು ಹೀಗೆ ಓದಿ ಮುಂದೆ ಶಿಕ್ಷಕಿಯಾಗಬೇಕು ಎಂಬುದು ಆ ಪುಟ್ಟ ಖುಷಿಯ ಕನಸು. ಹೀಗೆ ಇಂತಹ ಕನಸುಗಳನ್ನು ಅದೆಷ್ಟೋ ಮಕ್ಕಳಲ್ಲಿ ರೂಬಲ್ ಬಿತ್ತುತ್ತಲೇ ಇದ್ದಾರೆ.

ಗ್ಲೋಬಲ್ ಟೀಚರ್ ಪ್ರಶಸ್ತಿಯನ್ನು 2017ರಿಂದ ವಾರ್ಕೆ ಫೌಂಡೇಶನ್ ಯುನೆಸ್ಕೋ ಸಂಸ್ಥೆಯ ಸಹಯೋಗದೊಂದಿಗೆ ನೀಡುತ್ತಾ ಬಂದಿದೆ. 2017ರಲ್ಲಿ ಮ್ಯಾಗಿ ಮೆಕ್ ಡೊನಾಲ್ಡ್(ಕೆನಡಾ), 2018ರಲ್ಲಿ ಆಡ್ರಿಯಾ ಝುಸಿರಕೊವ್ (ಇಂಗ್ಲೆಂಡ್), 2019ರಲ್ಲಿ ಪೀಟರ್ ಟಬಿಚಿ (ಕೆನ್ಯಾ) ಹಾಗೂ 2020ರಲ್ಲಿ ರಣಜಿತ್ ಸಿನ್ಹ್ ಡಿಸೇಲ್ (ಭಾರತ) ಮೊದಲಾದವರಿಗೆ ಈ ಪ್ರಶಸ್ತಿ ದೊರೆತಿತ್ತು.

ಶಿಕ್ಷಣದ ಕನಸು ಬಿತ್ತಿದ ರೂಬಲ್ ನಾಗಿ ಅವರಿಗೆ ನಮ್ಮೆಲ್ಲರ ಒಂದು ಶುಭಾಶಯ ಮೊಳಗಲಿ.

ಹರೆಯ ಮತ್ತು ಕೌಟುಂಬಿಕ ಪರಿಸರ

ಹರೆಯದವರ ವರ್ತನೆಗಳನ್ನು ಪೋಷಕರು ಗಮನಿಸುವುದು ಮುಖ್ಯ. ಇದರಿಂದ ಹರೆಯದವರು ಹಲವಾರು ಅಪಾಯಗಳಿಗೆ ಒಳಗಾಗುವುದನ್ನು ತಪ್ಪಿಸಬಹುದು.

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಮನೆಯೇ ಮೊದಲ ಶಾಲೆ, ತಾಯಿಯೇ ಮೊದಲ ಗುರು ಎಂಬ ನಾಣ್ನುಡಿಯನ್ನು ಕೇಳಿದ್ದೇವಲ್ಲವೇ. ವ್ಯಕ್ತಿಯ ಕಲಿಕೆ, ಅವನ ಸರ್ವತೋಮುಖ ಅಭಿವೃದ್ಧಿಯಾಗಲು ಕುಟುಂಬದ ಪರಿಸರ ಅವಶ್ಯ. ಬಾಲ್ಯದಲ್ಲಿ ಹಿತವಾದ, ಪ್ರೀತಿ, ಮಮತೆಯಿಂದ ಕೂಡಿದ ಕೌಟುಂಬಿಕ ಪರಿಸರವು ಹರೆಯದಲ್ಲಿ ಜರುಗುವ ವ್ಯಕ್ತಿತ್ವ ವಿಕಸನಕ್ಕೆ, ಶೈಕ್ಷಣಿಕ ಸಾಧನೆಗೆ, ಎದುರಾಗುವ ಸವಾಲುಗಳನ್ನು ನಿಭಾಯಿಸಲು ಅವಶ್ಯ. ಪ್ರವಾಹದೋಪಾದಿಯಲ್ಲಿ ಎದುರಾಗುವ ಒತ್ತಡಗಳಿಗೆ ಪರಿಹಾರ ಕಂಡುಕೊಂಡು ನೆಮ್ಮದಿಯಿಂದ ಮುನ್ನಡೆಯಲು ಪೋಷಕರ ಬೆಂಬಲ ಬೇಕು. ಹರೆಯಕ್ಕೂ, ಕುಟುಂಬದ ಪರಿಸರಕ್ಕೂ ಇರುವ ನಿಕಟವಾದ ಸಂಬಂಧವನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಹನ್ನೆರಡು ವರ್ಷದ ಒಂಭತ್ತನೇ ತರಗತಿಯ ವಿದ್ಯಾರ್ಥಿ ರಘು. ತರಗತಿಯಲ್ಲಿ ಚೆನ್ನಾಗಿ ಓದುತ್ತಿದ್ದ ರಘು, ಈಗ ಓದಿನಲ್ಲಿ ಹಿಂದುಳಿದಿದ್ದಾನೆ. ಒಮ್ಮೊಮ್ಮೆ ತರಗತಿಯಲ್ಲಿ ನಿದ್ದೆ ಹೋಗಿ, ಶಿಕ್ಷಕರಿಂದ ಬೈಸಿಕೊಂಡಿದ್ದೂ ಉಂಟು. ಓದಿನಲ್ಲಿ ನಿರಾಸಕ್ತಿ. ಮನೆಗೆ ಅತಿಥಿಗಳು ಬಂದರೆ, ಅವರೊಂದಿಗೆ ಬೆರೆಯುತ್ತಿದ್ದವನು, ಈಗ ಅತಿಥಿಗಳು ಬಂದಾಕ್ಷಣ ರೂಮಿನೊಳಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ. ರಘುವಿನ ಬದಲಾದ ವರ್ತನೆ ನೋಡಿದ ತಾಯಿ ರಮಾ, ರಘುವಿಗೆ ಪ್ರೀತಿಯ ಮಾತಿನಿಂದ ಹಾಗೆಲ್ಲಾ ಮಾಡಬಾರದು, ಚೆನ್ನಾಗಿ ಓದಿ ಬುದ್ಧಿವಂತನಾಗಬೇಕು ಎಂದರು. ಏನು ಹೇಳಿದರೂ ರಘುವಿನ ಅಸಭ್ಯ ನಡವಳಿಕೆ ದಿನೇದಿನೇ ಹೆಚ್ಚಾಗುತ್ತಾ ಬಂತು. ಮಗನು ಏಕೆ ಹೀಗೆ ಮಾಡುತ್ತಿದ್ದಾನೆಂದು ಸಲಹೆ ಕೇಳಲು ಮಗನನ್ನು ತಾಯಿ ಕರೆತಂದಿದ್ದರು.

ರಘುವಿನ ಕುಟುಂಬದ ಪರಿಸರದ ಕುರಿತು ಕೇಳಿದೆ. ಅದಕ್ಕೆ ತಾಯಿ ರಮಾ, ''ಅದೇ



ಒಂದು ದೊಡ್ಡ ಸಮಸ್ಯೆ ಸಾರ್'' ಎಂದರು. ಕುಡುಕ ತಂದೆ ಪಾನಮತ್ತರಾಗಿ ಮಧ್ಯರಾತ್ರಿ ಮನೆಗೆ ಬರುತ್ತಾರೆ. ಹೆಂಡತಿ ಮಕ್ಕಳನ್ನು ಹೀನಾಮಾನವಾಗಿ ಬಯ್ಯುತ್ತಾರೆ. ಮಗಳಿಗೆ ಮಧ್ಯರಾತ್ರಿಯವರೆಗೂ ಓದಿ ಪಾಠ ಒಪ್ಪಿಸಬೇಕೆಂದು ಕರ್ಕಶ ಕಂಠದಿಂದ ಕೂಗುತ್ತಾರೆ. ಒಂದು ವಿಧದಲ್ಲಿ ಮನೆ ಒಂದು ರಣರಂಗ ಎನ್ನಬಹುದು ಎಂದು ವಿವರಿಸಿದರು.

ಹತ್ತನೇ ತರಗತಿಯ ವಿದ್ಯಾರ್ಥಿನಿ ಸರೋಜಾ ಮೊದಲಿಗೆ ಚೆನ್ನಾಗಿ ಓದುತ್ತಿದ್ದವಳು, ಈಗ ಯಾಕೋ ಓದುವುದರಲ್ಲಿ ಆಸಕ್ತಿ ಕಳೆದುಕೊಂಡಿದ್ದಾಳೆ. ಅಣ್ಣ ರಾಜು ಸರೋಜಾಳಿಗಿಂತ ಹೆಚ್ಚು ಬುದ್ಧಿವಂತ. ಹಾಗಾಗಿ ತಾಯಿ ತಂದೆ ಇಬ್ಬರೂ ಅವಳಿಗೆ ಹೋಲಿಸಿ ಮಗನನ್ನು ಯಾವಾಗಲೂ ಹೊಗಳುತ್ತಿದ್ದರು. ಮಗಳಿಗೆ ''ನೀನೂ ಇದ್ದೀಯ, ಮೊದಲು ಹೆಣ್ಣು ಬೇಡ ಎಂದರೂ ಹುಟ್ಟಿದೆ. ಈಗ ನೋಡು, ನಿನ್ನನ್ನು ಯಾರೂ ಮಾತನಾಡಿಸುವುದಿಲ್ಲ. ಎಲ್ರೂ ನಿನ್ನ ಅಣ್ಣನನ್ನು ಹೊಗಳುತ್ತಾರೆ'' ಎಂದು ದಿನನಿತ್ಯವೂ ಹೇಳುವುದನ್ನು ಕೇಳಿ, ತಾನು ನಿರುಪಯೋಗಿ, ಯಾರಿಗೂ ಬೇಡವಾದವಳು ಎಂಬ ಭಾವನೆ ಸರೋಜಳಿಗೆ ಉಂಟಾಯಿತು. ಅದಕ್ಕೆ ಏನು ಮಾಡಬೇಕೆಂದು ನೀವೇ ಹೇಳಿ ಸಾರ್ ಎಂದರು.

ಹಿತವಾದ, ಆತ್ಮೀಯತೆಯ ಮತ್ತು ಪ್ರೋತ್ಸಾಹದಿಂದ ಕೂಡಿದ ಮನೆಯ ವಾತಾವರಣವು ಹರೆಯದವರ ಬೆಳವಣಿಗೆಗೆ ಅಡಿಗಲ್ಲು. ಹೆಜ್ಜೆ ಹೆಜ್ಜೆಗೂ ಒತ್ತಡಗಳು ಆತಂಕವನ್ನುಂಟುಮಾಡುತ್ತವೆ. ದೇಹದಲ್ಲಾಗುವ ಬದಲಾವಣೆಗಳು, ಮಾನಸಿಕವಾಗಿ ಪುಟಿದೇಳುವ ಪ್ರಶ್ನೆಗಳು, ಸಂದೇಹಗಳು, ಇತರರೊಂದಿಗಿನ ಒಡನಾಟ ಹೀಗೆ ಹಲವು ಸವಾಲುಗಳು ಎದುರಾಗುತ್ತವೆ. ತನ್ನ ಒತ್ತಡವನ್ನು ನೀಗಲು, ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ನಿಭಾಯಿಸಲು ಆತ್ಮವಿಶ್ವಾಸ ಅವಶ್ಯ. ಇದಕ್ಕೆ ಅವಶ್ಯವಿರುವುದು ಕುಟುಂಬದಲ್ಲಿ ಪೋಷಕರ ಪ್ರೀತಿ ವಿಶ್ವಾಸದಿಂದ ಕೂಡಿದ ಮುಕ್ತ ಸಂವಹನ. ಹರೆಯದವರು ತಮ್ಮ ಸಂದೇಹಗಳನ್ನು ಇತರರೊಂದಿಗೆ ಕೇಳಿದರೆ, ಅವರು ನಗಬಹುದು, ಗೇಲಿ ಮಾಡಬಹುದು, ಅಯ್ಯೋ ಇಷ್ಟು ಸಣ್ಣದನ್ನು ಕೇಳುತ್ತಾನಲ್ಲ, ಇದು ಸಿಲ್ಲಿ ಎಂದು ಟೀಕೆ ಮಾಡಬಹುದು ಎಂದು ಭಾವಿಸಿ, ಸಂದೇಹಗಳನ್ನು ಹಂಚಿಕೊಳ್ಳಲು ಇಚ್ಛಿಸುವುದಿಲ್ಲ. ಪೋಷಕರು ಆತ್ಮೀಯತೆಯಿಂದ ಹರೆಯದವರೊಂದಿಗೆ ಕುಳಿತು, ಪ್ರೀತಿಯಿಂದ ಸಹಜವಾಗಿ ಅವರ ಸಂದೇಹಗಳ ಕುರಿತು ಕೇಳಬೇಕು. ಹರೆಯದವರ ವರ್ತನೆಯಲ್ಲಿ ಏನಾದರೂ ವ್ಯತ್ಯಾಸ ಕಂಡರೆ ಅವರನ್ನು ಕೂರಿಸಿಕೊಂಡು, ಸಮಾಧಾನದಿಂದ ತಲೆ ನೇವರಿಸುತ್ತಾ ಕೇಳಿದಾಗ, ಹರೆಯದವರು ತಮ್ಮ ಆತಂಕ, ಒತ್ತಡಗಳನ್ನು ಮತ್ತು ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಅವರು ಹೇಳುವುದನ್ನು ಆಲಿಸಿ, ಅವರ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕು. ಕಿರಿಯರ ಅನಿಸಿಕೆಗಳು ತಪ್ಪು ಎಂದು ಕಂಡುಬಂದಲ್ಲಿ ಒಳ್ಳೆಯ ಮಾತುಗಳಿಂದ ತಿದ್ದಬೇಕು.

ಹರೆಯದವರ ವರ್ತನೆಗಳನ್ನು ಪೋಷಕರು ಗಮನಿಸುವುದು ಮುಖ್ಯ. ಇದರಿಂದ ಹರೆಯದವರು ಹಲವಾರು ಅಪಾಯಗಳಿಗೆ ಒಳಗಾಗುವುದನ್ನು ತಪ್ಪಿಸಬಹುದು. ಆತ್ಮೀಯ ಗೆಳೆಯರನ್ನು ಗಳಿಸುವಂತೆ ಪ್ರೋತ್ಸಾಹಿಸಬೇಕು. ಸಾಮಾಜಿಕ ಜಾಲತಾಣಗಳು ಮತ್ತು ಮೊಬೈಲ್ ಫೋನುಗಳ ಸಾಧಕ-ಭಾದಕಗಳನ್ನು ವಿವರಿಸಿ, ಅವುಗಳ ಕುರಿತು ನಿರಂತರವಾಗಿ ಗಮನವಿಡಬೇಕು. ಮಿತಿಮೀರಿ ಉಪಯೋಗಿಸುವುದು ಒಳ್ಳೆಯದಲ್ಲ ಎಂದು ವಿವರಿಸಿ, ಮಕ್ಕಳ ಮನಸ್ಸನ್ನು ಗೆಲ್ಲಬೇಕು.

ಹರೆಯದವರು ಸ್ವತಂತ್ರರಾಗಲು ಯೋಚಿಸುತ್ತಾರೆ. ಇದಕ್ಕಾಗಿ ಪೋಷಕರ ಅವಲಂಬನೆಯಿಂದ ಹೊರಗೆ ಬರಲು ಪ್ರಯತ್ನಿಸುತ್ತಾರೆ. ಹರೆಯದವರು ಪೋಷಕರ ಸಲಹೆಗಳನ್ನು ಪ್ರಶ್ನಿಸಲು ಪ್ರಾರಂಭಿಸುತ್ತಾರೆ. ನೀವು ಹೇಳುವುದನ್ನು ಕೇಳಲಾರೆ, ನಾನೇ ತೀರ್ಮಾನ ತೆಗೆದುಕೊಳ್ಳುತ್ತೇನೆ, ನೀವು ಸ್ವಲ್ಪ ಸುಮ್ಮನಿರಿ ಎಂದು ಒರಟಾಗಿ ಹೇಳಬಹುದು. ಇದರಿಂದ ಘರ್ಷಣೆಗಳಾಗುತ್ತವೆ. ಈ ವಿಧದ ನಡವಳಿಕೆಗಳು ಪೋಷಕರ ಮೇಲಿನ ದ್ವೇಷದಿಂದಲ್ಲ. 'ತನ್ನತನ'ವನ್ನು ಕಂಡುಕೊಂಡು ಸ್ವತಂತ್ರತೆಯನ್ನು ಸಾಧಿಸುವ ಯತ್ನ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು. ಮಕ್ಕಳ ಅಭಿಪ್ರಾಯಗಳು ಸರಿ ಎನಿಸಿದರೆ ಅದನ್ನು ಒಪ್ಪಿಕೊಳ್ಳಬೇಕು. ಇದರಿಂದ ಹರೆಯದವರಿಗೆ ಪೋಷಕರಲ್ಲಿ ನಂಬಿಕೆ ಮತ್ತು ವಿಶ್ವಾಸಗಳು ಉಂಟಾಗುತ್ತದೆ. ಆತ್ಮೀಯತೆ ಮೂಡುತ್ತದೆ. ಅತಿಯಾದ ಕಟ್ಟುನಿಟ್ಟಿನ ಕ್ರಮಗಳಾಗಲೀ ಅಥವಾ ಅತಿಯಾದ ವಿನಯವಾಗಲೀ ಒಳ್ಳೆಯದಲ್ಲ.

ಹರೆಯದವರು ಪೋಷಕರ ನಡೆನುಡಿಗಳನ್ನು ಎಚ್ಚರದಿಂದ ಅವಲೋಕಿಸುತ್ತಿರುತ್ತಾರೆ. ಅವರು ಹೇಳುವ ಬುದ್ಧಿವಾದಗಳು, ಮಾತನಾಡುವ ಧಾಟಿ, ಅವರು ಮಾಡುವ ಟೀಕೆ ಟಿಪ್ಪಣಿಗಳನ್ನು ನೋಡುವ ಹರೆಯದವರು ಇನ್ನೊಂದು ಕಡೆ ಅವರ ನಡತೆಗಳನ್ನು ಗಮನಹರಿಸಿ ನೋಡುತ್ತಿರುತ್ತಾರೆ. ಹೇಳುವುದೆಲ್ಲಾ ಆಚಾರ, ಮಾಡುವುದೆಲ್ಲಾ ಅನಾಚಾರ ಎಂಬ ಹಾಗೆ ಪೋಷಕರು ಹೇಳುವುದೊಂದು, ಮಾಡುವುದೊಂದು ಆದರೆ, ಪೋಷಕರು ಹೇಳುವುದನ್ನು ಪಾಲಿಸುವುದಕ್ಕಿಂತ, ಅವರ ನಡತೆಯನ್ನು ಅನುಕರಿಸುತ್ತಾರೆ. ಪೋಷಕರ ನಡೆನುಡಿಗಳು ಮಕ್ಕಳಿಗೆ ಮಾದರಿಯಾಗಿರಬೇಕು. ಜೀವನದ ಮೌಲ್ಯಗಳಾದ ಸತ್ಯ, ಅಹಿಂಸೆ, ಪರೋಪಕಾರ ಮನೋಭಾವ, ಮೃದು ಮಾತುಗಳು ಸ್ನೇಹಪರತೆ ಇವುಗಳನ್ನು ಅನುರಿಸುವ ಪೋಷಕರು ಮಕ್ಕಳಿಗೆ ಮಾದರಿಯಾಗುತ್ತಾರೆ.

ಹರೆಯದ ಮಕ್ಕಳ ಕುರಿತು ಪೋಷಕರು ಸದಾ ಗಮನಿಸುತ್ತಿರಬೇಕು. ಇದರಲ್ಲಿ ಮಕ್ಕಳ ಸ್ನೇಹಿತರ ಕುರಿತು ಗಮನವಿಡುವುದು ಮುಖ್ಯವಾದದ್ದು. ಮಕ್ಕಳ ಗೆಳೆಯರನ್ನು ಕರೆದು ಮಾತನಾಡಿಸಿ, ಅವರು ಎಂಥವರೆಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಅವರು ಆತ್ಮೀಯರಾಗಿ ಮಕ್ಕಳ ಅಭಿವೃದ್ಧಿಗೆ ಪೂರಕವಾಗಿದ್ದಾರೆಂದೆನಿಸಿದರೆ ಒಳ್ಳೆಯದು. ಅದು ಇಲ್ಲ ಎನಿಸಿದರೆ ಹರೆಯದ ಮಕ್ಕಳೊಂದಿಗೆ ಕೂತು ತಮ್ಮ ಅನಿಸಿಕೆಗಳನ್ನು ತಿಳಿಸಿ, ಅಂತಹ ಗೆಳೆತನ ಮಾಡುವುದರಿಂದ ಆಗುವ ಸಾಧಕ ಬಾಧಕಗಳನ್ನು ಮೃದು ಮಾತುಗಳಿಂದ ವಿವರಿಸಬೇಕು. ಅದಕ್ಕೂ ಸಾಧ್ಯವಿಲ್ಲ ಎಂದರೆ ಆ ಕ್ಷಣದಲ್ಲಿ ಅವರೊಂದಿಗೆ ವಾದಕ್ಕಿಳಿಯಬಾರದು. ಸಾವಧಾನದಿಂದ ಸಮಯ ನೋಡಿ ಮಕ್ಕಳಿಗೆ ತಿಳಿ ಹೇಳಿ ಅವರ ಮನಪರಿವರ್ತನೆ ಮಾಡಬೇಕು.

ಸಾಮಾಜಿಕ ಪ್ರಜ್ಞೆ ಮತ್ತು ಜೀವನ ಕೌಶಲಗಳನ್ನು ಕಲಿಸುವ ಮೊದಲ ಶಾಲೆ ಕುಟುಂಬ. ಒಳ್ಳೆಯ ಜನರೊಂದಿಗೆ ಬೆರೆತು, ಆತ್ಮೀಯವಾಗಿ ಮಾತನಾಡಲು, ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು.

ಹಿತವಾದ ಕೌಟುಂಬಿಕ ವಾತಾವರಣ, ಪ್ರೀತಿಯ ಪೋಷಕ-ಹರೆಯದವರ ಸಂಬಂಧ ಮತ್ತು ಮುಕ್ತ ಸಂವಹನ ಎಷ್ಟು ಮಹತ್ವದ್ದು ಎಂಬುದು ಮೇಲಿನ ಅಂಶಗಳಿಂದ ಓದುಗರಿಗೆ ಅರ್ಥವಾಗಿರಲು ಸಾಕು.


'ಒಲೆ' ಹತ್ತಿ ಉರಿದೊಡೆ...

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಈಗ ಯಾವ ಡೈಲಾಗ್ ಹೆಚ್ಚು ಜನರನ್ನು ತನ್ನತ್ತ ಸೆಳೆಯಬಹುದು?' ಎಂದು ಯಾರಾದರೂ ಕೇಳಿದರೆ, ಅದಕ್ಕೆ ಉತ್ತರವಾಗಿ ಈ ಕೆಳಗಿನ ಡೈಲಾಗ್‌ಗಳನ್ನು ಹೆಸರಿಸಬಹುದು. ''ಅವನೊಳಗೆ ಒಂದು ಕಿಚ್ಚಿದೆ ಸರ್'', ''ಅಯ್ಯೋ ಅವನ ಮಾತುಗಳೋ ಬೆಂಕಿಯುಂಡೆ!'', ''ನೆನಪಿರಲಿ, ಬೆಂಕಿಯ ಜೊತೆಗೆ ಸರಸಬೇಡ''. ಬೆಂಕಿ, ಜ್ವಾಲೆ, ಕಿಚ್ಚು, ಅಗ್ನಿ, ಕೆಂಡ, ಉರಿ ಇತ್ಯಾದಿ ಪದಗಳು ಎಲ್ಲಾದರೂ ಕೇಳಿಸಿದರೆ, ಒಮ್ಮೆಗೆ ಕಿವಿ ನೆಟ್ಟಗಾಗಲು ಕಾರಣವೂ ಇದೆ. ಅದುವೇ ಸದ್ಯದ ಯುದ್ಧೋನ್ಮಾದದ ಪರಿಸ್ಥಿತಿಯಿಂದಾಗಿ ಉಂಟಾಗಿರುವ 'ಗ್ಯಾಸ್ ಟ್ರಬಲ್'. ತನ್ಮೂಲಕ ಹೊಟ್ಟೆಗಷ್ಟೇ ಸೀಮಿತವಾಗಿದ್ದ ಗ್ಯಾಸ್‌ಟ್ರಬಲ್ ಸದ್ಯ ತಟ್ಟೆಗೂ ವಕ್ಕರಿಸಿದೆ. ಹೊಟ್ಟೆಯ ಗ್ಯಾಸ್ ಟ್ರಬಲ್ ಆಗಿದ್ದರೆ ಕೆಲವು ಗುಳಿಗೆ, ಸಿರಪ್‌ನಿಂದ ನಿಯಂತ್ರಣಕ್ಕೆ ತರಬಹುದಿತ್ತು. ಆದರೆ ಗ್ಯಾಸ್ ಟ್ರಬಲ್‌ಗೆ ಕಡಿವಾಣ ಹಾಕುವುದು ಕಷ್ಟಸಾಧ್ಯವೇ ಸೈ.

ಈ ಎಲ್ಲಾ ಬೆಳವಣಿಗೆಗಳನ್ನು ಸಮಗ್ರವಾಗಿ ಅವಲೋಕಿಸುತ್ತಿದ್ದರೆ ಸುಟ್ಟು ಭಸ್ಮ ಮಾಡುವ ಬೆಂಕಿಗಿಂತಲೂ ಬೇಯಿಸುವ, ಬಿಸಿಯೇರಿಸುವ, ಕಾವುಣ್ಣಿಸುವ ನಿಯಂತ್ರಿತ ಬೆಂಕಿಗೆ ಬೇಡಿಕೆ ಭಲೇ ಹೆಚ್ಚಾಗಿದೆ. ಇದನ್ನು ಒದಗಿಸುತ್ತಿದ್ದ ಗ್ಯಾಸ್ ಒಲೆಗಳು ಸಿಲಿಂಡರ್ ಇಂದು ಖಾಲಿ ಆದೀತೋ ನಾಳೆಯೋ, ಖಾಲಿಯಾದರೆ ಮತ್ತೆ ಎಂದು ಸಿಕ್ಕೀತೋ, ಬುಕ್ಕಿಂಗ್ ಆದೀತೋ ಇಲ್ಲವೋ ಎಂಬ 'ಡರ್' (ಭಯ)ನಲ್ಲಿ ನಲುಗುತ್ತಿವೆ. ಸುಮ್ಮನೆ ಅಡುಗೆ ಮನೆಯ ಕೌಂಟರ್‌ಟಾಪ್ ಒಳಗಡೆಯೋ, ಹೊರಗಡೆಯ ಪ್ರತ್ಯೇಕ ಲೋಹದ ಅಂಕಣದೊಳಗೋ, ಇನ್ನೆಲ್ಲೋ ಮರೆಯಲ್ಲಿ ಮೌನವಾಗಿ ಕೂತಿರುತ್ತಿದ್ದ ಈ ಕೆಂಬಣ್ಣದ ಹಮ್ಮೀರನಿಗೆ ಈಗ ಎಲ್ಲೆಲ್ಲೂ ಡಿಮ್ಯಾಂಡೋ ಡಿಮ್ಯಾಂಡ್! ಚಿನ್ನ, ಭೂಮಿ, ನಗದು ಸಾಕಷ್ಟು ಪ್ರಮಾಣದಲ್ಲಿ ಇರುವವರತ್ತ ಹುಬ್ಬೇರಿಸುವಂತೆ ನೋಡುತ್ತಿದ್ದ ಜನರು ಸದ್ಯ ಈಗ, ಗ್ಯಾಸ್ ಸಿಲಿಂಡರ್ ಸ್ಟಾಕ್ ಇಟ್ಟುಕೊಂಡವರತ್ತ ನೋಡುವಂತಾಗಿದೆ. 'ಸಿಲಿಂಡರ್ ಇದ್ದರೆ ಎಲ್ಲಿಂದಾದರೂ ನಮಗೊಂದು ಹೇಗೋ ಹೊಂದಿಸಿ ಕೊಡಿಸಿರಯ್ಯಾ?' ಎಂಬ ಭಿನ್ನಪಗಳನ್ನು ಮುಂದೆ ಮಾಡುವವರ ಸಂಖ್ಯೆಯಂತೂ ದಿನೇ ದಿನೇ ಹೆಚ್ಚುತ್ತಲೇ ಇದೆ. ಅದರ ಬಣ್ಣವೇನೋ ಕೆಂಪು ಹೌದು. ಹಾಗೆಯೇ ಕೆಂಪೆಂದರೆ ಡೇಂಜರ್‌ನ್ನು ಸಂಕೇತಿಸುವುದೂ ನಿಜವೇ. ಆದರೆ ಆ ಡೇಂಜರ್ ಅದರ ಕೊರತೆಯ ರೂಪದಲ್ಲಿ ಹೀಗೆ ಎರಗುತ್ತದೆ ಎಂದು ಬಹುಶಃ ಯಾರೂ ಭಾವಿಸಿಯೇ ಇರಲಿಕ್ಕಿಲ್ಲ.




ಗ್ಯಾಸ್ ಒಲೆಯ ಹಾಗೂ ಅದರ ಕರುಳಬಳ್ಳಿಯ ಸಂಬಂಧಿಯಂತಿರುವ ಸಿಲಿಂಡರ್ ಬಗ್ಗೆ ಹೀಗೆಲ್ಲ ಬಗೆ ಬಗೆಯ ಅಭಿಪ್ರಾಯಗಳನ್ನು ಹೊರಹೊಮ್ಮಿಸುತ್ತಾ, ಜನರು ಒಂದೇ ಸಮನೆ ಪರಿತಪಿಸುತ್ತಿರುವಾಗ, ಅಲ್ಲೊಂದು ಇಲ್ಲೊಂದು ಕಂಡುಬರುವ 'ಸೌದೆಒಲೆ'ಗಳು ಅಂದು ತಮ್ಮನ್ನು ಮರೆತು, ಈ ಗ್ಯಾಸ್ ಒಲೆಯನ್ನು ಮೆರೆಸಿದ್ದ ಇದೇ ಜನರನ್ನು ನೆನೆದು ಒಳಗೊಳಗೇ ಕುಹಕದ ನಗೆಯಾಡುತ್ತಿರಬಹುದು. ಬೇಕು ಬೇಕೆಂದ ರೀತಿಯಲ್ಲಿ ಬೆಂಕಿಯನ್ನು ಮೊಗೆ ಮೊಗೆದು ಪಾತ್ರೆಯ ತಳಕ್ಕೆ ಒಡ್ಡುತ್ತಿದ್ದ ಈ ಒಲೆಗಳೋ ಅದಕ್ಕೆ ಪ್ರತಿಯಾಗಿ ಬಯಸುತ್ತಿದ್ದುದು ಇಂಥ ದುಬಾರಿ ಸಿಲಿಂಡರ್ ಗಳನ್ನಲ್ಲ, ಬದಲಾಗಿ ಉಚಿತವಾಗಿ ಇಲ್ಲವೇ ಅತ್ಯಂತ ಕಡಿಮೆ ಬೆಲೆಗೆ ದೊರಕುವ ಸೌದೆ ಉರ್ಫ್ ಕಟ್ಟಿಗೆಯನ್ನು. ಹಾಗೂ ಒಂದಷ್ಟು ಉಫ್... ಉಫ್... ಎಂದು ಊದುವ ಅಡುಗೆಯವರ ಉಸಿರನ್ನು ಅಷ್ಟೇ. ಈಗ ಮತ್ತೆ ಪುನಃ ಒಲೆಗಳಿಗೆ ಒಳ್ಳೆ ಕಾಲಬಂದಿದ್ದು, ಅವುಗಳೋ ಖುಷಿಯ ಲಹರಿಯಲ್ಲಿ 'ಕಾಲಮತ್ತೊಮ್ಮೆ ನಮಗಾಗಿ ಬಂದಿದೆ....' ಎಂದು ಹಾಡುತ್ತಲೂ ಇರಬಹುದು. ಇನ್ನು ಯಾರಾದರೂ ತಮ್ಮ ಪ್ರಿಯತಮೆಗೆ 'ಒಲವಿನ ಉಡುಗೊರೆ ಕೊಡಲೇ..?' ಎಂದು ರೊಮ್ಯಾಂಟಿಕ್ ಆಗಿ ಕೇಳಿದರೆ ಒಲವಿನ ಉಡುಗೊರೆಯಾಗಿ ಏನನ್ನಾದರೂ ಕೊಡುವುದಿದ್ದರೆ ಒಲೆಯನ್ನೇ(ಸೌದೆ) ಕೊಟ್ಟರೆ ಒಳ್ಳೆಯದಿತ್ತು ಎಂದೇ ಹೇಳಬಹುದು. ಅಷ್ಟರಮಟ್ಟಿಗೆ ಜನರು ಒಲೆಯೆಡೆಗೆ ತಮ್ಮ ಒಲವನ್ನು ವ್ಯಕ್ತಪಡಿಸುತ್ತಿದ್ದಾರೆ.

ಇಷ್ಟು ವರುಷಗಳು ಉರುಳಿದ ನಂತರ ಒಲೆಗಳ ಬದುಕು ಒಂಥರ ಪ್ರಜ್ವಲಮಯವಾಗಿದೆ ಎನ್ನುವುದನ್ನು ಅದರಲ್ಲಿ ಧಗಧಗಿಸಿ ಉರಿಯುತ್ತಿರುವ ಜ್ವಾಲೆಯನ್ನು ನೋಡಿಯೇ ಹೇಳಬಹುದು. ಹಾಗೆ ನೋಡಿದರೆ ಹಳ್ಳಿಗಳಲ್ಲಿ ಈಗಲೂ ಒಂದಿಲ್ಲೊಂದು ಮನೆಯಲ್ಲಿ ಒಲೆ ಇದ್ದೇ ಇರುತ್ತದೆ ಹಾಗೂ ಅದರಲ್ಲಿ ಉರಿ ಆಗಾಗ ಹೊತ್ತಿಕೊಳ್ಳುತ್ತಲೇ ಇರುತ್ತದೆ ಕೂಡಾ. ಆದರೆ ಸಿಟಿಗಳಲ್ಲೂ ಈ ಒಲೆಗಳು ಅಲ್ಲಲ್ಲಿ ತಲೆಯೆತ್ತುವಂತಾಗಿದ್ದು ಈ ಗ್ಯಾಸ್ ಟ್ರಬಲ್‌ನ ಕಾರಣದಿಂದ. ಗ್ಯಾಸ್‌ನ ಒಳಗಣ ಕಿಚ್ಚನ್ನು, ಇಂಡಕ್ಷನ್ ಒಳಗಣ ಕಿಚ್ಚನ್ನೆಲ್ಲಾ ಕಂಡು ಬಳಸಿ ಗೊತ್ತಿರುವ ಜನರು ಎಲ್ಲೋ ಮರದೊಳಗಣವೂ ಕಿಚ್ಚು ಇದ್ದೀತು ಎನ್ನುವುದನ್ನೇ ಮರೆತಿದ್ದರು, ಮತ್ತು ಈಗ ಇವರೆಲ್ಲಾ ಮರಳಿ ಮರದ ಒಳಗಣ ಕಿಚ್ಚನ್ನು ನೆಚ್ಚಿಕೊಳ್ಳುವತ್ತ ಹೆಜ್ಜೆ ಇಡುವಂತಾಗಿದೆ. ಮರ ಅಂದರೆ ಇಲ್ಲಿ ಸೌದೆ ಎಂದರ್ಥ. ಯುದ್ಧದಿಂದ ಸೌದಿ ದೇಶವೂ ಬಳಲುತ್ತಿದೆ. ಆದರೆ ಇಷ್ಟು ದೂರದಲ್ಲಿರುವ ನಮ್ಮ ದೇಶದ ಜನರೂ ಬಳಲುವಂತಾಗಿದೆ, ಅದು ಸೌದೆಯ ಕಾರಣಕ್ಕಾಗಿ. ಒಲೆಯ ಒಡಲೊಳಗೆ ಒಳ್ಳೆಯ ಜ್ವಾಲೆಯ ಅಲೆಯನ್ನು ಬೇಕಾದಷ್ಟು ಎಬ್ಬಿಸಲೋಸುಗ ಒಳ್ಳೆಯ ಸೌದೆಯನ್ನು ಹುಡುಕಿ ಬಳಲುತ್ತಿದ್ದಾರೆ. ಹಾಗೊಂದು ಸೌದೆಗೆ ಹೋಗುವ ಕಾಯಕವೆಂದೇ ಹಳ್ಳಿಯಲ್ಲಿತ್ತು. ತೀರಾ ಅವರಂತೆ ಕಾಡಿಗೆಲ್ಲ ಹೋಗಿ ಕಡಿದು ತರದೇ ಹೋದರೂ ಕೂಡಾ ಸಿಟಿಯ ಕೆಲವು ಹೋಟೆಲ್ ವ್ಯಾಪಾರಿಗಳು, ಪಿಜಿ ಮಾಲೀಕರು, ಹಾಸ್ಟೆಲ್ ನಡೆಸುವವರು ಒಳ್ಳೆಯ ಸೌದೆಯನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಸಿಕ್ಕ ಸಿಕ್ಕ ಸಣ್ಣಪುಟ್ಟ ಗಾಡಿಗಳಲ್ಲಿ ಅದನ್ನು ತುಂಬಿಸಿಕೊಂಡು ತಂದು ಬಳಸುತ್ತಿದ್ದಾರೆ.

ಈ ಬದಲಾವಣೆಯಿಂದ ಇನ್ನೊಂದು ಪ್ರಮುಖ ಅಂಶವನ್ನು ನಾವಿಲ್ಲಿ ಗಮನಿಸಬೇಕು. ಇನ್ನು ಸಿಟಿಯ ಕ್ಯಾಂಟೀನ್, ಹೋಟೆಲ್, ಪಿಜಿ, ಹಾಸ್ಟಲ್‌ಗಳಲ್ಲಿ ಎಲ್ಲಲ್ಲೂ ಹೆಲ್ತಿ ಆಹಾರ. ಏಕೆಂದರೆ ನಾವೇ ಹೇಳಿಕೊಂಡು ಬಂದಿರುವುದು ಸೌದೆ ಒಲೆಯಲ್ಲಿ ತಯಾರಿಸಿದ ಅಡುಗೆ ಆರೋಗ್ಯಕ್ಕೆ ಬಹಳ ಒಳ್ಳೆಯದು ಎಂದು. ಎಲ್ಲೆಲ್ಲೂ ಗ್ಯಾಸ್ ಒಲೆ ಬಳಸಿ ಅಡುಗೆ ತಯಾರಿ ನಡೆಸುತ್ತಿದ್ದರೆ, ನಮ್ಮದು ಸೌದೆ ಒಲೆಯ ಅಡುಗೆ ಎಂದು ಹೇಳಿಕೊಂಡು ಅದನ್ನೇ ಒಂದು ಬ್ರ್ಯಾಂಡ್ ರೀತಿ ಬೆಳೆಸಿಕೊಂಡವರಿಗೋ ಇದು ಒಂದು ರೀತಿಯ ಹಿನ್ನಡೆಯೇ ಸರಿ. ಈಗಲೂ ಅವರು ನಮ್ಮದು ಸೌದೆ ಒಲೆಯ ಅಡುಗೆ ಎಂದು ಹೇಳಿಕೊಂಡು ಪ್ರಚಾರಕ್ಕೆ ಮುಂದಾದರೆ, ''ಅಯ್ಯೋ ಸಾಕಯ್ಯ ಕಂಡಿದೀವಿ. ಈಗ ಎಲ್ಲೆಲ್ಲೂ ಗ್ಯಾಸ್ ಪ್ರಾಬ್ಲಮ್ ಹಾಗಾಗಿ ಬಹುತೇಕರು ಕಟ್ಟಿಗೆ ಬಳಸಿ ಒಲೆಯಲ್ಲೇ ಅಡುಗೆ ತಯಾರಿಸುತ್ತಿರುವುದು. ಅಂಥದ್ದರಲ್ಲಿ ನಿಂದೇನಯ್ಯಾ ಸ್ಪೆಷಲ್ಲು?'' ಎಂದು ಮೂಗು ಮುರಿಯದೇ ಇರಲಾರರು. ಎಂಬಲ್ಲಿಗೆ ಆ ಬ್ರ್ಯಾಂಡ್‌ನ ಬುಡಕ್ಕೇ ಏಟು ನೀಡಿದಂತಾಗುತ್ತಿದೆ. ಇದನ್ನೆಲ್ಲಾ ಗಮನಿಸಿದರೆ 'ಒಲೆ ಹತ್ತಿ ಉರಿದೆಡೆ ನಿಲಬಹುದು; ಧರೆಹತ್ತಿ ಉರಿದೊಡೆ ನಿಲಲುಬಾರದು' ಎಂಬ ಶರಣರ ಮಾತು ಈ ಸನ್ನಿವೇಶಕ್ಕೂ ಪ್ರಸ್ತುತ ಎನಿಸುತ್ತದೆ. ಧರೆ ಹೊತ್ತಿದೆ ಯುದ್ಧದ ಕಾರಣಕ್ಕೆ. ಅಂದ ಮೇಲೆ ಈ ಬಗೆಯ ವಹಿವಾಟುಗಳನ್ನು ನಡೆಸುವವರು ನಿಲ್ಲುವುದಾದರೂ ಹೇಗೆ? ಅದಕ್ಕೆ ಪರ್ಯಾಯವೋ, ಪರಿಹಾರವೋ ಎಂಬಂತೆ ಈ ಒಲೆ ಹೊತ್ತಿ ಉರಿಯುವುದರಿಂದ ಅವರೆಲ್ಲ ಕೊಂಚ ಧೈರ್ಯ ಹಾಗೂ ಭರವಸೆಯಿಂದ ನಿಲ್ಲುವಂತಾಗಿದೆಯಲ್ಲ! ಒಲೆ ಹತ್ತಿ ಉರಿಯುವುದರ ಮಹತ್ವ ಈ ಮುಖೇನ ಎಲ್ಲರಿಗೂ ಮನದಟ್ಟಾಗುತ್ತಿದೆ.

ಈ ಸ್ಥಿತಿ ಇನ್ನೂ ಕೆಲವು ಸಮಯ ಮುಂದುವರಿದರೆ, ಮಹಾನಗರಗಳಲ್ಲಿ ಬೀದಿ ಬೀದಿಗಳಲ್ಲಿ ತಳ್ಳುಗಾಡಿಗಳ ಮೇಲೆ ಸೌದೆಯ ಸಣ್ಣ ಸಣ್ಣ ಕಟ್ಟುಗಳನ್ನು ಮಾಡಿಟ್ಟುಕೊಂಡು ಕರೆ ಕರೆದುಕೊಂಡು ಮಾರುತ್ತ ಬಂದರೂ ಬರಬಹುದು. ಎಲ್ಲೆಲ್ಲಿ ಗ್ಯಾಸ್ ಏಜೆನ್ಸಿ, ಪೆಟ್ರೋಲ್ ಬಂಕ್‌ಗಳಿವೆಯೋ ಅಲ್ಲೆಲ್ಲ 'ಸೌದೆ ಮಾರಾಟ ಕೇಂದ್ರ,' ಎಂಬ ಹೊಸ ವಿಭಾಗ ಒಂದನ್ನು ತೆರೆದರೂ ತೆರೆಯಬಹುದು. ಇದಿಷ್ಟೇ ಅಲ್ಲದೇ ತಳ್ಳುಗಾಡಿಗಳ ಮೇಲೆ ಸಿದ್ಧ ಮಾದರಿಯ ಒಲೆಯನ್ನೇ ಇಟ್ಟು, ಚೆನ್ನಾಗಿ ಸೌದೆ ಹಾಕಿ ಉರಿಯುವಂತೆ ಮಾಡಿ, ಮನೆ ಮನೆಯ ಬೀದಿ, ಓಣಿಗಳಲ್ಲಿ ಬಂದು ''ನಮ್ಮಲ್ಲಿ ವಿಶಲ್ ಕುಕ್ಕರ್ ಹೊಡೆಸಿಕೊಡಲಾಗುವುದು, ಸಾಂಬಾರ್ ಕುದಿಸಿಕೊಡಲಾಗುವುದು, ಅನ್ನ ಮಾಡಿಕೊಡಲಾಗುವುದು'' ಎಂದೆಲ್ಲ ಕೂಗಿ ಕೂಗಿ ಕರೆಯಬಹುದು. ಇನ್ನೂ ಒಂದು ಸಾಧ್ಯತೆಯನ್ನೂ ನಾವು ಅಲ್ಲಗಳೆಯುವಂತಿಲ್ಲ. ಹೊಸ ಮನೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿ ಈ ಒಲೆ ಹಾಗೂ ಅದರ ಹೊಗೆ ಹೊರಕ್ಕೆ ಹೋಗಲು ಚಿಮಣಿ ಇತ್ಯಾದಿ ವ್ಯವಸ್ಥೆಗಳನ್ನು ತಪ್ಪದೇ ಮಾಡಬಹುದು ಮತ್ತು ಅದನ್ನು ತಮ್ಮ ಕರಪತ್ರಗಳಲ್ಲಿ, 'ಇಲ್ಲಿ ಸುಸಜ್ಜಿತ ಸೌದೆ ಒಲೆ ವ್ಯವಸ್ಥೆ ಇದೆ ಎನ್ನುವುದನ್ನೂ ಸೇರಿಸಬಹುದು. ಈ ವಸತಿ ಸಮುಚ್ಚಯಗಳ ವ್ಲಾಗ್ ಮಾಡಿ ಎಲ್ಲರಿಗೂ ತೋರಿಸುವವರು, ಆ ಒಲೆಯನ್ನು ಪರಿ ಪರಿಯಾಗಿ ಝೂಮ್ ಮಾಡಿ ವೀಡಿಯೋದಲ್ಲಿ ಸೆರೆಹಿಡಿದು ತೋರಿಸಬಹುದು. ಇರಲಿ ಒಲೆಗಳು ಎಂಥಾ ಒಳ್ಳೆಯ ಕಾಲ ಬಂತಲ್ಲಪ್ಪಾ ಎಂದು ಹುಬ್ಬೇರಿಸಲಡ್ಡಿಯಿಲ್ಲ.

ಓವರ್‌ಡೋಸ್: ಹೀಗೆ ಇನ್ನೂ ಒಂದಷ್ಟು ದಿನ ಕಾಸ್ ನೀಡಿದರೂ ಕ್ಲಪ್ತ ಸಮಯಕ್ಕೆ ಗ್ಯಾಸ್ ಸಿಲಿಂಡರ್ ಸಿಗದೇ ಹೋದರೆ ಆಗ 'ಗ್ಯಾಸ್ ಇದ್ದೋನೇ ಬಾಸ್'.



ಹಾರ್ಮುಜ್ ಜಲಸಂಧಿ ಸಮೀಪದ ಕರಾವಳಿ ಪ್ರದೇಶಗಳು, ಖಾರ್ಗ್ ದ್ವೀಪದ ಮೇಲೆ ದಾಳಿಗೆ ಅಮೆರಿಕ ಭಾರೀ ಸಿದ್ಧತೆ

ಇರಾನ್ ಮೇಲೆ ಭೂ ದಾಳಿಗೆ ಸನ್ನದ್ಧ

• **ದುಬೈ:** ಪಶ್ಚಿಮ ಏಷ್ಯಾದ ಸಂಘರ್ಷವು ಐದನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಹಾರ್ಮುಜ್ ಜಲಸಂಧಿಯ ಸಮೀಪವಿರುವ ಕರಾವಳಿ ಪ್ರದೇಶಗಳು ಮತ್ತು ಖಾರ್ಗ್ ದ್ವೀಪದ ಮೇಲೆ ದಾಳಿ ಸೇರಿದಂತೆ ಇರಾನ್‌ನಲ್ಲಿ ವಾರಗಳ ಕಾಲ ಭೂಸೇನಾ ಕಾರ್ಯಾಚರಣೆ ನಡೆಸಲು ಪೆಂಟಗನ್ ಸಿದ್ಧತೆ ನಡೆಸುತ್ತಿದೆ.

ವಾಣಿಜ್ಯ ಮತ್ತು ಮಿಲಿಟರಿ ಹಡಗುಗಳನ್ನು ಗುರಿಯಾಗಿಸುವ ಶಸ್ತ್ರಾಸ್ತ್ರಗಳನ್ನು ನಾಶಪಡಿಸಲು, ಇರಾನ್‌ನ ಶೇ.90 ರಷ್ಟು ಕಚ್ಚಾ ತೈಲ ರಫ್ತು ಮಾಡುವ ಖಾರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವ ಬಗ್ಗೆ ಟ್ರಂಪ್ ಆಡಳಿತ ಚರ್ಚಿಸುತ್ತಿದೆ. ವಿಶೇಷ ಕಾರ್ಯಾಚರಣೆ ಪಡೆಗಳು ಮತ್ತು ಕಾಲಾಳುಗಳನ್ನು ಒಳಗೊಂಡ ಈ ಯೋಜನೆ, ಮುಂದಿನ ಮಾತುಕತೆಗಳಲ್ಲಿ ಇರಾನ್ ಮೇಲೆ ಒತ್ತಡ ಹೇರಲು ನೆರವಾಗಲಿದೆ ಎನ್ನಲಾಗುತ್ತಿದೆ. ಮಿಲಿಟರಿ ಈ ಬಗ್ಗೆ ವಿಸ್ತೃತ ಯೋಜನೆಗಳನ್ನು ರೂಪಿಸಿದ್ದರೂ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಂತಿಮ ನಿರ್ಧಾರ ಇನ್ನೂ ಬಾಕಿ ಇದೆ.

ಕಾರ್ಯಾಚರಣೆಯ ಕಾಲಮಿತಿ: ಈ ಉದ್ದೇಶಗಳನ್ನು ಪೂರ್ಣಗೊಳಿಸಲು ಹಲವಾರು ವಾರಗಳಿಂದ ಎರಡು ತಿಂಗಳುಗಳ ಕಾಲಾವಕಾಶ ಬೇಕಾಗಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಖಾರ್ಗ್ ದ್ವೀಪದಂತಹ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು ಸುಲಭವಾದರೂ, ಅಲ್ಲಿ ನೆಲೆ ನಿಂತು ದ್ವೀಪವನ್ನು ಕಾಯುವ ಅಮೆರಿಕದ ಪಡೆಗಳನ್ನು ರಕ್ಷಿಸುವುದು ದೊಡ್ಡ ಸವಾಲು ಎಂದು ಮಾಜಿ ರಕ್ಷಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಿಲಿಟರಿ ಜಮಾವಣೆ: ಶನಿವಾರ ಯುಎಸ್ ಸೆಂಟ್ರಲ್ ಕಮಾಂಡ್ ಮಾಹಿತಿ ನೀಡಿದಂತೆ, 3,500 ಮೆರಿನ್ ಪಡೆಗಳು ಮತ್ತು ನಾವಿಕರು ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯ ಮೂಲಕ ಪಶ್ಚಿಮ ಏಷ್ಯಾವನ್ನು ತಲುಪಿದ್ದಾರೆ. ಎಫ್-35 ಫೈಟರ್ ಜೆಟ್ ಮತ್ತು ಸಾರಿಗೆ ವಿಮಾನಗಳನ್ನು ಒಳಗೊಂಡಿರುವ ಈ ನಿಯೋಜನೆ, ಕಳೆದ ಎರಡು ದಶಕಗಳಲ್ಲಿ ಆ ಪ್ರದೇಶದಲ್ಲಿ ಅಮೆರಿಕ ಕೈಗೊಂಡಿರುವ ಅತಿದೊಡ್ಡ ಮಿಲಿಟರಿ ಜಮಾವಣೆ ಎನಿಸಿದೆ.

ರಾಜತಾಂತ್ರಿಕ ನಿಲುವು: ಯುದ್ಧವನ್ನು ಕೊನೆಗೊಳಿಸುವ ಒಪ್ಪಂದಕ್ಕೆ ಇರಾನ್ ಒಪ್ಪದಿದ್ದರೆ ಮಿಲಿಟರಿ ಕ್ರಮವನ್ನು ತೀವ್ರಗೊಳಿಸಲು ಅಧ್ಯಕ್ಷರು ಸಿದ್ಧರಿದ್ದಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೀವಿಟ್ ಹೇಳಿದ್ದಾರೆ. ಮತ್ತೊಂದೆಡೆ, ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ, ಭೂಸೇನೆಯನ್ನು ಬಳಸದೆಯೇ ಗುರಿಗಳನ್ನು ಸಾಧಿಸಬಹುದು ಎಂದು ಸೂಚಿಸಿದ್ದಾರೆ. ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯೊಂದಿಗೆ ಈ ಸಂಘರ್ಷ ಆರಂಭವಾಗಿತ್ತು. ಇತ್ತ ಅಮೆರಿಕ ಮಾತುಕತೆಯಲ್ಲಿ ಪ್ರಗತಿಯಾಗಿದೆ ಎಂದು ಹೇಳುತ್ತಿದ್ದರೂ, ಇರಾನ್ ಯಾವುದೇ ಅಧಿಕೃತ ಮಾತುಕತೆ ನಡೆಯುತ್ತಿಲ್ಲ ಎಂದು ವಾದಿಸುತ್ತಿದೆ.

ಸಾರ್ವಜನಿಕ ಪ್ರತಿಕ್ರಿಯೆ: ಅಮೆರಿಕದಲ್ಲಿ ಈ ಕುರಿತು ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ನೋ ಕಿಂಗ್ಸ್ ಪ್ರತಿಭಟನಾಕಾರರು ಸಂಭಾವ್ಯ ಯುದ್ಧವನ್ನು ಖಂಡಿಸುತ್ತಿದ್ದರೆ, ಟ್ರಂಪ್ ಬೆಂಬಲಿಗರು ನಿರ್ಣಾಯಕ ಕ್ರಮವನ್ನು ಬೆಂಬಲಿಸುತ್ತಿದ್ದಾರೆ. ಇಸ್ರೇಲ್ ಈ ಕಾರ್ಯಾಚರಣೆಗೆ ಗುಪ್ತಚರ ಮತ್ತು ಲಾಜಿಸ್ಟಿಕ್ ಬೆಂಬಲ ನೀಡಲಿದೆ, ಪ್ರಾದೇಶಿಕ ಭದ್ರತೆಗೆ ಖಾರ್ಗ್ ದ್ವೀಪದ ತಟಸ್ಥೀಕರಣ ಅತ್ಯಗತ್ಯ ಎಂದು ಅದು ಪರಿಗಣಿಸಿದೆ.



ಇರಾನ್ ಇಂಟರ್‌ನೆಟ್ ಬ್ಲ್ಯಾಕ್‌ಔಟ್‌ಗೆ 30 ದಿನ

ಇರಾನ್‌ನಲ್ಲಿನ ಇಂಟರ್‌ನೆಟ್ ಬ್ಲ್ಯಾಕ್‌ಔಟ್ 30 ದಿನಗಳನ್ನು ದಾಟಿದ್ದು, ಸುಮಾರು 696 ಗಂಟೆಗಳಿಂದ ಇರಾನ್ ನಾಗರಿಕರು ಇಂಟರ್‌ನೆಟ್ ಸಂಪರ್ಕ ವಂಚಿತರಾಗಿದ್ದಾರೆ ಎಂದು ಇಂಟರ್‌ನೆಟ್ ನಿರೀಕ್ಷಕ ನೆಟ್‌ಬ್ಲಾಕ್ಸ್ ಹೇಳಿದೆ. ಬ್ಲ್ಯಾಕ್‌ಔಟ್ ಒಂದು ತಿಂಗಳು ದಾಟಿದ್ದು, ಇನ್ನೂ ಜಾರಿಯಲ್ಲಿದೆ. ಇದು ಇರಾನಿಯನ್ನರ ಸಂವಹನ ಮತ್ತು ಮಾಹಿತಿ ಹಕ್ಕುಗಳ ಉಲ್ಲಂಘನೆ ಎಂದು ನೆಟ್‌ಬ್ಲಾಕ್ಸ್ ಎಕ್ಸ್‌ನಲ್ಲಿ ಅಭಿಪ್ರಾಯಿಸಿದೆ. ಫೆ.28ರಂದು ಯುದ್ಧ ಆರಂಭವಾದಲ್ಲಿಂದ ದೇಶಾದ್ಯಂತ ಇಂಟರ್‌ನೆಟ್ ಬ್ಲಾಕ್ ಮಾಡಲು ಇರಾನ್ ನಿರ್ಧರಿಸಿತ್ತು.


ದುಬೈ, ಕುವೈತ್ ಮೇಲೆ ಇರಾನ್ ದಾಳಿ

ದುಬೈ: ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ), ದುಬೈ ಮತ್ತು ಕುವೈತ್‌ನಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದೆ. ಆದರೆ ಅಮೆರಿಕದ ಸೆಂಟ್ರಲ್ ಕಮಾಂಡ್ ಈ ವರದಿಗಳನ್ನು ನಿರಾಕರಿಸಿದೆ. ಕುವೈತ್ ಬಂದರು ಮತ್ತು ದುಬೈ ಕರಾವಳಿಯಲ್ಲಿ ಬ್ಯಾಲಿಸ್ಟಿಕ್ ಮತ್ತು ಕ್ರೂಸ್ ಕ್ಷಿಪಣಿಗಳನ್ನು ಬಳಸಿ ಅಮೆರಿಕದ ಸಿಬ್ಬಂದಿ ಮತ್ತು ನೌಕಾ ಹಡಗುಗಳನ್ನು ಗುರಿಯಾಗಿಸಿಕೊಂಡಿರುವುದಾಗಿ ಐಆರ್‌ಜಿಸಿ ತಿಳಿಸಿದೆ. ಜೊತೆಗೆ, ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ ನಡೆದಿದ್ದು, ರೇಡಾರ್ ವ್ಯವಸ್ಥೆಗಳಿಗೆ ಹಾನಿಯಾಗಿದೆ, ಎಂದಿದೆ. ಅಮೆರಿಕದ ಅಧಿಕಾರಿಗಳು ಈ ಪ್ರತಿಪಾದನೆಗಳನ್ನು ಸುಳ್ಳು ಎಂದಿದ್ದು, ದುಬೈನಲ್ಲಿ ಯಾವುದೇ ಸಿಬ್ಬಂದಿಯ ಮೇಲೆ ದಾಳಿ ನಡೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇರಾನ್ ಮೇಲೆ ದಾಳಿ ನಡೆಸಲು ಅಮೆರಿಕ ಅಥವಾ ಇಸ್ರೇಲ್‌ಗೆ ತಮ್ಮ ಭೂಪ್ರದೇಶವನ್ನು ಬಳಸಲು ಅವಕಾಶ ನೀಡದಂತೆ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಗಲ್ಫ್ ರಾಷ್ಟ್ರಗಳಿಗೆ ಎಚ್ಚರಿಕೆ ನೀಡಿದ್ದಾರೆ. ಈ ನಡುವೆ, ಹೌತಿ ಬಂಡುಕೋರರು ದಕ್ಷಿಣ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದ್ದು, ಸಂಘರ್ಷ ಒಂದು ತಿಂಗಳು ಪೂರೈಸಿದೆ.

28,455 ಕೋಟಿ ರೂ. ಅಮೆರಿಕ ರಕ್ಷಣಾ ನಷ್ಟ

ಇರಾನ್ ಯುದ್ಧದ ಮೊದಲ ಮೂರು ವಾರಗಳಲ್ಲಿ ಅಮೆರಿಕದ ಸೈನಿಕ ಸಂಪತ್ತಿಗೆ ಭಾರೀ ಹಾನಿಯಾಗಿದೆ. ಸುಮಾರು 28,455 ಕೋಟಿ ರೂ.(3 ಬಿಲಿಯನ್ ಡಾಲರ್) ನಷ್ಟವಾಗಿದೆ. ವರದಿಗಳ ಪ್ರಕಾರ, ಈ ನಷ್ಟ ಮತ್ತು ದುರಸ್ತಿ ವೆಚ್ಚವು ಸುಮಾರು 1.4 ಬಿಲಿಯನ್‌ರಿಂದ 2.9 ಬಿಲಿಯನ್ ಡಾಲರ್ ನಡುವೆಯಾಗಿದೆ. ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗಳು ಮಧ್ಯಪ್ರಾಚ್ಯದ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳ ಸೌಲಭ್ಯಗಳನ್ನು ಗುರಿಯಾಗಿಸಿವೆ. ಈ ನಷ್ಟಗಳನ್ನು ಪರಿಗಣಿಸಿ ಪೆಂಟಗನ್ ಸುಮಾರು 200 ಬಿಲಿಯನ್ ಡಾಲರ್ ಹೆಚ್ಚುವರಿ ವೆಚ್ಚ ಪ್ರಸ್ತಾವನೆಯನ್ನು ವೈಟ್ ಹೌಸ್‌ಗೆ ಸಲ್ಲಿಸುವ ನಿರೀಕ್ಷೆಯಿದೆ.

ಯುದ್ಧ ವಿಮಾನಗಳ ನಷ್ಟ: ಉನ್ನತ ಮೌಲ್ಯದ ಯುದ್ಧ ವಿಮಾನಗಳು ದೊಡ್ಡ ಪ್ರಮಾಣದಲ್ಲಿ ಹಾನಿಗೊಳಗಾಗಿವೆ. ಮಾ.1ರಂದು ಮೂರು ಎಫ್-15ಇ ಸ್ಟ್ರೈಕ್ ಈಗಲ್ ವಿಮಾನಗಳನ್ನು ತಪ್ಪಾಗಿ ಕುವೈತ್‌ನ ಎಫ್/ಎ-18 ಮೂಲಕ ಹೊಡೆದುರುಳಿಸಲಾಗಿದೆ. ಪ್ರತಿಯೊಂದು ವಿಮಾನದ ಬೆಲೆ ಸುಮಾರು 100 ಮಿಲಿಯನ್ ಡಾಲರ್. ಮಾ. 19ರಂದು ಒಂದು ಎಫ್-35ಎ ಲೈಟ್ನಿಂಗ್ ತುರ್ತು ಲ್ಯಾಂಡಿಂಗ್ ಮಾಡಬೇಕಾಯಿತು, ಇದನ್ನು ಇರಾನ್ ಗುರಿಯಾಗಿಸಿದೆ ಎಂದು ಹೇಳಿದೆ. ಈ ವಿಮಾನದ ಬೆಲೆ ಸುಮಾರು 82.5 ಮಿಲಿಯನ್ ಡಾಲರ್.



ಟ್ಯಾಂಕರ್ ಮತ್ತು ಸಿಬ್ಬಂದಿ ನಷ್ಟ: ಎ ಕೆಸಿ-135 ಸ್ಟ್ರಾಟೋಟ್ಯಾಂಕರ್ ವಿಮಾನವು ಇರಾಕ್‌ನಲ್ಲಿ ಪತನಗೊಂಡಿದ್ದು, ಆರು ಸಿಬ್ಬಂದಿ ಮೃತಪಟ್ಟಿದ್ದಾರೆ. ಸೌದಿ ಅರೇಬಿಯಾದಲ್ಲಿ ಐದು ಕೆಸಿ-135 ವಿಮಾನಗಳು ಕ್ಷಿಪಣಿ ದಾಳಿಯಿಂದ ಹಾನಿಗೊಳಗಾಗಿವೆ. ಈ ವಿಮಾನಗಳ ಉತ್ಪಾದನೆ ನಿಂತಿರುವುದರಿಂದ, ಕೆಸಿ-46 ಪೆಗಾಸಸ್ ವಿಮಾನಗಳಿಂದ ಅವುಗಳನ್ನು ಬದಲಿಸುವ ಸಾಧ್ಯತೆ ಇದೆ.

ಡ್ರೋನ್ ನಷ್ಟಗಳು: ಎಂಕ್ಯು-9 ರೀಪರ್ ಡ್ರೋನ್‌ಗಳಲ್ಲಿ ಡಜನ್‌ಗಿಂತ ಹೆಚ್ಚು ನಷ್ಟವಾಗಿದೆ. ಕನಿಷ್ಠ ಎಂಟು ಡ್ರೋನ್‌ಗಳನ್ನು ಕ್ಷಿಪಣಿಗಳು ಹೊಡೆದುರುಳಿಸಿದರೆ, ಕೆಲವು ನೆಲದಲ್ಲೇ ನಾಶವಾಗಿವೆ. ಪ್ರತಿಯೊಂದು ಡ್ರೋನ್ ಬೆಲೆ 16 ಮಿಲಿಯನ್‌ರಿಂದ 30 ಮಿಲಿಯನ್ ಡಾಲರ್‌ವರೆಗೆ ಇದೆ. ಜೋರ್ಡಾನ್‌ನ ಎಎನ್/ಟಿಪಿವೈ-2 ರಡಾರ್ ಮತ್ತು ಖತಾರ್‌ನ ಎಎನ್/ಎಫ್‌ಪಿಎಸ್-132 ರಡಾರ್ ಹಾನಿಗೊಳಗಾಗಿವೆ. ಈ ವ್ಯವಸ್ಥೆಗಳು ನೂರಾರು ಮಿಲಿಯನ್ ಡಾಲರ್ ಮೌಲ್ಯದವು. ಇವುಗಳ ಜತೆಗೆ ಇತರ ಗಲ್ಫ್ ರಾಷ್ಟ್ರಗಳಲ್ಲಿಯೂ ರಕ್ಷಣಾ ವ್ಯವಸ್ಥೆಗಳು ಹಾನಿಗೊಂಡಿವೆ.

ನೌಕಾಪಡೆ ಸಮಸ್ಯೆಗಳು: ಯುಎಸ್‌ಎಸ್ ಜೆರಾಲ್ಡ್ ಆರ್ ಫೋರ್ಡ್ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡು ಹಲವು ಭಾಗಗಳಿಗೆ ಹಾನಿಯಾಗಿದೆ. ಇದ ದುರಸ್ತಿ ಗ್ರೀಸ್‌ನಲ್ಲಿ ನಡೆಯುತ್ತಿದೆ. ಈ ಆರಂಭಿಕ ನಷ್ಟವೇ ಯುದ್ಧದ ಗಂಭೀರತೆಯನ್ನು ತೋರಿಸುತ್ತದೆ. ಭವಿಷ್ಯದಲ್ಲಿ ವೆಚ್ಚ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ.

ಹಾರ್ಮುಜ್ ದಾಟಿದ ಭಾರತದ 2 ನೌಕೆಗಳು

ಭಾರತದ ರಾಷ್ಟ್ರಧ್ವಜವಿರುವ ಎರಡು ಅಡುಗೆ ಅನಿಲ(ಎಲ್‌ಪಿಜಿ) ಕ್ಯಾರಿಯರ್ ಹಡಗುಗಳು ಯುದ್ಧ ಬಾಧಿತ ಹಾರ್ಮುಜ್ ಜಲಸಂಧಿಯನ್ನು ದಾಟಿದ್ದು, ಎರಡು ದಿನಗಳೊಳಗೆ ಭಾರತವನ್ನು ತಲುಪುವ ನಿರೀಕ್ಷೆಯಿದೆ. ಎರಡೂ ಹಡಗುಗಳಲ್ಲಿ ಒಟ್ಟು 94,000 ಟನ್‌ಗಳಷ್ಟು ಎಲ್‌ಪಿಜಿ ಕಾರ್ಗೊ ಇದೆ. ಬಿಡಬ್ಲ್ಯೂ ಟಿವೈಆರ್ ಮತ್ತು ಇಎಲ್‌ಎಂ ಹೆಸರಿನ ಎಲ್‌ಪಿಜಿ ಕ್ಯಾರಿಯರ್‌ಗಳು ಭಾರತದತ್ತ ಬರುತ್ತಿವೆಯೆಂಬ ಮಾಹಿತಿ ಲಭಿಸಿದೆ. ಇವುಗಳಲ್ಲಿ ಟಿವೈಆರ್ ಹಡಗು ಮಾ.31ರಂದು ಮುಂಬೈ ಕರಾವಳಿ ತಲುಪಲಿದ್ದು, ಇಎಲ್‌ಎಂ ಹಡಗು ಏ.1ರಂದು ನವ ಮಂಗಳೂರು ಬಂದರಿಗೆ ಪ್ರವೇಶಿಸುವ ನಿರೀಕ್ಷೆಯಿದೆ. ಜಗತ್ತಿನ ಯಾವುದೇ ರಾಷ್ಟ್ರಗಳಿಗೆ ಅನುಮತಿ ನೀಡಿರದ ಇರಾನ್, ಮೊದಲು ಭಾರತೀಯ ಹಡಗುಗಳಿಗೆ ಮಾತ್ರ ತೈಲ ಮತ್ತು ಅನಿಲ ಸಾಗಣೆಗೆ ಅವಕಾಶ ನೀಡಿತ್ತು. ಇದೀಗ ಭಾರತ ಸಹಿತ ಐದು ಮಿತ್ರ ರಾಷ್ಟ್ರಗಳಿಗೆ ಇರಾನ್ ಅನುಮತಿ ನೀಡಿದೆ. ಈಗಾಗಲೇ 6 ಭಾರತೀಯ ಹಡಗುಗಳು ಭಾರತಕ್ಕೆ ತಲುಪಿವೆ. ಅವುಗಳಲ್ಲಿ ಪೈನ್ ಗ್ಯಾಸ್ ಮತ್ತು ಜಗ್ ವಸಂತ್ 92,612 ಟನ್, ಎಂಟಿ ಶಿವಾಲಿಕ್ ಮತ್ತು ನಂದಾದೇವಿ 92,712 ಟನ್ ಎಲ್‌ಪಿಜಿ ಹೊತ್ತು ತಂದಿದ್ದವು. ಈ 6 ಅನಿಲ ಟ್ಯಾಂಕರ್‌ಗಳಲ್ಲದೆ, ಯುಎಇನಿಂದ 80,886 ಟನ್ ಕಚ್ಚಾ ತೈಲ ಹೊತ್ತ ಜಗ್ ಲಾಡ್ಕಿ ಹಡಗು ಮಾ.18ರಂದು ಮೊದಲಿಗೆ ಭಾರತ ತಲುಪಿತ್ತು.

ವಿದೇಶಾಂಗ ಸಚಿವರ ಸಮಾಗಮ

• **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಶಮನಗೊಳಿಸುವ ಉದ್ದೇಶದಿಂದ ಪಾಕಿಸ್ತಾನ ಆಯೋಜಿಸಿರುವ ಎರಡು ದಿನಗಳ ಚತುರ್ಭುಜ ಶೃಂಗಸಭೆಯಲ್ಲಿ ಭಾಗವಹಿಸಲು ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿಯ ವಿದೇಶಾಂಗ ಸಚಿವರು ಆಗಮಿಸಿದ್ದಾರೆ. ಉಪ ಪ್ರಧಾನ ಮಂತ್ರಿ ಇಶಾಕ್ ದಾರ್ ಆಹ್ವಾನದ ಮೇರೆಗೆ ಪ್ರಿನ್ಸ್ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್, ಬದ್ರ್ ಅಬ್ದೆಲಾಟ್ಟಿ ಮತ್ತು ಹಕನ್ ಫಿಡಾನ್ ಪ್ರಾದೇಶಿಕ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಈ ನಾಯಕರು ಪ್ರಧಾನ ಮಂತ್ರಿ ಶೆಹಬಾಜ್ ಷರೀಫ್ ಅವರನ್ನೂ ಭೇಟಿ ಮಾಡುವ ಕಾರ್ಯಕ್ರಮವಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯ ವೇಳೆ, ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು 20 ಪಾಕಿಸ್ತಾನಿ ಧ್ವಜದ ಹಡಗುಗಳಿಗೆ ಇರಾನ್ ಅನುಮತಿ ನೀಡಲಿದೆ ಎಂದು ದಾರ್ ಘೋಷಿಸಿದರು. ಪ್ರತಿದಿನ ಎರಡು ಹಡಗುಗಳು ಜಲಸಂಧಿಯನ್ನು ದಾಟಲಿವೆ. ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಂಘರ್ಷವನ್ನು ಅಂತ್ಯಗೊಳಿಸಲು ಪಾಕಿಸ್ತಾನ ಸಂಬಂಧಿತ ದೇಶಗಳೊಂದಿಗೆ ಮಾತುಕತೆ ಮುಂದುವರಿಸಿದೆ.

ಅಮೆರಿಕ, ಯುರೋಪಿನಾದ್ಯಂತ ನೋ ಕಿಂಗ್ಸ್ ಬೃಹತ್ ಪ್ರತಿಭಟನೆ



• **ಸೇಂಟ್ ಪಾಲ್:** ಇರಾನ್ ಮೇಲಿನ ಯುದ್ಧ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮಗಳನ್ನು ವಿರೋಧಿಸಿ ಅಮೆರಿಕ ಮತ್ತು ಯುರೋಪಿನಾದ್ಯಂತ ನಡೆದ ನೋ ಕಿಂಗ್ಸ್ ರ್‍ಯಾಲಿಯಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದರು.

ಆಯೋಜಕರು ಅಮೆರಿಕದ ಎಲ್ಲಾ 50 ರಾಜ್ಯಗಳಲ್ಲಿ 3,100ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿದ್ದು, ಮಿನ್ನೆಸೋಟ ಈ ಪ್ರತಿಭಟನೆಯ ಕೇಂದ್ರವಾಗಿತ್ತು. ಈ ವಾರ 90 ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಆಯೋಜಕರು ತಿಳಿಸಿದ್ದಾರೆ. ನ್ಯೂಯಾರ್ಕ್ ಮತ್ತು ಸ್ಯಾನ್ ಡಿಯಾಗೋದಂತಹ ಪ್ರಮುಖ ನಗರಗಳಲ್ಲದೆ, ಇಡಾಹೊ ಮತ್ತು ವ್ಯೋಮಿಂಗ್ ನಂತಹ ರಾಜ್ಯಗಳಲ್ಲೂ ಪ್ರತಿಭಟನೆಗಳು ನಡೆದಿವೆ.

ಪ್ರಮುಖ ಆರೋಪಗಳು: ವಲಸೆ ಜಾರಿ ಕ್ರಮಗಳು, ಲೈಂಗಿಕ ಅಲ್ಪಸಂಖ್ಯಾತರ(ಟ್ರಾನ್ಸ್ ಜೆಂಡರ್) ಹಕ್ಕುಗಳ ಹಿಂತೆಗೆತ ಮತ್ತು ಇರಾನ್ ಮೇಲಿನ ಯುದ್ಧದ ವಿರುದ್ಧ ಪ್ರತಿಭಟನಾಕಾರರು ಸಿಡಿದೆದ್ದಿದ್ದಾರೆ. ಸೇಂಟ್ ಪಾಲ್‌ನಲ್ಲಿನಡೆದ ಕಾರ್ಯಕ್ರಮದಲ್ಲಿ ಗಾಯಕ ಬ್ರೂಸ್ ಸ್ಪ್ರಿಂಗ್‌ಸ್ಟೀನ್, ಫೆಡರಲ್ ಏಜೆಂಟ್‌ಗಳ ಗುಂಡಿಗೆ ಬಲಿಯಾದ ರೆನೀ ಗುಡ್ ಮತ್ತು ಅಲೆಕ್ಸ್ ಪ್ರೆಟ್ಟಿ ಅವರಿಗೆ ಗೌರವ ಸಲ್ಲಿಸಿದರು. ಲಂಡನ್, ಪ್ಯಾರಿಸ್ ಮತ್ತು ರೋಮ್‌ಗಳಲ್ಲೂ ಯುದ್ಧ ವಿರೋಧಿ ರ್‍ಯಾಲಿಗಳು ನಡೆದಿವೆ.

ಕಿರುಸುದ್ದಿ

ಡಿಎಂಕೆ ಪ್ರಾಬಲ್ಯದ ಎರಡು ಕ್ಷೇತ್ರಗಳಿಂದ ದಳಪತಿ ಸ್ಪರ್ಧೆ

• **ಚೆನ್ನೈ:** ಮುಂಬರುವ ತಮಿಳುನಾಡು ವಿಧಾನಸಭೆ ಚುನಾವಣೆಗಾಗಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ತನ್ನ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ್ದು, ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ದಳಪತಿ ವಿಜಯ್ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವುದಾಗಿ ಭಾನುವಾರ ಘೋಷಿಸಿದೆ. ಡಿಎಂಕೆ ಅಧಿಕಾರದಲ್ಲಿರುವ ಪೆರಂಬೂರ್ ಮತ್ತು ತಿರುಚ್ಚಿ(ಪೂರ್ವ) ವಿಧಾನಸಭಾ ಕ್ಷೇತ್ರಗಳಿಂದ ನಟ ವಿಜಯ್ ಸ್ಪರ್ಧಿಸಲಿದ್ದಾರೆ. ಇದೇ ಮೊದಲ ಬಾರಿಗೆ ಚುನಾವಣಾ ಕಣಕ್ಕಿಳಿದಿರುವ ವಿಜಯ್, ತಮ್ಮ ಪಕ್ಷಕ್ಕೊಂದು ಅವಕಾಶ ನೀಡಬೇಕೆಂದು ಜನತೆಗೆ ಮನವಿ ಮಾಡಿದ್ದಾರೆ.

ರೇಮಂಡ್ ಗ್ರೂಪ್ ಮಾಜಿ ಅಧ್ಯಕ್ಷ ವಿಜಯಪತ್ ನಿಧನ

• **ಮುಂಬೈ:** ರೇಮಂಡ್ ಗ್ರೂಪ್‌ನ ಮಾಜಿ ಅಧ್ಯಕ್ಷರು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ವಿಜಯಪತ್ ಸಿಂಘಾನಿಯಾ(87) ಅವರು ನಿಧನ ಹೊಂದಿದ್ದಾರೆ. ಮಗ, ಸಮೂಹದ ಹಾಲಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಗೌತಮ್ ಸಿಂಘಾನಿಯಾ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ನಿಧನ ವಾರ್ತೆಯನ್ನು ತಿಳಿಸಿದ್ದಾರೆ.

ದಶಕದ ನಂತರ ಕಛ್‌ನಲ್ಲಿ ಜನ್ಮ ತಾಳಿದ ಹೆಬ್ಬಕ ಮರಿ



• **ಗಾಂಧಿನಗರ:** ಗುಜರಾತ್ ಮತ್ತು ರಾಜಸ್ಥಾನದ ಅರಣ್ಯ ಇಲಾಖೆಗಳ ಯಶಸ್ವಿ ಸಂರಕ್ಷಣಾ ಯೋಜನೆಯ ಫಲವಾಗಿ ಒಂದು ದಶಕದ ನಂತರ ಕಛ್‌ನ ಅಬ್ಡಾಸ ಪ್ರದೇಶದಲ್ಲಿ ಬಿಳಿ ಹೆಬ್ಬಕದ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಮರಿ ಜನ್ಮ ತಾಳಿದೆ. ರಾಜಸ್ಥಾನದ ಸಂತಾನೋತ್ಪತ್ತಿ ಕೇಂದ್ರದಿಂದ ತಂದ ಫಲವತ್ತಾದ ಮೊಟ್ಟೆಯಿಂದ ಮೂಲಕ ಮಾರ್ಚ್ 26ರಂದು ಮರಿ ಜನಿಸಿದೆ ಎಂದು ಅರಣ್ಯ ಸಚಿವ ಅರ್ಜುನ್ ಮೊಧ್ವಾಡಿಯಾ ಖಚಿತಪಡಿಸಿದ್ದಾರೆ. ಮಾರ್ಚ್ 22ರಂದು ಜಂಪ್ ಸ್ಟಾರ್ಟ್ ಅಪ್ರೋಚ್ ಅನ್ವಯ ಅಧಿಕಾರಿಗಳು ಹೆಣ್ಣು ಹಕ್ಕಿಯ ಗೂಡಿನಲ್ಲಿದ್ದ ಬಂಜೆ ಮೊಟ್ಟೆ ತೆಗೆದು, ಅದರ ಬದಲಿಗೆ ಈ ಫಲವತ್ತಾದ ಮೊಟ್ಟೆಯನ್ನು ಇರಿಸಿದ್ದರು.

ಯೋಜನೆಯ ಹಿನ್ನೆಲೆ ಏನು? ಬಿಳಿ ಹೆಬ್ಬಕಗಳ ನೈಸರ್ಗಿಕ ವಾಸಸ್ಥಾನವನ್ನು ಸಂರಕ್ಷಿಸುವ ಉದ್ದೇಶದಿಂದ 2016 ರಲ್ಲಿ ಪ್ರಾಜೆಕ್ಟ್ ಜಿಐಬಿ ಅನ್ನು ಪ್ರಾರಂಭಿಸಲಾಗಿತ್ತು. ಪ್ರಸ್ತುತ ಆರೋಗ್ಯ ರಕ್ಷಣಾ ತಂಡಗಳು ಹೆಣ್ಣು ಹಕ್ಕಿ ಮತ್ತು ಆರೋಗ್ಯಕರ ಮರಿಯ ಸುರಕ್ಷತೆ ಹಾಗೂ ಬೆಳವಣಿಗೆಯನ್ನು ನಿರಂತರವಾಗಿ ಗಮನಿಸುತ್ತಿವೆ.

ತ.ನಾಡು ಮಹಿಳೆಯರಿಗೆ 8,000 ರೂ.ಗಳ ಕೂಪನ್

• **ಚೆನ್ನೈ:** ವಿಧಾನಸಭೆ ಚುನಾವಣೆಗೆ ಡಿಎಂಕೆ ತಮ್ಮ ಪಕ್ಷದ ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದ್ದು, ಮಹಿಳೆಯರಿಗೆ ಮನೆ ಉಪಕರಣಗಳನ್ನು ಖರೀದಿಸಲು ಅಥವಾ ಬದಲಾಯಿಸಲು ಇಲ್ಲತರಾಸಿ ರೂಪದಲ್ಲಿ 8,000 ರೂ. ಮೌಲ್ಯದ ಕೂಪನ್ ನೀಡಲಾಗುತ್ತದೆ ಎಂದು ತಮಿಳುನಾಡಿನ ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಘೋಷಿಸಿದ್ದಾರೆ. ಈ ಕೂಪನ್ ಟಿವಿ, ಫ್ರಿಜ್, ವಾಷಿಂಗ್ ಮಶಿನ್, ಮೈಕ್ರೋವೇವ್ ಓವೆನ್, ಮಿಕ್ಸಿ, ಇಂಡಕ್ಷನ್ ಸ್ಟವ್ ಮುಂತಾದ ಉಪಕರಣಗಳಿಗೆ ಬಳಸಬಹುದು. ಹಿರಿಯ ನಾಗರಿಕರು ಮತ್ತು 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಪಿಂಚಣಿ 2,000 ರೂ.ಗೆ ಹೆಚ್ಚಳ, ಸಿಎಂ ಆರೋಗ್ಯ ರಕ್ಷಣೆ ಯೋಜನೆಯ ವ್ಯಾಪ್ತಿ 10 ಲಕ್ಷ ರೂ.ವರೆಗೆ ಹೆಚ್ಚಳ, 20 ಲಕ್ಷ ಕೃಷಿಕರಿಗೆ ಉಚಿತ ವಿದ್ಯುತ್ ಉಪಕರಣಗಳೊಂದಿಗೆ ಎಲೆಕ್ಟ್ರಿಕ್ ಪಂಪ್ ಸೆಟ್ ನೀಡಲಾಗುವುದು. 10 ಲಕ್ಷ ನೂತನ ಕಾಂಕ್ರೀಟ್ ಮನೆ ನಿರ್ಮಾಣ, 5 ಲಕ್ಷ ಯುವಕರಿಗೆ 1,500 ರೂ. ಮಾಸಿಕ ಸಹಾಯ, 50 ಲಕ್ಷ ಉದ್ಯೋಗ ಸೃಷ್ಟಿ ಮತ್ತು 35 ಲಕ್ಷ ಉಚಿತ ಲ್ಯಾಪ್‌ಟಾಪ್ ಹಂಚಿಕೆ ಮತ್ತು ಕೊಯಂಬತ್ತೂರು, ಸಲೇಮ್, ಮಧುರೈ, ತಿರುಚಿರಾಪಳ್ಳಿ ಬಳಿ ಭವಿಷ್ಯದ ಅತ್ಯಾಧುನಿಕ ವಿಶ್ವನಗರಗಳ ನಿರ್ಮಾಣ ಮಾಡುತ್ತೇವೆ.

ಹೆಲ್ತ್ ಸೆಕ್ಟರ್‌ನಲ್ಲಿ ಡಯಾಲಿಸಿಸ್ ಘಟಕಗಳನ್ನು ದುಪ್ಪಟ್ಟು ಮಾಡಲಾಗುತ್ತದೆ ಮತ್ತು 11 ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗುತ್ತದೆ. ಮೀನುಗಾರರಿಗೆ ಮತ್ತು ಹಾಲು ಉತ್ಪಾದಕರಿಗೆ ಸಹಾಯದ ಪ್ರಮಾಣ ಹೆಚ್ಚಿಸಲಾಗುತ್ತದೆ ಎಂದು ಡಿಎಂಕೆ ಭರವಸೆ ನೀಡಿದೆ.

ಇಂಧನ, ಎಲ್‌ಪಿಜಿ ಪೂರೈಕೆ ವ್ಯತ್ಯಯವಾಗದಂತೆ ಕ್ರಮ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟ ಹಿನ್ನೆಲೆಯಲ್ಲಿ ಸರ್ಕಾರ ಇಂಧನ ಮತ್ತು ಅನಿಲ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಜಾರಿಗೊಳಿಸಿದ್ದು, ಆತಂಕದಿಂದ ಇಂಧನ ಖರೀದಿ ಮಾಡದಂತೆ ನಾಗರಿಕರಿಗೆ ಸೂಚಿಸಿದೆ.ಸಂಸ್ಕರಣಾಗಾರಗಳು ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೇಶಾದ್ಯಂತ ಕಚ್ಚಾ ತೈಲ, ಪೆಟ್ರೋಲ್ ಮತ್ತು ಡೀಸೆಲ್‌ನ ಸಾಕಷ್ಟು ದಾಸ್ತಾನು ಇವೆ. ವದಂತಿಗಳಿಂದಾಗಿ ಕೆಲವು ರಾಜ್ಯಗಳಲ್ಲಿ ತಾತ್ಕಾಲಿಕವಾಗಿ ಬೇಡಿಕೆ ಹೆಚ್ಚಾಗಿದ್ದರೂ, ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಪೂರೈಕೆಗೆ ಅಗತ್ಯವಿರುವಷ್ಟು ದಾಸ್ತಾನು ಲಭ್ಯವಿದೆ. ಪೈಪ್ಡ್ ನೈಸರ್ಗಿಕ ಅನಿಲ(ಪಿಎನ್‌ಜಿ) ಮತ್ತು ಸಿಎನ್‌ಜಿ (ಸಿಎನ್‌ಜಿ) ಪೂರೈಕೆಗೆ ಶೇ.100ರಷ್ಟು ಆದ್ಯತೆ ನೀಡಲಾಗಿದೆ. ಕೈಗಾರಿಕಾ ಬಳಕೆದಾರರು ಸರಾಸರಿ ಬಳಕೆಯ ಶೇ.80ರಷ್ಟು ಪೂರೈಕೆಯನ್ನು ಪಡೆಯುತ್ತಿದ್ದರೆ, ರಸಗೊಬ್ಬರ ಘಟಕಗಳು ಶೇ.70ರಿಂದ 75ರಷ್ಟು ಪೂರೈಕೆಯನ್ನು ಪಡೆಯುತ್ತಿವೆ. ಮಾರ್ಚ್‌ನಲ್ಲಿ 2,90,000ಕ್ಕೂ ಹೆಚ್ಚು ಹೊಸ ಪೈಪ್ಡ್ ಗ್ಯಾಸ್ ಸಂಪರ್ಕಗಳನ್ನು ಒದಗಿಸಲಾಗಿದೆ. ದೈನಂದಿನ ಎಲ್‌ಪಿಜಿ ವಿತರಣೆ 55 ಲಕ್ಷ ಸಿಲಿಂಡರ್‌ಗಳನ್ನು ಮೀರಿದೆ. ವಾಣಿಜ್ಯ ಬಳಕೆಯ ಪೂರೈಕೆ ಬಿಕ್ಕಟ್ಟಿನ ಪೂರ್ವದ ಮಟ್ಟದ ಶೇ.70ರಷ್ಟನ್ನು ತಲುಪಿದೆ. ಅಕ್ರಮ ದಾಸ್ತಾನು ತಡೆಗಟ್ಟಲು ಅಧಿಕಾರಿಗಳು 2,900 ದಾಳಿಗಳನ್ನು ನಡೆಸಿ 1,000 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಇದೇ ವೇಳೆ ರಾಜ್ಯಗಳಿಗೆ ಸೀಮೆಎಣ್ಣೆ ಹಂಚಿಕೆಯನ್ನು ಹೆಚ್ಚಿಸಲಾಗಿದೆ. ದೇಶೀಯ ಲಭ್ಯತೆಯನ್ನು ಹೆಚ್ಚಿಸಲು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 10 ರೂ. ಕಡಿತಗೊಳಿಸಲಾಗಿದೆ.

ಮಿಗ್29 ಫೈಟರ್ ಜೆಟ್‌ಗೆ ಶೀಘ್ರವೇ ಆಧುನಿಕ ಕ್ಷಿಪಣಿ

• **ಹೊಸದಿಲ್ಲಿ:** ಭಾರತೀಯ ವಾಯುಪಡೆಯ(ಐಎಎಫ್) ಮಿಗ್-29 ಯುದ್ಧ ವಿಮಾನಗಳಲ್ಲಿನ ರಷ್ಯಾ ಶಸ್ತ್ರಾಸ್ತ್ರಗಳ ಬದಲಿಗೆ ಯುರೋಪಿನ ಅತ್ಯಾಧುನಿಕ ಕಡಿಮೆ ದೂರವ್ಯಾಪ್ತಿಯ ಏರ್-ಟು-ಏರ್ ಕ್ಷಿಪಣಿಗಳನ್ನು ಅಳವಡಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಇದರಿಂದ ಐಎಎಫ್‌ನ ಯುದ್ಧ ಸಾಮರ್ಥ್ಯವು ಇನ್ನಷ್ಟು ಹೆಚ್ಚಾಗಲಿದೆ. ರಷ್ಯಾ ಮೂಲದ ಯುದ್ಧ ವಿಮಾನಗಳಲ್ಲಿ ಸುಮಾರು 25 ಕಿ.ಮೀ. ದೂರವ್ಯಾಪ್ತಿ ಇರುವ ಅತ್ಯಾಧುನಿಕ ಯುದ್ಧ ಕ್ಷಿಪಣಿಗಳನ್ನು ನಿಯೋಜಿಸಲು ರಕ್ಷಣಾ ಸಚಿವಾಲಯವು ಟೆಂಡರ್ ಆಹ್ವಾನಿಸಿತ್ತು. ಪ್ರಸ್ತುತ ಈ ರೀತಿಯ 50ಕ್ಕೂ ಹೆಚ್ಚು ಯುದ್ಧವಿಮಾನಗಳನ್ನು ವಾಯುಪಡೆಯು ಹೊಂದಿದ್ದು, ಅದರಲ್ಲಿ ಎರಡು ಆಸನಗಳ 8 ತರಬೇತಿ ಯುದ್ಧ ವಿಮಾನಗಳೂ ಸೇರಿವೆ. ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳಲ್ಲಿ ಎಎಸ್‌ಆರ್‌ಎಎಂ ಕ್ಷಿಪಣಿಗಳ ಅಳವಡಿಕೆಯಿಂದ 1980ರ ದಶಕದ ಇನ್‌ಫ್ರಾರೆಡ್ ಮಾರ್ಗದರ್ಶಿತ ಆರ್-73 ಕ್ಷಿಪಣಿಯನ್ನು (10ರಿಂದ 15 ಕಿ.ಮೀ. ವ್ಯಾಪ್ತಿ) ಹಿಂಪಡೆಯಲಾಗುತ್ತದೆ.

ಸಂಘರ್ಷಗಳಿಂದ ಜಾಗತಿಕ ಇಂಧನ ಪೂರೈಕೆಗೆ ಸಂಕಷ್ಟ: ಮನ್ ಕಿ ಬಾತ್‌ನಲ್ಲಿ ಮೋದಿ

ಸರ್ಕಾರ ನೀಡುವ ಮಾಹಿತಿಯನ್ನು ಮಾತ್ರ ನಂಬಿ

• **ಹೊಸದಿಲ್ಲಿ:** ಜಾಗತಿಕ ಇಂಧನ ಪರಿಸ್ಥಿತಿ ಕುರಿತು ಎಚ್ಚರಿಕೆ ನೀಡಿರುವ ಪ್ರಧಾನಿ ನರೇಂದ್ರ ಮೋದಿಯವರು, ವಿಶ್ವದ ಹಲವು ಭಾಗಗಳಲ್ಲಿ ನಡೆಯುತ್ತಿರುವ ಯುದ್ಧಗಳು ಮತ್ತು ಸಂಘರ್ಷಗಳು ಪೆಟ್ರೋಲ್ ಹಾಗೂ ಡೀಸೆಲ್ ಸರಬರಾಜಿನ ಮೇಲೆ ಪರಿಣಾಮ ಬೀರುತ್ತಿದ್ದು, ಜಾಗತಿಕ ಮಟ್ಟದಲ್ಲಿ ಇಂಧನ ಸಂಕಷ್ಟ ರೂಪುಗೊಳ್ಳುತ್ತಿದೆ ಎಂದು ಹೇಳಿದರು.

ತಮ್ಮ 132ನೇ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮಾತನಾಡಿರುವ ಅವರು, ಇಂತಹ ಸವಾಲುಗಳ ನಡುವೆಯೂ ಭಾರತವು ಪರಿಸ್ಥಿತಿಯನ್ನು ಸ್ಥಿರವಾಗಿ ಎದುರಿಸುತ್ತಿದೆ. ಇಂತಹ ಸಮಯದಲ್ಲಿ ದೇಶದ ಜನರು ಏಕತೆ ಪ್ರದರ್ಶಿಸಬೇಕು ಮತ್ತು ಅಪಪ್ರಚಾರಗಳಿಗೆ ಕಿವಿಗೊಡಬಾರದು. ಸರ್ಕಾರ ನೀಡುವ ಮಾಹಿತಿಯನ್ನು ಮಾತ್ರ ನಂಬಬೇಕು ಎಂದು ಮನವಿ ಮಾಡಿದರು.

ಕೋವಿಡ್ ನಂತರ ವಿಶ್ವವು ಪುನಶ್ಚೇತನಗೊಳ್ಳಲಿದೆ ಎಂದು ನಿರೀಕ್ಷಿಸಿದ್ದರೂ, ವಿವಿಧ ಪ್ರದೇಶಗಳಲ್ಲಿ ಯುದ್ಧಗಳು ಮುಂದುವರಿದಿವೆ. ವಿಶೇಷವಾಗಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಸಂಘರ್ಷವನ್ನು ಉಲ್ಲೇಖಿಸಿದ ಅವರು, ಗಲ್ಫ್ ರಾಷ್ಟ್ರಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಭಾರತೀಯರ



ಸುರಕ್ಷತೆ ಹಾಗೂ ಅಲ್ಲಿ ದೊರೆಯುತ್ತಿರುವ ಸಹಕಾರಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಈ ಪ್ರದೇಶವು ಭಾರತದ ಪ್ರಮುಖ ಇಂಧನ ಮೂಲವಾಗಿರುವುದರಿಂದ ಇಂಧನ ಸರಬರಾಜಿನ ಮೇಲೆ ಪರಿಣಾಮ ಕಂಡುಬರುತ್ತಿದೆ ಎಂದು ಹೇಳಿದರು.

ಜ್ಞಾನ ಭಾರತಂ ಆ್ಯಪ್: ಜ್ಞಾನ ಭಾರತಂ ಸಮೀಕ್ಷೆಯ ಕುರಿತು ಮಾತನಾಡಿದ ಅವರು, ದೇಶದ ಹಸ್ತಪ್ರತಿಗಳ ಮಾಹಿತಿ ಸಂಗ್ರಹಿಸುವ ಈ ಯೋಜನೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಕೋರಿದರು. ಜ್ಞಾನ ಭಾರತಂ ಆ್ಯಪ್ ಮೂಲಕ ಮಾಹಿತಿ ಹಂಚಿಕೊಳ್ಳಬಹುದು ಎಂದು ಹೇಳಿದರು.

ಭಾರತದ ಜಯ ದೇಶಕ್ಕೆ ಹೆಮ್ಮೆ: ಕ್ರೀಡೆಗಳ ಕುರಿತು ಮಾತನಾಡಿದ ಪ್ರಧಾನಿ, ಟಿ20 ವಿಶ್ವಕಪ್‌ನಲ್ಲಿ ಭಾರತದ ಜಯ ದೇಶಕ್ಕೆ ಹೆಮ್ಮೆ ತಂದಿದೆ. ಜಮ್ಮು-ಕಾಶ್ಮೀರದಲ್ಲಿ ಕ್ರೀಡೆಗಳಿಗೆ ಹೆಚ್ಚುತ್ತಿರುವ ಪ್ರೋತ್ಸಾಹವನ್ನು ಉಲ್ಲೇಖಿಸಿ, ಯುವಕರು ವಿವಿಧ ಕ್ರೀಡೆಗಳಲ್ಲಿ ತೊಡಗಿಸಿಕೊಂಡಿರುವುದು ಸಂತಸದ ವಿಚಾರ ಎಂದರು.

ಆರೋಗ್ಯದ ಮಹತ್ವವನ್ನು ಒತ್ತಿಹೇಳಿದ ಅವರು, ಸಕ್ಕರೆ ಮತ್ತು ಖಾದ್ಯ ತೈಲ ಬಳಕೆಯನ್ನು ಕಡಿಮೆ ಮಾಡಲು ಸಲಹೆ ನೀಡಿದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ತಯಾರಾಗುವಂತೆ ಕರೆ ನೀಡಿದರು.

ಶಿಕ್ಷಣ ಕ್ಷೇತ್ರದಲ್ಲಿ ನಿರಂತರ ಅಭ್ಯಾಸದ ಅಗತ್ಯವನ್ನು ಒತ್ತಿ ಹೇಳಿದ ಅವರು, ಬೆಂಗಳೂರಿನ ಪ್ರಯೋಗಾ ಸಂಸ್ಥೆಯ ಅನ್ವೇಷಣೆ ಕಾರ್ಯಕ್ರಮವನ್ನು ಮೆಚ್ಚಿದರು. ಇದು ವಿದ್ಯಾರ್ಥಿಗಳಿಗೆ ಸಂಶೋಧನಾ ಅವಕಾಶ ಒದಗಿಸುತ್ತದೆ ಎಂದು ಹೇಳಿದರು. ಜೊತೆಗೆ ನಾಗಾ ಸಮುದಾಯದ 'ಮೊರುಂಗ್' ಶಿಕ್ಷಣ ಪದ್ಧತಿಯನ್ನು ಉದಾಹರಣೆಯಾಗಿ ನೀಡಿ, ಪರಂಪರ ಜ್ಞಾನವನ್ನು ಉಳಿಸುವ ಮಹತ್ವವನ್ನು ವಿವರಿಸಿದರು.

ಕಳೆದ ಹತ್ತು ವರ್ಷಗಳಲ್ಲಿ ಅಕ್ರಮ ನುಸುಳುವಿಕೆ ತಡೆಗಟ್ಟಿದ ಬಿಜೆಪಿ: ಶಾ

ನುಸುಳುಕೋರರನ್ನು ಹೊರದಬ್ಬುತ್ತೇವೆ

• **ಧೇಕಿಯಾಜುಲಿ(ಅಸ್ಸಾಂ):** ಕಳೆದ ಹತ್ತು ವರ್ಷಗಳಲ್ಲಿ ಬಿಜೆಪಿ ಸರ್ಕಾರ ಅಸ್ಸಾಂನಲ್ಲಿ ನುಸುಳುವಿಕೆಯನ್ನು ತಡೆಗಟ್ಟಿದೆ. ಆದರೆ ಅದಷ್ಟೇ ಸಾಕಾಗುವುದಿಲ್ಲ, ಬಂಧಿಸಲ್ಪಟ್ಟ ಪ್ರತಿಯೊಬ್ಬ ನುಸುಳುಕೋರನನ್ನೂ ವಾಪಸ್ ಹೊರದಬ್ಬಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುಡುಗಿದ್ದಾರೆ. ಅಸ್ಸಾಂನ ಸೋನಿತ್ಪುರ್ ಜಿಲ್ಲೆಯ ಧೇಕಿಯಾಜುಲಿ ಪ್ರದೇಶದಲ್ಲಿ ಭಾನುವಾರ ನಡೆದ ಚುನಾವಣಾ ಸಭೆಯಲ್ಲಿ ಮಾತನಾಡಿದ ಅವರು, ಅಸ್ಸಾಂಗೆ ನುಸುಳುಕೋರರು ಪ್ರವೇಶಿಸದಂತೆ ತಡೆಯುತ್ತೇವೆಂದು ಹತ್ತು ವರ್ಷಗಳ ಹಿಂದೆ ನೀಡಿದ್ದ ವಾಗ್ದಾನವನ್ನು ಬಿಜೆಪಿ ಈಡೇರಿಸಿದೆ ಎಂದು ಹೇಳಿದ್ದಾರೆ.

ಉದ್ಯೋಗ, ಆಹಾರಧಾನ್ಯ ಕಸಿದ ಅಕ್ರಮವಲಸಿಗರು: ಒಳನುಸುಳುಕೋರರು ಅಸ್ಸಾಮಿ ಯುವಕರ ಉದ್ಯೋಗ ಕಸಿದುಕೊಂಡಿದ್ದು, ಬಡವರ ಆಹಾರಧಾನ್ಯವನ್ನೂ ಕಬಳಿಸಿದ್ದಾರೆ ಎಂದು ಶಾ ಆರೋಪಿಸಿದರು.

1.25 ಲಕ್ಷ ಎಕರೆ ನುಸುಳುಕೋರ ಮುಕ್ತ: ಹಿಮಂತ ಬಿಸ್ವ ಶರ್ಮಾ ಸರ್ಕಾರವು ನುಸುಳುಕೋರರು ಅಕ್ರಮವಾಗಿ ಅತಿಕ್ರಮಿಸಿದ್ದ 1.25 ಲಕ್ಷ ಎಕರೆ ಭೂಮಿಯನ್ನು ನುಸುಳುಕೋರ ಮುಕ್ತಗೊಳಿಸಿದೆ. ಮುಂದಿನ ಐದು ವರ್ಷಗಳಲ್ಲಿ ನುಸುಳುಕೋರರ ನಿಯಂತ್ರಣದಲ್ಲಿ ಭೂಮಿ ಉಳಿಯದಂತೆ ಶರ್ಮಾ ಖಚಿತಪಡಿಸುವರು ಎಂದು ಶಾ ಭರವಸೆ ನೀಡಿದ್ದಾರೆ.

ನುಸುಳುಕೋರರ ರಕ್ಷಣೆಗೆ ನಿಂತ ರಾಹುಲ್: ನುಸುಳುಕೋರರ



ರಕ್ಷಿಸುವ ಉದ್ದೇಶದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಲವು ರಾಜ್ಯಗಳಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಗೆ ವಿರೋಧಿಸುತ್ತಲೇ ಇದ್ದಾರೆಂದು ಶಾ ಆರೋಪಿಸಿದ್ದಾರೆ.

ಹುತಾತ್ಮರಿಗೆ ಸ್ಮಾರಕ ಕಟ್ಟಲಿಲ್ಲ ಕಾಂಗ್ರೆಸ್: ಅಸ್ಸಾಂ ಚಳವಳಿಯ ಹುತಾತ್ಮರಿಗಾಗಿ ಕಾಂಗ್ರೆಸ್ ಏನೇನೂ ಮಾಡಿಲ್ಲ. ಹುತಾತ್ಮರ ಸ್ಮರಣಾರ್ಥ ಗುವಾಹಟಿಯಲ್ಲಿ ಸ್ವಹೀದ್ ಸ್ಮಾರಕವನ್ನು ರಾಜ್ಯದ ಬಿಜೆಪಿ ಸರ್ಕಾರವೇ ನಿರ್ಮಾಣ ಮಾಡಿದೆ ಎಂದು ಶಾ ಹೇಳಿದರು. ಕಾಂಗ್ರೆಸ್ ದೇಶದ ಭದ್ರತೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ, ಆದರೆ ಪ್ರಧಾನಿ ಮೋದಿ ಭಯೋತ್ಪಾದಕರ ವಿರುದ್ಧ ಕಠಿಣ ನಿಲುವುಗಳನ್ನು ತೆಗೆದುಕೊಂಡಿದ್ದರೆಂದ ಶಾ, ತಮ್ಮ ಭಾಷಣದಲ್ಲಿ ಸರ್ಜಿಕಲ್ ಸ್ಟ್ರೈಕ್, ಬಾಲಾಕೋಟ್ ಏರ್ ಸ್ಟ್ರೈಕ್ ಮತ್ತು ಆಪರೇಷನ್ ಸಿಂದೂರವನ್ನು ಉಲ್ಲೇಖಿಸಿದ್ದಾರೆ.

ಕಿರುಸುದ್ದಿ

ಇಂದು ಪದಗ್ರಹಣ ಸಮಾರಂಭ

ಹುಬ್ಬಳ್ಳಿ: ನಗರದ ಸವಾಯಿ ಗಂಧರ್ವ ಭವನದಲ್ಲಿ ಮಾ.30 ರಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ಅನುದಾನ ರಹಿತ ಪದವಿ ಪೂರ್ವ ಕಾಲೇಜ್‌ಗಳ ಆಡಳಿತ ಮಂಡಳಿ(ಕುಪ್ಮಾ)ಯ ಧಾರವಾಡ ಜಿಲ್ಲಾ ಸಂಘಟನೆ ಉದ್ಘಾಟನೆ ಹಾಗೂ ಪದಗ್ರಹಣ ಸಮಾರಂಭ ನಡೆಯಲಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷ ವಿಶ್ವನಾಥ ಕೊರವಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಲಿದ್ದು, ರಾಜ್ಯ ಸಂಘಟನೆ ಅಧ್ಯಕ್ಷ ಮೋಹನ ಆಳ್ವ, ರಾಜ್ಯ ಕಾರ್ಯದರ್ಶಿ ಪ್ರೊ. ನರೇಂದ್ರ ನಾಯಕ್, ಧಾರವಾಡ ಜಿಲ್ಲಾ ಡಿಡಿಪಿಯು ತೇಜಸ್ವಿನಿ ನಾರಾಯಣಕರ್, ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷ ಹನುಮಂತಪ್ಪ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ನೂರ್ ಅಹ್ಮದ್ ಧಾರವಾಡ, ಜಿ.ವಿ. ವಳಸಂಗ, ಮಲ್ಲಿಕಾರ್ಜುನ ಸಾವಿಕಾರ, ನಾಗೇಶ ಅಣ್ಣಿಗೇರಿ, ಜನಠಬ್ ಆಯೂಬ್ ಇದ್ದರು.

ವಿದ್ಯುತ್ ಅವಘಡ ತಡೆಗೆ ಸಹಕರಿಸಿ

ಹುಬ್ಬಳ್ಳಿ: ಕೆಲ ದಿನಗಳಿಂದ ಗುಡುಗು ಸಹಿತ ಪೂರ್ವ ಮುಂಗಾರು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಸೂಚಿಸಿದ್ದು, ವಿದ್ಯುತ್ ಅವಘಡಗಳನ್ನು ತಡೆಯಲು ಇಲಾಖೆಯೊಂದಿಗೆ ಸಹಕರಿಸುವಂತೆ ಕೋರಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಹೆಸ್ಕಾಂ, ಸಿಡಿಲು, ಮಳೆ ಬರುವಾಗ ವಿದ್ಯುತ್ ತಂತಿಗಳಲ್ಲಿ ತಾಂತ್ರಿಕ ತೊಂದರೆಗಳು ಉಂಟಾಗುವ ಸಾಧ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ವಿದ್ಯುತ್ ಕಂಬ, ತಂತಿ ಮತ್ತು ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಗಳ ಸಮೀಪ ಹೋಗಬಾರದು ಹಾಗೂ ಸಾರ್ವಜನಿಕರು ಅದನ್ನು ಸರಿಪಡಿಸಲು ಅಥವಾ ಮುಟ್ಟಲು ಹೋಗಬಾರದು ಎಂದು ತಿಳಿಸಿದೆ. ವಿದ್ಯುತ್ ತಂತಿಯ ಇಕ್ಕೆಲಗಳಲ್ಲಿನ ಮರಗಳ ಕೊಂಬೆಗಳು ವಿದ್ಯುತ್ ತಂತಿಗೆ ತಾಗುವಂತಿದ್ದರೆ ಈ ಕುರಿತು ಇಲಾಖೆಗೆ ಮಾಹಿತಿ ನೀಡಬೇಕು. ತುಂಡಾಗಿ ಬಿದ್ದಿರುವ ವಿದ್ಯುತ್ ತಂತಿಗಳು, ಒದ್ದೆಯಾಗಿರುವ ವಿದ್ಯುತ್ ಕಂಬಗಳು ಹಾಗೂ ಇತರೆ ವಿದ್ಯುತ್ ಉಪಕರಣಗಳನ್ನು ಮುಟ್ಟಬಾರದು. ಜಾನುವಾರುಗಳನ್ನು ವಿದ್ಯುತ್ ಕಂಬಗಳು / ಗೈ ವೈಯರ್ ಗೆ ಕಟ್ಟಬಾರದು. ಸಿಡಿಲು, ಮಿಂಚು ಮಳೆ ಸಂದರ್ಭದಲ್ಲಿ ವಿದ್ಯುತ್ ಪರಿಕರಗಳ ಸಮೀಪ ನಿಲ್ಲಬಾರದು. ರಸ್ತೆಗಳಲ್ಲಿ ನಡೆದಾಡುವಾಗ ವಿದ್ಯುತ್ ಕಂಬಗಳಿಂದ ದೂರವಿರಬೇಕು.

ವಾಹನಗಳನ್ನು ವಿದ್ಯುತ್ ಕಂಬದ ಸನಿಹ ಅಥವಾ ಅವುಗಳ ಅರ್ಥಿಂಗ್ ವೈಯರ್ / ಗೈ ವೈಯರ್ ಹತ್ತಿರ ನಿಲ್ಲಿಸಬಾರದು. ಕೆಲವೊಮ್ಮೆ ಒಂದು ವಿದ್ಯುತ್ ಕಂಬದಿಂದ ಮತ್ತೊಂದು ವಿದ್ಯುತ್ ಕಂಬಕ್ಕೆ ಹಾದು ಹೋಗುವ ವಿದ್ಯುತ್ ತಂತಿಗಳು ಜೋತು ಬಿದ್ದಿದ್ದರೆ, ಅವು ಸಾರ್ವಜನಿಕರ ಕೈಗೆ ಎಟಕುವಂತಿದ್ದರೆ ಅಥವಾ ಅಪಾಯಕಾರಿ ಮಟ್ಟದಲ್ಲಿದ್ದರೆ, ರಸ್ತೆ ಅಥವಾ ಫುಟ್ ಪಾತ್‌ಗಳಲ್ಲಿ ಸಾಗುವಾಗ ಜೋತು ಬಿದ್ದ ತಂತಿಗಳು ಕಂಡುಬಂದಲ್ಲಿ ಕೂಡಲೇ ಹೆಸ್ಕಾಂನ 24 ಗಂಟೆ ಸಹಾಯವಾಣಿ 1912ಗೆ ಕರೆ ಮಾಡಿ ಮಾಹಿತಿ ನೀಡಬೇಕು.

ಯೋಗದಾ ಸತ್ಸಂಗದಿಂದ ಆಧ್ಯಾತ್ಮಿಕ ಜಾಗೃತಿ



ಧಾರವಾಡ: ಯೋಗದಾ ಸತ್ಸಂಗ ಪಾಠಗಳು ಅಸಂಖ್ಯಾತ ಜನರಲ್ಲಿ ಆಧ್ಯಾತ್ಮಿಕ ಜಾಗೃತಿ ಮಾಡಿವೆ ಎಂದು ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾದ ಉಪಾಧ್ಯಕ್ಷ ಸ್ಮರಣಾನಂದ ಸ್ವಾಮೀಜಿ ಹೇಳಿದರು.

ನಗರದಲ್ಲಿ ಯೋಗದಾ ಸತ್ಸಂಗ ಪಾಠಗಳ ಕನ್ನಡ ಆವೃತ್ತಿಯ ಬಿಡುಗಡೆ ಜಾಗೃತಿ ಕಾರ್ಯಕ್ರಮದಲ್ಲಿ ಧ್ಯಾನದ ಮಹತ್ವ ಕುರಿತು ಪ್ರವಚನ ನೀಡಿದರು.

ವೈಜ್ಞಾನಿಕ ಧ್ಯಾನದಿಂದ ಮನಶಾಂತಿಯೊಂದಿಗೆ ಸ್ಮರಣ ಶಕ್ತಿ, ಇಚ್ಛಾಶಕ್ತಿ ವೃದ್ಧಿಸಲಿದೆ. ದುಶ್ಚಟಗಳಿಂದ ಮುಕ್ತರಾಗಲು ಸಾಧ್ಯ. ನಮ್ಮ ಆರೋಗ್ಯ ಸುಧಾರಣೆಗೆ ಇದು ಪೂರಕ. ಧ್ಯಾನದಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಅಂತಃ ಪ್ರಜ್ಞೆ ಹೆಚ್ಚಲಿದೆ. ನಮ್ಮ ಬಹುತೇಕ ಸಮಸ್ಯೆಗಳಿಗೆ ದೈವಿಕತೆ ಕುರಿತ ಅಜ್ಞಾನವೇ ಮೂಲ ಕಾರಣ. ದೈವಿಕತೆ ಕುರಿತು ನಿರ್ಲಕ್ಷ್ಯದಿಂದ ಸಮಸ್ಯೆಗಳು ಉದ್ಭವಿಸಲಿವೆ ಎಂದರು. ಸತ್ಸಂಗ ಪಾಠಗಳು ನಮ್ಮ ಅಜ್ಞಾನವನ್ನು ಹೋಗಲಾಡಿಸುವುದರೊಂದಿಗೆ ನಮಗೆ ಬೆಳಕು ನೀಡುತ್ತವೆ, ಮಾರ್ಗದರ್ಶನ ಮಾಡುತ್ತವೆ. ಯೋಗದಾ ಸತ್ಸಂಗದಲ್ಲಿ ಧ್ಯಾನ ಪದ್ಧತಿಗಳನ್ನು ತಿಳಿಸಲಾಗುತ್ತದೆ ಎಂದರು. ಸಮಾರಂಭದಲ್ಲಿ ರಾಜೇಂದ್ರ ಕುಮಾರ ಹಿಟ್ಟಣಗಿ ಪರಿಚಯಿಸಿದರು. ಹಣಮಂತಪ್ಪ ತಳವಾರ, ಪ್ರಶಾಂತ ಬೆಲ್ಲದ ಇದ್ದರು.



ಅಳ್ನಾವರ: ತಾಲೂಕಿನ ಕುಂಬಾರಕೊಪ್ಪ ಗ್ರಾಮದಲ್ಲಿ ಭಾನುವಾರ ಗಣ ಹೋಮ, ಮೃತ್ಯುಂಜಯ ಹೋಮ, ದುರ್ಗಾ ಹವನ, ನವಗ್ರಹ ಸಹಿತ ಪೂರ್ಣಾಹುತಿ, ಕಾಕಡಾರತಿ, ಮಹಾಮಂಗಳಾರತಿ, ಉಪವಾಸ ವ್ರತ ಆಚರಣೆಯ ಪ್ರಸಾದ ವಿತರಣೆ ಹೀಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ನೂತನವಾಗಿ ನಿರ್ಮಿಸಿದ ವಿಠ್ಠಲ ರುಕುಮಾಯಿ ಹರಿ ಮಂದಿರದಲ್ಲಿ ಮೂರ್ತಿಗಳ ಪ್ರತಿಷ್ಠಾಪನೆ ನಡೆಯಿತು. ಸಿದ್ದಾರೂಢಮಠದಿಂದ ವಿಠ್ಠಲ ರುಕುಮಾಯಿ ಮೂರ್ತಿಗಳ ಮೆರವಣಿಗೆ ಜರುಗಿತು.

ಏ.2ರಿಂದ ರಜತ ಮಹೋತ್ಸವ: ವಿವಿಧ ಕಾರ್ಯ

ಕಲಘಟಗಿ: ಪಟ್ಟಣದ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ತ್ರಿಗುಣಾತ್ಮಿಕಾ ಮಹಾಲಕ್ಷ್ಮೀಯು ನೆಲೆನಿಂತು 25 ವರ್ಷಗಳು ಸಲ್ಲುತ್ತಿವೆ. ಈ ಪ್ರಯುಕ್ತ ವಿವಿಧ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ರಜತಮಹೋತ್ಸವವನ್ನು ಏ.2 ಮತ್ತು 3ರಂದು ವಿಜೃಂಭಣೆಯಿಂದ ಪೇಜಾವರ ಅಧೋಕ್ಷಜಪೀಠಾಧೀಶ್ವ ಅನಂತ ಶ್ರೀವಿಭೂಷಿತ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು (ಶ್ರೀಮದ್ ಜಗದ್ಗುರು ಮಧ್ವಾಚಾರ್ಯ ಮೂಲ ಸಂಸ್ಥಾನ, ಪೇಜಾವರಮಠ, ಉಡುಪಿ) ಅವರ ಸಾನ್ನಿಧ್ಯದಲ್ಲಿ ನೆರವೇರಲಿವೆ.



ಏ.3ರಂದು ಬೆಳಗ್ಗೆ 6.30ಕ್ಕೆ ಪಂಚಾಮೃತ ಸಹಿತ ಅನೇಕ ದ್ರವ್ಯಗಳಿಂದ ವಿಶೇಷ ಮಹಾಭಿಷೇಕ, ಅಲಂಕಾರ ನಂತರ ಹೋಮ- ಹವನದ ಪೂರ್ಣಾಹುತಿ, ಬೆಳಗ್ಗೆ 9 ಗಂಟೆಗೆ ವೇದಘೋಷ ವಾದ್ಯ ಮೇಳ, ಸುಮಂಗಲಿಯರಿಂದ ಪೂರ್ಣಕುಂಭದೊಂದಿಗೆ ಮಹಾಲಕ್ಷ್ಮೀದೇವಿ ರಥೋತ್ಸವ ಹಾಗೂ ಸ್ವಾಮೀಜಿಯ ಭವ್ಯ ಶೋಭಾಯಾತ್ರೆ, ಮಧ್ಯಾಹ್ನ 12 ಗಂಟೆಗೆ ಅಕ್ಕಿ ಓಣಿ ಚೌತಮನೆ ಕಟ್ಟೆಯಲ್ಲಿ ಶ್ರೀಗಳ ಪಾದಪೂಜೆ ಮತ್ತು ಶ್ರೀಗಳಿಂದ ಆಶೀರ್ವಚನ, ಸಭಾ ಕಾರ್ಯಕ್ರಮ ಜರುಗಲಿದೆ. ಮಧ್ಯಾಹ್ನ 1.30ಕ್ಕೆ ಅನ್ನ ಪ್ರಸಾದ ಆಯೋಜಿಸಲಾಗಿದೆ ಎಂದು ರಜತ ಮಹೋತ್ಸವ ಸಮಿತಿಯ ವಿಶ್ವಸ್ಥ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



ಹುಬ್ಬಳ್ಳಿ: ಕೇರಳ ರಾಜ್ಯದ ಪಾಲಕಾಡ ವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲೆಯ ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿಗಳು ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಮಹೇಶ ಟೆಂಗಿನಕಾಯಿ ಅವರೊಂದಿಗೆ ಜಿಲ್ಲಾಧ್ಯಕ್ಷರು, ಮಂಡಳ ಅಧ್ಯಕ್ಷರು, ಪದಾಧಿಕಾರಿಗಳು ಭಾನುವಾರ ಮನ್ ಕಿ ಬಾತ್ ವೀಕ್ಷಿಸಿದರು.

ರೈತರಿಗೆ ವಿವಿಧ ಸಲಕರಣೆ ವಿತರಣೆ | ಎನ್.ಎಚ್.ಕೋನರಡ್ಡಿ ಸೂಚನೆ

ಅಧಿಕಾರಿಗಳು ರೈತರಿಗೆ ಸಹಾಯ ಮಾಡಲಿ

ನವಲಗುಂದ: ತಾಲೂಕಿನ ಮೊರಬ ಗ್ರಾಮದಲ್ಲಿ ಪಿಎಮ್‌ಕೆ ಎಸ್ ವಾಯ್/ಡಬ್ಲ್ಯೂ ಡಿ ಸಿ 2.0 ಯೋಜನೆಯಡಿ ಕೃಷಿ ಇಲಾಖೆಯಿಂದ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ 235 ಡೆಸ್ಕ್ ಹಾಗೂ ರೈತರಿಗೆ 26 ಮೇವು ಕತ್ತರಿಸುವ ಚಾಫ್‌ಕಟ್ಟರ ಮಶೀನ್, ದನ ಕರುಗಳಿಗೆ ಮಲಗಲು 60 ಮ್ಯಾಟ್ ಹಾಗೂ ನೀರೆತ್ತುವ 4 ಆಯಿಲ್ ಇಂಜೀನ್ ರೈತರಿಗೆ ವಿತರಣೆ ಮಾಡುತ್ತಿರುವುದು ಸಂತಸ ತಂದಿದೆ ಎಂದು ಶಾಸಕ ಎನ್.ಎಚ್.ಕೋನರಡ್ಡಿ ಹೇಳಿದರು.

ಅವರು ಮೊರಬ ಗ್ರಾಮದಲ್ಲಿ ಪಿ.ಎಮ್.ಕೆ.ಎಸ್. ವಾಯ್/ಡಬ್ಲ್ಯೂ.ಡಿ.ಸಿ 2.0 ಯೋಜನೆಯಡಿ ಕೃಷಿ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಡೆಸ್ಕ್ ಹಾಗೂ ರೈತರಿಗೆ ವಿವಿಧ ಸಲಕರಣೆ ವಿತರಿಸಿ ಮಾತನಾಡಿದ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಯಿಂದ ಮೊರಬ ಹಾಗೂ ತೆಲೆಮೊರಬ ಗ್ರಾಮದ ರೈತರ ಜಮೀನುಗಳಿಗೆ ಬದುವು ನಿರ್ಮಿಸುತ್ತಿರುವ ಈ ಯೋಜನೆ ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ವೇದ ಮೂರ್ತಿ ಷಡಕ್ಷರಿ ವಿರಕ್ತಮಠ ಸಾನ್ನಿಧ್ಯದಲ್ಲಿ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಪಾರ್ವತೆಮ್ಮ ಜಾಲಿಹಾಳ, ಜಿ.ಪಂ ಮಾಜಿ ಅಧ್ಯಕ್ಷ ಅಡಿವೆಪ್ಪ ಮನಮಿ, ರಾಜು ಮನಗೂಳಿ, ಕೃಷಿಅಧಿಕಾರಿ ರವಿಂದ್ರಗೌಡ ಪಾಟೀಲ, ಮಾಜಿ ಸದಸ್ಯೆ ಮದುಮತಿ ರಾಯನಗೌಡರ, ವಿ.ಎಸ್.ಎಸ್ ಅಧ್ಯಕ್ಷ ಹೇಮಣ್ಣ ಗುಮ್ಮಡಿ, ಎಸ್ .ಡಿ.ಎಂ.ಸಿ ಅಧ್ಯಕ್ಷ ಈಶ್ವರ ಜಾಲಿಹಾಳ, ಎಂ.ಎಂ. ಮುಲ್ಲಾ, ಎಂ.ಎಸ್. ಕಾಲವಾಡ, ವಿರೂಪಾಕ್ಷಪ್ಪ ಶಿರಗುಪ್ಪಿ, ಗುರುನಾಥ ಪಡಸುನಗಿ, ರವಿ ಕಗದಾಳ, ಸೋಮಣ್ಣ ಸಿದ್ದನಾಳ, ಬಸಣ್ಣ ಜಾಲಿಹಾಳ, ವಿರೂಪಾಕ್ಷಪ್ಪ ಕೊಟಬಾಗಿ, ಗುರಣ್ಣ ಚುಳಕಿ,



235 ಡೆಸ್ಕ್ ವಿತರಣೆ

ಉಪಯುಕ್ತ ಕಾರ್ಯಕ್ರಮದಲ್ಲಿ ಹೆಣ್ಣು ಮಕ್ಕಳ ಸರ್ಕಾರಿ ಹಿರಿಯ-ಪ್ರಾಥಮಿಕ ಶಾಲೆ 50 ಡೆಸ್ಕ್ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ 50 ಡೆಸ್ಕ್, ತೆಲೆಮೊರಬ ಹಿರಿಯ ಪ್ರಾಥಮಿಕ ಶಾಲೆಗೆ 50 ಡೆಸ್ಕ್, ಸರ್ಕಾರಿ ಉರ್ದು ಶಾಲೆಗೆ 35 ಡೆಸ್ಕ್ ಹಾಗೂ ಇನ್ನುಳಿದ ಪ್ರಾಥಮಿಕ ಶಾಲೆಗೆ ತಲಾ 50 ರಂತೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲು ಒಟ್ಟು 235 ಡೆಸ್ಕ್‌ಗಳನ್ನು ವಿತರಿಸಲಾಯಿತು.

ಕರಿಯಪ್ಪ ಕೋಟೂರ, ಅಫ್ಜಲ್ ಬಡೆಮಿಯಾ, ಕುಮಾರ ಲಕ್ಕಮ್ಮನವರ, ಬಸಪ್ಪ ಹಣಸಿ ಮಂಜು ಅಜಗೊಂಡ ಸೇರಿದಂತೆ ವಿದ್ಯಾರ್ಥಿಗಳು, ಇನ್ನಿತರ ಗ್ರಾಮಸ್ಥರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಮೊರಬ ಪ್ರೀಮಿಯರ್ ಕ್ರಿಕೆಟ್ ಪಂದ್ಯಾವಳಿ ಸಿಜನ್-3 ಪಂದ್ಯಾವಳಿ ವೀಕ್ಷಣೆ ಮಾಡಿ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

- ನಿವೃತ್ತ ನೌಕರರು ನಡೆಸುತ್ತಿರುವ ಪ್ರಾಥಮಿಕ ಶಾಲೆಗೆ ಇದೆ ಸಂದರ್ಭದಲ್ಲಿ ಭೇಟಿ ನೀಡಿದ ಸಂಧರ್ಭದಲ್ಲಿ ಅಭಿವೃದ್ಧಿ ಪಡಿಸಲು ಮನವಿ ಮಾಡಿದರು
- ವಿದ್ಯಾರ್ಥಿಗಳಿಗೆ ಉತ್ತಮವಾದ ಕಲಿಕಾ ವಾತಾವರಣ ನಿರ್ಮಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಹಾಗೂ ಬದುವು ನಿರ್ಮಿಸುತ್ತಿರುವ ಜಮೀನುಗಳಿಗೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿ ಅಧಿಕಾರಿಗಳು ರೈತರಿಗೆ ಸರಿಯಾಗಿ ಸಹಾಯ ಮಾಡಬೇಕೆಂದು ಕೋನರಡ್ಡಿ ಸೂಚಿಸಿದರು

ದೀನದಯಾಳರ ಆದರ್ಶ ಮೈಗೂಡಿಸಿಕೊಳ್ಳಿ

ಧಾರವಾಡ: ನಗರದ ಶಂಕರ ಮಠದ ಭವನದಲ್ಲಿ ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದ ವತಿಯಿಂದ ಭಾನುವಾರ ಪಂಡಿತ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ವರ್ಗದ ಕಾರ್ಯಕ್ರಮ ಜರುಗಿತು.

ಉದ್ಘಾಟಿಸಿದ ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಪಕ್ಷದ ಸಂಘಟನೆ ಕೇವಲ ಅಧಿಕಾರಕ್ಕಾಗಿ ಅಲ್ಲ, ಬದಲಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ತಲುಪುವ ಉದ್ದೇಶಕ್ಕಾಗಿ ಎಂದರು.

ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಆದರೆ ಪಕ್ಷದ ಸಿದ್ಧಾಂತ ಶಾಶ್ವತ. ಈ ಕಾರಣಕ್ಕಾಗಿ ಪ್ರತಿಯೊಬ್ಬ ಕಾರ್ಯಕರ್ತರೂ ದೀನದಯಾಳ್ ಅವರ ಜೀವನದ ಸಂದೇಶ ಮೈಗೂಡಿಸಿಕೊಳ್ಳಲು ಸಲಹೆ ನೀಡಿದರು.

ವೇದಿಕೆಯಲ್ಲಿ ಪಾಲಿಕೆಯ ಮೇಯರ್ ಜ್ಯೋತಿ ಪಾಟೀಲ, ಮಾಜಿ ಮೇಯರ್ ರಾಮಣ್ಣ ಬಡಿಗೇರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಗರಗ, ಮಂಡಲ ಅಧ್ಯಕ್ಷ ಮಂಜುನಾಥ ಮಳಿಗೆವಾಡ ಇದ್ದರು. ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಸದಸ್ಯೆ ಸುಜಾತ ಕಳ್ಳಿಮನಿ, ಮಂಡಳದ ಪ್ರಧಾನ ಕಾರ್ಯದರ್ಶಿ ರಮೇಶ ದೊಡವಾಡ, ಅಶೋಕ ವಾಲೀಕಾರ, ಪುಟ್ಟು ನಾಯ್ಕ ಸೇರಿ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

> **ಕಾರ್ಯಕರ್ತರಲ್ಲಿ ನಾಯಕತ್ವದ ಗುಣ ಬೆಳೆಸುವುದು, ಸರ್ಕಾರದ ಯೋಜನೆಗಳು ಮನೆಮನೆಗೆ ತಲುಪಿಸುವುದು ಮತ್ತು ತಳಮಟ್ಟದಿಂದ ಪಕ್ಷ ಸಂಘಟಿಸುವುದೇ ಈ ಪ್ರಶಿಕ್ಷಣ ವರ್ಗದ ಮುಖ್ಯ ಉದ್ದೇಶ.**
> ■ ಅರವಿಂದ ಬೆಲ್ಲದ, ಶಾಸಕ

ವಿವಿಧ ತರಬೇತಿ

ದೀನದಯಾಳ್ ಉಪಾಧ್ಯಾಯ ಅವರ ಏಕಾತ್ಮ ಮಾನವ ದರ್ಶನ ಮತ್ತು ಅಂತ್ಯೋದಯ ತತ್ವಗಳು ಮತ್ತು ಪಕ್ಷದ ಸಿದ್ಧಾಂತ ಕುರಿತು ಕಾರ್ಯಕರ್ತರಿಗೆ ತರಬೇತಿ ನೀಡಲಾಯಿತು.



ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಇಂದಿನಿಂದ

ಧಾರವಾಡ: ಕನ್ನಡ ಸಾಹಿತ್ಯ ಪರಿಷತ್ ಧಾರವಾಡ ಜಿಲ್ಲಾ 18ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾ.30 ಮತ್ತು 31ರಂದು ಎರಡು ದಿನಗಳು ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಮಾ.30ರ ಬೆಳಗ್ಗೆ 8ಕ್ಕೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ರಾಷ್ಟ್ರಧ್ವಜ ಮತ್ತು ವೈದ್ಯ ಡಾ. ಸಂಜೀವ ಕುಲಕರ್ಣಿ ಕನ್ನಡ ಧ್ವಜಾರೋಹಣ ನೆರವೇರಿಸುವುದಾಗಿ ತಿಳಿಸಿದರು. ಬೆಳಗ್ಗೆ 9ಕ್ಕೆ ಕೆಸಿಸಿ ಬ್ಯಾಂಕ್ ವೃತ್ತದಲ್ಲಿ ಸರ್ವಾಧ್ಯಕ್ಷರ ಮೆರವಣಿಗೆಗೆ ಡಿಮಾನ್ಸ್ ಮುಖ್ಯ ಆಡಳಿತಾಧಿಕಾರಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ ಚಾಲನೆ ನೀಡಲಿದ್ದು, ಅನುರಾಧಾ ವಸ್ತ್ರದ, ಕವಿತಾ ಕಬ್ಬೇರ, ಶಿವು ಹಿರೇಮಠ ಭಾಗವಹಿಸಲಿದ್ದಾರೆ ಎಂದರು. ಬೆಳಗ್ಗೆ 10.30ಕ್ಕೆ ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆಯಲ್ಲಿ ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಪುಸ್ತಕ ಲೋಕಾರ್ಪಣೆ ಮಾಡುವುದಾಗಿ ಹೇಳಿದರು.

ಉಸ್ತುವಾರಿ ಸಚಿವ ಸಂತೋಷ ಲಾಡ್ ಸರ್ವಾಧ್ಯಕ್ಷರ ಸಾಹಿತ್ಯ ಪ್ರದರ್ಶನ, ಶಾಸಕ ಅರವಿಂದ ಬೆಲ್ಲದ ಪುಸ್ತಕ ಮಳಿಗೆ ಉದ್ಘಾಟಿಸಲಿದ್ದು, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ. ಎಸ್.ಆರ್.ಗುಂಜಾಳ ಧ್ವಜ ಹಸ್ತಾಂತರಿಸಲಿದ್ದಾರೆ ಎಂದು ತಿಳಿಸಿದರು. ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಹೇಮಾ ಪಟ್ಟಣಶೆಟ್ಟಿ ಅವರ ಭಾಷಣದ ಬಳಿಕ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸೋಮಶೇಖರ ಪುಸ್ತಕ ಲೋಕಾರ್ಪಣೆ, 4 ಗೋಷ್ಠಿಗಳು, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವುದಾಗಿ ಹೇಳಿದರು. ಮಾ.31ರ ಬೆಳಗ್ಗೆ 9.30ಕ್ಕೆ ಕನ್ನಡವನೆ ಸುಗಮ ಸಂಗೀತ, ಬೆಳಗ್ಗೆ 11.30ಕ್ಕೆ ಹೊರಳು ದಾರಿಯಲ್ಲಿ ಮಹಿಳಾ ಸಾಹಿತ್ಯ, ಮಧ್ಯಾಹ್ನ 3ಕ್ಕೆ ಸಮಕಾಲಿನ ಸಾಹಿತ್ಯ ಚಿಂತನೆ, ಮಧ್ಯಾಹ್ನ 3.30ಕ್ಕೆ ಸರ್ವಾಧ್ಯಕ್ಷರೊಂದಿಗೆ ಸಂವಾದವೂ ಜರುಗಲಿದೆ. ಸಂಜೆ 4.30ಕ್ಕೆ ಬಹಿರಂಗ ಸಭೆ, ಸಂಜೆ 5.30ಕ್ಕೆ ವಿಪ ಸಭಾಪತಿ ಬಸವರಾಜ ಹೊರಟ್ಟಿ ಅಧ್ಯಕ್ಷರ ಸಮಾರೋಪದಲ್ಲಿ ಡಾ.ವಿನಯಾ ಒಕ್ಕುಂದ ಸಮಾರೋಪ ಭಾಷಣ ಮಾಡಲಿದ್ದು, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಸಾಪ ಗೌರವಾಧ್ಯಕ್ಷ ಪ್ರೊ. ಕೆ.ಎಸ್.ಕೌಜಲಗಿ, ಧಾರವಾಡ ತಾಲೂಕಾಧ್ಯಕ್ಷ ಮಹಾಂತೇಶ ನರೇಗಲ್ಲ, ಎಸ್.ಎಂ.ದಾನಪ್ಪಗೌಡರ, ಪ್ರಮೀಳಾ ಜಕ್ಕಣ್ಣವರ, ಡಾ.ಶರಣಮ್ಮ ಗೋರೆಬಾಳ ಹಾಗೂ ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ್ ಇದ್ದರು.



ಪ್ರತ್ಯೇಕ ಪಾಲಿಕೆ ನಮ್ಮ ಧ್ಯೇಯ: ವಿನಯ ಕುಲಕರ್ಣಿ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚಿಸಲು ಮೊಲಿಂದಲೂ ಒತ್ತಾಯಿಸಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವೂ ತನ್ನ ಕಾರ್ಯನಿರ್ವಹಿಸಿದೆ ಎಂದು ಶಾಸಕ ವಿನಯ ಕುಲಕರ್ಣಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆಯ ರಚನೆ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದೆ. ಯಾರು ತಡೆಯೊಡ್ಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ, ಪ್ರತ್ಯೇಕ ಪಾಲಿಕೆ ರಚನೆ ನಮ್ಮ ಧ್ಯೇಯ ಎಂದರು. ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಆಗಬೇಕು ಎಂಬುದು ನಮ್ಮ ದೃಢ ನಿಲುವು. ಅಂಕಿತಕ್ಕೆ ಕಳುಹಿಸಿದ ಕಡತವೂ ರಾಜ್ಯಪಾಲರ ಬಳಿಯಲ್ಲಿಯೇ ಇದೆ. ಈ ಕುರಿತು ಅಡಚಣೆ ಉಂಟು ಮಾಡುತ್ತಿರುವ ಬಿಜೆಪಿ ನಾಯಕರ ವಿರುದ್ಧ ಕಿಡಿ ಕಾರಿದರು.

ಅಭ್ಯರ್ಥಿಗಳ ಗೆಲುವು ನಿಶ್ಚಿತ: ಬಾಗಲಕೋಟಿ ಹಾಗೂ ದಾವಣಗೇರಿ ಕ್ಷೇತ್ರದ ಎರಡು ಉಪಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳೇ ಜಯಭೇರಿ ಬಾರಿಸಲಿದ್ದಾರೆ. ನಾನೂ ಸಹ ಸ್ಟಾರ್ ಕ್ಯಾಂಪೇನರ್. ನಾಳೆಯಿಂದಲೇ ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳುವುದಾಗಿ ಹೇಳಿದರು.

ಕಾಂಗ್ರೆಸ್ ಟಿಕೆಟ್ ಸಮರ್ಥನೆ: ಪಶ್ಚಿಮ ಪದವೀಧರ ಕ್ಷೇತ್ರದ ಟಿಕೆಟ್ ಹಂಚಿಕೆಯಲ್ಲಿ ಟಿಕೆಟ್ ಕೈತಪ್ಪಿದವರಲ್ಲಿಯೇ ಸಣ್ಣಪುಟ್ಟ ಅಸಮಾಧಾನ ಇವೆ. ಸದ್ಯ ಮೋಹನ್ ಲಿಂಬಿಕಾಯಿ ಅವರು ಪಕ್ಷದಲ್ಲಿ ಸಕ್ರಿಯರಾಗಿದ್ದು, ನಮ್ಮ ಹೈಕಮಾಂಡ್ ಸೂಕ್ತ ವ್ಯಕ್ತಿಗೆ ಟಿಕೆಟ್ ನೀಡಿದೆ ಎಂದು ಸಮರ್ಥಿಸಿಕೊಂಡರು.

ಕಾಂಗ್ರೆಸ್ ಪಕ್ಷಕ್ಕೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ ಶ್ರಮ ಅಪಾರವಿದೆ. ಇಬ್ಬರ ನಾಯಕತ್ವದಲ್ಲಿ ಪಕ್ಷವೂ ಬಲಿಷ್ಠವಾಗಿ ಸಂಘಟಿತವಾಗುತ್ತಿದೆ. ಈ ಇಬ್ಬರ ನಾಯಕತ್ವದಲ್ಲಿ ಮುಂದಿನ ಚುನಾವಣೆಯನ್ನೂ ಕೂಡ ಎದುರಿಸುವುದಾಗಿ ಪ್ರಶ್ನೆಗೆ ಉತ್ತರಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡರ ಮತ್ತು ಪಕ್ಷದ ಮುಖಂಡರು ಇದ್ದರು.



> **ಮುಂದಿನ ದಿನಗಳಲ್ಲಿ ಸಚಿವ ಸಂಪುಟ ವಿಸ್ತರಿಸಿದರೆ, ನನಗೂ ಸಹ ಸಚಿವ ಸ್ಥಾನ ಸಿಗುವ ಆಶಯವಿದೆ. ಹೈಕಮಾಂಡ್ ಮನಸ್ಸು ಮಾಡಿದರೆ ಸಚಿವನಾಗಲು ನಾನು ಸಿದ್ಧನಿರುವೆ. ಈ ಕುರಿತು ಹೈಕಮಾಂಡ್ ನಿರ್ಧಾರವೇ ಅಂತಿಮ. ಮತ್ತು ಅದಕ್ಕೆ ಬದ್ಧನಾಗಿರುತ್ತೇನೆ.**
> ■ ವಿನಯ ಕುಲಕರ್ಣಿ, ಧಾರವಾಡ ಗ್ರಾಮೀಣ ಶಾಸಕ

ಎಸ್‌ಡಿಎಂಸಿ ಸದಸ್ಯರಿಗೆ ತರಬೇತಿ

ನವಲಗುಂದ: ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಜಾರಿಯಾದ ನಂತರ ಸಮುದಾಯ ಭಾಗವಹಿಸುವಿಕೆಗೆ ಮತ್ತಷ್ಟು ಕಾನೂನಾತ್ಮಕ ಒತ್ತಾಸೆ ಬಂದಿದ್ದು ಹೆಚ್ಚಿನ ಕಾನೂನಿನ ಬೆಂಬಲ ಸಿಕ್ಕಿದೆ ಎಂದು ಬಿಇಒ ದೀಪಕ್ ಕುಲಕರ್ಣಿ ಹೇಳಿದರು.

ಅವರು ನಗರದ ಸರ್ಕಾರಿ ಮಾದರಿ ಕೇಂದ್ರ ಶಾಲೆ ನವಲಗುಂದದಲ್ಲಿ ಏರ್ಪಡಿಸಿದ್ದ ನವಲಗುಂದ 1ಮತ್ತು2, ಉರ್ದು ಹಾಗೂ ಆರೇಕುರಹಟ್ಟಿ ಕ್ಲಸ್ಟರ್ ನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಎಸ್‌ಡಿಎಂಸಿ ಸದಸ್ಯರಿಗೆ ಒಂದು ದಿನದ ತರಬೇತಿ ಉದ್ಘಾಟನೆ ಮಾಡಿ ಮಾತನಾಡಿದರು.

ನಾಗನೂರ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಶೌಕತಲಿ ಲಂಬೂನವರ ಮಾತನಾಡಿ, ಶಾಲಾ ಅಭಿವೃದ್ಧಿ ಯೋಜನೆ ಎಂದರೆ ಶಾಲಾ ಹಂತದಲ್ಲಿ ಮಕ್ಕಳ ಶೈಕ್ಷಣಿಕ ಮತ್ತು ಶಾಲೆಯ ಸಮಗ್ರ ಅಭಿವೃದ್ಧಿ ಗಾಗಿ ಸಿದ್ಧಪಡಿಸುವ ಯೋಜನೆಯಾಗಿರುತ್ತದೆ ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ರೇಣುಕಾ ಮುರನಾಳ, ಶಿಕ್ಷಣ ಸಂಯೋಜಕ ಶಿವಾನಂದ ಬೆಂಚಿಕೇರಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಎಫ್. ನೀರಲಗಿ, ಕೋಶಾಧ್ಯಕ್ಷ ಮಲ್ಲಿಕಾರ್ಜುನ ವಗ್ಗರ ತರಬೇತಿ ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಈರಣ್ಣ ಬೆಂಡಿಗೇರಿ ವಹಿಸಿದ್ದರು. ಈ ವೇಳೆ ಎನ್.ವೈ. ಕಳಸಾಪುರ, ವೇದಾವತಿ ದಂಡಾಗಿದಾಸರ, ಎನ್.ಎಸ್. ತಾಳಿಕೋಟಿಮಠ, ಬನ್ನೇಪ್ಪ ಕುರಹಟ್ಟಿ, ಎನ್.ಆರ್.ಪಾಟೀಲ, ಉಮೇಶ ನವಲಗುಂದ, ಕಾಸಿಮಸಾಬ್ ಮಚಲಿಬಂದರ, ವಿರೇಶ್ ಗುಳೇದ, ಶಿವಯೋಗಿ ಜಂಗಣ್ಣವರ, ಮಹೇಶ ಮಂತ್ರಿ, ಶ್ರೀನಿವಾಸ ಅಮಾತೆಣ್ಣವರ, ಎಚ್.ಕೆ.ಗುರಾಣಿ ಸೇರಿದಂತೆ 4 ಕ್ಲಸ್ಟರ್‌ನ ಶಾಲೆಗಳ ಎಸ್‌ಡಿಎಂಸಿ ಸದಸ್ಯರು ಭಾಗವಹಿಸಿದ್ದರು.



ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ



ಕುಂದಗೋಳ: ವಿದ್ಯಾರ್ಥಿಗಳಿಗೆ ಸರ್ಕಾರ, ಸಂಘ ಸಂಸ್ಥೆಗಳು ಅನೇಕ ರೀತಿಯಲ್ಲಿ ಜ್ಞಾನಾರ್ಜನೆಗೆ ನೆರವು ನೀಡುತ್ತಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮಾಜಿ ಶಾಸಕ ಎಂ.ಎಸ್. ಅಕ್ಕಿ ಹೇಳಿದರು.

ಅವರು ತಾಲೂಕಿನ ಕಳಸ ಗ್ರಾಮದ ನ್ಯೂ ಹೈಸ್ಕೂಲ್ ನಲ್ಲಿ ಕೆನರಾ ರೊಬೆಕೊ ಸ್ಕಿಮ್ ನಲ್ಲಿ 9 ಮತ್ತು 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ 90 ವಿದ್ಯಾರ್ಥಿಗಳಿಗೆ ಸೈಕಲ್ ವಿತರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಕೆನರಾ ಬ್ಯಾಂಕಿನ ರೀಜನಲ್ ಮ್ಯಾನೇಜರ್ ಸದಾನಂದ ಪ್ಯಾಟಿ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲಕ್ಕೆ ಸೈಕಲ್ ವಿತರಣೆ ಮಾಡಲಾಗಿದೆ ಎಂದು ಹೇಳಿದರು. ಶಾಲೆಯ ಮುಖ್ಯೋಪಾಧ್ಯಾಯ ಎಂ. ವಿ. ಮೆಣಸಿನಕಾಯಿ ಮಾತನಾಡಿ, ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಮಾಡಿದ್ದು ಸಂತಸವಾಗಿದೆ ಎಂದರು. ಅಧ್ಯಕ್ಷತೆಯನ್ನು ಚೇರಮನ್ ನೀಲಪ್ಪ ಗದ್ದಿ ವಹಿಸಿದ್ದರು. ಅಜ್ಜಪ್ಪ ಹೂರಕೇರಿ, ಲಿಂಗರಾಜ ಬೆಲ್ಲದ, ಚಂದ್ರಶೇಖರ ಯಾದವಾಡ, ಆರ್.ಎಂ. ಕಮತದ, ಎಚ್.ಸಿ. ಕಲ್ಲಣ್ಣವರ ಹಾಗೂ ಊರಿನ ಗಣ್ಯರು, ಶಿಕ್ಷಕರು ಇದ್ದರು.

ವೈಜ್ಞಾನಿಕ ಸಂಶೋಧನೆ ಅಗತ್ಯ: ಡಾ. ಖಾನ್

ಧಾರವಾಡ: ಸಂಶೋಧಕರು ವಿಭಿನ್ನ ದೃಷ್ಟಿಕೋನದಿಂದ ಸಂಶೋಧನಾ ಕಾರ್ಯ ಕೈಗೊಳ್ಳುವ ಜೊತೆಗೆ ವೈಜ್ಞಾನಿಕ ನೆಲೆಗಟ್ಟಿನ ಸಂಶೋಧನೆಗೆ ಹೆಚ್ಚು ಪ್ರಾಶಸ್ತ್ಯ ನೀಡಲು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಹೇಳಿದರು.

ಕವಿವಿ ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟ ಹಾಗೂ ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಸೆನೆಟ್ ಸಭಾಂಗಣದಲ್ಲಿ ಸಂಶೋಧನೆಯಲ್ಲಿ ಸ್ವ-ದೃಷ್ಟಿ ಎಂಬ ವಿಷಯದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಆಧುನಿಕ ಸಂಶೋಧನೆಯಲ್ಲಿ ಭಾರತೀಯ ಜ್ಞಾನ ಪರಂಪರೆಯ ಮಹತ್ವ ಒತ್ತಿ ಹೇಳಿದ ಖಾನ್, ಸಂಶೋಧಕರು ಪಾಶ್ಚಾತ್ಯ ಚಿಂತನೆಗಳಷ್ಟೇ ಅಲ್ಲದೆ ಭಾರತೀಯ ಚಿಂತನೆ, ತತ್ವಶಾಸ್ತ್ರ ಸ್ಥಳೀಯ ಜ್ಞಾನ ಪರಂಪರೆಯಡಿ ಸಂಶೋಧನೆ ನಡೆಸಲು ಹೇಳಿದರು.

ಸಮಾವೇಶಾತ್ಮಕ ಸಂಶೋಧನಾ ವಿಧಾನಗಳ ಅಗತ್ಯತೆ ವಿಷಯದ ಕುರಿತು ಪ್ರಾಧ್ಯಾಪಕ ಡಾ. ಎ.ಆರ್.ಕುಲಕರ್ಣಿ ಮಾತನಾಡಿ, ಸಂಶೋಧನೆಯಲ್ಲಿ ಕಲೆ ಮತ್ತು ಮಾನವಶಾಸ್ತ್ರದಲ್ಲಿ ಸ್ವ-ದೃಷ್ಟಿ ಕುರಿತು ಪ್ರಾಧ್ಯಾಪಕ ಡಾ.ಮಲ್ಲಪ್ಪ ಬಂಡಿ ಉಪನ್ಯಾಸ ನೀಡಿದರು. ವೈಜ್ಞಾನಿಕ ಸಂಶೋಧನೆಯಲ್ಲಿ ಸ್ವ-ದೃಷ್ಟಿಯ ಅಗತ್ಯ ಕುರಿತು ಧಾರವಾಡ ಐಐಟಿ ಪ್ರಾಧ್ಯಾಪಕ ಪ್ರೊ.ಬಾಲಚಂದ್ರ ತೆಂಬೆ, ಮಾಜಶಾಸ್ತ್ರ ನಿರ್ವಹಣಾ ಮತ್ತು ಕಾನೂನು ಕ್ಷೇತ್ರಗಳಲ್ಲಿ ಸ್ವ ದೃಷ್ಟಿ ಮಹತ್ವ ಬಗ್ಗೆ ಮನಶಾಸ್ತ್ರಜ್ಞೆ ಪ್ರೊ. ವಿಜಯಲಕ್ಷ್ಮೀ ಅಮ್ಮಿನಬಾವಿ ಮಾತನಾಡಿದರು. ಸಂಶೋಧಕರು, ಅಧ್ಯಾಪಕರು ಭಾಗವಹಿಸಿದ್ದರು.



ರಾಮನ ಆದರ್ಶ ಸರ್ವರಿಗೂ ಸ್ಫೂರ್ತಿ



ಅಳ್ನಾವರ: ರಾಮನ ಆದರ್ಶಗಳು ನಮಗೆಲ್ಲರಿಗೂ ಸ್ಫೂರ್ತಿಯಾಗಿವೆ. ನಾಡಿನಲ್ಲಿ ರಾಮರಾಜ್ಯ ಪುನರ್‌ಸ್ಥಾಪನೆಗೆ ಪ್ರತಿಯೊಬ್ಬರೂ ಮುಂದಾಗಬೇಕು ಎಂದು ನಿವೃತ್ತ ರೇಲ್ವೆ ಅಧಿಕಾರಿ ಬಾಳಕೃಷ್ಣ ಪಾಟೀಲ ಹೇಳಿದರು.

ಪಟ್ಟಣದ ಇಂದಿರಾನಗರ ಬಡಾವಣೆಯಲ್ಲಿ ಆಯೋಜನೆಗೊಂಡಿದ್ದ ರಾಮನವಮಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪ್ರಭು ರಾಮನ ನಾಡಿನಲ್ಲಿ ಶಾಂತಿ, ಸಮೃದ್ಧಿ ನೆಲೆಸಲು ನಿತ್ಯ ರಾಮನ ಸ್ಮರಣೆ ಅವಶ್ಯ ಎಂದರು.

ಬೆಳಗ್ಗೆ ರಾಮನ ಪೂಜೆ, ತೊಟ್ಟಿಲೋತ್ಸವ ನಂತರ ತೀರ್ಥ ಪ್ರಸಾದ ಕಡಲೆ ಉಸುಳಿ, ಪಾನಕ,ಕೊಸಂಬರಿ ಆಗಮಿಸಿದ ಭಕ್ತರಿಗೆ ವಿತರಿಸಲಾಯಿತು. ರಾಮನಾಮ ಜಪ, ಹಾಡು ಭಜನೆ ನಡೆಯಿತು.

ಸಹಾಯ ಹಸ್ತ ಚಾಚುವ ಚಿಂತನೆ ಅವಶ್ಯ

ಹುಬ್ಬಳ್ಳಿ: ನ್ಯಾಯ, ಸತ್ಯ ಮಾರ್ಗದ ಹಾಗೂ ಶಾಂತಿಯುತ ಸಮಾಜವನ್ನು ನಾವು ನಿರ್ಮಿಸಬೇಕು. ಅದೇ ರೀತಿ ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ಚಾಚುವ ಸಾಯಿಬಾಬಾ ಅವರ ಚಿಂತನೆ ಎಲ್ಲರಲ್ಲಿಯೂ ಬೆಳೆಯಲಿ ಎಂದು ಕಾಂಗ್ರೆಸ್ ಯುವ ಮುಖಂಡ ವಿಶಾಲ ಅಬ್ಬಯ್ಯ ಹೇಳಿದರು. ಹಳೇ ಕೋರ್ಟ್ ಹತ್ತಿರದ ಸಾಯಿ ಮಂದಿರದಲ್ಲಿ ಶ್ರೀ ಶಿರಡಿ ಸಾಯಿ ಸದ್ಭಕ್ತ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ ಶ್ರೀರಾಮ ಜನ್ಮೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶ್ರೀಸಾಯಿ ಪರಿವಾರ ವೃದ್ಧಾಶ್ರಮದ ಸಲಹೆಗಾರ ಸುರೇಶ ಅಗರವಾಲ್ ಮಾತನಾಡಿ, ಶ್ರೀ ಶಿರಡಿ ಸಾಯಿ ಸದ್ಭಕ್ತ ಮಂಡಳಿ ವತಿಯಿಂದ ಕುರುವಿನಕೊಪ್ಪ ಗ್ರಾಮದಲ್ಲಿ ವೃದ್ಧಾಶ್ರಮ ನಿರ್ಮಿಸಲಾಗುತ್ತಿದ್ದು, ಸಮಾಜಮುಖಿ ಕಾರ್ಯದಲ್ಲಿ ಎಲ್ಲರೂ ಭಾಗಿಯಾಗಬೇಕು ಎಂದರು. ಶ್ರೀರಾಮ ನವಮಿ ಉತ್ಸವ ಸಮಿತಿ ಅಧ್ಯಕ್ಷ ಬ್ರಿಜ್ ಮೋಹನ ಭುತಾಡಾ ಮಾತನಾಡಿದರು. ಶ್ರೀ ಶಿರಡಿ ಸಾಯಿ ಸದ್ಭಕ್ತ ಮಂಡಳಿ ಅಧ್ಯಕ್ಷ ಮಹದೇವ ಮಾಶ್ಯಾಳ, ಗಂಗಾವತಿ ಸಿಲ್ಕ್ ಪ್ಯಾಲೇಸ್ ಮಾಲೀಕ ಆನಂದ ಕಮತಗಿ, ಪಾರ್ವತಿ ಕಮತಗಿ, ಶಿವಯೋಗಿ ಗದಗಿಮಠ, ರೇಖಾ ಲದ್ವಾ, ಮೋಹನ ಗಿರಡ್ಡಿ, ನೀಪಾ ಮೆಹ್ತಾ ಇದ್ದರು. ಸಾಯಿ ಮಂದಿರದಲ್ಲಿ ಸಾಯಿಬಾಬಾರಿಗೆ ಕಾಕಡಾರತಿ, ಮಂಗಲಸ್ನಾನ, ಅಲಂಕಾರ, ಪೂಜೆ, ಆರತಿ ಮಾಡಲಾಯಿತು. ಬಳಿಕ ಶ್ರೀರಾಮ ತೊಟ್ಟಿಲೋತ್ಸವ ಕಾರ್ಯಕ್ರಮ ಜರುಗಿತು.



ಕಿರುಸುದ್ದಿ

ಸಿಲಿಂಡರ್ ಸಾಗಿಸುತ್ತಿದ್ದ ಲಾರಿ ಪಲ್ಟಿ



◆ **ರೋಣ:** ಸಿಲಿಂಡರ್ ಸಾಗಿಸುತ್ತಿದ್ದ ಲಾರಿಯೊಂದು ಭಾನುವಾರ ಬೆಳಗ್ಗೆ ರೋಣ ಗಜೇಂದ್ರಗಡ ಮುಖ್ಯ ರಸ್ತೆಯಲ್ಲಿ ಪಲ್ಟಿಯಾದ ಘಟನೆ ನಡೆದಿದೆ.

ಇದರಿಂದ ಮುಖ್ಯ ರಸ್ತೆಯಲ್ಲಿ ಕೆಲ ಕಾಲ ಆತಂಖದ ವಾತವರಣ ನಿರ್ಮಾಣವಾಗಿತ್ತು. ಗಜೇಂದ್ರಗಡದಿಂದ ರೋಣ ಪಟ್ಟಣದತ್ತ ಗೃಹ ಬಳಕೆಯ ಸಿಲಿಂಡರ್ ಸಾಗಿಸುತ್ತಿದ್ದ ಲಾರಿ ರೋಣ ಪಟ್ಟಣದ ಸಮೀಪ ಇರುವ ಶೇಖರಯ್ಯ ಅಜ್ಜನ ಮಠದ ಬಳಿ ಚಾಲಕನ ನಿಯಂತ್ರಣ ತಪ್ಪಿ ಲಾರಿ ಪಲ್ಟಿಯಾಗಿದ್ದು, ಇದರಿಂದ ವಾಹನದಲ್ಲಿದ್ದ ಸಿಲಿಂಡರ್‌ಗಳು ಮುಖ್ಯ ರಸ್ತೆಯಲ್ಲಿ ಹಾಗೂ ಅಕ್ಕಪಕ್ಕದಲ್ಲಿರುವ ಜಮೀನುಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ದೃಶ್ಯಗಳು ಕಂಡು ಬಂದವು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿಯಾಗಿಲ್ಲ.

ಮುಂಚಿತವಾಗಿ ದಾಸ್ತಾನು ಮಾಡಿ

◆ **ನರಗುಂದ:** 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಅಗತ್ಯವಿರುವ ರಸಗೊಬ್ಬರಗಳನ್ನು ಖಾಸಗಿ ಹಾಗೂ ಸಹಕಾರಿ ಸಂಘಗಳ ಮಾರಾಟಗಾರರು ಕಡ್ಡಾಯವಾಗಿ ಮುಂಚಿತವಾಗಿ ದಾಸ್ತಾನು ಮಾಡಬೇಕು. ಯೂರಿಯಾ ರಸಗೊಬ್ಬರವನ್ನು ಅಗತ್ಯ ಪ್ರಮಾಣದಲ್ಲಿ ಶೇಖರಿಸಿ ಇಟ್ಟುಕೊಳ್ಳಬೇಕೆಂದು ಸಹಾಯಕ ಕೃಷಿ ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ. ತಾಲೂಕಿನ ರೈತರಿಗೆ ಮಾತ್ರ ರಸಗೊಬ್ಬರಗಳನ್ನು ವಿತರಿಸಬೇಕು. ನಿಮಗೆ ಈಗಾಗಲೇ ನೀಡಿರುವ ಎಫ್‌ಐಡಿ ಪಟ್ಟಿಯನ್ನು ಪರಿಶೀಲಿಸಿ ಅಗತ್ಯಕ್ಕೆ ಅನುಗುಣವಾಗಿ ರಸಗೊಬ್ಬರ ವಿತರಿಸುವುದು, ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡುವಂತಿಲ್ಲ, ಎಲ್ಲ ರಸಗೊಬ್ಬರ ಮಾರಾಟಗಾರರು ತಮ್ಮ ಮಳಿಗೆಯಲ್ಲಿ ಲಭ್ಯವಿರುವ ರಸಗೊಬ್ಬರದ ವಿವರ ದರ ಮತ್ತು ಪ್ರಮಾಣ ಇತ್ಯಾದಿ ವಿವರಗಳನ್ನು ತಮ್ಮ ಮಳಿಗೆಯ ಸೂಚನಾ ಫಲಕದಲ್ಲಿ ನಮೂದಿಸಿರಬೇಕು ಎಂದರು. ಈ ಎಲ್ಲ ಕ್ರಮಗಳನ್ನು ಪಾಲಿಸುವುದು ಅತಿ ಅವಶ್ಯಕವಾಗಿದ್ದು, ತಪ್ಪಿದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲು ಕ್ರಮ ವಹಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕ ಶವವಾಗಿ ಪತ್ತೆ



◆ **ಗದಗ:** ಕಳೆದ ಮೂರ್ನಾಲ್ಕು ದಿನಗಳ ಹಿಂದೆ ನಾಪತ್ತೆಯಾಗಿದ್ದ ಯುವಕ ತಾಲೂಕಿನ ಹೊಂಬಳ-ಹುಯಿಲಗೋಳ ರಸ್ತೆಯ ಸೇತುವೆ ಕೆಳಗೆ ಅರೆಬರೆ ಸುಟ್ಟ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದ್ದು, ತಡವಾಗಿ ಘಟನೆ ಬೆಳಕಿಗೆ ಬಂದಿದೆ.

ತಾಲೂಕಿನ ಹುಯಿಲಗೋಳ ಗ್ರಾಮದ ಚಂದ್ರು ಬಸವರಾಜ ಕುರಿ(28) ಮೃತ ಯುವಕ. ಹೊಂಬಳ ಗ್ರಾಮದ ಹೊರವಲಯದ ಸೇತುವೆ ಕೆಳಭಾಗದಲ್ಲಿ ಯುವಕನ ಶವ ಪತ್ತೆಯಾಗಿದೆ. ಮೃತ ಚಂದ್ರು ಬಸವರಾಜ ಕುರಿ ಮಾ.24ರ ಮಂಗಳವಾರ ರಾತ್ರಿ ಊಟ ಮಾಡಿ ಮಧ್ಯರಾತ್ರಿ 12 ಸುಮಾರಿಗೆ ಫೋನ್‌ನಲ್ಲಿ ಮಾತನಾಡುತ್ತ ಮನೆಯಿಂದ ಆಚೆ ಹೋಗಿದ್ದನು. ನಾಲ್ಕು ದಿನಗಳಾದ್ರೂ ಮನೆಗೆ ಬರಲಿಲ್ಲವೆಂದು ಯುವಕನ ಪೋಷಕರು ಎಲ್ಲಾ ಕಡೆ ಹುಡುಕಾಡಿದ್ದಾರೆ. ಯುವಕ ಸಿಗದ ಕಾರಣ ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ದೂರು ದಾಖಲಿಸಿದ್ದರು. ಮಾ. 28ರಂದು ಬೆಳಿಗ್ಗೆ ಹೊಂಬಳ-ಹುಯಿಲಗೋಳ ರಸ್ತೆ ಮಾರ್ಗದ ಸೇತುವೆ ಅಕ್ಕಪಕ್ಕದ ಜಮೀನುಗಳ ರೈತರು ಸೇತುವೆ ಕೆಳಗೆ ಮೃತದೇಹವೊಂದ ಮಾಹಿತಿಯನ್ನು ಪೊಲೀಸ್ ಕಂಟ್ರೋಲ್ ರೂಮ್‌ಗೆ ತಿಳಿಸಿದ್ದಾರೆ. ನಂತರ ಪೊಲೀಸರು ಮೃತದೇಹವನ್ನು ಪರಿಶೀಲಿಸಿದ್ದು ಶವವನ್ನು ಸ್ಥಳೀಯರು ಸಂಗ್ರಹಿಸಿ ಹೋಗಿರುವುದು ಯುವಕನ ಪೋಷಕರು ಮೃತದೇಹವನ್ನು ಗುರುತಿಸಿದ್ದು, ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಸೇತುವೆ ಕೆಳಭಾಗದಲ್ಲಿ ಬೆಂಕಿ ಅರೆಬರೆ ಸುಟ್ಟು ಹಾಕಿ ಹೋಗಿದ್ದಾರೆ ಎಂದು ಆರೋಪಿಸಿದ್ದಾರೆ. ಮೃತ ಚಂದ್ರು ಬಸವರಾಜ ಕುರಿ ಸ್ವಂತ ವಾಹನ ಹೊಂದಿದ್ದು, ಡ್ರೈವಿಂಗ್ ಕೆಲಸ ಮಾಡಿಕೊಂಡಿದ್ದನು. ಚಂದ್ರುಗೆ ಮದುವೆ ಸಹ ನಿಶ್ಚಯವಾಗಿತ್ತು. ಮುಂಬರುವ ಬಸವ ಜಯಂತಿಗೆ ಮದುವೆ ಸಿದ್ಧತೆಯಲ್ಲಿದ್ದರು. ಕುಟುಂಬದ ಏಳಿಗೆ ಸಹಿಸದೇ ಕೊಲೆ ಮಾಡಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ಕುರಿತು ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿರ್ಧಾರ ಖಂಡನೀಯ: ಇಟಗಿ



◆ **ಮುಂಡರಗಿ:** ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ತೃತೀಯ ಭಾಷೆ ಪರೀಕ್ಷೆಗೆ ಗ್ರೇಡಿಂಗ್ ನೀಡಲು ಮುಂದಾಗಿರುವ ಸರ್ಕಾರದ ನಡೆಯನ್ನು ಮುಂಡರಗಿ ತಾಲೂಕಿನ ಸಾಮಾಜಿಕ ಕಾರ್ಯಕರ್ತ ದೇವಪ್ಪ ಇಟಗಿ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಸರ್ಕಾರ ಈ ನಿರ್ಧಾರವನ್ನು ಜನೆವರಿ- ಫೆಬ್ರವರಿ ತಿಂಗಳಲ್ಲಿ ಮಾಡಬೇಕಿತ್ತು. ಆದರೆ ಪರೀಕ್ಷೆ ನಡೆಯುವ ಸಮಯದಲ್ಲಿ ಇಂಥ ನಿರ್ಣಯ ಮಾಡಿರುವ ಕ್ರಮ ಸರಿಯಲ್ಲ. ಪರೀಕ್ಷೆ ಮೂರು ದಿನ ಇರುವಾಗ ಆ ಪರೀಕ್ಷೆಗೆ ಮನ್ನಣೆ ಇಲ್ಲ ಎಂದು ಘೋಷಿಸುವುದು ಮಕ್ಕಳ ಪರಿಶ್ರಮಕ್ಕೆ ಬಗೆದ ದ್ರೋಹ. ಪರೀಕ್ಷೆಗಳು ಮುಗಿದ ನಂತರ ದಿಡೀರನೆ ಪರೀಕ್ಷೆಗಳ ಒಟ್ಟು ಅಂಕಗಳು 625 ರಿಂದ 525ಕ್ಕೆ ಇಳಿಸಲಾಗುವುದು ಎಂದು ತೀರ್ಮಾನವನ್ನು ಪ್ರಕಟಿಸಿರುವುದು ಖಂಡನೀಯ. ಪರೀಕ್ಷೆ ಕುರಿತು ಸರ್ಕಾರಕ್ಕಿರುವಂತ ಗಾಂಭೀರ್ಯ ಕೊರತೆ ಎದ್ದು ಕಾಣುತ್ತದೆ ಎಂದು ಆರೋಪಿಸಿದರು.



ಲಕ್ಷ್ಮೇಶ್ವರ: ಲಕ್ಷ್ಮೇಶ್ವರ ತಾಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ಈಶ್ವರ ನಗರದ ಈಶ್ವರ ದೇವಸ್ಥಾನದಲ್ಲಿ ಇತ್ತೀಚೆಗೆ ಚನಬಸಪ್ಪ ರುದ್ರಪ್ಪ ಅಳಗವಾಡಿ ಹಾಗೂ ಗೌರಮ್ಮ ಚನಬಸಪ್ಪ ಅಳಗವಾಡಿ ಇವರ ಸ್ಮರಣಾರ್ಥ ನಿವೃತ್ತ ಮುಖ್ಯೋಪಾಧ್ಯಾಯಿನಿ ಶಕುಂತಲಾ ಅಳಗವಾಡಿ ಇವರು ಕೊಡಮಾಡಿದ ದತ್ತಿ ಉಪನ್ಯಾಸ ನಡೆಯಿತು.

ಪರಿಹಾರ ನೀಡುವ ಜಾಣ್ಮೆ ಬೆಳೆಸುವ ಕಾರ್ಯಕ್ರಮ

◆ **ಲಕ್ಷ್ಮೇಶ್ವರ:** ಹ್ಯಾಕಥಾನ್‌ನಂತಹ ರಾಷ್ಟ್ರಮಟ್ಟದ ತಾಂತ್ರಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಉತ್ತಮ ತಾಂತ್ರಿಕ ಶಕ್ತಿ ನೀಡುವುದರೊಂದಿಗೆ ಶ್ರೇಷ್ಠ ಆಲೋಚನೆಗಳೊಂದಿಗೆ ನಿರ್ದಿಷ್ಟ ಸಮಯದಲ್ಲಿ ಪರಿಹಾರ ನೀಡುವ ಜಾಣ್ಮೆ ಬೆಳೆಸುತ್ತವೆ ಎಂದು ಬೆಂಗಳೂರಿನ ಜೆಟಾಕೋಡಿಂಗ್ ಇನ್ನೋವೇಟಿವ್ ಸೊಲ್ಯೂಷನ್ಸ್ ಕೋ-ಫೌಂಡರ್ ಮತ್ತು ಟೆಕ್ನಿಕಲ್ ಡೈರೆಕ್ಟರ್ ಮಜೀದ್ ಶೇಕ್ ಹಾಗೂ ಹುಬ್ಬಳ್ಳಿಯ ನ್ಯಾನೊಟೆಕ್ ಸೊಲ್ಯೂಷನ್ಸ್ ಸಂಸ್ಥಾಪಕ ಅಲ್ಫಾನ್ಸ್ ಕೆ. ಹೇಳಿದರು.

ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ. ಅಗಡಿ ಎಂಜಿನಿಯರಿಂಗ್ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಿಂದ ರಾಷ್ಟ್ರಮಟ್ಟದ ಕೋಡ್ ಪಿಯಾಸ್ಟಾ 6.ಔ ನಿರಂತರ 24 ತಾಸುಗಳ ಹ್ಯಾಕಥಾನ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು. ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಪರಶುರಾಮ ಬಾರ್ಕಿ ಮಾತನಾಡಿದರು. ಹುಬ್ಬಳ್ಳಿಯ ಕೆ.ಎಲ್.ಇ ಟೆಕ್ನಾಲಜಿಕಲ್ ಯುನಿವರ್ಸಿಟಿಯ ಶರಣ ಎಂ ಮತ್ತು ತಂಡ ಹಾಗೂ ಗದಗಿನ ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜಿನ ಗುಲ್ಜಾರ್ ಎಂ ಮತ್ತು ತಂಡ ಪ್ರಥಮ ಸ್ಥಾನ ಪಡೆದರು. ಅಗಡಿ ಎಂಜಿನಿಯರಿಂಗ್ ಕಾಲೇಜಿನ ಶಿವಾನಿ ಎಚ್ ಮತ್ತು ತಂಡ ಹಾಗೂ ಹುಬ್ಬಳ್ಳಿಯ ಗ್ಲೋಬಲ್ ಕಾಲೇಜಿನ ಪ್ರಜ್ವಲ್ ಬಿ ಮತ್ತು ತಂಡ ದ್ವಿತೀಯ ಸ್ಥಾನ ಪಡೆದರು. ಹೈದರಾಬಾದಿನ ಅನುರಾಗ್ ಯುನಿವರ್ಸಿಟಿಯ ಪಿ ಪ್ರವನ ಮತ್ತು ತಂಡ ಹಾಗೂ ವರೂರಿನ ಎ.ಜಿ.ಎಂ ಎಂಜಿನಿಯರಿಂಗ್ ಕಾಲೇಜಿನ ರೌತ್ ಎಸ್ ಮತ್ತು ತಂಡ ಹಾಗೂ ಬೆಳಗಾವಿಯ ಕೆ.ಎಲ್.ಎಸ್ ಜಿಐಟಿ ಎಂಜಿನಿಯರಿಂಗ್ ಕಾಲೇಜಿನ ಓಂ ವಿ ಮತ್ತು ತಂಡ ತೃತೀಯ ಸ್ಥಾನವನ್ನು ಪಡೆದರು. ಹಾಗೂ 6 ಉತ್ತಮ ಪ್ರಾಜೆಕ್ಟ್ ಪ್ರದರ್ಶನಕ್ಕಾಗಿ ವಿವಿಧ ಕಾಲೇಜುಗಳು ಬಹುಮಾನ ಪಡೆದರು.



◆ **ಲಕ್ಷ್ಮೇಶ್ವರ:** ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ. ಅಗಡಿ ಎಂಜಿನಿಯರಿಂಗ್ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಿಂದ ರಾಷ್ಟ್ರಮಟ್ಟದ ಕೋಡ್ ಪಿಯಾಸ್ಟಾ 6.ಔ ನಿರಂತರ 24 ತಾಸುಗಳ ಹ್ಯಾಕಥಾನ ಸ್ಪರ್ಧೆಯನ್ನು ಬೆಂಗಳೂರಿನ ಜೆಟಾಕೋಡಿಂಗ್ ಇನ್ನೋವೇಟಿವ್ ಸೊಲ್ಯೂಷನ್ಸ್ ಕೊ-ಫೌಂಡರ್ ಮತ್ತು ಟೆಕ್ನಿಕಲ್ ಡೈರೆಕ್ಟರ್ ಮಜೀದ್ ಶೇಕ್ ಹಾಗೂ ಹುಬ್ಬಳ್ಳಿಯ ನ್ಯಾನೊಟೆಕ್ ಸೊಲ್ಯೂಷನ್ಸ್ ಸಂಸ್ಥಾಪಕ ಅಲ್ಫಾನ್ಸ್ ಕೆ. ಉದ್ಘಾಸಿದರು.

ಗಬ್ಬೆದ್ದು ನಾರುತ್ತಿರುವ ಲಕ್ಷ್ಮೇಶ್ವರ ಪಟ್ಟಣ | ಅಶುಚಿತ್ವ ತಾಣವಾದ ರಸ್ತೆಗಳು

ಎಲ್ಲೆಂದರಲ್ಲಿ ಬಿದ್ದ ಕಸದ ರಾಶಿ



▶ **ಶಿವಲಿಂಗಯ್ಯ ಹೊತಗಿಮಠ**

◆ **ಲಕ್ಷ್ಮೇಶ್ವರ:** ಪಟ್ಟಣ ಗಬ್ಬೆದ್ದು ನಾರುತ್ತಿದ್ದು, ಎಲ್ಲೆಂದರಲ್ಲಿ ಕಸವೋ ಕಸ. ಐತಿಹಾಸಿಕ ಪಟ್ಟಣದ ಪ್ರತಿಯೊಂದು ರಸ್ತೆಯೂ ಅಸ್ವಚ್ಛತೆಯಿಂದ ಕೂಡಿದೆ. ಕೆಲ ಕಡೆ ಚರಂಡಿಗಳಲ್ಲಿ ವರ್ಷಾನುಗಟ್ಟಲೇ ಕಸವನ್ನು ಎತ್ತದೆ ಕಸದ ರಾಶಿ ತುಂಬಿಕೊಂಡಿವೆ, ಕಸದ ತಿಪ್ಪೆಗಳು ಸ್ವಾಗತ ಮಾಡುತ್ತಿವೆ ಎಂದು ಸಾರ್ವಜನಿಕರು ಆಕ್ರೋಶಿಸುತ್ತಿದ್ದಾರೆ.

ಇನ್ನು ಕೆಲವು ಹತ್ತಿರ ಚರಂಡಿಗಳು ಮುಚ್ಚಿಕೊಂಡು ಹೋಗಿವೆ. ಪುರಸಭೆ ಸುತ್ತಲೂ ಅಸ್ವಚ್ಛತೆದಿಂದವಿದ್ದು, ಪ್ರಮುಖ ದೇವಸ್ಥಾನಗಳು, ಮಸೀದಿಗಳು, ಜೈನಬಸ್ತಿಗಳು, ಶಾಲೆಗಳು, ಸರ್ಕಾರಿ ಕಚೇರಿಗಳು, ಪ್ರಮುಖ ಆಸ್ಪತ್ರೆಗಳ ಹತ್ತಿರ ಕಸದ ರಾಶಿ ತುಂಬಿ ತುಳುಕುತ್ತಿವೆ. ಪಟ್ಟಣ ರೋಗ ರುಜಿನಗಳ ತಾಣವಾಗುವ ಎಲ್ಲಾ ಲಕ್ಷಣಗಳು ಎದ್ದು ಕಾಣುತ್ತಿವೆ. ಸೊಳ್ಳೆಗಳು, ನೊಣಗಳು ಕಸದರಾಶಿಯಲ್ಲಿ ಪ್ರಾಕ್ಟರಿ ಮಾಡಿಕೊಂಡಿವೆ. ಪುರಸಭೆಯವರು ಹಸಿಕಸ, ಒಣಕಸ ಬೇರ್ಪಡಿಸಲು ಪಟ್ಟಣದ 62 ಕಡೆ ಸ್ಟಿಲ್ ಡಸ್ಟ ಬಿನ್ ಗಳನ್ನು ಹಾಕಿದ್ದರು. ಆ ಡಸ್ಟಬಿನ್‌ಗಳು ಉಪಯೋಗಕ್ಕೆ ಬರುತ್ತಿಲ್ಲ, ಕೆಲವು ಕಿತ್ತುಕೊಂಡು ಹೋಗಿವೆ. ಎಲ್ಲಿ ಕಸ ಕಾಣುತ್ತೆ ಫೋಟೋ ತೆಗೆದು ವಾಟ್ಸಪ್ ನಂ ಕಳಿಸಿ ಅಂತಾ ವಾಟ್ಸಪ್ ಗ್ರೂಪ್ ಮಾಡಿದ್ದಾರೆ. ಅದು ಆಟಕ್ಕೆ ಉಂಟು ಲೆಕ್ಕಕ್ಕಿಲ್ಲದಂತಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಸ್ವಚ್ಛತೆ ಮರೀಚಿಕೆಯಾಗಿದೆ. ಏನೇ ಕೇಳಿದರೂ ಪೌರಕಾರ್ಮಿಕರ ಕೊರತೆಯಿದೆ ಎಂದು ಹಾರಿಕೆ ಉತ್ತರ ನೀಡುತ್ತಿದ್ದಾರೆ. 15 ವರ್ಷದಿಂದ ಪೌರಕಾರ್ಮಿಕರ ಕೊರತೆ ನೀಗಿಸುವ ಗೋಜಿಗೆ ಹೋಗುತ್ತಿಲ್ಲ, ಈ ಬಗ್ಗೆ ಸರಕಾರದ ಗಮನಕ್ಕೂ ತರುತ್ತಿಲ್ಲ ಅಂತಾ ಕೇಳಿದರೆ, ಹಲವು ಬಾರಿ ಮನವಿ ಕೊಟ್ಟಿದ್ದೇವೆ ಎಂದು ಸಮಜಾಯಿಸಿ ನೀಡುತ್ತಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ದಿಗಂತ ವಿಶೇಷ

50ಕ್ಕಿಂತ ಹೆಚ್ಚು ಪೌರಕಾರ್ಮಿಕರ ಕೊರತೆ

ಸರ್ಕಾರದ ನಿಯಮಾವಳಿ ಪ್ರಕಾರ 700 ಜನರಿಗೆ ಒಬ್ಬರಂತೆ ಪೌರಕಾರ್ಮಿಕರು ಇರಬೇಕು. ಆದರೆ ಇಲ್ಲಿ ಕಾರ್ಮಿಕರೂ ಇಲ್ಲ, ನಿಗದಿತ ಸಂಖ್ಯೆಯೂ ಕೊರತೆಯಿದೆ. 2011ರ ಜನಗಣತಿ ಪ್ರಕಾರ 40429 ಜನಸಂಖ್ಯೆ ಇತ್ತು. 56 ಜನ ಪೌರಕಾರ್ಮಿಕರು ಬೇಕಾಗಿತ್ತು. ಸದ್ಯ 21 ಜನ ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಹೊರಗುತ್ತಿಗೆ ಆಧಾರದ ಮೇಲೆ ಕೆಲವು ಜನ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಸದ್ಯ 50 ಸಾವಿರಕ್ಕಿಂತಲೂ ಹೆಚ್ಚು ಜನಸಂಖ್ಯೆಯಿದ್ದು ಅಂದಾಜು 50ಕ್ಕಿಂತಲೂ ಹೆಚ್ಚು ಪೌರಕಾರ್ಮಿಕರು ಕೊರತೆಯಿದೆ ಎಂದು ಜನರು ಅಭಿಪ್ರಾಯಿಸುತ್ತಿದ್ದಾರೆ.

ಸ್ವಚ್ಛತೆಗೆ ಆದ್ಯತೆ ನೀಡಿ

ಆಡಳಿತ ಅಧಿಕಾರಿಗಳು ಹೆಚ್ಚಿನ ಪೌರಕಾರ್ಮಿಕರನ್ನು ನೇಮಿಸಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಪುರಸಭೆ ಆರೋಗ್ಯ ಅಧಿಕಾರಿಗಳು ಸ್ವಚ್ಛತೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಪುರಸಭೆ ಮಾಜಿ ಸದಸ್ಯ ಪ್ರವೀಣ ಬಾಳಿಕಾಯಿ ಒತ್ತಾಯಿಸಿದರು.



- ಜನರ ಆರೋಗ್ಯ ಕಾಪಾಡಲು ಅಧಿಕಾರಿಗಳು ಮುಂದಾಗಲಿ
- ಜನರು ಪುರಸಭೆಯೊಂದಿಗೆ ಕೈಜೋಡಿಸಿ ಕಸವನ್ನು ಪುರಸಭೆಯ ವಾಹನಕ್ಕೆ ಹಾಕಿ ಸ್ವಚ್ಛತೆ ಕಾಪಾಡಲು ಸಹಕರಿಸಲಿ
- ಅಧಿಕಾರಿಗಳು ಪೌರಕಾರ್ಮಿಕರ ಕೊರತೆ ನೀಗಿಸಿ ಸುಂದರ ಪಟ್ಟಣವನ್ನಾಗಿ ಮಾಡಲಿ ಎಂಬುದು ನಾಗರಿಕರ ಒತ್ತಾಯ

“ಸ್ವಚ್ಛತೆ ಬಗ್ಗೆ ಅನೇಕ ದೂರುಗಳು ಬರುತ್ತಿವೆ. ಪೌರಕಾರ್ಮಿಕರ ಸಂಖ್ಯೆ ಕಡಿಮೆ ಇದ್ದು ಸಾರ್ವಜನಿಕರು ಪುರಸಭೆಯೊಂದಿಗೆ ಕೈಜೋಡಿಸಬೇಕು. ಕಸವನ್ನು ಎಲ್ಲೆಂದರಲ್ಲೇ ಬಿಸಾಕದೆ ಪುರಸಭೆ ಕಸದ ವಾಹನಕ್ಕೆ ಹಾಕಬೇಕು.

■ **ಮಂಜುನಾಥ ಮುದಗಲ್**, ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ

ಕ್ರೀಡೆಯಲ್ಲಿ ಪಾಲ್ಗೊಂಡರೆ ಒತ್ತಡ ದೂರ

◆ **ಗದಗ:** ಆಧುನಿಕ ದಿನಮಾನದಲ್ಲಿ ಒತ್ತಡದ ಜೀವನಶೈಲಿಯಿಂದ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯ ಕ್ಷೀಣಿಸುತ್ತಿದ್ದು, ಕ್ರೀಡೆಗಳು ಇಂಥ ಎಲ್ಲಾ ಸಮಸ್ಯೆಗಳಿಗೆ ದಿವ್ಯ ಔಷಧಗಳಾಗಿವೆ. ವಿಶೇಷವಾಗಿ ಯುವಜನತೆ ಕ್ರೀಡೆಗಳ ಮಹತ್ವವನ್ನು ಮರೆಯಬಾರದು ಎಂದು ಸಿ.ಪಿ.ಐ ಎಲ್.ಕೆ ಜೂಲಿಕಟ್ಟಿ ಹೇಳಿದರು.

ಇಲ್ಲಿನ ಜಗದ್ಗುರು ತೋಂಟದಾರ್ಯ ಮಠದ 2026ನೇ ಸಾಲಿನ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು. ತೋಂಟದಾರ್ಯ ಮಠದ ಜಾತ್ರೆಯ ಸಮಾಜಮುಖಿ ಪರಂಪರೆ ಅನನ್ಯವಾಗಿದ್ದು, ಕ್ರೀಡೆಗಳಿಗೂ ಜಾತ್ರೆಯಲ್ಲಿ ಪಾಲು ನೀಡಿರುವುದು ಅಭಿನಂದನೀಯ. ಕ್ರೀಡಾಪಟುಗಳು ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಕಬಡ್ಡಿ ಪಂದ್ಯಾವಳಿಯಲ್ಲಿ 21 ತಂಡಗಳು ಭಾಗವಹಿಸಿದ್ದವು. ಇವುಗಳ ಪೈಕಿ ಮೆಣಸಗಿಯ ಜಯಕರ್ನಾಟಕ ಕಬಡ್ಡಿ ತಂಡ ಪ್ರಥಮ ಸ್ಥಾನ ಗಳಿಸಿತು. ರೋಣದ ಬಿ.ಸಿ. ರಮೇಶ್ ತಂಡ ದ್ವಿತೀಯ ಸ್ಥಾನಗಳಿಸಿ ರನ್ನರ್ ಆಪ್ ಸ್ಥಾನ ಗಳಿಸಿತು. ಡಂಬಳದ ಮಾರುತೇಶ್ವರ ಕಬಡ್ಡಿ ತಂಡ ಹಾಗೂ ಮೆಣಸಗಿಯ ಲಿಂಗಬಸವೇಶ್ವರ ಕಬಡ್ಡಿ ತಂಡಗಳು ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನ ಗಳಿಸಿದವು.

ವಿಜೇತ ಕಬಡ್ಡಿ ತಂಡಗಳಿಗೆ ಪ್ರಶಸ್ತಿ ಫಲಕ ಹಾಗೂ ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು. ಪಂದ್ಯಾವಳಿಗಳ ನಿರ್ಣಾಯಕ ಬಿ.ಎಚ್. ಹಡಪದ, ಎಸ್.ಡಿ.ಮಾದರ, ಎಂ.ಆರ್. ಪೂಜಾರ, ಮುತ್ತು ಪ್ರದಾನಿ, ಎಸ್.ಆರ್. ಗಣಾಚಾರಿ, ಜಾತ್ರಾ ಸಮಿತಿಯ ಅಧ್ಯಕ್ಷ ವಿನಾಯಕ ಮಾನ್ವಿ, ಉಪಾಧ್ಯಕ್ಷ ಶಿವಯ್ಯ ನಾಲ್ವತ್‌ವಾಡಮಠ, ಸುಭಾಷ ಚನ್ನಪ್ಪನವರ, ಸುಧಾ ಹುಚ್ಚಣ್ಣವರ, ಕೋಶಾಧ್ಯಕ್ಷ ವಿರೂಪಾಕ್ಷಪ್ಪ ದಲಾಲಿ, ಸಹ ಕೋಶಾಧ್ಯಕ್ಷ ವೀರಣ್ಣ ಗಡಗಿ, ಕಾರ್ಯದರ್ಶಿ ಚೇತನ ಅಂಗಡಿ, ಸಹ ಕಾರ್ಯದರ್ಶಿ ಎಂ.ಜಿ. ಹೂಗಾರ, ಚಂದ್ರಶೇಖರ ರಾಜೂರ, ಎಸ್.ವಿ. ಪವಾಡಿಗೌಡ್ರ, ಸಂಘಟನಾ ಕಾರ್ಯದರ್ಶಿ ಉಮೇಶಗೌಡ ಪಾಟೀಲ, ಯಲ್ಲೂಸಾ ಹಬೀಬ ಇದ್ದರು.



ಬಂಜಾರಾ ಸಮುದಾಯದಿಂದ ಗೌರಿ ಸಸಿ ಹಬ್ಬ

◆ **ಲಕ್ಷ್ಮೇಶ್ವರ:** ಬಂಜಾರಾ ಸಮುದಾಯದವರು ತಾಲೂಕಿನ ಹರದಗಟ್ಟಿ ತಾಂಡಾದಲ್ಲಿ ಸೌಹಾರ್ದ ಮೂಡಿಸುವ ಸಸಿ ಹಬ್ಬವನ್ನು ಆಚರಿಸಿದರು.

ಯುಗಾದಿ ಅಮವ್ಯಾಸೆ ದಿನದಿಂದ ಸಂತ ಶ್ರೀ ಸೇವಾಲಾಲ ಮತ್ತು ಮರಿಯಮ್ಮ ದೇವಿಯ ಹೆಸರಲ್ಲಿ ಒಂಬತ್ತು ದಿನಗಳೂ ವಿವಿಧ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದ ಮಹಿಳೆಯರು ಕೊನೆಯ ದಿನ ವಿಜೃಂಭಣೆಯಿಂದ ಗೌರಿ ಸಸಿ ಹೊಳೆಗೆ ಹೋಗುವುದು ಕಾರ್ಯಕ್ರಮ ಜರುಗಿತು.

ಯುಗಾದಿ ಅಮಾವಾಸ್ಯೆ ದಿನ ಭೂಮಿತಾಯಿಗೆ ಪೂಜೆ ಸಲ್ಲಿಸಿ ಆ ಮಣ್ಣನ್ನು ಚಿಕ್ಕ ಬುಟ್ಟಿಗಳಲ್ಲಿ ಸಂಗ್ರಹಿಸಲಾಗುತ್ತದೆ. ನಂತರ ಬುಟ್ಟಿಯಲ್ಲಿ ಧಾನ್ಯಗಳನ್ನು ಹಾಕಲಾಗುತ್ತದೆ. ಅವು ಮೊಳಕೆಯೊಡೆದ ನಂತರ ನಿಗದಿತ ದಿನದಂದು ಸಾಂಪ್ರದಾಯಿಕ ದೇವರ ಹಾಡುಗಳು ಭಜನೆಯೊಂದಿಗೆ ಜಾಗರಣೆ ನಡೆಯುತ್ತದೆ. ಮರುದಿನ ಆ ಸಸಿಗಳಿಗೆ ಒಂದೆಡೆ ಸಾಮೂಹಿಕ ಪೂಜೆ ಸಲ್ಲಿಸಲಾಗುತ್ತದೆ. ಕನ್ಯೆಯರೇ ಈ ಪೂಜೆ ನಡೆಸುವುದು ವಿಶೇಷ. ಮಣ್ಣಿನಿಂದ ಗಂಡು, ಹೆಣ್ಣು ಮೂರ್ತಿಗಳನ್ನು ನಿರ್ಮಿಸಿ ಅವುಗಳನ್ನು ಪೂಜಿಸಿ ಕಾಮ, ಕ್ರೋಧ ದೂರವಾಗಲಿ ಎಂದು ಪ್ರಾರ್ಥಿಸಲಾಗುತ್ತದೆ. ಇದಕ್ಕೆ ಗನಗೋರಾ ಎನ್ನುತ್ತಾರೆ. ಪೂಜೆಯ ನಂತರ ಈ ಮೂರ್ತಿಗಳನ್ನು ನದಿಯಲ್ಲಿ ಹರಿಬಿಡಲಾಗುತ್ತದೆ.

ಹಲಗೆ ನಾದ, ಹಾಡುಗಳೊಂದಿಗೆ ಹೆಜ್ಜೆ ಹಾಕುತ್ತಾ ಸಸಿಯೊಂದಿಗೆ ತಾಂಡಾಗಳ ಎಲ್ಲ ದೇವಸ್ಥಾನಗಳಿಗೆ ತೆರಳಿ ಅವುಗಳನ್ನು ದೇವರಿಗೆ ಸ್ಪರ್ಶಿಸಲಾಗುತ್ತದೆ. ತಾಂಡಾದ ಹಿರಿಯರೆಲ್ಲರೂ ಬಂದು ಪ್ರಾರ್ಥನೆ ಸಲ್ಲಿಸುತ್ತಾರೆ. ಎಲ್ಲರೂ ಪರಸ್ಪರ ಸಸಿಗಳನ್ನು ವಿನಿಮಯ ಮಾಡಿಕೊಂಡು ಬದುಕು ಬಂಗಾರವಾಗಲಿ ಎಂದು ಶುಭ ಕೋರುತ್ತಾರೆ. ಕನ್ಯೆಯರು ಸಸಿಗಳನ್ನು ಪಟ್ಟಗದಲ್ಲಿ ತುರಾಯಿಯಂತೆ ಇಟ್ಟುಕೊಂಡಾಗ ಆಚರಣೆಗೆ ತೆರೆ ಬೀಳುತ್ತದೆ.

“ಉತ್ತಮ ಮಳೆಯಾಗಿ ಸರಿಯಾದ ಬೆಳೆ ಸಿಗಲಿ. ಗ್ರಾಮೀಣರ ಬದುಕು ಸಮೃದ್ಧವಾಗಲಿ ಎಂದು ಪ್ರಾರ್ಥಿಸಲು ತಾಂಡಾದವರು ಹಬ್ಬದಲ್ಲಿ ಭಾಗವಹಿಸುತ್ತಾರೆ.

■ **ಸೋಮಲಪ್ಪ ನಾಯಕ, ಜೀವಪ್ಪ ಡಾವ,** ಹರದಗಟ್ಟಿ ತಾಂಡಾ ಹಿರಿಯರು

“ಸಸಿ ಹಬ್ಬದ ನೆಪದಲ್ಲಿ ತಾಂಡಾದ ಎಲ್ಲಜನ ಒಂದೆಡೆ ಸೇರುತ್ತೇವೆ. ಇದರಿಂದ ಸಂಬಂಧಗಳು ಗಟ್ಟಿಗೊಳ್ಳುತ್ತವೆ. ಬಾಂಧವ್ಯ ಬೆಸೆಯುವ ಹಬ್ಬ.

■ **ಕೃಷ್ಣ ನಾಯಕ, ದೇವಪ್ಪ ಬಡಗೇರ,** ಹರದಗಟ್ಟಿ ತಾಂಡಾ ಯುವ ಮುಖಂಡರು



ಇಂದು ಜಗತ್ತಿಗೆ ಶಾಂತಿಯ ಸಂದೇಶ ಅಗತ್ಯ: ಸಂತೋಷ ಅಂಗಡಿ

◆ **ಮುಂಡರಗಿ:** 2026ರ ವಿಶ್ವ ರಂಗಭೂಮಿ ಪ್ರಯುಕ್ತ ಅಮೇರಿಕಾದ ರಂಗಕರ್ಮಿ ವಿಲಿಂ ಡೆಫ್ರೋ ಸಂದೇಶ ರವಾನಿಸಿದ್ದು, ರಂಗಭೂಮಿ ಒಂದು ಶಾಂತಿಯ ಸಂಸ್ಕೃತಿ ಎಂಬ ಪರಿಕಲ್ಪನೆಯ ಸಂದೇಶ ರವಾನಿಸಿದ್ದಾರೆ. ಇಂದು ಜಗತ್ತಿಗೆ ಶಾಂತಿಯ ಸಂದೇಶದ ಅಗತ್ಯವಿದೆ ಎಂದು ರಂಗ ನಿರ್ದೇಶಕ ಸಂತೋಷ ಅಂಗಡಿ ಹೇಳಿದರು.

ಅವರು ಪಟ್ಟಣದ ರಾಮೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಿಶ್ವರಂಗಭೂಮಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಎಲ್ಲಾ ಸೃಜನಶೀಲ ಕಲಾ ಪ್ರಕಾರಗಳು ತಮ್ಮದೇ ಆದ ಪ್ರತ್ಯೇಕ ಅವಯವಗಳನ್ನು ಸೃಜನಶೀಲತೆಗೆ ಬಳಸಿಕೊಳ್ಳುತ್ತವೆ. ಚಿತ್ರಕಲಾವಿದರಿಗೆ ಬಣ್ಣ ಮತ್ತು ಕುಂಚ, ವಾದ್ಯಗಾರರಿಗೆ ವಾದ್ಯಗಳು, ಸಂಗೀತಗಾರರಿಗೆ ಕಂಠ, ಹೀಗಿದ್ದರೆ ರಂಗಕಲಾವಿದರು ಮಾತ್ರ ತಮ್ಮ ದೇಹದ ಸಂಪೂರ್ಣ ಅವಯವಗಳನ್ನು ದೇಹ ಭಾಷೆಯ ಮೂಲಕ ಅಭಿವ್ಯಕ್ತಿಗಾಗಿ ಬಳಸಿಕೊಳ್ಳುತ್ತಾರೆ. ನಟರಿಗೆ ದೇಹ ಮತ್ತು ಧ್ವನಿಯ ಮೂಲಕವೇ ಕಲಾಭಿವ್ಯಕ್ತಿ ಸಾಧ್ಯವಾಗುತ್ತದೆ ಎಂದರು. ರಂಗಭೂಮಿ ಹಾಗೂ ಕಿರುತೆರೆಯ ನಟ ಮಾಂತೇಶ ತ್ಯಾಮನವರ ಮಾತನಾಡಿದರು. ಪ್ರಸ್ತುತ ಅಭಿನಯಿಸುತ್ತಿರುವ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಕುಂವಿಯವರ ಅರಮನೆ ಕಾದಂಬರಿ ಆಧಾರಿತ ದಾರಾವಾಹಿ ಅಭಿನಯದ ಕುರಿತು ಅನುಭವ ಹಂಚಿಕೊಂಡರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಶಾಲಾ ಮುಖ್ಯೋಪಾಧ್ಯಾಯ ನಾಟಕಕಾರ ಡಾ. ನಿಂಗು ಸೊಲಗಿ ಮಾತನಾಡಿ, ರಂಗಭೂಮಿಗೆ ಎರಡು ಮುಖಗಳಿದ್ದು ಒಂದು ವಿಲಾಸದ ಮುಖ ಇನ್ನೊಂದು ವಿಕಾಸದ ಮುಖ. ಶಾಲಾ ಅಂಗಳದಲ್ಲಿ ವಿಕಾಸದ ಮುಖವಾಣಿಯಾಗಿ ರಂಗ ಭೂಮಿಯನ್ನು ಬಳಸಿಕೊಳ್ಳುತ್ತ ಮಕ್ಕಳಲ್ಲಿ ಮನೋರಂಜನೆಯೊಂದಿಗೆ ಮನೋವಿಕಾಸ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದರು. ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷ ಉಮೇಶ ದಂಡಿನ ಅಧ್ಯಕ್ಷತೆ ವಹಿಸಿದ್ದರು. ಸದಸ್ಯ ಶರಣಪ್ಪ ದಂಡಿನ, ಶಿಕ್ಷಕಿಯರಾದ ಪ್ರಭಾವತಿ ಗಾಡದ, ಶಿವಲೀಲಾ ಅಬ್ಬಿಗೇರಿ ಉಪಸ್ಥಿತರಿದ್ದರು. ಶಿಕ್ಷಕ ಬಿ. ಎಚ್. ಹಲವಾಗಲಿ ಕಾರ್ಯಕ್ರಮ ನಿರೂಪಿಸಿದರು.



ವಿದ್ಯಾರ್ಥಿಗಳ ಸಾಧನೆಗೆ ಗುಣಮಟ್ಟದ ಶಿಕ್ಷಣ ಅವಶ್ಯ: ಸಂಗನಗೌಡ ಪಾಟೀಲ

◆ **ರೋಣ:** ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈಯಲು ಗುಣಮಟ್ಟದ ಶಿಕ್ಷಣ ಅತ್ಯಂತ ಅವಶ್ಯಕ ಎಂದು ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ ಹೇಳಿದರು.

ಅವರು ಪಟ್ಟಣದ ಅಂಜುಮನ್ ಎ ಇಸ್ಲಾಂ ಸಂಸ್ಥೆಯ ರೋಣ ಪಬ್ಲಿಕ್ ಶಾಲೆಯ ಎರಡನೇ ವಾರ್ಷಿಕೋತ್ಸವ ಮತ್ತು ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ದೇಶದಲ್ಲಿ ಮುಸ್ಲಿಂ ಜನಾಂಗದವರು ಶಿಕ್ಷಣ ಪಡೆಯುವಲ್ಲಿ ಸ್ವಲ್ಪ ಮಟ್ಟಿಗೆ ಹಿಂದಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಮುಸ್ಲಿಂ ಜನಾಂಗದವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿರುವುದು ಸಂಸದ ಸಂಗತಿ ಎಂದರು.

ಅಂಜುಮನ್ ಸಂಸ್ಥೆ ಅಧ್ಯಕ್ಷ ಬಾವಾಸಾಬ ಬೆಟಗೇರಿ ಮಾತನಾಡಿ, ಕಲಿಕೆ ಜೀವನದ ಬದುಕನ್ನು ಸುಧಾರಿಸಲು ಮಹತ್ತರ ಹೆಜ್ಜೆಯಾಗಿದೆ. ಸಮಾಜದ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಅನೇಕ ಸಾಧನೆಗೈದಿದ್ದಾರೆ. ಬಡವರ ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರ ತೆಗೆಯುವುದು ಸಂಸ್ಥೆಯ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ರೋಣ ಪಬ್ಲಿಕ್ ಶಾಲೆಯನ್ನು ಆರಂಭಿಸಲಾಯಿತು ಎಂದರು.

ಶಾಲೆಯ ಪರಿಸರ ಗುಣಮಟ್ಟದಿಂದ ಕೂಡಿರಬೇಕಾದರೆ ಅಲ್ಲಿನ ಶಿಕ್ಷಣ ವ್ಯವಸ್ಥೆ ಸರಿದಾರಿಯಲ್ಲಿ ಸಾಗಬೇಕು. ಪುಟ್ಟ ಮಕ್ಕಳಿಗೆ ಅಕ್ಷರ ಜ್ಞಾನ ನೀಡುವುದು ಸುಲಭದ ಮಾತಲ್ಲ, ಮುಗ್ಧ ಮಕ್ಕಳ ಮನಸ್ಸನ್ನು ಅಕ್ಷರ ಜ್ಞಾನದತ್ತ ತರಬೇಕಾದರೆ ಶಿಕ್ಷಕರು ಸಹ ಮಗುವಿನಂತೆ ಆಗುವ ಅನಿವಾರ್ಯತೆಯನ್ನು ಹೊಂದಬೇಕಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ, ಜಿಲ್ಲಾ ಕಾರಾಗೃಹದ ಅಧಿಕಾರಿ ಉಮ್ಮಾ ತಸ್ಮಿಯಾ, ಡಿವೈಎಸ್ಪಿ ಮರ್ತುಜಾ ಅತ್ತಾರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಸನ್ಮಾನಿಸಲಾಯಿತು. ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಯೂಸುಪ್ ಇಟಗಿ, ಅಬ್ದುಲ್ ಲತೀಪ ಖತೀಬ, ಖಲೀಲ ರಾಮದುರ್ಗ, ಶಫೀಕ ಮೂಗನೂರ, ಮಲೀಕ ಯಲಿಗಾರ, ದಸ್ತಗೀರ ಗಡವಾಲೆ, ರಿಯಾಜ್ ಮುಲ್ಲಾ, ಅಯೂಬ್‌ಖಾನ್ ಹಾಶೀಮನವರ ಸೇರಿದಂತೆ ಅಂಜುಮನ್ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ವಿಶಿಷ್ಟಚೇತನರು ಮುಖ್ಯವಾಹಿನಿಗೆ ಬರಲಿ



◆ **ಲಕ್ಷ್ಮೇಶ್ವರ:** ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಶಿಕ್ಷಣ ನೀಡಿ ಸಮಾಜದ ಮುಖ್ಯವಾಹಿನಿಗೆ ಕರೆತಂದರೆ ಅವರ ಭವಿಷ್ಯ ಉಜ್ವಲಗೊಳ್ಳಲಿದೆ ಎಂದು ಜಯಲಕ್ಷ್ಮೀ ಗಡ್ಡದೇವರಮಠ ಹೇಳಿದರು.

ಅವರು ಪಟ್ಟಣದ ವಿಶೇಷ ಅಗತ್ಯತೆಯುಳ್ಳ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆಯಲ್ಲಿ ವಿಶಿಷ್ಟಚೇತನರ ದಿನಾಚರಣೆಯ ಹಾಗೂ ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇದೇ ವೇಳೆ ಕ್ರೀಡೆಯಲ್ಲಿ ಭಾಗವಹಿಸಿದ ಮಕ್ಕಳು ಹಾಗೂ ಪಾಲಕರಿಗೆ ಬಹುಮಾನವನ್ನು ವಿತರಣೆ ಮಾಡಲಾಯಿತು. ಲಕ್ಷ್ಮೇಶ್ವರದ ಸ್ನೇಹ ಸಿಂಚನ ಬಳಗದ 25ನೇ ವಾರ್ಷಿಕೋತ್ಸವ ನಿಮಿತ್ತ ಶಾಲೆಗೆ ಡ್ರಸೆಂಟನ್ನು ದೇಣಿಗೆಯಾಗಿ ನೀಡಿದರು. ಜಯಲಕ್ಷ್ಮೀ ಗಡ್ಡದೇವರಮಠ ಹಾಗೂ ಸ್ನೇಹ ಸಿಂಚನ ಬಳಗದ ವಿಜಯಲಕ್ಷ್ಮೀ ಪಿಳ್ಳಿ ಅವರನ್ನು ಸನ್ಮಾನಿಸಲಾಯಿತು. ಶಾಂತಿಧಾಮ ವೃದ್ಧಾಶ್ರಮದ ಅಧ್ಯಕ್ಷ ಪ್ರಕಾಶ ಉಪನಾಳ, ಸೋಮೇಶ್ವರ ನೂಲಿನ ಗಿರಣಿಯ ಅಧ್ಯಕ್ಷ ಪುಲಕೇಶಿ ಉಪನಾಳ, ಎಂ.ಕೆ. ಕಳ್ಳಿಮಠ, ಅರಳು ವಿಶೇಷ ಶಾಲೆಯ ಮುಖ್ಯೋಪಾಧ್ಯಾಯಿನಿ ನೀಲಮ್ಮ ದಾಸಪ್ಪನವರ ಇದ್ದರು. ಸ್ನೇಹ ಸಿಂಚನ ಬಳಗದ ಅಧ್ಯಕ್ಷೆ ಕುಸುಮಾ ಮಲ್ಲಾಡದ, ವಿಜಯಲಕ್ಷ್ಮೀ ಪಿಳ್ಳಿ, ಜಯಶ್ರೀ ಮಳ್ಳಿಗೇರಿ, ಶಿವಲೀಲಾ ಕುಳೇನೂರ, ರತ್ನಾ ಅಂಕಲಕೋಟಿ, ಸುವರ್ಣಾ ಹಿರೇಮಠ, ಚಂದ್ರಮ್ಮ ಹೀರೇಮಠ, ನಿಖಿತಾ ಮುಗಳಿ, ಬಟಗುರ್ಕಿ, ಪಾರ್ವತಿ ಕಳ್ಳಿಮಠ ಸೇರಿದಂತೆ ಇತರರಿದ್ದರು.

ಶಿಸ್ತು, ಭದ್ರತೆಗೆ ಮಾಜಿ ಸೈನಿಕರ ಕಾವಲು

◆ **ಗದಗ:** ರಾಜ್ಯಾದ್ಯಂತ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಹಿನ್ನೆಲೆ ಜಿಲ್ಲೆಯ ರೋಣ ತಾಲೂಕಿನ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಹಾಗೂ ಭದ್ರತೆ ಕಾಪಾಡಲು ಮಾಜಿ ಸೈನಿಕರ ಸಂಘದ ಸದಸ್ಯರು ಸ್ವಯಂಪ್ರೇರಣೆಯಿಂದ ಸೇವೆ ಸಲ್ಲಿಸುತ್ತಿರುವುದು ಗಮನಾರ್ಹವಾಗಿದೆ.

ರೋಣ ತಾಲೂಕಿನ ವಿವಿಧ ಗ್ರಾಮಗಳ ಮಾಜಿ ಸೈನಿಕರನ್ನು ಪರೀಕ್ಷಾ ಅವಧಿಯಲ್ಲಿ ನಿಯೋಜಿಸಲಾಗಿದ್ದು, ಅವರು ಪೊಲೀಸ್ ಹಾಗೂ ಶಿಕ್ಷಣ ಇಲಾಖೆ ಸಿಬ್ಬಂದಿಯೊಂದಿಗೆ ಕೈಜೋಡಿಸಿ ಪರೀಕ್ಷೆಗಳು ಸುಗಮವಾಗಿ ನಡೆಯಲು ಸಹಕರಿಸುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಈ ಸೇವೆಯನ್ನು ಸಲ್ಲಿಸುತ್ತಿರುವುದು ವಿಶೇಷ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಆರ್.ಎಸ್.ಬುರಡಿ ಅವರು ವೀರಭದ್ರೇಶ್ವರ ಪ್ರೌಢಶಾಲೆಯ ಪರೀಕ್ಷಾ ಕೇಂದ್ರಕ್ಕೆ ಆಕಸ್ಮಿಕ ಭೇಟಿ ನೀಡಿದ ಸಂದರ್ಭದಲ್ಲಿ ಕೇಂದ್ರದ ಮುಂಭಾಗ ಹಾಗೂ ಹಿಂಭಾಗಗಳಲ್ಲಿ ಮಾಜಿ ಸೈನಿಕರು ಪೊಲೀಸರಂತೆ ಪಹರೆ ನಿಂತು ವಿದ್ಯಾರ್ಥಿಗಳ ಪರೀಕ್ಷೆಗೆ ಯಾವುದೇ ಅಡಚಣೆ ಉಂಟಾಗದಂತೆ ಕಾವಲು ಕಾಯುತ್ತಿರುವುದು ಗಮನಸೆಳೆಯಿತು. ವಿದ್ಯಾರ್ಥಿಗಳಿಗೆ ಅನುಕೂಲಕರ ಹಾಗೂ ಶಾಂತ ವಾತಾವರಣ ನಿರ್ಮಿಸಲು ಮಾಜಿ ಸೈನಿಕರ ಸೇವೆ ಮಹತ್ವದ್ದಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ಕಾರ್ಯಕ್ಕೆ ಸಾರ್ವಜನಿಕರು ಹಾಗೂ ವಿವಿಧ ವಲಯಗಳಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ.



ಶಾಲಾ ಬ್ಯಾಗ್, ನೋಟ್‌ಬುಕ್ ವಿತರಣೆ



◆ **ಲಕ್ಷ್ಮೇಶ್ವರ:** ತಾಲೂಕಿನ ಶಿಗ್ಲಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಉನ್ನತಿಕರಿಸಿದ ಪ್ರೌಢಶಾಲೆ ಶಿಕ್ಷಕರು ಹತ್ತಿರದ ಬಸವನಕೊಪ್ಪ ನಾಯಿಕೆರೂರ, ಉಳ್ಳಟ್ಟಿ, ಶ್ಯಾಬಳ ಸುವರ್ಣಗಿರಿ ಉಂಡೆನಹಳ್ಳಿಯಲ್ಲಿ ಇರುವ ಕಿರಿಯ ಹಾಗೂ ಹಿರಿಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ಕೊಟ್ಟು ಅಲ್ಲಿ ಇರುವ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ನೋಟ್ ಬುಕ್ ವಿತರಿಸಿದರು.

ಪ್ರೋತ್ಸಾಹ ಕೊಡುವ ಮೂಲಕ ಶಿಗ್ಲಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಪ್ರೌಢಶಾಲೆಗೆ ಹಾಜರಾತಿ ಪಡೆಯಲು ವಿಶೇಷ ಕಾಳಜಿ ವಹಿಸಿ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ಸರ್ಕಾರಿ ಶಾಲೆಯಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಿದರು. ಈ ವಿಶೇಷ ಅಭಿಯಾನ ಕಂಡು ಡಿಡಿಪಿಐ ಆರ್.ಎಸ್. ಬುರಡಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಭಿಯಾನದಲ್ಲಿ ಶಾಲೆಯ ಮುಖ್ಯಶಿಕ್ಷಕಿ ಎಸ್.ವಿ. ಕುಲಕರ್ಣಿ, ಎಸ್.ಬಿ. ಅಣ್ಣಿಗೇರಿ ಆರ್.ಡಿ. ಕಲಾಯ ಗಾರ ದೀಪಾ ಭಸ್ಮೆ, ಎಸ್.ಆರ್. ಹತ್ತಿಕಾಳ, ಗುರು ಹಿರೇಮಠ, ರೋಣದ, ಎಲ್. ತಿಪ್ಪನಾಯಕ ಉಪಸ್ಥಿತರಿದ್ದರು.

ರಂಗಭೂಮಿ ಇನ್ನಷ್ಟು ಕ್ರಿಯಾಶೀಲವಾಗಲಿ

◆ **ಗದಗ:** ಹಿಂಸೆ, ಕ್ರೌರ್ಯ ಮತ್ತು ಯುದ್ಧಗಳಿಂದ ತುಂಬಿರುವ ಇಂದಿನ ಜಾಗತಿಕ ಪ್ರಕ್ಷುಬ್ಧ ಪರಸ್ಥಿತಿಯ ಸಂದರ್ಭದಲ್ಲಿ ಸಂವೇದನಾಶೀಲತೆ ಮತ್ತು ಸುಸಂಸ್ಕೃತ, ಸಾಂಸ್ಕೃತಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ರಂಗಭೂಮಿ ಇನ್ನಷ್ಟು ಕ್ರಿಯಾಶೀಲವಾಗಬೇಕಾಗಿದೆ ಎಂದು ಹಿರಿಯ ರಂಗಕಲಾವಿದ ಪ್ರೊ.ಮುರಲೀಧರ ಸಂಕನೂರ ಅಭಿಪ್ರಾಯಪಟ್ಟರು.ಮ ನಗರದ ಹೊಸಪೇಟ್ ಚೌಕ್ ಓಣಿಯಲ್ಲಿರುವ ಶ್ರೀಕಾಳಿಕಾದೇವಿ ದೇವಸ್ಥಾನದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಚಿನ್ಮಯ ಸಾಂಸ್ಕೃತಿಕ ಅಕಾಡೆಮಿ ಸಹಯೋಗದಲ್ಲಿ ವಿಶ್ವರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಸಶಕ್ತ ಸಮಾಜ ಕಟ್ಟುವಲ್ಲಿ ರಂಗಭೂಮಿ ಪಾತ್ರ ಎಂಬ ವಿಷಯ ಕುರಿತು ಉಪನ್ಯಾಸ ನೀಡಿ ಮಾತನಾಡಿದರು. ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜಗೋಪಾಲ ಕಡ್ಲಿಕೊಪ್ಪ ಮಾತನಾಡಿದರು. ಹಿರಿಯ ರಂಗ ಸಾಧಕ ಕಲಾವಿದ ಬಸವರಾಜ ಅಡವಳ್ಳಿ ಅವರಿಗೆ ರಂಗ ಗೌರವ ಹಾಗೂ ಚಿನ್ಮಯ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ದೊಡ್ಡಾಟ ಕಲಾವಿದ ಪ್ರಕಾಶ ಬಡಿಗೇರ ಹಾಗೂ ವರವಿ ಮೌನೇಶ್ವರ ದೇವಸ್ಥಾನ ಹಾಗೂ ಮಠದ ವಿಕಾಸ ಟ್ರಸ್ಟ್‌ನ ನೂತನ ಸದಸ್ಯ ಶ್ರೀಧರ ಎಸ್. ಕೊಣ್ಣೂರ ಅವರನ್ನು ಸನ್ಮಾನಿಸಲಾಯಿತು. ಬೆಟಗೇರಿ ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಕಮೀಟಿ ಅಧ್ಯಕ್ಷ ಶ್ರೀಧರ ಕೊಣ್ಣೂರ ಅಧ್ಯಕ್ಷತೆ ವಹಿಸಿದ್ದರು. ವಿಶ್ವನಾಥ ಬೇಂದ್ರೆ ಸ್ವಾಗತಿಸಿದರು. ಮಂಜುನಾಥ ಅಕ್ಕಸಾಲಿ ನಿರೂಪಿಸಿದರು. ಸತೀಶ ಹೊರಪೇಟಿ ವಂದಿಸಿದರು.



ಆರೆಂಜ್ ಕ್ಯಾಪ್



ಇಶಾನ್ ಕಿಶನ್



80 ರನ್

ಪರ್ಪಲ್ ಕ್ಯಾಪ್



ಜೇಕಬ್ ಡಫಿ



3 ವಿಕೆಟ್

2ನೇ ಪಂದ್ಯದಲ್ಲಿ ಕೆಕೆಆರ್ 220/4 | ಮುಂಬೈಗೆ ಶಾರ್ದೂಲ್ ಆಸರೆ | ರಘುವಂಶಿ ಅರ್ಧ ಶತಕ

ಮಿಂಚಿದ ರಹಾನೆ: ಮುಂಬೈಗೆ ಕಠಿಣ ಗುರಿ

ಮುಂಬೈ: ಅಜಿಂಕ್ಯಾ ರಹಾನೆ, ಫಿನ್ ಆಲೆನ್ ಮತ್ತು ಅಂಗ್ರಿಶ್ ರಘುವಂಶಿ ಅವರ ಸ್ಫೋಟಕ ಬ್ಯಾಟಿಂಗ್‌ಗೆ ರಿಂಕು ಸಿಂಗ್ ಅವರ ಫಿನಿಶಿಂಗ್ ಟಚ್ ಸಿಕ್ಕನಂತರ ಶಾರ್ದೂಲ್ ಠಾಕೂರ್ ಅವರ ಮಾರಕ ದಾಳಿ ಹೊರತಾಗ್ಯೂ ಮುಂಬೈ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತಾ ದೊಡ್ಡ ಸ್ಕೋರ್ ಕಲೆಹಾಕಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಪಂದ್ಯದಲ್ಲಿ ಮುಂಬೈ ಹಾಗೂ ಕೆಕೆಆರ್ ತಂಡಗಳು ಮುಖಾಮುಖಿ ಯಾಗಿವೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 4 ವಿಕೆಟ್ ನಷ್ಟಕ್ಕೆ ಬರೋಬ್ಬರಿ 220 ರನ್ ಗಳಿಸಿದೆ. ರಹಾನೆ 40 ಬಾಲ್‌ಗಳಲ್ಲಿ 5 ಸಿಕ್ಸರ್ ಹಾಗೂ 3 ಬೌಂಡರಿಗಳೊಂದಿಗೆ 67 ರನ್ ಗಳಿಸಿ ಬೆಸ್ಟ್ ಸ್ಕೋರರ್ ಆದರು. ಆಲೆನ್ ಸ್ಫೋಟಕ ಆರಂಭ ಒದಗಿಸಿದರು. ರಘುವಂಶಿ ಸ್ಫೋಟಕ ಬ್ಯಾಟಿಂಗ್ ಮಾಡಿ ಸ್ಕೋರ್ ಹಿಗ್ಗಿಸಿದರು. ರಿಂಕು ಅತ್ಯುತ್ತಮ ಫಿನಿಶಿಂಗ್ ನೀಡಿದರು. ಮುಂಬೈ ಪರ ಶಾರ್ದೂಲ್ ಠಾಕೂರ್ 3 ವಿಕೆಟ್ ಕಿತ್ತಿ ಮಿಂಚಿದರು.

300 ಪಂದ್ಯಗಳನ್ನಾಡಿದ ಮುಂಬೈ

ಮುಂಬೈ ಇಂಡಿಯನ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಇತಿಹಾಸದಲ್ಲಿ 300 ಪಂದ್ಯಗಳನ್ನಾಡಿದ ಏಕೈಕ ತಂಡ ಅನ್ನಿಸಿಕೊಂಡಿತು. ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ ಎರಡನೇ ಪಂದ್ಯದ ಮೂಲಕ 2026ರ ಅಭಿಯಾನ ಆರಂಭಿಸಿರುವ ಮುಂಬೈ, ಐಪಿಎಲ್ ಇತಿಹಾಸದ 300ನೇ ಪಂದ್ಯವಾಡಿತು. 2008ರಿಂದ ಇಲ್ಲಿಯವರೆಗೂ ತಂಡ ಪ್ರತಿಯೊಂದು ಆವೃತ್ತಿಯಲ್ಲಿ ಪ್ರಮುಖ ಆಟವಾಡಿದೆ. ಇದಲ್ಲದೆ ಹಲವು ಬಾರಿ ಪ್ಲೇಆಫ್ ಆಡಿದೆ. ಐದು ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಎಲ್ಲಾ ಪಂದ್ಯಗಳನ್ನು ಕೂಡಿಸಿ ಲೆಕ್ಕಿಸಿದರೆ ಮುಂಬೈ 300 ಪಂದ್ಯಗಳನ್ನು ಪೂರೈಸಿದೆ.





ಕೆಕೆಆರ್‌ಗೆ ಸ್ಫೋಟಕ ಆರಂಭ

ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಕೆಕೆಆರ್‌ಗೆ ಭರ್ಜರಿ ಆರಂಭ ದೊರೆಯಿತು. ಅನಿರೀಕ್ಷಿತ ವಾಗಿ ನರೈನ್ ಬದಲಿಗೆ ನಾಯಕ ಅಜಿಂಕ್ಯಾ ರಹಾನೆ ಮತ್ತು ಸ್ಫೋಟಕ ಬ್ಯಾಟರ್ ಫಿನ್ ಆಲೆನ್ ಕಣಕ್ಕಿಳಿದರು. ಯಥಾಸ್ಥಿತಿ ಆರಂಭಿಕ ಓವರ್‌ನಲ್ಲಿ ಆಲೆನ್ ದಂಡಿಸಲಾರಂಭಿಸಿದರು. ಸೆಟ್ ಆಗಬೇಕಾದ ಸಮವೂ ತೆಗೆದುಕೊಳ್ಳದ ರಹಾನೆ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮುಂಬೈಗೆ ಆರಂಭಿಕ ಒತ್ತಡ ಹೇರಿದರು. ಇಬ್ಬರ ಆಟಕ್ಕೆ ಮುಂಬೈ ತತ್ತರಿಸಿ ಹೋದಂತೆ 5.2 ಓವರ್ ವೇಳೆ 69ಕ್ಕೇರಿತ್ತು. ಆಲೆನ್ ಕ್ಯಾಚ್ ಆದರು. ರಹಾನೆ ಸ್ಫೋಟಕ ಬ್ಯಾಟಿಂಗ್ ಮುಂದುವರಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಈ ಬಾರಿಯ ಅತ್ಯಂತ ದುಬಾರಿ ಆಟಗಾರ ಕ್ಯಾಮ್ರನ್ ಗ್ರೀನ್ ಕೂಡ ರಹಾನೆ ಆಟಕ್ಕೆ ಹೊಂದಿಕೊಂಡರು. ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡುವ ಉದ್ದೇಶದಿಂದ ಬಂದ ಗ್ರೀನ್ ಬಾನೆತ್ತರದ ಸಿಕ್ಸರ್ ಮತ್ತು ಬೌಂಡರಿ ಬಾರಿಸುವಷ್ಟರಲ್ಲಿ ಸುಸ್ತಾದರು. ಪವರ್‌ಪ್ಲೇನಲ್ಲಿ 78 ರನ್ ಗಳಿಸಿದ್ದ ಕೆಕೆಆರ್, ರಹಾನೆ ಆರ್ಭಟಕ್ಕೆ ತತ್ತರಿಸಿದಂತಾಯಿತು. ಮಧ್ಯಮ ಕ್ರಮಾಂಕದಲ್ಲಿ ಅಂಗ್ರಿಶ್ ರಘುವಂಶಿ ಸ್ಫೋಟಕ ಅರ್ಧಶತಕ ಬಾರಿಸಿದರು. ಸ್ಲಾಗ್ ಓವರ್‌ಗಳ ವರೆಗೆ ವಿಕೆಟ್ ಕಾಯ್ದುಕೊಂಡ ಅವರು, ದಂಡಿಸುವ ಕೆಲಸಕ್ಕೆ ಮುಂದಾದರು. ಆಡಿದ 29 ಬಾಲ್‌ಗಳಲ್ಲಿ 51 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಇತ್ತ ಬೇಕಾಗಿದ್ದ ಫಿನಿಶಿಂಗ್ ಟಚ್ ನೀಡುವಲ್ಲಿ ರಿಂಕು ಸಿಂಗ್ ಯಶ ಕಂಡರು. ಹೆಚ್ಚಿನ ಸಮಯ ಸಿಂಗಲ್‌ಗಳಿಗೆ ಕೊಡದ ಅವರು 21 ಬಾಲ್‌ಗಳಲ್ಲಿ ಅಜೇಯ 33 ರನ್ ಗಳಿಸಿ ಮಿಂಚಿದರು.

ಶಾರ್ದೂಲ್ ಸ್ಟ್ರೈಕ್

ಮುಂಬೈಗೆ ಬೇಕಾದಗಲೆಲ್ಲಾ ಶಾರ್ದೂಲ್ ಠಾಕೂರ್ ವಿಕೆಟ್ ತಂದುಕೊಟ್ಟರು. ಪವರ್‌ಪ್ಲೇನ 6ನೇ ಓವರ್ ಮಾಡಲು ಬಂದ ಅವರು, ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಆಲೆನ್ ಅವರಿಗೆ ಪೆವಿಲಿಯನ್ ಹಾದಿ ತೋರಿಸಿದರು. 9ನೇ ಓವರ್ ಮಾಡಲು ಬಂದಾಗ ಗ್ರೀನ್ ವಿಕೆಟ್ ಪಡೆದರು. 14ನೇ ಓವರ್‌ನಲ್ಲಿ ಅರ್ಧಶತಕ ಪೂರೈಸಿಕೊಂಡು ಭರ್ಜರಿ ಬ್ಯಾಟಿಂಗ್ ಮಾಡುತ್ತಿದ್ದ ರಹಾನೆ ವಿಕೆಟ್ ಪಡೆದು ಆಪತ್ಬಾಂಧವರಾಗಿ ಕಾಣಿಸಿಕೊಂಡರು.



ಕಿರುಸುದ್ದಿ

ಆರ್ಮ್ ರೆಸ್ಲಿಂಗ್: ರಾಷ್ಟ್ರಮಟ್ಟಕ್ಕೆ ಪ್ರತಿಭೆಗಳ ಆಯ್ಕೆ



ಬೆಂಗಳೂರು: ಕರ್ನಾಟಕ ಆರ್ಮ್ ರೆಸ್ಲಿಂಗ್ ಸಂಸ್ಥೆ (ಕೆಎಸ್‌ಎಎ) ಭಾನುವಾರದಂದು ಕೋರಮಂಗಲದ ನೆಕ್ಸಸ್ ಮಾಲ್‌ನಲ್ಲಿ 'ಕರ್ನಾಟಕ ರಾಜ್ಯ ಆರ್ಮ್ ರೆಸ್ಲಿಂಗ್ ಚಾಂಪಿಯನ್‌ಶಿಪ್ ಆಯೋಜಿಸಿತು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 150ಕ್ಕೂ ಹೆಚ್ಚು ಪ್ರಮುಖ ಕ್ರೀಡಾಪಟುಗಳು ಈ ಪ್ರತಿಷ್ಠಿತ ಪಂದ್ಯಾವಳಿಯಲ್ಲಿ ಶಕ್ತಿ ಪ್ರದರ್ಶಿಸಿದರು. ಈ ಕ್ರೀಡಾಕೂಟವು ಕೇವಲ ರಾಜ್ಯಮಟ್ಟದ ಗೆಲುವಿಗಾಗಿ ಮಾತ್ರವಲ್ಲದೆ, 2026ರ ಜೂನ್‌ನಲ್ಲಿ ನಡೆಯಲಿರುವ 'ಅಖಿಲ ಭಾರತ ರಾಷ್ಟ್ರೀಯ ಚಾಂಪಿಯನ್ ಶಿಪ್'ಗೆ ಅರ್ಹತಾ ಸುತ್ತಾಗಿ ಕಾರ್ಯ ನಿರ್ವಹಿಸಿದೆ.

ಜಾಗತಿಕ ವೇದಿಕೆಗೆ ಹಾದಿ: ರಾಷ್ಟ್ರೀಯ ಮಟ್ಟದಲ್ಲಿ ಜಯಗಳಿಸುವ ಕ್ರೀಡಾಪಟುಗಳು ಅಂತರಾಷ್ಟ್ರೀಯ ಆರ್ಮ್ ರೆಸ್ಲಿಂಗ್ ಒಕ್ಕೂಟದ (ಐಎಫ್‌ಎ) ಆಶ್ರಯದಲ್ಲಿ ಜಪಾನ್‌ನಲ್ಲಿ ನಡೆಯಲಿರುವ 'ವಿಶ್ವ ಆರ್ಮ್ ರೆಸ್ಲಿಂಗ್ ಚಾಂಪಿಯನ್‌ಶಿಪ್ 2026'ರಲ್ಲಿ ಭಾರತವನ್ನು ಪ್ರತಿನಿಧಿಸುವ ಸುವರ್ಣಾವಕಾಶವನ್ನು ಪಡೆಯಲಿದ್ದಾರೆ. ಕಳೆದ ವರ್ಷ ಅಜೆರ್ಬೈಜಾನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತವು 3 ಚಿನ್ನ ಮತ್ತು 2 ಕಂಚಿನ ಪದಕಗಳನ್ನು ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿರುವುದು ಇಲ್ಲಿ ಗಮನಿಸಬೇಕಾಗಿದೆ.

ವೀಕ್ಷಕ ವಿವರಣೆ ವೇಳೆ ಅಶ್ವಿನ್, ಸೆಹ್ವಾಗ್ ನಡುವೆ ಗೊಂದಲ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯದ ವೇಳೆ ಹಿಂದಿ ವೀಕ್ಷಕ ವಿವರಕರಾದ ರವಿಚಂದ್ರನ್ ಅಶ್ವಿನ್ ಹಾಗೂ ವಿರೇಂದ್ರ ಸೆಹ್ವಾಗ್ ನಡುವೆ ವಾಗ್ವಾದ ನಡೆಯಿತು. ಹರಾಜಿಗೂ ಮುನ್ನ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ನಿವೃತ್ತರಾದ ಅಶ್ವಿನ್ ಇದೇ ಮೊದಲ ಬಾರಿಗೆ ಪಂದ್ಯಾವಳಿಯಲ್ಲಿ ವೀಕ್ಷಕ ವಿವರಕರಾಗಿ ಪದಾರ್ಪಣೆ ಮಾಡಿದ್ದಾರೆ. ಹೈದರಾಬಾದ್ ಹಾಗೂ ಬೆಂಗಳೂರು ನಡುವಿನ ಪಂದ್ಯಕ್ಕೂ ಮುನ್ನ ಉಭಯ ತಂಡಗಳಲ್ಲಿ ಆಕಾಶ್ ಚೋಪ್ರಾ ಪಂದ್ಯಕ್ಕೂ ಮುನ್ನ ಯಾರ ಮೇಲೆ ಒತ್ತಡವಿದೆ ಎಂಬ ಪ್ರಶ್ನೆಯಿಟ್ಟರು. ಅದಕ್ಕೆ ಉತ್ತರವಾಗಿ ವಿರೇಂದ್ರ ಸೆಹ್ವಾಗ್ ಅಒತ್ತಡ ಪೂರ್ತಿ ಅಶ್ವಿನ್ ಮೇಲಿದೆ, ಅವರು ಹೊಸತಾಗಿ ಬಂದಿದ್ದಾರೆಅ ಎಂದರು. ಅಶ್ವಿನ್ ನಾನೂ ಪಂದ್ಯದ ಬಗ್ಗೆ ಪ್ರೆಡಿಕ್ಷನ್ ಮಾಡಿದ್ದೇನೆ ಎಂದರು. ಅದಕ್ಕೆ ಸೆಹ್ವಾಗ್ ಪ್ರೆಡಿಕ್ಷನ್ ನೀವು ನಾಯಕರಿದ್ದಾಗಲೂ ಡ್ರೆಸ್ಸಿಂಗ್ ರೂಂನಲ್ಲಿ ಮಾಡಿರುವುದು ನೆನಪಿದೆ ಎಂದರು. ವೈಯಕ್ತಿಕವಾಗಿ ಮಾತನಾಡುತ್ತಾ ಸೆಹ್ವಾಗ್, ನಾನು ಅಶ್ವಿನ್ ಒಂದೆ ತಂಡದಲ್ಲಿದ್ದಾಗ ಅಶ್ವಿನ್ ಅತಂಡದಲ್ಲಿ ಆಫ್ ಸ್ಪಿನ್ನರ್ ಬಂದಿದ್ದಾರೆ ಏನು ಮಾಡಲಿ ಎಂದು ಕೇಳಿದ್ದರುಅ ಅದಕ್ಕೆ ನಾನು ಮೊದಲ ಬಾಲ್‌ನಿಂದಲೇ ಸ್ಪಿನ್ ಮಾಡಿ ಎಂದಿದ್ದೆ ಆದಾಗ್ಯೂ ವಿಕೆಟುಗಳು ಬೀಳಲೇ ಇಲ್ಲ ಎಂದು ಕಾಲೆಳೆದರು. ಅದಕ್ಕೆ ಉತ್ತರಿಸಿದ ಅಶ್ವಿನ್ ವಿಕೆಟ್ ಬಿದ್ದಿತ್ತು. ಅದು ಕೂಡ ಆಫ್ ಸ್ಪಿನ್ನರ್‌ಗೆ ಎಂದು ನೆನಪಿಸಿಕೊಟ್ಟರು. ಕಾಮೆಂಟ್ರಿ ವೇಳೆ ಭಾರೀ ಗೊಂದಲ ಉಂಟಾಯಿತು.

ಬಾಕ್ಸಿಂಗ್‌ಗೆ ಕೋಮ್ ವಾಪಸ್?

ಹೊಸದಿಲ್ಲಿ: ಒಲಿಂಪಿಕ್ ಕಂಚು ಪದಕ ವಿಜೇತೆ ಹಾಗೂ ಆರು ಬಾರಿ ವಿಶ್ವ ಚಾಂಪಿಯನ್ ಎಂ.ಸಿ. ಮೇರಿ ಕೋಮ್ ವೃತ್ತಿಪರ ಬಾಕ್ಸಿಂಗ್‌ಗೆ ಪ್ರವೇಶಿಸುವ ಕುರಿತು ಚಿಂತನೆ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ. 43 ವರ್ಷದ ಮೇರಿ ಕೋಮ್, 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚು ಪದಕ ಗೆದ್ದು, ಒಲಿಂಪಿಕ್ ಪದಕ ಗೆದ್ದ ಮೊದಲ ಭಾರತೀಯ ಮಹಿಳಾ ಬಾಕ್ಸರ್ ಆಗಿದ್ದರು. ಈಗ ಅಮೆಚೂರ್ ಬಾಕ್ಸಿಂಗ್‌ನಲ್ಲಿ ವಯೋಮಿತಿ ಮೀರಿರುವ ಕಾರಣ ಹೊಸ ಅವಕಾಶಗಳತ್ತ ಗಮನ ಹರಿಸಿದ್ದಾರೆ. ನನ್ನ ಸಾಧನೆಗಳಲ್ಲಿ ಆರು ವಿಶ್ವ ಚಾಂಪಿಯನ್‌ಶಿಪ್ ಗೆಲುವು ಅತ್ಯಂತ ವಿಶೇಷ. ಈಗ ವಯೋಮಿತಿ ಕಾರಣದಿಂದ ಅಮೆಚೂರ್ ವಿಭಾಗದಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ.

ಮೊದಲ ಬಾರಿಗೆ ಸಂಜು ಎದುರಿಸಲಿರುವ ಆರ್‌ಆರ್

ಚೆನ್ನೈ-ರಾಜಸ್ಥಾನ ಫೈಟ್ ಇಂದು

ಮೊದಲ ಪಂದ್ಯಕ್ಕಿಲ್ಲ ಡೆವಾಲ್ಡ್ ಬ್ರೇವಿಸ್

ಗುವಾಹಟಿ: ಮಹೇಂದ್ರ ಸಿಂಗ್ ಧೋನಿ ಇಲ್ಲದೆ ಕಣಕ್ಕಿಳಿಯುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ನೂತನ ನಾಯಕನೊಂದಿಗೆ ಆಡುತ್ತಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಸೋಮವಾರದ ಸೂಪರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಹರಾಜಿಗೂ ಮುನ್ನ ನಡೆದ ಟ್ರೇಡಿಂಗ್‌ಗಳಲ್ಲಿ ಉಭಯ ತಂಡಗಳು ಮುಖ್ಯವಾದ ಡೀಲ್ ಮಾಡಿಕೊಂಡಿದ್ದವು. ಕಳೆದ ವರ್ಷದ ವರೆಗೂ ಚೆನ್ನೈ ತಂಡದ ಪ್ರಮುಖ ಆಟಗಾರ ಅನ್ನಿಸಿಕೊಳ್ಳುತ್ತಿದ್ದ ರವೀಂದ್ರ ಜಡೇಜಾ ಈ ಬಾರಿ ರಾಜಸ್ಥಾನ ತಂಡದಲ್ಲಿ ಆಡುತ್ತಿದ್ದಾರೆ. ಇತ್ತ ರಾಜಸ್ಥಾನ ತಂಡದ ನಾಯಕರಾಗಿದ್ದ ಸಂಜು ಸ್ಯಾಮ್ಸನ್ ಚೆನ್ನೈ ಪರ ಕಣಕ್ಕಿಳಿಯಲಿದ್ದು ಉಭಯ ತಂಡಗಳ ನಡುವಿನ ಕಾಳಗ ಕ್ರಿಕೆಟ್ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ. ಟ್ರೇಡಿಂಗ್ ಪ್ರಕಾರ ಕಳೆದ ವರ್ಷ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡುತ್ತಿದ್ದ ಸ್ಯಾಮ್ ಕರ್‍ರನ್ ಕೂಡ ರಾಜಸ್ಥಾನ ಪರ ಆಡಬೇಕಿತ್ತು. ಆದರೆ ಅವರು ಗಾಯಗೊಂಡ ನಿಟ್ಟಿನಲ್ಲಿ ಸಾಧ್ಯವಾಗುತ್ತಿಲ್ಲ. ಗುವಾಹಟಿಯಲ್ಲಿ ಪಂದ್ಯ ನಡೆಯಲಿದೆ.





ಚೆನ್ನೈಗೆ ಯುವಕರ ಬಲ

ಕಳೆದ ಆವೃತ್ತಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಆಗಲೇ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿತ್ತು. ಆಯುಷ್ ಮಾತ್ರೆ ಹಾಗೂ ಉರ್ವಿಲ್ ಪಟೇಲ್ ಅಂತವರನ್ನು ಆಯ್ಕೆ ಮಾಡಿಕೊಂಡಿತ್ತು. ಈ ನಡುವೆ ಸಂಜು ಸ್ಯಾಮ್ಸನ್ ಅವರನ್ನು ಟ್ರೇಡ್ ಮಾಡಿಕೊಂಡಿದೆ. ಗಾಯಕ್ವಾಡ್ ಕೂಡ ತಂಡದ ನಾಯಕತ್ವ ನಿಭಾಯಿಸಲು ಸಜ್ಜಾಗಿದ್ದಾರೆ. ಹರಾಜಿನಲ್ಲಿ ಕಾರ್ತಿಕ್ ಶರ್ಮಾ, ಪ್ರಶಾಂತ್ ಅಂಥ ಯುವಕರನ್ನೇ ಆಯ್ಕೆ ಮಾಡಿಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ಇದೀಗ ಯುವಕರನ್ನು ಹೊಂದಿರುವ ತಂಡವಾಗಿದೆ. ಬ್ಯಾಟಿಂಗ್ ವಿಭಾಗವನ್ನು ಸಂಜು, ಗಾಯಕ್ವಾಡ್, ಆಯುಷ್, ಬ್ರೇವಿಸ್, ದುಬೆ ಬಲಪಡಿಸಿದರೆ ಬೌಲಿಂಗ್ ವಿಭಾಗದಲ್ಲಿ ಖಲೀಲ್, ರಾಮಕೃಷ್ಣ, ಮ್ಯಾಥೀವ್ ಶಾರ್ಟ್, ಮಾಟ್ ಹೆನ್ರಿ, ನೂರ್ ಅಹ್ಮದ್ ಅಂಥವರಿದ್ದಾರೆ.



2019ರ ನಂತರ ಮೊದಲ ಬಾರಿಗೆ ಧೋನಿ ಇಲ್ಲ

ಸಮಸ್ತ ಕ್ರಿಕೆಟ್ ಅಭಿಮಾನಿಗಳು ಮಹೇಂದ್ರ ಸಿಂಗ್ ಧೋನಿಗಾಗಿ ಕಾಯುತ್ತಾರೆ. ಐಪಿಎಲ್ ಬಂದ ತಕ್ಷಣಕ್ಕೆ ಧೋನಿ ಅಭಿಮಾನಿಗಳಲ್ಲಿ ಮಂದಹಾಸ ಸೃಷ್ಟಿಯಾಗುತ್ತದೆ. ಆದರೆ ಈ ಬಾರಿ ಆ ಮಂದಹಾಸ ಮಂಕಾಗಿದ್ದು, ಗಾಯದ ಕಾರಣದಿಂದ ಧೋನಿ ಆರಂಭಿಕ 6 ಪಂದ್ಯಗಳನ್ನು ಆಡುತ್ತಿಲ್ಲ. ವರದಿಗಳ ಪ್ರಕಾರ ಅವರು ಚಿಕಿತ್ಸೆ ಪಡೆಯುತ್ತಿದ್ದು, ಗುವಾಹಟಿಗೆ ತಂಡದೊಂದಿಗೆ ಪ್ರಯಾಣಿಸಿಲ್ಲ. 2019ರ ಮುಂಬೈ ಹಾಗೂ ಚೆನ್ನೈ ವಿರುದ್ಧದ ಪಂದ್ಯಕ್ಕೆ ಧೋನಿ ಕೊನೆಯ ಬಾರಿ ಅಲಭ್ಯರಾಗಿದ್ದರು. ಈ ನಂತರ ಪ್ರತಿಯೊಂದು ಆವೃತ್ತಿಯಲ್ಲೂ ಧೋನಿ ಕಣಕ್ಕಿಳಿದಿದ್ದಾರೆ.

ಭರವಸೆಯಲ್ಲಿ ರಾಜಸ್ಥಾನ

ರಿಯಾನ್ ಪರಾಗ್ ಅವರ ನೇತೃತ್ವದಲ್ಲಿ ಕಣಕ್ಕಿಳಿಯುತ್ತಿರುವ ರಾಜಸ್ಥಾನ ತಂಡಕ್ಕಿಗ ಜಡೇಜಾ ಬಲವಿದೆ. ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ, ಹೆಟ್ಮೇರ್, ಫೆರಾರಿಯಾ, ಧ್ರುವ್ ಜುರೇಲ್ ಅಂತಹ ಬ್ಯಾಟರ್‌ಗಳಿದ್ದಾರೆ. ಆರ್ಚರ್, ತುಷಾರ್ ದೇಶಪಾಂಡೆ, ನಾಂದ್ರೆ ಬರ್ಗರ್ ಅಂತಹ ಬೌಲರ್‌ಗಳಿದ್ದು ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.



ಪಂದ್ಯದ ಮಾಹಿತಿ

ಯಾವಾಗ: ಸೋಮವಾರ
ಎಲ್ಲಿ: ಗುವಾಹಟಿ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಿಚ್

ಗುವಾಹಟಿಯಲ್ಲಿ ಪಂದ್ಯ ನಡೆಯಲಿದೆ. ಅಲ್ಪ ಇಬ್ಬನಿ ಕಾಟ ಇದ್ದದ್ದೆ. ಬ್ಯಾಟರ್‌ಗಳಿಗೆ ಅಲ್ಪ ಲಾಭ ನೀಡಲಿದೆ, ಆದಾಗ್ಯೂ ವೇಗ ಮತ್ತು ಸ್ಪಿನ್ನರ್‌ಗಳು ಮಿಂಚಬಲ್ಲರು. ಹೆಚ್ಚಿನ ಬೌನ್ಸ್ ಇರಲಿದೆ, ಮಳೆ ಕಾಟ ಇಲ್ಲ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಲಿದೆ.

ದಾಖಲೆಗಳ ಸರದಾರ ಕೊಹ್ಲಿ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಾದಂತೆ ಆರ್‌ಸಿಬಿಯ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಹೆಸರಿನಲ್ಲಾಗುವ ದಾಖಲೆಗಳು ಪ್ರಾರಂಭಗೊಂಡಿವೆ. ಚೇಸಿಂಗ್ ಮಾಸ್ಟರ್ ಎಂಬ ಹೆಸರಿಗೆ ತಕ್ಕಂತೆ ಬ್ಯಾಟಿಂಗ್ ಮಾಡಿರುವ ವಿರಾಟ್ ಕೊಹ್ಲಿ ಹೈದರಾಬಾದ್ ವಿರುದ್ಧದ ಉದ್ಘಾಟನಾ ಪಂದ್ಯದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಅಜೇಯ 69 ರನ್ ಗಳಿಸುವುದರೊಂದಿಗೆ ಅರ್ಧಶತಕ ಪೂರೈಸಿಕೊಂಡ ಅವರು, ವಿವಿಧ ದಾಖಲೆಗಳನ್ನು ಮಾಡಿದ್ದಾರೆ. ಚೇಸಿಂಗ್‌ನಲ್ಲಿ ಅತಿ ಹೆಚ್ಚು ರನ್, ಐಪಿಎಲ್‌ನಲ್ಲಿ ಅತಿ ಹೆಚ್ಚು ಬಾರಿ ಟಾಪ್ ಸ್ಕೋರರ್ ಆದ ದಾಖಲೆಗಳೂ ಕೊಹ್ಲಿ ಹೆಸರಿನಲ್ಲಿ ಸೇರಿಕೊಂಡಿವೆ.

ವಿವಿಧ ದಾಖಲೆ

ಮೊದಲಿಗೆ ಐಪಿಎಲ್ ಪಂದ್ಯಗಳ ವೇಳೆ ಚೇಸಿಂಗ್‌ನಲ್ಲಿ 4000 ರನ್ ಕಲೆಹಾಕಿದ ಮೊದಲ ಬ್ಯಾಟರ್ ಎಂಬ ದಾಖಲೆ ಮಾಡಿದರು. ಐಪಿಎಲ್ ಪಂದ್ಯಗಳಲ್ಲಿ ಅತಿ ಹೆಚ್ಚು ಬಾರಿ ತಂಡದ ಪರ ಅತ್ಯಧಿಕ ರನ್ ಗಳಿಸಿದ ದಾಖಲೆ ಕೂಡ ವಿರಾಟ್ ಕೊಹ್ಲಿ ಪಾಲಾಗಿದೆ. ಈ ಹಿಂದೆ ಈ ದಾಖಲೆ ಡೇವಿಡ್ ವಾರ್ನರ್ (66) ಹೆಸರಿನಲ್ಲಿತ್ತು. ಇದೀಗ 67ನೇ ಬಾರಿ ಟಾಪ್ ಸ್ಕೋರರ್ ಆಗಿದ್ದಾರೆ. ಇದಲ್ಲದೆ, ಐಪಿಎಲ್‌ನಲ್ಲಿ 50+ ಸ್ಕೋರ್‌ಗಳಿಸಿ ಅತ್ಯಧಿಕ ಬಾರಿ ಅಜೇಯರಾಗಿ ಉಳಿದ ಬ್ಯಾಟರ್ ಎಂಬ ದಾಖಲೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ.



ಸಿಕ್ಸರ್‌ಗಳ ಸುರಿಮಳೆ, ರನ್ ಹೊಳೆ

ಐಪಿಎಲ್ ಇತಿಹಾಸದಲ್ಲೇ ಅತೀ ಹೆಚ್ಚು ಬಾರಿ 50+ ಸ್ಕೋರ್‌ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟ ಆಟಗಾರ ಎಂಬ ಹೆಗ್ಗಳಿಕೆಗೂ ಕೊಹ್ಲಿ ಪಾತ್ರರಾಗಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಅತಿ ಹೆಚ್ಚು ರನ್ (874) ಗಳಿಸಿದ ಆಟಗಾರ, ಐಪಿಎಲ್ ಇತಿಹಾಸದಲ್ಲೇ ಅತೀ ಹೆಚ್ಚು ಸಿಕ್ಸ್ ಸಿಡಿಸಿದ ಭಾರತೀಯ ಓಪನರ್ ಎಂಬ ದಾಖಲೆ ಕೂಡ ವಿರಾಟ್ ಕೊಹ್ಲಿ ಪಾಲಾಗಿದೆ. ಇದಲ್ಲದೆ ಐಪಿಎಲ್ ಇತಿಹಾಸದಲ್ಲಿ ಒಂದೇ ತಂಡದ ಪರ 19 ಸೀಸನ್ ಆಡಿದ ಏಕೈಕ ಆಟಗಾರ ಎಂಬ ಹೆಗ್ಗಳಿಕೆಯನ್ನು ವಿರಾಟ್ ಕೊಹ್ಲಿ ತಮ್ಮದಾಗಿಸಿಕೊಂಡಿದ್ದಾರೆ. ಹಾಗೆಯೇ ಎಸ್‌ಆರ್‌ಎಚ್ ವಿರುದ್ಧ ಗಳಿಸಿದ 69 ರನ್‌ಗಳೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿದ್ದಾರೆ.

ವಿರಾಮದಿಂದ ಒಳಿತು: ವಿರಾಟ್ ಕೊಹ್ಲಿ

ಬೆಂಗಳೂರು: ಸರಣಿಗಳ ನಂತರ ಸಿಗುವ ವಿರಾಮ ನನಗೆ ಕ್ರಿಕೆಟ್‌ಗಾಗಿ ಉತ್ಸುಕರನ್ನಾಗಿ ಮಾಡಿದೆ ಎಂದು ವಿರಾಟ್ ಕೊಹ್ಲಿ ತಿಳಿಸಿದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಉದ್ಘಾಟನಾ ಪಂದ್ಯದಲ್ಲಿ ಬೆಂಗೂರು ತಂಡ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು, ಅಜೇಯ 69 ರನ್ ಗಳಿಸಿದ್ದರು. ಪಂದ್ಯಕ್ಕೂ ಮುನ್ನ ಕೊಹ್ಲಿಯ ಕ್ರಿಕೆಟ್‌ನಿಂದ ದೂರ ಉಳಿದ ದಿನಗಳ ಬಗ್ಗೆ ಚರ್ಚೆಯಾಗುತ್ತಿದ್ದವು. ಪಂದ್ಯದ ಬಳಿಕ ಇಷ್ಟು ದಿನ ಕ್ರಿಕೆಟ್‌ನಿಂದ ದೂರ ಇದ್ದಿರಿ, ಇದೀಗ ಮತ್ತೊಮ್ಮೆ ಮೈದಾನಕ್ಕೆ ಮರಳಿದ ನಂತರ ಯಾವ ಸವಾಲು ಮುಂದಿತ್ತು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ವಿರಾಟ್ ಕೊಹ್ಲಿ, ಸುಮಾರು 15 ವರ್ಷಗಳಿಂದ ನಾನು ನಿರಂತರ ಕ್ರಿಕೆಟ್ ಆಡುತ್ತಿರುವುದನ್ನು ನೀವು ನೋಡಿದ್ದೀರಿ. ಸತತ ಆಟದಿಂದಾಗಿ ನನಗೆ ವಿರಾಮವಿಲ್ಲದಂತೆ ಮಾಡಿತ್ತು. ಇದರಿಂದ ಹಲವು ಸಮಸ್ಯೆಗಳಾಗುತ್ತಿದ್ದವು. ಆದರೆ ಈಗ ಸಿಗುತ್ತಿರುವ ವಿರಾಮ ನನಗೆ ಈ ರೀತಿಯ ಸಮಸ್ಯೆಗಳಿಗೆ ಸಹಾಯ ಮಾಡುತ್ತಿದೆ ಎಂದರು. ವಿರಾಮ ಸಿಗುವುದರಿಂದ ಉತುಕನಾಗಿರುತ್ತೇನೆ. ಮತ್ತು ಫ್ರೆಶ್ ಆಗಿರುತ್ತೇನ ಇದರಿಂದ ನನ್ನ ವೈಯಕ್ತಿಕ ಆಟದ ಮೇಲೆ ಭಾರೀ ಪರಿಣಾಮ ಬೀಳುತ್ತದೆ ಎಂದಿದ್ದಾರೆ.

ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪ | ವಿಶ್ವಕಪ್ ಗೆಲುವು ಭಾರತಕ್ಕೆ ಹೆಮ್ಮೆ

ಜಮ್ಮು-ಕಾಶ್ಮೀರ ಆಟಕ್ಕೆ ಮೋದಿ ಮೆಚ್ಚುಗೆ

ಹೊಸದಿಲ್ಲಿ: ಕಳೆದ ತಿಂಗಳು ಮುಕ್ತಾಯಗೊಂಡ ದೇಶಿ ಕ್ರಿಕೆಟ್ ಪಂದ್ಯಾವಳಿ ರಣಜಿ ಟ್ರೋಫಿ ಮುಡಿಗೇರಿಸಿಕೊಂಡಿರುವ ಜಮ್ಮು-ಕಾಶ್ಮೀರ ತಂಡದ ವೈಖರಿಯನ್ನು ಪ್ರಧಾನಿ ನರೇಂದ್ರ ಮೋದಿ ಹೊಗಳಿದರು.

ಭಾನುವಾರದ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಈ ಬಗ್ಗೆ ಪ್ರಸ್ತಾಪಿಸಿರುವ ಅವರು, ಮೊದಲ ಬಾರಿಗೆ ರಣಜಿ ಟ್ರೋಫಿ ಗೆದ್ದುಕೊಂಡಿರುವುದು ಜಮ್ಮು ಮತ್ತು ಕಾಶ್ಮೀರದ ಕ್ರೀಡಾ ಕ್ಷೇತ್ರಕ್ಕೆ ಐತಿಹಾಸಿಕ ಕ್ಷಣವಾಗಿದೆ. ಮುಂದಿನ ದಿನಗಳಲ್ಲೂ ಜಮ್ಮು-ಕಾಶ್ಮೀರ ಚಾಂಪಿಯನ್ ಪಟ್ಟ ಅಲಂಕರಿಸಲಿದೆ, ಅಲ್ಲಿನ ಕ್ರೀಡಾಪಟುಗಳು ಎತ್ತರ ಸಾಧನೆಗಳನ್ನು ಮಾಡುತ್ತಾರೆಂಬ ಭರವಸೆ ನನಗಿದೆ ಎಂದರು. ತಿಂಗಳ ಆರಂಭದಲ್ಲಿ ಮುಕ್ತಾಯಗೊಂಡಿರುವ ಟಿ20 ವಿಶ್ವಕಪ್ ಪಂದ್ಯಾವಳಿ ಬಗ್ಗೆ ಪ್ರಸ್ತಾಪಿಸಿರುವ ಮೋದಿ, ಈ ಗೆಲುವು ಐತಿಹಾಸಿಕ ಸಾಧನೆ. ನಮ್ಮ ತಂಡ ಗೆದ್ದಿರುವುದು ದೇಶದ ಎಲ್ಲಾ ಜನರಿಗೂ ಹೆಮ್ಮೆಯ ವಿಚಾರ ಎಂದು ಬಣ್ಣಿಸಿದರು.




> ಈ ಗೆಲುವಿನ ಮೂಲಕ ಜಮ್ಮು-ಕಾಶ್ಮೀರದಲ್ಲಿ ಕ್ರೀಡಾ ಪ್ರೀತಿ ಹೆಚ್ಚಳಗೊಂಡಿದೆ. ಕ್ರಿಕೆಟ್ ವಿಚಾರಲ್ಲಿ ಜನರು ಇನ್ನಷ್ಟು ಉತ್ಸುಕರಾಗುವಂತೆ ಮಾಡಿದೆ. ಅಲ್ಲಿನ ಜನರಿಗೆ ಕ್ರೀಡಯಲ್ಲಿ ಗಮನಾರ್ಹ ಆಸಕ್ತಿಯಿದೆ. ಇಂತಹ ಗೆಲುವುಗಳಿಂದ ಈಗ ಜಮ್ಮು ಸ್ಪೋರ್ಟ್ಸ್ ಹಬ್ ಆಗುತ್ತಿರುವುದು ಹೆಮ್ಮೆಯ ವಿಚಾರ.
> ■ ನರೇಂದ್ರ ಮೋದಿ, ಪ್ರಧಾನಿ

ಹೃದಯಸ್ಪರ್ಶಿ ಗೆಲುವು

ಜಮ್ಮು-ಕಾಶ್ಮೀರ ಗೆದ್ದಿರುವ ವಿಚಾರದ ಬಗ್ಗೆ ಮಾತನಾಡುತ್ತಾ, ಏಳು ದಶಕದ ಕಾಯುವಿಕೆಯ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಚಾಂಪಿಯನ್ ಪಟ್ಟ ದಕ್ಕಿದ್ದು ಹೃದಯ ಸ್ಪರ್ಶಿಯವಾಗಿದೆ. ಇದು ಅಲ್ಲಿನ ಆಟಗಾರರ ವರ್ಷಾನುಗಟ್ಟಲೆ ಪಟ್ಟ ಪ್ರಯತ್ನ ಮತ್ತು ಶ್ರಮದ ಬಗ್ಗೆ ಹೇಳುತ್ತದೆ. ತಂಡದ ಬಗ್ಗೆ ಅಲ್ಲದೆ, ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಕಿಬ್ ನಬಿ ದಾರ್ ಬಗ್ಗೆಯೂ ಮಾತನಾಡಿರುವ ಪ್ರಧಾನಿ ಮೋದಿ, 60 ವಿಕೆಟ್ ಪಡೆದ ಆಕಿಬ್ ನಬಿ ಪ್ರದರ್ಶನ ಗಮನಾರ್ಹವಾಗಿತ್ತು ಎಂದಿದ್ದಾರೆ.

ಪದಬಂಧ

ರಾಜು ಸಂಗಮೇಶ ಹಿರೇಮಠ



5938

ಎಡದಿಂದ ಬಲಕ್ಕೆ
1.ಚಾರರು ಸರದ ಬಗ್ಗೆ ತಂದ ಸುದ್ದಿ (4)
3.ಬೆದರಿಸಿ ಕಿತ್ತುಕೊಳ್ಳುವುದು (3)
5.ಮುದಿತನ ಎಂಬರ್ಥದ ಷಟ್ಪದಿಯ ಹೆಸರು (3)
7.ಹುಡುಗುತನದಿಂದ ಕೂಡಿದ್ದು (3)
8.ಮತಿಯ ನಡುವೆ ಜೇನಿನಂತೆ ಸಿಹಿಯಾದದ್ದಿದೆ (4)
10.ನಕಲಿ ಒಳಗೊಂಡ ಶೌರ್ಯದಿಂದ ಕೂಡಿದ್ದು (4)
12.ಅಪರಾಧಿಗೆ ಹಾಕುವ ಬೇಡಿ (3)
14.ಕುಲದ ನಡುವೆ ಮೋಸದಿಂದ ಕೂಡಿದ್ದಿದೆ (3)
15.ಕಾಗದ-ಪತ್ರಗಳನ್ನಿಡಲು ಬಳಸುವ ಚೀಲ (3)
16.ಗಬಗಬನೆ ತಿನ್ನುವಿಕೆ (4)

ಮೇಲಿನಿಂದ ಕೆಳಕ್ಕೆ
1.ನಿಜವಾದ ವಿವರ-ಸಂಗತಿ (3)
2.ಶರದ ನಡುವಿನ ಸಪ್ತಾಹದ ದಿನ ತಲೆಕೆಳಗಾಗಿದೆ (4)
4.ಚಿಕ್ಕ ಮಕ್ಕಳ ಊಟದ ಪಂಕ್ತಿ (4)
6.ಕನಿಕರ ತಲೆಕೆಳಗಾಗಿದೆ (3)
7.ಆಕಾಶವಾಣಿಯನ್ನು ಹೀಗೂ ಕರೆಯಬಹುದು (3)
9.ಬಾಣಸಿಗ ರುಚಿ ಹೆಚ್ಚಿಸಲು ಬಳಸುವ ಪದಾರ್ಥ (3)
10.ಕಲದ ನಡುವೆ ಋಷಿಯ ಹೆಸರಿದೆ (4)
11. ಮನುಷ್ಯ ಮೊದಲಿರುವ ಅತೀವ ನೋವು (3)
12. ಕಾರ್ಯಕ್ರಮವನ್ನು ಮುನ್ನಡೆಸುವ ವ್ಯಕ್ತಿ (4)
13.ದೃಷ್ಟಿಗೆ ಬೀಳುವಂತೆ ಮಾಡು (3)

5937 ಉತ್ತರ

ಎಡದಿಂದ ಬಲಕ್ಕೆ:
3.ರೆಕ್ಕೆಬಡಿ 5.ವ್ಯವಹಾರ
6.ಆಯಾಸ 7.ನೆಗೆತ
9.ಜಾನಕಿ 10.ಟಗರು
12.ರಜತ 14.ಕುಟೀರ
16.ಹವಿರ್ಭಾಗ
17.ತೋಪುಖಾನೆ

ಮೇಲಿನಿಂದ ಕೆಳಕ್ಕೆ :
1.ಭವ್ಯಮನೆ 2.ಸರಸ
3.ಆಸರೆ 4.ಬಡತನ
8.ತವರು 9.ಜಾಗರ
11.ಗಜರಿಪು 13.ತರಗತಿ
14.ಕುಲೀನೆ 15.ರಹಸ್ಯ

ಕಿರುಸುದ್ದಿ

ಸಂಭ್ರಮದ ಮರಡಿ ಬಸವೇಶ್ವರ ರಥೋತ್ಸವ



ಬ್ಯಾಡಗಿ: ತಾಲೂಕಿನ ಬನ್ನಿಹಟ್ಟಿ ಗ್ರಾಮದಲ್ಲಿ ಮಾ. 25ರಿಂದ ಪ್ರಾರಂಭವಾದ ಜಾತ್ರಾ ಮಹೋತ್ಸವ ಭಾನುವಾರ ಶ್ರೀ ಬಸವೇಶ್ವರ ದೊಡ್ಡ ರಥೋತ್ಸವವು ಅದ್ದೂರಿಯಾಗಿ ನಡೆಯಿತು. ನೂರಾರು ಭಕ್ತರ ಮಧ್ಯೆ ಹರ ಹರ ಮಹದೇವ ಎಂಬ ಜಯ ಘೋಷಣೆ ಮೂಲಕ ದೇವಸ್ಥಾನದಿಂದ ಪ್ರಾರಂಭಗೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ದೇವಸ್ಥಾನವನ್ನು ತಲುಪಿತು. ರಥೋತ್ಸವದಲ್ಲಿ ಸುತ್ತ ಮುತ್ತಲಿನ ಗ್ರಾಮಗಳ ನೂರಾರು ಭಕ್ತರು ಪಾಲ್ಗೊಂಡಿದ್ದರು.

ಏ.10ರಂದು ಗ್ಯಾಂಗ್ಸ್ ಆಫ್ ಯುಕೆ ಬಿಡುಗಡೆ

ಹಾವೇರಿ: ಡೆಡ್ಲಿ ಆರ್ಟ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಲಾದ ಗ್ಯಾಂಗ್ಸ್ ಆಫ್ ಯುಕೆ ಚಿತ್ರವು ಏ. 10ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದ್ದು, ಜಿಲ್ಲೆಯಲ್ಲಿರುವ ಸಿನಿಮಾ ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರವನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಚಿತ್ರದ ನಿರ್ದೇಶಕ ರವಿ ಶ್ರೀವತ್ಸ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾಂಗ್ ಆಫ್ ಯುಕೆ (ಉತ್ತರ ಕರ್ನಾಟಕ) ಚಿತ್ರವು ಭೀಮೆಯ ಮಡಿಲಲ್ಲಿ ನಡೆದ ನೈಜ ಘಟನಾಧಾರಿತ ಕಥೆ. ಉತ್ತರ ಕರ್ನಾಟಕದ ಕಪ್ಪು ಮಣ್ಣಿನಲ್ಲಿ ಇದನ್ನು ಚಿತ್ರೀಕರಣ ಮಾಡಲಾಗಿದೆ. ಬಾಗಲಕೋಟೆ, ಹೆರಕಲ್, ಶಿರೂರು, ಹುನಗುಂದ, ಇಳಕಲ್, ಅಮಿನಗಢ, ಬೆಂಗಳೂರು ಸೇರಿದಂತೆ ವಿವಿಧೆಡೆ ಚಿತ್ರೀಕರಿಸಲಾಗಿದೆ. ಉತ್ತರ ಕರ್ನಾಟಕದ 50ಕ್ಕೂ ಹೆಚ್ಚು ಹೊಸ ಕಲಾವಿದರು, ರಂಗಭೂಮಿ ಕಲಾವಿದರು ನಟನೆ ಮಾಡಿರುವುದು ವಿಶೇಷ. ಸಂತ ಶಿಶುನಾಳ ಶರೀಫರ ನಾಲ್ಕು ಗೀತೆಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ರಕ್ತಕ್ಕೆ ರಕ್ತವೇ ಪರಿಹಾರ, ಜಿದ್ದು ಒಬ್ಬರಿಂದ ಒಬ್ಬರಿಗೆ ಹೇಗೆ ವರ್ಗಾಯಿಸಿಕೊಂಡು ಹೋಗುತ್ತದೆ ಎಂಬುದೇ ಈ ಚಿತ್ರದ ಆಸಕ್ತಿದಾಯಕ ವಿಷಯ. ಚಿತ್ರ ಹೊಸ ಅಧ್ಯಾಯವನ್ನು ಸೃಷ್ಟಿ ಮಾಡುವ ವಿಶ್ವಾಸವಿದೆ ಎಂದು ತಿಳಿಸಿದರು.

ತಾರಾಗಣದಲ್ಲಿ ಒರಟ ಪ್ರಶಾಂತ್, ಕಿಂಗ್ ಮುನಿ, ಸೋನು ಉಪಾಧ್ಯ, ಪೃಥ್ವಿ ಸುಬ್ಬಯ್ಯ, ಕೆ.ಆರ್ ಅಮೋಘ, ಸಕ್ಕರೆನಾಡು ಉಮೇಶ್ ಠಂಕಸಾಲಿ ಅಲ್ಲದೆ ಉತ್ತರ ಕರ್ನಾಟಕದ ಸ್ಥಳೀಯ ಕಲಾವಿದರನ್ನೂ ಇದರಲ್ಲಿ ಬಳಸಿಕೊಳ್ಳಲಾಗಿದೆ ಎಂದರು.

ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಆರ್.ಗಿರಿ, ಸಂಭಾಷಣೆ ಎಂ.ಎಸ್. ರಮೇಶ, ಸಂಗೀತ ಸುಕುಮಾರ, ಸಂಕಲನ ಎಲ್.ಎನ್. ರೆಡ್ಡಿ, ಸಾಹಸ ಥ್ರಿಲ್ಲರ್ ಮಂಜು, ಪ್ರಸಾಧನ ರಾಜೇಶ್, ವಸ್ತ್ರವಿನ್ಯಾಸ ಪುಟ್ಟರಾಜು, ಡಬ್ಬಿಂಗ್ ಆನಂದ, ಎಫೆಕ್ಟ್ ಸೇತು, ಪಿಆರ್‌ಒ ನಾಗೇಂದ್ರ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ, ಸಹಾಯಕ ನಿರ್ದೇಶನ ರಾವಣ ಅವರದ್ದು ಇದೆ. ಚಿತ್ರದ ಕಥೆ ಬಹಳ ಆಸಕ್ತಿದಾಯಕವಾಗಿದೆ. ಕಲಾ ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಮಂದಿರಕ್ಕೆ ತೆರಳಿ ಸಿನಿಮಾ ವೀಕ್ಷಿಸಿ ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಹ ಸಂಯೋಜಕ ಎಂ.ಎಸ್. ರಮೇಶ, ನಟ ಒರಟ ಪ್ರಶಾಂತ ಮಾತನಾಡಿದರು. ಸಂಕಲನಕಾರ ಲಕ್ಷ್ಮೀನಾರಾಯಣ ರೆಡ್ಡಿ ಉಪಸ್ಥಿತರಿದ್ದರು.

ಮಾ.31 ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

ಚಿಕ್ಕೋಡಿ: ಪಟ್ಟಣದ ಹರಿನಗರ ಬಡಾವಣೆಯ ಪ್ರಸನ್ನಾಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತಿ ನಿಮಿತ್ಯ ಮಾ.31 ರಿಂದ ಏ.2ರವರೆಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಾ. 31ರಂದು ಸಂಜೆ 4ಕ್ಕೆ ಆಹಾರ ಮೇಳ, ಏ.1ರಂದು ಸಂಜೆ 4ಕ್ಕೆ ಭಕ್ತಿಗಾಯನ ಹಾಗೂ ಭಕ್ತಿ ನೃತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.2ರಂದು ಬೆಳಿಗ್ಗೆ ಅಭಿಷೇಕ, ನಾಮಕರಣ, ಪಲ್ಲಕ್ಕಿ ಉತ್ತವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಮಧ್ಯಾಹ್ನ 12.30ಕ್ಕೆ ಮಹಾಪ್ರಸಾದ, ಸಂಜೆ 6ಕ್ಕೆ ಭಕ್ತಿ ಸಂಗೀತ ಸೌರಭ, ರಾತ್ರಿ 7ಕ್ಕೆ ವೀರೇಶ ಪಾಟೀಲರಿಂದ ಆಧ್ಯಾತ್ಮಿಕ ಚಿಂತನ ಕಾರ್ಯಕ್ರಮ ಜರುಗಲಿವೆ ಎಂದು ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ಬ್ಯಾಡಗಿ: ಹುಬ್ಬಳ್ಳಿಯ ಟೈಟಾನ್ ಕಂಪನಿಯ ವತಿಯಿಂದ ಜೀವಮಾನ ಸಾಧನೆಯ ಪ್ರಶಸ್ತಿ ಭಾಜನರಾದ ಮಾಜಿ ಶಾಸಕ ಸುರೇಶ ಗೌಡ ಪಾಟೀಲ ಅವರಿಗೆ ಅಮೃತ ನಿಧಿ ಸೌಹಾರ್ದ ಸಹಕಾರಿ ಪತ್ತಿನ ವತಿಯಿಂದ ಭಾನುವಾರ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸರ್ಕಾರಿ ಪತ್ತಿನ ಅಧ್ಯಕ್ಷ ಎಂ.ಆರ್. ಬಾಗೋಜಿ, ಬಿ.ವ್ಹಿ.ಹೊಟ್ಟಿಗೌಡ್ರ, ಜಿ.ಎಂ. ಸೀಗೆಹಳ್ಳಿ, ಪಿ.ವೈ. ಬಾಗೋಜಿ, ಎ.ಎ. ಮಕಾನದಾರ, ಐ.ಪಿ. ಕಟ್ಟಿ, ಬಿ.ವ್ಹಿ. ಬೆಣ್ಣಿ, ಲಿಂಗರಾಜ್ ಬೆಳಗೇರಿ, ಎಂ.ಎ. ಚಿನ್ನಿಕಟ್ಟಿ ಹಾಗೂ ಅನೇಕರು ಉಪಸ್ಥಿತರಿದ್ದರು.

ಸಂಭ್ರಮದ ವೀರಭದ್ರೇಶ್ವರ ರಥೋತ್ಸವ

ಹಾವೇರಿ: ತಾಲೂಕಿನ ನೆಗಳೂರ ಗ್ರಾಮದಲ್ಲಿ ಶುಕ್ರವಾರ ಸಂಜೆ ವೀರಭದ್ರೇಶ್ವರ ರಥೋತ್ಸವವು ಸಹಸ್ರಾರು ಸಂಖ್ಯೆಯ ಸದ್ಭಕ್ತರ ಸಮ್ಮುಖದಲ್ಲಿ ಸಂಭ್ರಮ ಸಡಗರದಿಂದ ನಡೆಯಿತು.

ಪ್ರತಿ ವರ್ಷದ ಸಂಪ್ರದಾಯದಂತೆ ಈ ವರ್ಷವೂ ಕೂಡ ಚೈತ್ರಮಾಸದ ಶುದ್ಧ ನವಮಿ ತಿಥಿಯಂದು ರಥೋತ್ಸವ ನಡೆಯಿತು. ಬೆಳಗ್ಗೆ ವೀರಭದ್ರೇಶ್ವರ ಮೂರ್ತಿಗೆ ರುದ್ರಾಭಿಷೇಕ ಅಷ್ಟೋತ್ತರ ಮಹಾಮಂಗಳಾರತಿ ನಡೆಯಿತು. ನಂತರ ಭದ್ರಕಾಳಿ ಸಮೇತ ವೀರಭದ್ರೇಶ್ವರ ಕಲ್ಯಾಣ ಮಹೋತ್ಸವ ನಡೆಯಿತು.ಸಂಜೆ ಸ್ಥಳೀಯ ಸಂಸ್ಥಾನ ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯ ಸಾನ್ನಿಧ್ಯದಲ್ಲಿ ರಥೋತ್ಸವ ನಡೆಯಿತು. ವೀರಭದ್ರೇಶ್ವರ ದೇವಸ್ಥಾನದಿಂದ ಆರಂಭಗೊಂಡ ರಥೋತ್ಸವವು ಸಿದ್ದೇಶ್ವರ ದೇವಸ್ಥಾನ ತಲುಪಿ ಮರಳಿ ವೀರಭದ್ರೇಶ್ವರ ದೇವಸ್ಥಾನ ತಲುಪಿ ಸಂಪನ್ನಗೊಂಡಿತು. ಇದಕ್ಕೂ ಪೂರ್ವದಲ್ಲಿ ವೀರಭದ್ರೇಶ್ವರ ಧ್ವಜ, ಆಶೀರ್ವಾದ ಕಾಯಿ, ಬೆಳ್ಳಿ ಕಡಗ, ವೀರಭದ್ರೇಶ್ವರ ಭಾವಚಿತ್ರ, ಲೀಲಾವು ಮಾಡಲಾಯಿತು.

ಶನಿವಾರ ಅಗ್ನಿ ಮಹೋತ್ಸವ: ವೀರಭದ್ರೇಶ್ವರ ಜಾತ್ರಾಮಹೋತ್ಸವ ನಿಮಿತ್ಯ ಶನಿವಾರ ಬೆಳಗ್ಗೆ 8ಗಂಟೆಗೆ ವೀರಭದ್ರೇಶ್ವರ ಗುಗ್ಗಳ ಮಹೋತ್ಸವ, ಅಗ್ನಿಮಹೋತ್ಸವ ಜರುಗಿದವು. ನೆಗಳೂರ ಹಾಗೂ ರಾಣೇಬೆನ್ನೂರ ಪುರುವಂತರ ತಂಡದಿಂದ ವೀರಭದ್ರೇಶ್ವರ ಒಡುಪುಗಳ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಸ್ಥಾನ ತಲುಪಿ ಅಗ್ನಿಮಹೋತ್ಸವ ಜರುಗುವುದು. ಸಂಜೆ ವೀರಭದ್ರೇಶ್ವರ ಓಕುಳಿ ನೇರವೇರುವುದರ ಮೂಲಕ ಜಾತ್ರೆ ಸಂಪನ್ನಗೊಂಡಿತು.



ಹಾವೇರಿ: ತಾಲೂಕಿನ ನೆಗಳೂರ ಗ್ರಾಮದಲ್ಲಿ ಶುಕ್ರವಾರ ಸಂಜೆ ವೀರಭದ್ರೇಶ್ವರ ರಥೋತ್ಸವವು ಸಹಸ್ರಾರು ಸಂಖ್ಯೆಯ ಸದ್ಭಕ್ತರ ಸಮ್ಮುಖದಲ್ಲಿ ಸಂಭ್ರಮ ಸಡಗರದಿಂದ ನಡೆಯಿತು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ | ರುದ್ರಪ್ಪ ಲಮಾಣಿ ಅಭಿಪ್ರಾಯ

ಎಲ್ಲ ಕ್ಷೇತ್ರದಲ್ಲೂ ಮಹಿಳೆ ಮುಂಚೂಣಿ

ಹಾವೇರಿ: ಮಹಿಳೆಯರು ಇಂದು ಸಮಾಜದ ಎಲ್ಲ ರಂಗಗಳಲ್ಲೂ ಪುರುಷರಿಗಿಂತ ಹೆಚ್ಚು ಸಶಕ್ತರಾಗುತ್ತಿದ್ದಾರೆ. ಬರುವ ದಿನಗಳಲ್ಲಿ ಲೋಕಸಭೆ, ವಿಧಾನಸಭೆ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಸಿಗುವ ವಿಶ್ವಾಸವಿದ್ದು, ಸಂಘಟನೆಯಲ್ಲಿ ಹೆಚ್ಚು ನಾಯಕತ್ವ ಬೆಳೆಯಬೇಕೆಂದು ವಿಧಾನಸಭೆ ಉಪಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಬಸವಕೇಂದ್ರ ಹೊಸಮಠದಲ್ಲಿ ಭಾನುವಾರ ಮಹಿಳಾ ಕಾಂಗ್ರೆಸ್ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಶುಭಾಶಯ ಕೋರಿ ಮಾತನಾಡಿದರು.

ಹಾನಗಲ್ ಶಾಸಕ ಶ್ರೀನಿವಾಸ್ ಮಾನೆ ಮಾತನಾಡಿ, ವಿಶ್ವಗುರು ಬಸವಣ್ಣನವರು ಅನುಭವ ಮಂಟಪ ಪ್ರಾರಂಭ ಮಾಡಿದಾಗ ಮಹಿಳಾ ನಾಯಕತ್ವವನ್ನು ವಿಶೇಷವಾಗಿ ಗುರುತಿಸಿದ್ದರು. ಜಿಲ್ಲೆಯಲ್ಲಿ ಕುಮಾರ ಶಿವಯೋಗಿಗಳು ಲಿಂಗಾಯತ ಮಹಿಳಾ ಸಂಘಟನೆಯನ್ನು ಪ್ರಾರಂಭಿಸಿ, ದೊಡ್ಡ ಸಂಖ್ಯೆಯಲ್ಲಿ ಮಹಿಳಾ ಶಕ್ತಿಯನ್ನು ಮುಂಚೂಣಿಗೆ ತರಲು ಮುಂದಾಗಿದ್ದರು. ಸಮಾಜದ ಕಟ್ಟಕಡೆಯ ಅಸಹಾಯಕಿಯರಿಗೆ ಶಕ್ತಿ ಕೊಡುವ ಕೆಲವನ್ನು ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಮಾಡಿದ್ದರು. ಮಹಿಳಾ ಅಧಿಕಾರ, ಆಡಳಿತ, ಸ್ಪರ್ಧೆಯಿಂದ ದೂರವಿಡುವ ಸಂದರ್ಭದಲ್ಲಿ ಇಂದಿರಾ ಗಾಂಧಿ ಸುದೀರ್ಘ 16 ವರ್ಷಗಳ ಕಾಲ ದೇಶದ ಚುಕ್ಕಾಣಿ ಹಿಡಿದು ಆಡಳಿತ ನಡೆಸಿದರು. ಮಹಿಳೆಗೆ ಪ್ರತಿಭೆ ಇದೆ, ಛಲ ಇದೆ ಆದರೆ ಅವಕಾಶ ಸಿಗುತ್ತಿಲ್ಲ, ಮಹಿಳೆಗೆ ಅವಕಾಶ ಸಿಕ್ಕಾಗ ಹೊರಗಿನ ಜವಾಬ್ದಾರಿ ಹೊರುವ ಶಕ್ತಿ, ಸಾಮರ್ಥ್ಯ ಹೊತ್ತುಕೊಂಡು ಮನೆಯ ಜವಾಬ್ದಾರಿ ಸಮರ್ಥವಾಗಿ ಎದುರಿಸಲು ಸಿದ್ಧಳಿದ್ದಾಳೆ ಎಂದರು.

ಕಾರ್ಯಕ್ರಮದಲ್ಲಿ ಹೊಸಮಠದ ಬಸವಶಾಂತಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಾಜಿ ಶಾಸಕ ನೆಹರು ಓಲೇಕಾರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿದರು.

ನಗರಾಭಿವೃದ್ಧಿ ಪ್ರಾಕಾರ ಅಧ್ಯಕ್ಷ ಎಸ್.ಎಫ್.ಎನ್ ಗಾಜೀಗೌಡ್ರ, ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ಎಂ.ಎಂ. ಮೈದೂರ, ಬಸವರಾಜ ಹೆಡಿಗ್ಗೊಂಡ, ಜಮೀರ್ ಜಿಗರಿ, ಶಂಕರ ಮೆಹರವಾಡೆ, ಪ್ರಭು ಬಿಷ್ಟನಗೌಡ್ರ, ದೀಕ್ಷಾಬೇಗಂಮುಗನೂರು, ಪಾರ್ವತಮ್ಮ ಹಲಗಣ್ಣನವರ, ವಸಂತಾ ಬಾಗೂರ, ರೇಖಾ ಪಾಟೀಲ, ಜಯಶ್ರೀಶಿವಪುರ, ರುಕ್ಮಿಣಿ ಸಾಹುಕಾರ ಸೇರಿದಂತೆ ಜಿಲ್ಲಾ ಹಾಗೂ ತಾಲೂಕ ಸಮಿತಿ ಪದಾಕಾರಿಗಳು ಉಪಸ್ಥಿತರಿದ್ದರು.

ಶಾಂತಕ್ಕ ಶಿರೂರು ಪ್ರಾರ್ಥಿಸಿದರು. ಮಮತಾ ಜಾಬಿನ್ ಸ್ವಾಗತಿಸಿದರು.



> ಭಾರತ ಸಂಸ್ಕೃತಿ, ಸಂಸ್ಕಾರ ಹೊಂದಿರುವ ದೇಶ, ಈ ದೇಶದಲ್ಲಿ ಸ್ತ್ರೀಯರಿಗೆ ತನ್ನದೆಯಾದ ಗೌರವವಿದೆ. ಕಾಂಗ್ರೆಸ್ ಪಕ್ಷ ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟಿದೆ. ಕಾಂಗ್ರೆಸ್ ಪಕ್ಷ ಸ್ತ್ರೀಯರನ್ನು ಪೂಜ್ಯನೀಯ ಭಾವನೆಯಿಂದ ಕಾಣುತ್ತದೆ. ಮನೆ ಕೆಲಸದಿಂದ ಹಿಡಿದು ಜಾಗತಿಕ ಮಟ್ಟದಲ್ಲಿಯೂ ಮಹಿಳೆ ತನ್ನ ಪ್ರಾಬಲ್ಯ ಹೊಂದಿದ್ದಾಳೆ. ಶಿಕ್ಷಣ, ಆರೋಗ್ಯ ಉದ್ಯೋಗ ರಾಜಕಾರಣದಲ್ಲಿ ಮಹಿಳೆ ಮುನ್ನೆಲೆಗೆ ಬಂದಿದ್ದಾಳೆ.
>
> ■ ಯಾಸೀರಖಾನ್ ಪಠಾಣ, ಶಿಗ್ಗಾವಿ ಶಾಸಕ

> ಎಲ್ಲಿ ನಾರಿಯರು ಜೀವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ ಗ್ಯಾರಂಟಿ ಯೋಜನೆ ಕೊಟ್ಟಿದೆ. ಮಹಿಳೆಯರಲ್ಲಿ ಸ್ವೇಚ್ಛಾಚಾರ ದುರುಪಯೋಗ ಆಗಬಾರದು. ರಾಜಕೀಯದಲ್ಲಿ ಶೇ.33ರಷ್ಟು ಮೀಸಲು ಸಿಗಲಿದೆ. ರಾಜಕಾರಣ, ಸ್ವಸಹಾಯ ಸಂಘಗಳಲ್ಲಿ ಮುಂಚೂಣಿಯಲ್ಲಿ ಇರುವುದು ಹೆಮ್ಮೆಯ ಸಂಗತಿ.
>
> ■ ಪ್ರೇಮಾ ಪಾಟೀಲ, ಜಿಲ್ಲಾಧ್ಯಕ್ಷೆ ಮಹಿಳಾ ಕಾಂಗ್ರೆಸ್

ರಕ್ತದಾನ ಜೀವದಾನದಷ್ಟೇ ಮಹತ್ವದ ಕಾರ್ಯ

ಹಾವೇರಿ: ಸ್ವಯಂ ಸೇವಾ ಸಂಸ್ಥೆಗಳು ಜನರ ಜೊತೆಗಿದ್ದು ಜನರ ಏಳಿಗೆಗೆ ಮಹತ್ವದ ಕೆಲಸ ಮಾಡುತ್ತಿವೆ. ಸಹಮತ ಸಂಸ್ಥೆಯು ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದು ಕರ್ನಾಟಕ ಅಲ್ಪಸಂಖ್ಯಾತ ಆಯೋಗದ ಸದಸ್ಯರಾದ ಪರಿಮಳ ಜೈನ ಹೇಳಿದರು.

ತಾಲೂಕಿನ ದೇವಿಹೊಸೂರು ಗ್ರಾಮದ ಗ್ರಂಥಾಲಯದಲ್ಲಿ ಸಹಮತ ಸಂಸ್ಥೆ, ಜಿಲ್ಲಾ ಆಸ್ಪತ್ರೆಯ ರಕ್ತನಿಧಿ ಕೇಂದ್ರ, ಅಮ್ಮಾ ಸಂಸ್ಥೆ, ದೇವಿಹೊಸೂರ ಗ್ರಾಪಂ ಮತ್ತು ಪಿಎಚ್‌ಸಿಗಳ ಸಹಯೋಗದಲ್ಲಿ ಆಯೋಜಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಜಿಲ್ಲಾಸ್ಪತ್ರೆಯ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಬಸವರಾಜ ತಳವಾರ ಮಾತನಾಡಿ, ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಹತ್ತೊಂಬತ್ತು ಸಾವಿರ ಯೂನಿಟ್ ರಕ್ತದ ಅವಶ್ಯಕತೆ ಇದೆ. ಆದರೆ ಇದುವರೆಗೂ ಹತ್ತು ಸಾವಿರ ಯೂನಿಟ್ ಮಾತ್ರ ಸಂಗ್ರಹಿಸಲು ಸಾಧ್ಯವಾಗಿದೆ. ಇನ್ನೂ ಒಂಬತ್ತು ಸಾವಿರ ಯೂನಿಟ್ ರಕ್ತವನ್ನು ದಾನಿಗಳಿಂದ ಸಂಗ್ರಹಿಸಬೇಕಿದೆ. ಜಿಲ್ಲೆಯ ಎಲ್ಲಾ ರೀತಿಯ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು ರಕ್ತದಾನ ಶಿಬಿರಗಳನ್ನು ಏರ್ಪಡಿಸಬೇಕು ಎಂದು ಕರೆ ನೀಡಿದರು.

ರಕ್ತದಾನ ಶಿಬಿರದಲ್ಲಿ ರಕ್ತದಾನಿಗಳಿಂದ ಐವತ್ತು ಯೂನಿಟ್ ರಕ್ತ ಸಂಗ್ರಹಿಸಲಾಯಿತು. ರಕ್ತದಾನ ಮಾಡಿದವರಿಗೆ ಅಭಿನಂದನಾ ಪ್ರಶಂಸಾ ಪತ್ರ ನೀಡಿ ಗೌರವಿಸಿ ಅಭಿನಂದಿಸಲಾಯಿತು. ಸಹಮತ ಸಂಸ್ಥೆಯ ಅಧ್ಯಕ್ಷ ಬಸವರಾಜ ಪೂಜಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಮತ ಸಂಸ್ಥೆಯ ಕಾರ್ಯದರ್ಶಿ ರೇಣುಕಾ ಕಹಾರ ನಿರೂಪಿಸಿದರು. ಅಮ್ಮಾ ಸಂಸ್ಥೆಯ ಅಧ್ಯಕ್ಷರಾದ ನಿಂಗಪ್ಪ ಆರೇರ ವಂದಿಸಿದರು.

ಜಿಲ್ಲಾ ರಕ್ತನಿಧಿ ಕೇಂದ್ರದ ರೇವಣೆಪ್ಪ, ಸಂತೋಷ ನೆಲ್ಲಿಕೊಪ್ಪ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಮಂಜುನಾಥ್, ಡಾ.ವಿಜಯ್, ದೇವಿಹೊಸೂರು ರಕ್ತದಾನಿಗಳ ಬಳಗದ ಮುಖ್ಯಸ್ಥರಾದ ಗಣೇಶಗೌಡ ಗಟ್ಟಿ, ಬೀರಪ್ಪ ಸೂರಣಗಿ, ಲಕ್ಷ್ಮೀಪ್ರಭ ಹುಲ್ಲೂರು, ಸವಿತಾ ಗುಬ್ಬೇರ, ವೀರಣ್ಣ ಗಡ್ಡಿ, ಅರುಣ ನಾಗಾವತ್, ಖಲಂದರ್ ಅಲ್ಲಿಗೌಡ್ರ, ಅಜಯಸಿಂಗ್ ರಜಪೂತ, ಪರಶುರಾಮ ಕಹಾರ್, ಸುಲ್ತಾನ ಹುಬ್ಬಳ್ಳಿ, ಆನಂದ ಕ್ಯಾಲಕೊಂಡ, ನಾಗನಗೌಡ ಹರ್ತಿ, ಜಾಕಿರಲಿ ದೇವಗೇರಿ, ಚಮನಸಾಬ್ ಮೆಳ್ಳಿಗಟ್ಟಿ, ಶಿವಯೋಗಿ ನಂದಿ, ಸಿದ್ಧರಾಮೇಶ ಸಿಂಧನೂರು, ವಿವೇಕ ಹುಲ್ಲೂರು, ನಿಂಗರಾಜ ಪೂಜಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಪಡಿಸುವುದು ಸಂಸ್ಕೃತಿಯಲ್ಲ

ಸವಣೂರ: ಪಟ್ಟಣದ ಹೊರವಲಯದಲ್ಲಿ ಸ್ವಚ್ಛ ಭಾರತ ಅಭಿಯಾನದಡಿ ಕೊಳಚೆ ನೀರು ಸಂಸ್ಕರಣ ಘಟಕದ ಭೂಮಿಪೂಜೆ ಕಾರ್ಯಕ್ರಮದ ವೇಳೆ ಬಿಜೆಪಿ ಕಾರ್ಯಕರ್ತರು ಕಪ್ಪು ಬಟ್ಟೆ ಪ್ರದರ್ಶಿಸುವ ಮೂಲಕ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸ್ಥಳೀಯ ಶಾಸಕ ಯಾಸೀರ್‌ಅಹ್ಮದಖಾನ್ ಪಠಾಣ ವಿರೋಧ ಪಕ್ಷದ ವಿರುದ್ಧ ಕಿಡಿಕಾರಿದರು.

ಸಣ್ಣಪುಟ್ಟ ವಿಚಾರಗಳಿಗೂ ರಾಜಕೀಯ ಬಣ್ಣ ಹಚ್ಚಿ ಅಭಿವೃದ್ಧಿ ಕಾರ್ಯಗಳನ್ನು ಅಡ್ಡಿಪಡಿಸುವುದು ವಿಷಾದನೀಯ ಎಂದು ತೀವ್ರವಾಗಿ ಟೀಕಿಸಿದ ಶಾಸಕರು, ಸವಣೂರು ಪಟ್ಟಣ ತಿಪ್ಪೆಗುಂಡಿಯಂತಾಗಿದ್ದು, ಎಲ್ಲೆಡೆ ಕೊಳಚೆ ಸಮಸ್ಯೆ ಹೆಚ್ಚಾಗಿದೆ. ಇದನ್ನು ನಿವಾರಿಸಲು ಸರ್ಕಾರದಿಂದ 8.86 ಲಕ್ಷ ರೂ. ಅನುದಾನ ಮಂಜೂರಾಗಿದ್ದು, 26 ಎಕರೆ ಸರ್ಕಾರಿ ಜಮೀನಿನಲ್ಲಿ 9.16 ಎಕರೆ ಪ್ರದೇಶವನ್ನು ಸಂಸ್ಕರಣ ಘಟಕಕ್ಕೆ ಮೀಸಲಿಡಲಾಗಿದೆ ಈ ಯೋಜನೆ ಜನಹಿತದ ದೃಷ್ಟಿಯಿಂದ ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು.

ಕೇಂದ್ರ ಸಚಿವರ ಆಗಮನದ ವಿಚಾರವನ್ನು ಮುಂಚಿತವಾಗಿ ತಿಳಿಸಿದ್ದರೆ ಕಾರ್ಯಕ್ರಮವನ್ನು ಮುಂದೂಡಲು ಯಾವುದೇ ಅಭ್ಯಂತರ ಇರಲಿಲ್ಲ, ಆದರೆ ಕಾರ್ಯಕ್ರಮ ಆರಂಭಕ್ಕೂ ಅರ್ಧ ಗಂಟೆ ಮೊದಲು ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ, ವಿರೋಧ ಪಕ್ಷದವರು ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿ ಹರಡುತ್ತಿದ್ದು, ತಮ್ಮದೇ ಸರ್ಕಾರದ ಯೋಜನೆಗಳನ್ನು ಹಳೆಯ ಸರ್ಕಾರದ ಕಾರ್ಯಕ್ರಮವೆಂದು ಬಿಂಬಿಸುತ್ತಿದ್ದಾರೆ ಎಂದು ಆರೋಪಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಏನೇನೋ ಮಾತನಾಡುವುದರಲ್ಲಿ ಅರ್ಥವಿಲ್ಲ ಎಂದು ಕಿಡಿಕಾರಿದರು.

ತಮ್ಮ ಸರ್ಕಾರ ಕ್ಷೇತ್ರದ ಅಭಿವೃದ್ಧಿಗೆ ಸಾವಿರಾರು ಕೋಟಿ ಅನುದಾನ ತರಲಾಗಿದೆ. ಕುಡಿಯುವ ನೀರಿಗಾಗಿ ಮಾತ್ರವೇ 350 ಕೋಟಿ ರೂ. ಮೀಸಲಿಡಲಾಗಿದೆ. ಎಸ್.ಟಿ.ಪಿ. ಯೋಜನೆಯೂ ಸರ್ಕಾರದ ಅನುಮೋದನೆಯಿಂದ ನಡೆಯುತ್ತಿದೆ ಎಂದು ಅವರು ಹೇಳಿದರು. ಕೇಂದ್ರ ಸರ್ಕಾರ ಕರ್ನಾಟಕದಿಂದ ಲಕ್ಷಾಂತರ ಕೋಟಿ ತೆರಿಗೆ ಪಡೆಯುತ್ತಿದ್ದರೂ, ರಾಜ್ಯಕ್ಕೆ ಕಡಿಮೆ ಪ್ರಮಾಣದಲ್ಲಿ ಅನುದಾನ ನೀಡುತ್ತಿದೆ ಎಂಬ ಅಸಮಾಧಾನವನ್ನೂ ವ್ಯಕ್ತಪಡಿಸಿದರು.

ಇದೇ ವೇಳೆ, ವಿರೋಧ ಪಕ್ಷದವರು ತಮ್ಮ ಹೆಸರನ್ನು ನಾಮಫಲಕದಲ್ಲಿ ಕೆತ್ತಿಸಿಕೊಳ್ಳುವುದನ್ನೇ ಟೀಕಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ಜನರು ನಮಗೆ ಅಧಿಕಾರ ನೀಡಿದ್ದಾರೆ. ಅಭಿವೃದ್ಧಿ ಕೆಲಸ ಮಾಡುತ್ತಿರುವ ನಮಗೆ ಹೆಸರು ಕೆತ್ತಿಸಿಕೊಳ್ಳುವುದು ತಪ್ಪೇನಲ್ಲ ಎಂದು ಪ್ರಶ್ನಿಸಿದರು.



ವಿಶ್ವ ರಂಗಭೂಮಿ ದಿನಾಚರಣೆ: ಸನ್ಮಾನ

ಹಾವೇರಿ: ಇಂದಿನ ಯಾಂತ್ರಿಕ ಬದುಕಿನ ಯುವಜನಾಂಗದಲ್ಲಿ ಸೃಜನಶೀಲತೆಯನ್ನು ಹುಟ್ಟು ಹಾಕಲು ರಂಗಭೂಮಿಯಿಂದ ಮಾತ್ರ ಸಾಧ್ಯ. ಪ್ರಜಾಪ್ರಭುತ್ವದ ಎಲ್ಲ ಮೌಲ್ಯಗಳನ್ನು ಸದಾಕಾಲ ಜನರಿಗೆ ಮುಟ್ಟಿಸುವ ಏಕೈಕ ಬಲಿಷ್ಠ ಮಾಧ್ಯಮ ರಂಗಭೂಮಿ ಎಂದು ಹಾವೇರಿ ವಿಶ್ವ ವಿದ್ಯಾಲಯದ ಆಡಳಿತ ಕುಲಸಚಿವ ಡಾ. ಎಸ್.ಟಿ. ಬಾಗಲಕೋಟಿ ಹೇಳಿದರು.

ಸ್ಥಳೀಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಜಿಲ್ಲಾ ಕಲಾ ಬಳಗ, ಕನ್ನಡ ವಿಭಾಗ ಹಾಗೂ ಸಾಹಿತ್ಯ ವೇದಿಕೆಯ ಐಕ್ಯೂಎಸಿ ವಿಭಾಗ ಜಂಟಿಯಾಗಿ ಏರ್ಪಡಿಸಿದ್ದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಒಂದು ದಿನದ ವಿಚಾರ ಸಂಕಿರಣ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೆಎಲ್‌ಇ ಆಡಳಿತ ಮಂಡಳಿ ನಿರ್ದೇಶಕ ಎಂ.ಸಿ. ಕೊಳ್ಳಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿದ್ದ ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಲಿಂಗಯ್ಯ ಹಿರೇಮಠ ಮಾತನಾಡಿದರು.

ರಂಗಭೂಮಿಗೆ ಅನನ್ಯ ಸೇವೆ ಸಲ್ಲಿಸಿದ ನಾಗರಾಜ ಬಣಕಾರ, ಶಂಕರಲಿಂಗಯ್ಯ ಹಿರೇಮಠ, ಈರಣ್ಣ ಬೆಳವಡಿ, ಜಗದೀಶ ಚೌಟಗಿ, ಜಮೀರ ರಿತ್ತಿ, ಎ.ಬಿ. ಗುಡ್ಡಳ್ಳಿ ಜೊತೆಗೆ ಯುವ ಪ್ರತಿಭೆಗಳಾದ ಪ್ರಿಯಾ ರೊಟ್ಟಿ, ಮಧು ಎಂ, ತುಂಗಾ ಅನುರಾಧೇಶ್ವರ ಶಿವಲಿಂಗಯ್ಯ, ಸಹನಾ ಮನ್ವಾಚಾರ್, ಲಕ್ಷ್ಮೀ ಜಾಡರ ಹಾಗೂ ಪೂಜಾ ಯತ್ನಳ್ಳಿ ಅವರುಗಳಿಗೆ ಯುವ ಪುರಸ್ಕಾರ ನೀಡಿ ಗೌರವಿಸಲಾಯಿತು.



ಜಿಲ್ಲಾ ಕಲಾ ಬಳಗದ ಸಂಚಾಲಕ ಕೆ.ಆರ್. ಹಿರೇಮಠ, ಹಿರಿಯ ಸಾಹಿತಿ ಸತೀಶ ಕುಲಕರ್ಣಿ, ನಾಗವೇಣಿ ಪಾಟೀಲ, ಸಂಧ್ಯಾ ಕುಲಕರ್ಣಿ ರಂಗಭೂಮಿ ಅಂದು ಇಂದು ಮತ್ತು ಅದರ ಸವಾಲುಗಳು ಕುರಿತು ವಿಚಾರಗಳನ್ನು ಹಂಚಿಕೊಂಡರು. ವೇದಿಕೆಯಲ್ಲಿ ಶಂಕರ ಸುತಾರ, ಐಕ್ಯೂಎಸಿ ಸಂಯೋಜಕಿ ಪ್ರೊ.ರೂಪಾ ಕೋರೆ, ಡಾ. ಶಮಂತಕುಮಾರ ಕೆ.ಎಸ್. ಇದ್ದರು. ಪ್ರಾಚಾರ್ಯ ಎಂ.ಎಂ. ಹೊಳ್ಳಿಯವರ ಪ್ರಾಸ್ತಾವಿಕ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಸಂಜೀವ ನಾಯಕ್ ಸ್ವಾಗತಿಸಿದರು. ಪ್ರೊ. ಶ್ರೀದೇವಿ ದೊಡ್ಡಮನಿ ನಿರೂಪಿಸಿ, ವಂದಿಸಿದರು. ಇದೇ ವೇಳೆ ಹಾವು ಬಂತು ಹಾವು ಮತ್ತು ಯುದ್ಧ ಯುದ್ಧ ಎಂಬ ಎರಡು ಕಿರು ನಾಟಕಗಳನ್ನು ಜಿಲ್ಲಾ ಕಲಾಬಳಗದ ತಂಡದವರು ಅಭಿನಯಿಸಿದರು.

ಸಂಪೂರ್ಣ ಡಿಜಿಟಲ್ ರೂಪದಲ್ಲಿ ಜನಗಣತಿ

ಹಾವೇರಿ: ಇದೇ ಮೊದಲ ಬಾರಿಗೆ ಸಂಪೂರ್ಣ ಡಿಜಿಟಲ್ ರೂಪದಲ್ಲಿ ಜನಗಣತಿ ನಡೆಯಲಿದೆ. ಕೇಂದ್ರ ಗೃಹ ಸಚಿವಾಲಯ 2027ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲು ಉದ್ದೇಶಿಸಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪ್ರಧಾನ ಜನಗಣತಿ ಅಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ.

ಕರ್ನಾಟಕದಲ್ಲಿ 2027ರ ಜನಗಣತಿಯ ಮೊದಲ ಹಂತವಾದ ಮನೆಗಳ ಪಟ್ಟಿ ಮತ್ತು ಮನೆ ಗಣತಿಯ ಸ್ವಯಂ ಗಣತಿಯನ್ನು ಏಪ್ರಿಲ್ 1ರಿಂದ 15ರವರೆಗೆ ಅಂದರೆ 15 ದಿನ ನಡೆಸಲು ಸರ್ಕಾರ ಆದೇಶಿಸಿದೆ. ಮೊದಲ ಹಂತವಾದ ಮನೆಗಳ ಪಟ್ಟಿ ಮತ್ತು ಮನೆ ಗಣತಿಯಲ್ಲಿ ಮೊದಲ 15 ದಿನಗಳ ಕಾಲ ವೆಬ್‌ಸೈಟ್ ಪೋರ್ಟಲ್ (https://se.census.gov.in) ಮೂಲಕ ಸ್ವಯಂ ಗಣತಿಗೆ ಅವಕಾಶವಿರುತ್ತದೆ. ಮನೆಯ ಯಾವುದೇ ಒಬ್ಬ ಸದಸ್ಯರು ಸುಮಾರು 15ರಿಂದ 20 ನಿಮಿಷಗಳ ಅವಧಿಯಲ್ಲಿ ಸ್ವಯಂ-ಗಣತಿ ಮಾಡಿ ಮನೆಯ ವಿವರಗಳನ್ನು ಭರ್ತಿ ಮಾಡಬಹುದಾಗಿದೆ ಮತ್ತು ಮೊಬೈಲ್/ ಇಮೇಲ್‌ನಲ್ಲಿ ಸ್ವಯಂ-ಗಣತಿ ಐಡಿ ಪಡೆಯಬಹುದಾಗಿದೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ, ದೃಢೀಕರಿಸಲು ಮತ್ತು ಸ್ವಯಂ-ಗಣತಿ ದತ್ತಾಂಶ ಅಂತಿಮ ಸಲ್ಲಿಕೆಗಾಗಿ SE-ID ಯನ್ನು ಅವರೊಂದಿಗೆ ಹಂಚಿ ಕೊಳ್ಳಬೇಕಾಗಿರುತ್ತದೆ. ಈ ಸ್ವಯಂ-ಗಣತಿಯಲ್ಲಿ ಭಾಗವಹಿಸುವಿಕೆಯನ್ನು ಸುಗಮಗೊಳಿಸಲು, ಸ್ವಯಂ-ಗಣತಿಯ ಹಂತ ಹಂತದ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಜಿಲ್ಲೆಯ ಸಾರ್ವಜನಿಕರು ಏ.1 ರಿಂದ ಏ.15ರೊಳಗಾಗಿ ಸ್ವಯಂ-ಗಣತಿ ಮಾಡಿಕೊಳ್ಳಲು ಕೋರಲಾಗಿದೆ.

ಏ.16 ರಿಂದ ಮೇ 15 ಈ ಅವಧಿಯಲ್ಲಿ ಗಣತಿದಾರರು ಮನೆಗೆ ಭೇಟಿ ನೀಡಿ ವಿವರಗಳನ್ನು ಪರಿಶೀಲಿಸುತ್ತಾರೆ.

ಗೌಪ್ಯತೆಯ ಖಾತರಿ: 1948ರ ಜನಗಣತಿ ಕಾಯ್ದೆಯ ಅಡಿಯಲ್ಲಿ ಸಂಪೂರ್ಣ ಗೌಪ್ಯತೆ ಹಾಗೂ ಮಾಹಿತಿಯು ಸಂಪೂರ್ಣವಾಗಿ ಸುರಕ್ಷಿತವಾಗಿರುತ್ತದೆ. ವರದಿಗಳಲ್ಲಿ ಒಟ್ಟು ಅಂಕಿ ಅಂಶಗಳನ್ನು ಮಾತ್ರ ಪ್ರಕಟಿಸಲಾಗುತ್ತದೆ. ತೆರಿಗೆ, ಪೊಲೀಸ್ ಅಥವಾ ತನಿಖೆಯಲ್ಲಿ ಉಪಯೋಗಿಸುವುದಿಲ್ಲ, ಹಾಗಾಗಿ ನಿಖರವಾದ ಮಾಹಿತಿಯನ್ನು ಒದಗಿಸಲು ಕೋರಲಾಗಿದೆ.

ನೇಕಾರ ಸಮಾಜ ಬೆಳವಣಿಗೆಗೆ ಒಗ್ಗಟ್ಟು ಅವಶ್ಯ: ಲಕ್ಷ್ಮೀ ನಾರಾಯಣ

ರಾಣೇಬೆನ್ನೂರ: ರಾಜ್ಯದಲ್ಲಿ 52 ಲಕ್ಷ ನೇಕಾರ ಸಮಾಜದ ಜನರಿದ್ದು ಸ್ವಂತ ಬಲದಿಂದ 12 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಶಕ್ತಿ ಹೊಂದಿದ್ದು ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳು ನಮ್ಮ ಸಮಾಜಕ್ಕೆ ಕನಿಷ್ಠ 5-6 ಕ್ಷೇತ್ರಗಳಲ್ಲಿ ಟಿಕೆಟ್ ನೀಡಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಡಿ.ಲಕ್ಷ್ಮೀನಾರಾಯಣ ಹೇಳಿದರು.

ನಗರದ ಯರೇಕುಪ್ಪಿ ರಸ್ತೆಯ ಶ್ರೀನೀಲಕಂಠೇಶ್ವರ ದೇವಸ್ಥಾನದಕಾಕಿ ಜನಸೇವಾಸಂಸ್ಥೆಯಗಣೇಶೋತ್ಸವ ಮಂಟಪದಲ್ಲಿ ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟ ಹಾಗೂ ಶ್ರೀದೇವರ ದಾಸಿಮಯ್ಯ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ನೇಕಾರ ಸಂತ ಆದ್ಯ ವಚನಕಾರ ಶ್ರೀದೇವರ ದಾಸಿಮಯ್ಯ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ನೇಕಾರ ಸಮಾಜ ಬೆಳೆಯಬೇಕಾದರೆ ಇತರೆ ಸಮಾಜದವರು ಕೂಡ ಒಗ್ಗೂಡಬೇಕು. ಯಡಿಯೂರಪ್ಪ ಸಿಎಂ ಆಗಿದ್ದ ವೇಳೆ ಹತ್ತಾರು ಕೋಟಿ ಅನುದಾನ ನೀಡಿ ದಾಸಿಮಯ್ಯ ಹುಟ್ಟೂರಿನಲ್ಲಿ ಮೂಲಸೌಲಭ್ಯಗಳಿಗೆ ಆದ್ಯತೆ ನೀಡಿದರು ಎಂದರು.

ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ, ರಾಜ್ಯ ಬಿಜೆಪಿ ಘಟಕದ ಉಪಾಧ್ಯಕ್ಷ ಡಾ.ಬಸವರಾಜ ಕೇಲಗಾರ, ದೇವರ ದಾಸಿಮಯ್ಯ ಉತ್ಸವ ಸಮಿತಿ ಅಧ್ಯಕ್ಷ ಬಸವರಾಜ ಲಕ್ಷ್ಮೇಶ್ವರ ಮಾತನಾಡಿದರು. ಶಿಕ್ಷಕಿ ಲಕ್ಷ್ಮೀ ಅಡಕಿ ಉಪನ್ಯಾಸ ನೀಡಿದರು.



ನಗರದ ದೊಡ್ಡಪೇಟೆ ವಿರಕ್ತ ಮಠದ ಗುರುಬಸವ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಹನುಮಂತಪ್ಪ ಮುಕ್ತೇನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಕುರುಹಿನಶೆಟ್ಟಿ ಕೇಂದ್ರ ಸಂಘದ ಸಂಘಟನಾ ಕಾರ್ಯದರ್ಶಿ ಹರೀಶಕುಮಾರ, ಜಿಲ್ಲಾ ನೇಕಾರ ಮಹಿಳಾ ಸಮುದಾಯಗಳ ಒಕ್ಕೂಟದ ಅಧ್ಯಕ್ಷೆ ರಾಜೇಶ್ವರಿ ಏಕಬೋಟೆ, ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷ ಹನುಮಂತಪ್ಪ ಅಮಾಸಿ, ಉಪಾಧ್ಯಕ್ಷ ಶಿವಾನಂದ ಸಾಲಗೇರಿ, ಪಟ್ಟಸಾಲಿ ಸಮಾಜದ ಅಧ್ಯಕ್ಷ ರಮೇಶ ಗುತ್ತಲ, ಪದ್ಮಸಾಲಿ ಸಮಾಜದ ಅಧ್ಯಕ್ಷ ಕರಬಸಣ್ಣ ಕಡ್ಲಿಬಾಳ, ಜಿಲ್ಲಾ ದೇವಾಂಗ ಸಮಾಜದ ಅಧ್ಯಕ್ಷ ಬಸವರಾಜ ಮೈಲಾರ, ತೋಗಟವೀರ ಸಮಾಜದ ಅಧ್ಯಕ್ಷ ಕೃಷ್ಣಪ್ಪ ಬ್ಯಾಡಗಿ, ವೆಂಕಟೇಶ ಕಾಕಿ, ಲಕ್ಷ್ಮೀಕಾಂತ ಹುಲಗೂರ, ಅತಿಥಿಗಳಾಗಿ ಆಗಮಿಸಿದ್ದರು. ಉತ್ಸವ ಸಮಿತಿಯ ಗೌರವಾಧ್ಯಕ್ಷ ಹನುಮಂತಪ್ಪ ಕಾಕಿ, ಕಾರ್ಯದರ್ಶಿ ಮಂಜುನಾಥ ಹೊಸಪೇಟೆ, ಸದಸ್ಯರಾದ ಯುವರಾಜ ಬಾರಾಟಕ್ಕೆ, ಗಿರೀಶ ಗುಳೇದಗುಡ್ಡ, ಲಿಂಗರಾಜ ಬೂದನೂರ, ಪ್ರೀತಂ ಬಜ್ಜಿ, ಕರಬಸಪ್ಪ ನೀಲಗುಂದ, ಪ್ರಕಾಶ ಅಗಡಿ, ಈರಣ್ಣ ಕುದರಿ, ಅರವಿಂದ ಏಕಬೋಟೆ ಸೇರಿದಂತೆ ಮತ್ತಿತರರಿದ್ದರು.

> ಯಡಿಯೂರಪ್ಪ ಸಿಎಂ ಆಗಿದ್ದ ಸಮಯದಲ್ಲಿ ನಾಡಿನ ರೈತ ಮತ್ತು ನೇಕಾರ ಎರಡು ಕಣ್ಣುಗಳು ಎಂದು ಪರಿಭಾವಿಸಿ ನೇಕಾರರಿಗೆ ಉಚಿತ ವಿದ್ಯುತ್ ನೀಡಿದ್ದರು. ದೇವರ ದಾಸಿಮಯ್ಯ ಜಯಂತಿ ಸರ್ಕಾರದ ವತಿಯಿಂದ ಆಚರಿಸುವಂತೆ ಯಡಿಯೂರಪ್ಪ ಮಾಡಿದರು. ಯಾರೇ ಚುನಾವಣೆಗೆ ಸ್ಪರ್ಧಿಸಲಿ, ನೇಕಾರರು ನಮಗೆ ಬೇಕು. ಸಮಾಜದ ಅಭಿವೃದ್ಧಿಗೆ ಯಾವಾಗಲೂ ಕಟ್ಟಿಬದ್ಧವಾಗಿದ್ದೇವೆ.
>
> ■ ಅರುಣಕುಮಾರ ಪೂಜಾರ. ಮಾಜಿ ಶಾಸಕ

ಇದಕ್ಕೂ ಪೂರ್ವದಲ್ಲಿ ನಗರದ ದೊಡ್ಡಪೇಟೆ ಅಂಭಾಭವಾನಿ ದೇವಸ್ಥಾನದ ಬಳಿಯಿಂದ ಹೊರಟ ದೇವರ ದಾಸಿಮಯ್ಯ ಭಾವಚಿತ್ರದ ಮೆರವಣಿಗೆ ಎಡಿಬಿ ಸರ್ಕಲ್, ಎಂ.ಜಿ.ರಸ್ತೆ, ದುರ್ಗಾ ಸರ್ಕಲ್, ಕುರುಬಗೇರಿ ಕ್ರಾಸ್, ಕಾಕಿಗಲ್ಲಿ,ನಾಡಿಗೇರ ಓಣಿ, ಹಳೇ ಪಿ.ಬಿ.ರಸ್ತೆ, ದೇವರ ದಾಸಿಮಯ್ಯ ಸರ್ಕಲ್ ಮಾರ್ಗವಾಗಿ ಸಮಾರಂಭದ ಸ್ಥಳಕ್ಕೆ ಬಂದು ಸೇರಿತು.

ಬಿಜೆಪಿ ಕಾರ್ಯಕರ್ತರಿಂದ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ

ಶಿಗ್ಗಾವಿ: ಶಿಗ್ಗಾವಿ-ಸವಣೂರ ಬಿಜೆಪಿ ಕಾರ್ಯಕರ್ತರು ದಿಢೀರ್ ಶಿಗ್ಗಾವಿ ಪೊಲೀಸ್ ಠಾಣೆಯ ಎದುರು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ಹಮ್ಮಿಕೊಂಡು ಪೊಲೀಸ್‌ರು ಹಾಗೂ ಬಿಜೆಪಿ ಕಾರ್ಯರ್ತರ ನಡುವೆ ಹೈಡ್ರಾಮಾ ನಡೆದ ಘಟನೆ ಶನಿವಾರ ನಡೆಯಿತು.

ಸವಣೂರಿನ ಕಳಲಕೊಂಡ ಗ್ರಾಮದಲ್ಲಿ ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಯೋಜನೆ ಅಡಿಯಲ್ಲಿ ಕೊಳಚೆ ನೀರು ಸಂಸ್ಕರಣ ಘಟಕ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಹಾಗೂ ಸಂಸದರಾದ ಪ್ರಹ್ಲಾದ ಜೋಶಿ ಅವರಿಗೆ ಆಹ್ವಾನಿಸದೆ ಕಾರ್ಯಕ್ರಮ ಮಾಡುತ್ತಿರುವುದು ಶಿಷ್ಟಾಚಾರ ಉಲ್ಲಂಘನೆ ಎಂದು ಬಿಜೆಪಿ ಕಾರ್ಯಕರ್ತರು ಶಾಂತಿಯುತ ಪ್ರತಿಭಟನೆಗೆ ಕರೆ ಕೊಟ್ಟಿದ್ದರೂ ಸಹಿಸದ ಶಾಸಕ ಪಠಾಣ್ ಅವರು, ಪೊಲೀಸರನ್ನು ಹಾಗೂ ಅಧಿಕಾರಿಗಳನ್ನು ಬಳಸಿಕೊಂಡು ಶಾಂತಯುತವಾಗಿ ಪ್ರತಿಭಟನೆ ಮಾಡುತ್ತಿದ್ದವರನ್ನು ಏಕಾಏಕಿ ಬಂಧಿಸಿ ಶಿಗ್ಗಾವಿ ಪಟ್ಟಣದ ಪೊಲೀಸ್ ಠಾಣೆಗೆ ಕರೆ ತಂದಿರುವುದು ಅಕ್ಷಮ್ಯ ಅಧಿಕಾರದ ದುರ್ಬಳಕೆಯಾಗಿದೆ ಎಂದು ಆರೋಪಿಸಿದರು.

ಮಹಿಳಾ ಬಿಜೆಪಿ ಮುಖಂಡರಾದ ಶೋಭಾ ನಿಸ್ಸಿಮಗೌಡ್ರ ಪ್ರತಿಭಟನೆ ನೇತೃತ್ವವಹಿಸಿ ಮಾತನಾಡಿ, ಕೇಂದ್ರ ಸರಕಾರದ 50% ಹಾಗೂ ಪುರಸಭೆಯ ಕೇಂದ್ರದ 15 ನೇ ಹಣಕಾಸಿನ 17% ಅನುಧಾನ ಸೇರಿ ರಾಜ್ಯ ಸರಕಾರದ 33% ಅನುಧಾನದಲ್ಲಿ ಕಾಮಗಾರಿ ನಡೆಯುತ್ತಿದೆ, ಸೌಜನ್ಯಕ್ಕಾದರೂ ಸಂಸದರಿಗೆ ಆಹ್ವಾನಿಸಿಲ್ಲ, ಅಧಿಕಾರಿಗಳು ಶಾಸಕರ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ, ಶಾಸಕ ಪಠಾಣ್ ಅವರು ಎಲ್ಲ ಯೋಜನೆಗಳೂ ನಮ್ಮದೇ ಎಂದು ಭಾಷಣಗಳಲ್ಲಿ ಹೇಳುತ್ತಾರೆ, ಕೇಂದ್ರ ಸರಕಾರದ ಅನುಧಾನ ಯಾವುದು ? ರಾಜ್ಯ ಸರಕಾರದ ಅನುಧಾನ ಯಾವುದು ಎಂಬುವ ಸಾಮಾನ್ಯ ಜ್ಞಾನವಿಲ್ಲದವರಂತೆ ವರ್ತಿಸುತ್ತಿದ್ದಾರೆ, ಇದನ್ನೇ ಮುಂದುವರಸಿದರೆ ಬಿಜೆಪಿ ಕಾರ್ಯಕರ್ತರು ಮುಂದಿನ ದಿನಗಳಲ್ಲಿ ತಕ್ಕ ಶಾಸ್ತಿಯನ್ನ ಮಾಡಬೇಕಾಗುತ್ತದೆ ಎಂದು ಆಗ್ರಹಿಸಿದರು, ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದವರನ್ನ ಶಾಸಕರು ಪೋಲೀಸರನ್ನ ಬಿಟ್ಟು ಸವಣೂರಿನಿಂದ ಶಿಗ್ಗಾವಿಗೆ ಬಂಧಿಸಿ ಕರೆ ತಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಬಿಜೆಪಿ ಮುಖಂಡ ಭರತ್ ಬೊಮ್ಮಾಯಿ, ಗಂಗಾಧರ ಬಾಣದ, ಸವಣೂರ ಬಿಜೆಪಿ ಮಂಡಳದ ಅಧ್ಯಕ್ಷ ಶಿವಪುತ್ರಪ್ಪ ಕಲಕೋಟಿ, ಶಿಗ್ಗಾವಿ ಮಂಡಳದ ಅಧ್ಯಕ್ಷ ವಿಶ್ವನಾಥ ಹರವಿ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಅನೀಲ ಸಾತಣ್ಣವರ, ಮುಖಂಡರಾದ ಉಮೇಶ ಅಂಗಡಿ, ಮಂಜುನಾಥ ಬ್ಯಾಹಟ್ಟಿ, ಶಂಕರ್ ಮುಂದಿನಮನಿ, ಸಚಿನ ಮಡಿವಾಳರ, ಸಂತೋಷ ದೊಡ್ಡಮನಿ, ರೇಣುಕನಗೌಡ ಪಾಟೀಲ, ಪ್ರತೀಕ ಕೋಳೆಕಾರ, ಕಾಶಿನಾಥ ಕಳ್ಳಿಮನಿ ಸೇರಿದಂತೆ ಸವಣೂರ ಹಾಗೂ ಶಿಗ್ಗಾವಿಯ ಬಿಜೆಪಿ ಕಾರ್ಯಕರ್ತರು ಇದ್ದರು.

ನೀರಾವರಿ ಯೋಜನೆ ಅನುದಾನದ ಸವಾಲು ಸ್ವೀಕಾರ

ಬಹಿರಂಗ ಚರ್ಚೆಗೆ ಸಿದ್ಧ: ಎಂಬಿಪಾ



ಬಾಗಲಕೋಟೆ : ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಕಾಂಗ್ರೆಸ್ ಸರ್ಕಾರ ಎಷ್ಟು ಅನುದಾನ ನೀಡಿದೆ, ಬಿಜೆಪಿ ಸರ್ಕಾರ ಎಷ್ಟು ಅನುದಾನ ನೀಡಿದೆ ಎಂಬುದರ ಕುರಿತು ದಾಖಲೆ ಸಮೇತ ಬಹಿರಂಗ ಚರ್ಚೆಗೆ ಬರಲು ಸಿದ್ಧನಿದ್ದೇನೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಗೋವಿಂದ ಕಾರಜೋಳ ಸವಾಲು ಸ್ವೀಕರಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀರಾವರಿ ಯೋಜನೆಗೆ ನಮ್ಮ ಸರ್ಕಾರ ಸಾವಿರಾರು ಕೋಟಿ ರೂ. ನೀಡಿದೆ. ಬಿಜೆಪಿಯವರು ಇದಕ್ಕೆ ಏನೂ ಮಾಡಿಲ್ಲ. ನಾನು ನೀರಾವರಿ ಸಚಿವನಾಗಿದ್ದಾಗ ಎಷ್ಟು ಹಣವನ್ನು ನೀಡಿದ್ದೇನೆ. ಯಾವ್ಯಾವ ಯೋಜನೆ ಎಂಬುವುದರ ಕುರಿತು ದಾಖಲೆ ಸಮೇತ ಬಹಿರಂಗ ಪಡಿಸುವೆ ಎಂದು ಹೇಳಿದರು.

ಬಿಜೆಪಿ ಸರ್ಕಾರದ ನಾಲ್ಕು ವರ್ಷದಲ್ಲಿ ಕ್ಯಾಬಿನೆಟ್ ಅನುಮೋದನೆ ಇಲ್ಲದೇ ಕಾಮಗಾರಿ ಟೆಂಡರ್ ಕರೆದಿದ್ದಾರೆ. ಲಕ್ಷಾಂತರ ಕೋಟಿ ರೂ. ಫೈಲ್ ಪೆಂಡಿಂಗ್ ಇದೆ. ಇದಕ್ಕೆ ಹಣಕಾಸು ಕೂಡ ಒದಗಿಸಿಲ್ಲ. ಇದರ ಹೊರೆಯನ್ನು ನಮ್ಮ ಸರ್ಕಾರಕ್ಕೆ ಹೊರೆಸಲಾಗಿದೆ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ ಮುಳುಗಡೆಯಾಗುವ ಎಲ್ಲಾ ಭೂಮಿಗಳಿಗೆ ಪರಿಹಾರವನ್ನು ನೀಡುತ್ತೇವೆ. ಈಗಾಗಲೇ ಬಜೆಟ್‌ದಲ್ಲಿ 3 ಸಾವಿರ ಕೋಟಿ ರೂ. ನೀಡಿದ್ದು ಇನ್ನೂ ಸಪ್ಲೆಮೆಂಟರಿ ಬಜೆಟ್‌ದಲ್ಲಿ ಹೆಚ್ಚುವರಿಯಾಗಿ ಅನುದಾನವನ್ನು ಸಿಎಂ ಒದಗಿಸಲಿದ್ದಾರೆ. ರೈತರಿಗೆ ಅನುಕೂಲವಾಗಂತೆ ಸರ್ಕಾರ ಮಾಡಲಿದೆ ಎಂದರು.

ಜನರಿಗೆ ಮೋಸ ಮಾಡುವ ಕೆಲಸ ಮಾಡುವುದಿಲ್ಲ, ಧರ್ಮ, ಜಾತಿ ಹೆಸರಿನಲ್ಲಿ ಬಿಜೆಪಿ ರಾಜಕೀಯ ಮಾಡುತ್ತದೆ ಆದರೆ ಬುದ್ಧ, ಬಸವ, ಅಂಬೇಡ್ಕರ್ ತತ್ವದಲ್ಲಿ ಕಾಂಗ್ರೆಸ್ ಕೆಲಸ ಮಾಡಲಿದೆ ಎಂದರು.

ಸರ್ಕಾರದ ಐದು ಗ್ಯಾರಂಟಿ ಯೋಜನೆ ಜನರಿಗೆ ಅನುಕೂಲವಾಗಿದೆ. ಗ್ಯಾರಂಟಿ ಯೋಜನೆ ಜತೆಗೆ ರಾಜ್ಯದ ಅಭಿವೃದ್ಧಿ ಕೂಡ ನಡೆದಿದೆ. ಹೀಗಾಗಿ ರಾಜ್ಯದ ಜನ ಗ್ಯಾರಂಟಿ ಯೋಜನೆ ಮೆಚ್ಚಿ ಬಾಗಲಕೋಟೆ, ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲಿದ್ದಾರೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು 2 ಕೋಟಿ ಉದ್ಯೋಗ ಕೊಡುತ್ತೇವೆ ಎಂದಿದ್ದರೂ ಉದ್ಯೋಗ ಕೊಡಲು ಆಗಲಿಲ್ಲ. ನೋಟ್ ಬ್ಯಾನ್ ಮಾಡಿ ಎಷ್ಟೋ ಉದ್ಯೋಗವನ್ನು ಜನ ಕಳೆದುಕೊಂಡರು. ಇನ್ನೂ ಯುಪಿಎ ಸರ್ಕಾರವಿದ್ದಾಗ ಪೆಟ್ರೋಲ್ ಡೀಸೆಲ್ 60 ರೂ. ಇತ್ತು. ಈಗ 100 ರೂ.ಗಡಿ ದಾಟಿದೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿ ಜನರ ಮೇಲೆ ಭಾರ ಹಾಕುತ್ತಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮಾಜಿ ಶಾಸಕ ಆನಂದ ನ್ಯಾಮಗೌಡರ, ಸಿದ್ದು ಕೊಣ್ಣೂರ, ನಾಗರಾಜ ಹದ್ಲಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಮಾಜಿ ಸಚಿವ ಬಿ.ಶ್ರೀರಾಮುಲು ವಿಶ್ವಾಸ

ಬಿಜೆಪಿ ಗೆಲುವು ಖಚಿತ



ಬಾಗಲಕೋಟೆ: ಭ್ರಷ್ಟಾಚಾರದ ಹಣ, ಸರ್ಕಾರದ ದಬ್ಬಾಳಿಕೆ, ಹಣದ ತೋಳ್ಬಲದಿಂದ ಬಾಗಲಕೋಟೆಯಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯವಿಲ್ಲ. ಜನರ ಬಲದಿಂದ ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ವಾಲ್ಮೀಕಿ ನಿಗಮದಿಂದ ಹಣ ಲೂಟಿ ಮಾಡಲಾಗಿದೆ. ಇನ್ನೂ 2028ರ ಚುನಾವಣೆಗೆ ವಿವಿಧ ನಿಗಮಗಳಿಂದ ಹಣ ಲೂಟಿ ಮಾಡಿ ಚುನಾವಣೆ ಎದುರಿಸಲು ಸರ್ಕಾರ ಸನ್ನದ್ಧವಾಗಿದೆ. ಸರ್ಕಾರಿ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುವುದು ಸೂಕ್ತ ಎಂದರು.

ಭ್ರಷ್ಟಾಚಾರದ ಹಣದ ಮೇಲೆ ಲಾಟರಿ ಮೂಲಕ ಕಾಂಗ್ರೆಸ್ ಉಪಚುನಾವಣೆ ಗೆಲ್ಲಲು ಹೊರಟಿದೆ. ಆದರೆ, ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠವರು ಮಾಡಿರುವ ಅಭಿವೃದ್ಧಿ ಕೆಲಸಗಳಿಗೆ ಕ್ಷೇತ್ರದ ಜನ ಬೆಂಬಲ ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳರನ್ನು ಪ್ರಚಾರಕ್ಕೆ ಬರಬೇಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷರು ಎಲ್ಲಿಯೂ ಹೇಳಿಲ್ಲ. ಬಾಗಲಕೋಟೆಯ ಉಪಚುನಾವಣೆಯನ್ನು ಎಲ್ಲ ನಾಯಕರು ಸೇರಿಕೊಂಡು ಸಂಗಮ ರೀತಿ ಕೆಲಸ ಮಾಡುತ್ತಿದ್ದೇವೆ. ಬಿಜೆಪಿ ಅಭ್ಯರ್ಥಿ ಗೆಲ್ಲಬೇಕು ಎಂಬುದು ನಮ್ಮ ಗುರಿಯಾಗಿದೆ. ಬಿಜೆಪಿಯಿಂದ ಯತ್ನಾಳವರನ್ನು ಉಚ್ಚಾಟನೆಯಾಗಿದ್ದರಿಂದ ಪ್ರಚಾರಕ್ಕೆ ಬಂದರೆ ಇರಸು ಮುರಸು ಆಗಲಿದೆಯಾ ಎಂದು ತಿಳಿದುಕೊಂಡಿರಬೇಕು. ಯತ್ನಾಳವರನ್ನು ಪಕ್ಷಕ್ಕೆ ಕರೆ ತರಲು ಹೈಕಮಾಂಡ್ ಮುಂದಿನ ನಿರ್ಧಾರ ಕೈಗೊಳ್ಳುತ್ತಾರೆ ಎಂದು ಹೇಳಿದರು.

ಶಾಸಕ ವಿಜಯಾನಂದ ಕಾಶಪ್ಪನವರ ಐಪಿಎಲ್ ಮ್ಯಾಚ್ ನೋಡಲು ಐದು ಟಿಕೆಟ್ ನೀಡಬೇಕು. ಪ್ರತ್ಯೇಕ ಗ್ಯಾಲರಿ ಇರಬೇಕು. ಜನಸಾಮಾನ್ಯರ ಜತೆ ನಿಲ್ಲಲು ಆಗುವುದಿಲ್ಲ. ವಿಶೇಷ ಗ್ಯಾಲರಿಯಲ್ಲಿ ಶಾಸಕರಿಗೆ,ಕುಟುಂಬದವರಿಗೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತಾರೆ. ಜನರಿಂದ ಆಯ್ಕೆಯಾಗಿರುವ ಶಾಸಕ ಜನರ ಮಧ್ಯೆ ನಿಲ್ಲಲು ಆಗುವುದಿಲ್ಲ ಎನ್ನುತ್ತಾರೆ. ಯಾಕೋ ಗ್ಯಾಲರಿಗೆ ನಮ್ಮ ಹೆಸರು ಇಡಿ ಎಂದಿಲ್ಲ. ಹೀಗಾಗಿ ಈ ಸರ್ಕಾರವೇ ರಾಜ್ಯದ ಜನರಿಗೆ ಬೇಡವಾಗಿದೆ ಎಂದು ಹೇಳಿದರು.

ಶಾಸಕ ಸಿದ್ದು ಸವದಿ, ವಿ.ಪ. ಸದಸ್ಯ ಹಣಮಂತ ನಿರಾಣಿ, ಅಶೋಕ ಲಿಂಬಾವಳಿ, ಬಸವರಾಜ ಯಂಕಂಚಿ, ಪತ್ರಿಕಾಗೋಷ್ಠಿಯಲ್ಲಿದ್ದರು.

ಕಿರುಸುದ್ದಿ

ಇಂದು ಹಿಡಕಲ್ ಜಲಾಶಯದಿಂದ ನೀರು ಬಿಡುಗಡೆ

ಬೆಳಗಾವಿ: ಹಿಡಕಲ್ ಜಲಾಶಯದಿಂದ ಘಟಪ್ರಭೆ ನದಿಗೆ ಮಾ.30ರಂದು ನೀರು ಹರಿಸಲಾಗುತ್ತಿದ್ದು, ನೀರು ಪೋಲಾಗದಂತೆ, ನೀರನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳಬೇಕೆಂದು ರೈತರಿಗೆ, ಸಾರ್ವಜನಿಕರಿಗೆ ಸಚಿವ ಸತೀಶ ಜಾರಕಿಹೊಳಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ವಿಷಯ ತಿಳಿಸಿದ ಸಚಿವರು, ಪ್ರತಿ ವರ್ಷದಂತೆ ಈ ಬಾರಿಯು ಹಿಡಿಕಲ್ ಡ್ಯಾಂನಿಂದ ಘಟಪ್ರಭೆ ನದಿಗೆ ಕುಡಿಯಲಿಕ್ಕೆ ನೀರು ಬಿಡುಗಡೆ ಮಾಡುವ ನಿರ್ಧಾರವನ್ನು ಮಾಡಲಾಗಿದೆ. ಮಾ.30ರಂದು ಘಟಪ್ರಭೆ ನದಿಗೆ ನೀರು ಹರಿಸಲಾಗುತ್ತಿದ್ದು, ಈ ಕ್ರಮಕ್ಕೆ ಚುನಾವಣಾ ಆಯೋಗದಿಂದ ಅನುಮತಿ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ. ಏ.7ರಂದು ಘಟಪ್ರಭೆ ಬಲದಂಡೆ, ಎಡದಂಡೆ ಕಾಲುವೆಗೆ ನೀರು ಹರಿಸಲು ನಿರ್ಧಾರ ಮಾಡಲಾಗಿದ್ದು, ನೀರು ಪೋಲಾಗದಂತೆ, ಸರಿಯಾಗಿ ಸದ್ಬಳಕೆ ಮಾಡಿಕೊಳ್ಳಬೇಕೆಂದು ರೈತರಿಗೆ ಹಾಗೂ ಸಾರ್ವಜನಿಕರಿಗೆ ಸಚಿವರು ಮನವಿ ಮಾಡಿದ್ದಾರೆ. ಈ ನೀರು ಬಿಡುಗಡೆ ಮಾಡಲು ಸುಮಾರು 6 ತಿಂಗಳ ಕಾಲ ನೀರು ಸಂಗ್ರಹ ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸುಮಾರು ವರ್ಷಗಳಿಂದ ರೈತರಗೆ ಅನುಕೂಲವಾಗಲೆಂದು ನೀರು ಹರಿಸಲಾಗುತ್ತಿದೆ. ಈ ನೀರನ್ನು ಜಿಲ್ಲೆಯ ರೈತರು ಹಾಗೂ ಸಾರ್ವಜನಿಕರು ಪೋಲಾಗದಂತೆ ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಚಿವರು ತಿಳಿಸಿದ್ದಾರೆ.

'ರೀಲ್ಸ್ ಅಜ್ಜಿ' ಲಕ್ಷ್ಮೀ ನಾಯ್ಕ್ ಇನ್ನಿಲ್ಲ

ಯಲ್ಲಾಪುರ: 'ರೀಲ್ಸ್ ಅಜ್ಜಿ' ಎಂದೇ ಖ್ಯಾತರಾಗಿದ್ದ ಡ್ರಾಮಾ ಜ್ಯೂನಿಯರ್ಸ್ ಖ್ಯಾತಿಯ ಸೂರಜ್ ಅವರ ಮುತ್ತಜ್ಜಿ ಲಕ್ಷ್ಮೀ ನಾಯ್ಕ್ (93) ಅವರು ಭಾನುವಾರ ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ.



ಯಲ್ಲಾಪುರ ತಾಲೂಕಿನ ಮಂಚಿಕೇರಿಯ ನಿವಾಸಿಯಾಗಿದ್ದ ಲಕ್ಷ್ಮೀ ನಾಯ್ಕ್ ಅವರು, ಮರಿಮೊಮ್ಮಗ ಸೂರಜ್ ಜೊತೆಗೂಡಿ, ತಮ್ಮ ಇಳಿ ವಯಸ್ಸಿನಲ್ಲಿಯೂ ಅದ್ಭುತ ನಟನೆಯ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಲಕ್ಷಾಂತರ ಅಭಿಮಾನಿಗಳ ಮನಗೆದ್ದಿದ್ದರು. ಅವರು ತೋರುತ್ತಿದ್ದ ಉತ್ಸಾಹ ಹಲವರಿಗೆ ಪ್ರೇರಣೆಯಾಗಿತ್ತು. ಕೆಲ ದಿನಗಳಿಂದ ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಇಂದು ಇಹಲೋಕ ತ್ಯಜಿಸಿದ್ದಾರೆ. ಮೃತರು ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಸೇರಿದಂತೆ ಬಂಧು-ಬಳಗವನ್ನು ಅಗಲಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಅಪಾರ ಅಭಿಮಾನಿಗಳು ಇವರ ಸಾವಿಗೆ ಸಂತಾಪ ಸೂಚಿಸಿದ್ದಾರೆ.

ಉಪಚುನಾವಣೆಯಲ್ಲಿ ಕೈಗೆ ತಕ್ಕ ಪಾಠ: ಬಿವೈವಿ



ಹುಬ್ಬಳ್ಳಿ: ರಾಜ್ಯ ಸರ್ಕಾರದ ಆಡಳಿತಕ್ಕೆ ಜನ ಬೇಸತ್ತಿದ್ದು, ಬಿಜೆಪಿ ದಾವಣಗೆರೆ, ಬಾಗಲಕೋಟೆ ಜಯಗಳಿಸಲಿದೆ. ತಕ್ಕ ಪಾಠ ಕಲಿಸುವ ಮನಸ್ಥಿತಿಯಲ್ಲಿ ಮತದಾರರು ಇದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಉಪಚುನಾವಣೆಯಲ್ಲಿ ಈ ಬಾರಿ ಮತದಾರರ ಒಲವು ಬಿಜೆಪಿ ಪರವಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಎರಡೂ ಉಪ ಚುನಾವಣೆಗಳಲ್ಲಿ ಅಧಿಕಾರ ದುರ್ಬಳಕೆ ಮಾಡಿದರೂ ಸಹ ಫಲ ನೀಡುವುದಿಲ್ಲ ಎಂದರು. ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸುವುದು ನಿಶ್ಚಿತ. ಬಾಗಲಕೋಟೆಯಲ್ಲಿ ನಾಮಪತ್ರ ಸಲ್ಲಿಸುವ ವೇಳೆ ನಾನು ಭಾಗಿಯಾಗಿದ್ದೆ. ಹಿಂದುಳಿದ ಸಮುದಾಯಗಳ ಪ್ರಮುಖರನ್ನು ಪ್ರತ್ಯೇಕ ಭೇಟಿ ಮಾಡಿದ್ದೇನೆ. ಮತದಾರರ ಒಲವು ಬಿಜೆಪಿ ಅಭ್ಯರ್ಥಿ ಪರ ಇದೆ. ಸಾಮಾನ್ಯ ಕಾರ್ಯಕರ್ತರನ್ನು ಅಭ್ಯರ್ಥಿ ಮಾಡಲಾಗಿದೆ. ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಬೇರೆ ಬೇರೆ ಕಾರಣಗಳಿಗೆ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ತೀರ್ಮಾನಕ್ಕೆ ಮತದಾರರು ಬಂದಿದ್ದಾರೆ ಎಂದು ತಿಳಿಸಿದರು.

ಬಾಗಲಕೋಟೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೀಡು ಬಿಟ್ಟಿದ್ದಾರೆ. ಸೋತರೆ ತಮ್ಮ ರಾಜಕೀಯದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಅರ್ಥ ಮಾಡಿಕೊಂಡಿದ್ದಾರೆ. ಹಾಗಾಗಿಯೇ ಈ ಉಪ ಚುನಾವಣೆ ರಾಜಕೀಯ ದಿಕ್ಕು ಬದಲಿಸುವ ಶಕ್ತಿಯಾಗಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ ಎಂದರು. ಶಿಕ್ಷಣದ ವಿಷಯದಲ್ಲಿ ರಾಜ್ಯ ಸರ್ಕಾರ ಮೂರ್ಖರಂತೆ ನಡೆದು ಕೊಳ್ಳುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರ ವಹಿಸಿಕೊಂಡ ಬಳಿಕ ರಾಷ್ಟ್ರೀಯ ಶಿಕ್ಷಣ ನೀತಿ ಧಿಕ್ಕರಿಸಿದರು. ಹೊಸ ಶಿಕ್ಷಣ ನೀತಿ ತರುತ್ತೇವೆ ಎಂದರು. ಮೂರು ವರ್ಷ ಕಳೆದರೂ ತಮ್ಮದೇ ಆದ ಶಿಕ್ಷಣ ನೀತಿ ತರಲಾಗುತ್ತಿಲ್ಲ. ತಾವೇ ನೇಮಕ ಮಾಡಿದ್ದ ಸಮಿತಿ ರಚಿಸಿ ವರದಿ ಕೊಟ್ಟರೂ ಉಪ ಸಮಿತಿ ರಚಿಸಿದ್ದಾರೆ. ರಾಜ್ಯದ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತೆ ಮಾಡಿದ್ದಾರೆ ಎಂದರು.

ರಾಜ್ಯದಲ್ಲಿ ತ್ರಿಭಾಷಾ ಸೂತ್ರ ಇತ್ತು. ಕೇಂದ್ರ ಸರ್ಕಾರದ ವಿರುದ್ಧದ ಧೋರಣೆಯಿಂದಾಗಿ ಹಿಂದಿ ಭಾಷೆಯನ್ನು ಸೂತ್ರದಿಂದ ಕೈಬಿಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಸಹಿಸದೇ ಈಗ ಹಿಂದಿ ಭಾಷೆ ಬೇಡ ಎನ್ನಬೇಕಿತ್ತೆ? ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಎಲ್ಲರನ್ನೂ ಮರೆತು ಅಧಿಕಾರದ ಅಮಲಿನಲ್ಲಿ ತೇಲುತ್ತಿದ್ದಾರೆ. ಪಶ್ಚಿಮ ಬಂಗಾಳ, ಅಸ್ಸಾಂ ಸೇರಿ ಇತರೆಡೆ ಚುನಾವಣೆಗಳು ಇರುವುದರಿಂದ ರಾಷ್ಟ್ರ ನಾಯಕರು ಅಲ್ಲಿ ಬೀಡು ಬಿಟ್ಟಿದ್ದಾರೆ. ರಾಜ್ಯದ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿ.ಎಸ್.ಯಡಿಯೂರಪ್ಪ, ಪ್ರಹ್ಲಾದ ಜೋಶಿ, ಜಗದೀಶ ಶೆಟ್ಟರ್ ಸೇರಿದಂತೆ ಇತರ ಹಿರಿಯ ನಾಯಕರು ಪ್ರಚಾರ ನಡೆಸಲಿದ್ದಾರೆ ಎಂದರು.

ಸಂಭ್ರಮದ ಪಡಗಾನೂರ ಶ್ರೀ ಸೋಮೇಶ್ವರ ರಥೋತ್ಸವ



ದೇವರ ಹಿಪ್ಪರಗಿ: ತಾಲೂಕಿನ ಪಡಗಾನೂರ ಗ್ರಾಮದ ಆರಾಧ್ಯ ದೇವರಾದ ಶ್ರೀ ಸೋಮೇಶ್ವರ ಜಾತ್ರಾ ರಥೋತ್ಸವ ಸಕಲ ಮಂಗಲ ವಾದ್ಯ ವೈಭವಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಇದಕ್ಕೂಮೊದಲು ಶನಿವಾರ ಸುಮಂಗಲೆಯರಿಂದ ಪೂರ್ಣ ಕುಂಭ ಮೆರವಣಿಗೆ ಮೂಲಕ ಶ್ರೀ ಸೋಮೇಶ್ವರ ಕರ್ತೃ ಲಿಂಗಕ್ಕೆ ಅಭಿಷೇಕ ನಡೆಯಿತು. ಗುರುನಾಥ ಮಾಸ್ತರ ಮುರುಡಿಯವರಿಂದ ಡೊಳ್ಳಿನ ಗಾಯನ, ರಾತ್ರಿ ಪ್ರಸಿದ್ಧ ಗಾಯಕ ಮಾಳು ನಿಪನಾಳ ತಂಡದಿಂದ ರಸಮಂಜರಿ ಕಾರ್ಯಕ್ರಮ ಜರುಗಿದವು.

ಅಗ್ನಿ ಕಟ್ಟಿಗೆ ಮೆರವಣಿಗೆ, ಕಬಡ್ಡಿ ಪಂದ್ಯಾವಳಿ, ಭಾನುವಾರ ಬೆಳಗ್ಗೆ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಕಡಗಂಚಿ ಅವರ ಅಡ್ಡಪಲ್ಲಕ್ಕಿ ಮಹೋತ್ಸವ, ಅಗ್ನಿ ಹಾಯುವುದು, ಸಾಮೂಹಿಕ ವಿವಾಹ, ಧರ್ಮಸಭೆ, ಭಕ್ತಾದಿಗಳಿಗೆ ಶ್ರೀಗಳು ಹಾಗೂ ಗಣ್ಯರಿಂದ ಸನ್ಮಾನ ಕಾರ್ಯಕ್ರಮ ಜರುಗಿದವು. ಸಂಜೆ ಶ್ರೀ ಸೋಮೇಶ್ವರ ರಥೋತ್ಸವ ಅದ್ದೂರಿಯಿಂದ ನೆರವೇರಿತು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ವೀರಭದ್ರ ಶಿವಾಚಾರ್ಯರು ಸಾವಿರ ದೇವರ ಸಂಸ್ಥಾನ ಮಠ ಕಡಗಂಚಿ, ಪ್ರಭು ಸಾರಂಗದೇವ ಮಹಾ ಸ್ವಾಮಿಗಳು ಸಿಂದಗಿ, ಶ್ರೀ ದಯಾನಂದ ಮಹಾಸ್ವಾಮಿಗಳು ಸಿದ್ದಾರೂಢ ಮಠ ಮುಳಸಾವಳಗಿ, ಯಂಕಂಚಿ ಶ್ರೀಗಳು, ಕರಬಂಟನಾಳ ಶ್ರೀಗಳು ಸೇರಿದಂತೆ ಹಲವಾರು ಜನ ಶ್ರೀಗಳು ಹಾಗೂ ಶ್ರೀ ಸೋಮೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷರಾದ ಅಯ್ಯಪ್ಪ ಸ್ವಾಮಿಗಳು ಹಿರೇಮಠ, ದೇವರ ಹಿಪ್ಪರಗಿ ಶಾಸಕರಾದ ರಾಜುಗೌಡ ಪಾಟೀಲ(ಕುದರಿ ಸಾಲವಾಡಗಿ) ಸಿಂದಗಿ ಮಾಜಿ ಶಾಸಕರಾದ ಶರಣಪ್ಪ ಸುಣಗಾರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಪ್ರಭುಗೌಡ ಲಿಂಗದಳ್ಳಿ (ಚಬನೂರ) ಸೇರಿದಂತೆ ಅನೇಕ ಶ್ರೀಗಳು, ಪ್ರಮುಖರು, ರಾಜಕೀಯ ಮುಖಂಡರು ಹಾಗೂ ಗಣ್ಯರು, ಗ್ರಾಮಸ್ಥರು, ಭಕ್ತಾದಿಗಳು ಸೇರಿದಂತೆ ಅಸಂಖ್ಯಾತ ಜನರು ಜಾತ್ರಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಎಲ್ಲ ರಂಗಗಳಲ್ಲೂ ಕಾಂಗ್ರೆಸ್ ತಿರಸ್ಕೃತ: ನಾರಾಯಣಸ್ವಾಮಿ



ಕಲಬುರಗಿ: ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಕಳೆದ 3 ವರ್ಷಗಳ ಆಡಳಿತದ ಅವಧಿಯಲ್ಲಿ ತನ್ನ ದುರಾಡಳಿತ ಮೂಲಕ ಎಲ್ಲಾ ರಂಗಗಳಲ್ಲೂ ತಿರಸ್ಕೃತಗೊಂಡಿರುವ ಪಕ್ಷವಾಗಿದೆ ಎಂದು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಜನತಾದಳದಲ್ಲಿದ್ದಾಗ ಇಷ್ಟೊಂದು ಸುಳ್ಳು ಹೇಳ್ತಾ ಇದ್ರೋ ಗೊತ್ತಿಲ್ಲ. ಆದರೆ, ಕಾಂಗ್ರೆಸ್ ಪಕ್ಷಕ್ಕೆ ಬಂದಾಗಿನಿಂದ ಸುಳ್ಳಿನ ಸಿದ್ದರಾಮಯ್ಯ ಆಗಿದ್ದಾರೆ. ಬರೀ ಸುಳ್ಳು ಹೇಳುವ ಮೂಲಕ ರಾಜ್ಯದ ಜನರಿಂದ ಭರವಸೆ ಕಳೆದುಕೊಂಡಿದ್ದಾರೆ. ಇಷ್ಟಾದರೂ ರಾಜ್ಯದ ಜನ ಹೇಗೆ ಇವರನ್ನು ಸಹಿಸಿಕೊಳ್ಳುತ್ತಿದ್ದಾರೆ ಎಂಬುದು ತಿಳಿಯಲಾರದ ಸಂಗತಿ.

ತಿರಸ್ಕಾರಕ್ಕೆ ಯೋಗ್ಯವಾದ ಪಕ್ಷ, ತಿರಸ್ಕಾರಕ್ಕೆ ಯೋಗ್ಯವಾದ ನಾಯಕತ್ವ ಹಾಗೂ ತಿರಸ್ಕಾರಕ್ಕೆ ಯೋಗ್ಯವಾದ ಸರ್ಕಾರ ಎಂದು ವಾಗ್ದಾಳಿ ನಡೆಸಿದರು.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ದೇಶದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗೆ ನಡೆದ ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗೈರಾಗಿದ್ದರು. ಬದಲಾಗಿ ಆಹಾರ ಸಚಿವ ಮುನಿಯಪ್ಪನವರನ್ನು ಸಭೆಗೆ ಹಾಜರಾದರು.

> **ಕಾಂಗ್ರೆಸ್ ಪಾರ್ಟಿ ಜೋಕರ್ ಪಾರ್ಟಿಯಾಗಿದೆ. ಪ್ರದೀಪ್ ಈಶ್ವರ ಕುರಿತು ನಾನೇನೂ ಹೇಳಲಾರೆ. ಆದರೆ, ಚಿಕ್ಕಬಳ್ಳಾಪುರಿನ ಹೆಸರು ಕೆಡಿಸುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ಸಿದ್ಧಾಂತಗಳಿಲ್ಲ. ರಾಹುಲ್ ಗಾಂಧಿ ಹಾಗೂ ಪ್ರದೀಪ್ ಈಶ್ವರ ಬಿಜೆಪಿ ಪಕ್ಷಕ್ಕೆ ಸ್ಟಾರ್ ಪ್ರಚಾರಕರಿದಂತೆ. ಅವರೆಲ್ಲೆಲ್ಲಾ ಹೋಗಿ ಪ್ರಚಾರ ಮಾಡಿದ್ದಾರೆ. ಅಲ್ಲಿ ಬಿಜೆಪಿ ಗೆದ್ದಿದೆ.**
> ■ ಛಲವಾದಿ ನಾರಾಯಣಸ್ವಾಮಿ, ವಿಪಕ್ಷ ನಾಯಕ

ಇದರ ಮೇಲೆ ಗೊತ್ತಾಗುತ್ತದೆ ಜವಾಬ್ದಾರಿ ಯಾವ ರೀತಿ ನಿಭಾಯಿಸುತ್ತಿದ್ದಾರೆ ಎಂಬುದು.

ಅಭಿವೃದ್ಧಿ ವಿಷಯದಲ್ಲಿ, ಹಣಕಾಸು ವಿಷಯದಲ್ಲಿ ಕೇಂದ್ರ ಧೋರಣೆ ತೋರುತ್ತಿದೆ ಎಂದು ಕೇಂದ್ರದ ಮೇಲೆ ಗೂಬೆ ಕೂರಿಸಲು ಬರುತ್ತದೆ. ಆದರೆ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರಧಾನಿಯವರ ಮುಖ್ಯಮಂತ್ರಿಗಳೊಂದಿಗಿನ ಸಭೆಗೆ ಹಾಜರಾಗಲು ಬರುವುದಿಲ್ಲ. ಕಳೆದ ವರ್ಷವೂ 15ನೇ ಫೈನಾನ್ಸ್ ಸಭೆಗೂ ಹಾಜರಾಗಿಲ್ಲ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಧರ್ಮಣ್ಣ ಇಟಗಾ, ರುದ್ರೇಶ್ ಸೇರಿದಂತೆ ಇತರರು ಇದ್ದರು.

ವಿತ್ತ ಮಂತ್ರಿಯಾಗಿ ಮುಂದುವರಿಯಬೇಡಿ

ಸಿದ್ದರಾಮಯ್ಯನವರು ಮುಖ್ಯಮಂತ್ರಿ ಮುಂದುವರಿಯುದಾದರೆ ಮುಂದುವರೆಯಲಿ. ಆದರೆ, ರಾಜ್ಯದ ಹಣಕಾಸು ಮಂತ್ರಿಯಾಗಿ ಮುಂದುವರಿಯೋದು ಬೇಡ. ಏಕೆಂದರೆ ಮೊನ್ನೆ ಮಂಡಿಸಿದ ತಮ್ಮ ಐತಿಹಾಸಿಕ ಎಂದು ಹೇಳಿಕೊಳ್ಳುವ 17ನೇ ಬಜೆಟ್‌ನಲ್ಲಿ ಯಾವುದೇ ದೂರದೃಷ್ಟಿಯ ಯೋಜನೆ ಇಲ್ಲ. ರಾಜ್ಯಕ್ಕೆ ಮಾರಕವಾದ ಬಜೆಟ್ ಮಂಡನೆ ಮಾಡಿದ್ದಾರೆ. ಸುಸ್ತಿ ಬಜೆಟ್, ಖೋತಾ ಬಜೆಟ್ ಇದಾಗಿದೆ. ಕೇವಲ ಮುಸ್ಲಿಂರಿಗೆ ಎಲ್ಲಾ ಸೌಕರ್ಯಗಳನ್ನು ಕೊಡುವುದಾದರೆ, ರಾಜ್ಯದ ಹಿಂದುಳಿದ, ದಲಿತರ ಗತಿಯೇನು ಎಂದು ವಾಗ್ದಾಳಿ ನಡೆಸಿದರು.


390 ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಿದ ಖದೀಮರು!

> **ವೃದ್ಧ ಉದ್ಯಮಿಗೆ 15.45 ಕೋಟಿ ರೂ. ವಂಚನೆ ಪ್ರಕರಣ**

ಬೆಳಗಾವಿ: ಸೈಬರ್ ಕ್ರೈಂ ಇತಿಹಾಸದಲ್ಲೇ ಅತ್ಯಂತ ಭಯಾನಕ ಎನ್ನಬಹುದಾದ ವಂಚನೆ ಪ್ರಕರಣವೊಂದು ಬಯಲಾಗಿದೆ. ಸಿಬಿಐ ಅಧಿಕಾರಿಗಳೆಂದು ಹೇಳಿಕೊಂಡು ವೃದ್ಧ ಉದ್ಯಮಿಯೊಬ್ಬರನ್ನು ವಿಡಿಯೋ ಕಾಲ್ ಮೂಲಕ ಡಿಜಿಟಲ್ ಅರೆಸ್ಟ್ ಮಾಡಿದ ಖದೀಮರು, ಬರೋಬ್ಬರಿ 15 ಕೋಟಿ ರೂಪಾಯಿಗೂ ಅಧಿಕ ಹಣ ಲೂಟಿ ಮಾಡಿದ್ದಾರೆ.

ಬೆಳಗಾವಿಯ ವೃದ್ಧ ಉದ್ಯಮಿಯೊಬ್ಬರನ್ನು ಗುರಿಯಾಗಿಸಿಕೊಂಡ ಸೈಬರ್ ವಂಚಕರು, ಮನಿ ಲ್ಯಾಂಡರಿಂಗ್ ಕೇಸ್‌ನಲ್ಲಿ ಸಿಲುಕಿದ್ದೀರಿ ಎಂದು ಬೆದರಿಸಿ ಬರೋಬ್ಬರಿ 15.45 ಕೋಟಿ ರೂಪಾಯಿ ದೋಚಿದ್ದಾರೆ. ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ವಿಡಿಯೋ ಕಾಲ್ ಮಾಡಿ ಉದ್ಯಮಿಯನ್ನು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಕಟ್ಟಿಹಾಕಿದ ಖದೀಮರು, ಭಯದ ವಾತಾವರಣ ಸೃಷ್ಟಿಸಿ ಹಣ ವರ್ಗಾಯಿಸಿಕೊಂಡಿದ್ದಾರೆ. ತನಿಖೆ ಆರಂಭಿಸಿರುವ ಬೆಳಗಾವಿ ಸೈಬರ್ ಕ್ರೈಂ ಪೊಲೀಸರಿಗೆ ಶಾಕಿಂಗ್ ಮಾಹಿತಿ ಲಭ್ಯವಾಗಿದ್ದು, ಲೂಟಿ ಮಾಡಿದ ಹಣವನ್ನು ದೇಶದ ವಿವಿಧ ಭಾಗಗಳ ಸುಮಾರು 390 ಬ್ಯಾಂಕ್ ಖಾತೆಗಳಿಗೆ ಕೇವಲ ಕೆಲವೇ ನಿಮಿಷಗಳಲ್ಲಿ ವರ್ಗಾಯಿಸಲಾಗಿದೆ. ನೂರಾರು 'ಮ್ಯೂಲ್ ಅಕೌಂಟ್'ಗಳನ್ನು ಬಳಸಿರುವ ಖದೀಮರು ಈಗಾಗಲೇ ಶೇಕಡಾ 95ರಷ್ಟು ಹಣವನ್ನು ವಿತ್ ಡ್ರಾ ಮಾಡಿಕೊಂಡಿದ್ದಾರೆ.ಈ ಬೃಹತ್ ಜಾಲದ ಚೈನ್ ಲಿಂಕ್ ನೋಡಿ ಬೆಚ್ಚಿ ಬಿದ್ದಿರುವ ಪೊಲೀಸ್ ಕಮೀಷನರ್ ಭೂಷಣ್ ಬೊರಸೆ ಅವರು ಪ್ರಕರಣದ ಹೆಚ್ಚಿನ ತನಿಖೆಗಾಗಿ ಸಿಬಿಐಗೆ ಪತ್ರ ಬರೆದಿದ್ದಾರೆ. ಸದ್ಯ ಪೊಲೀಸರು 90 ಲಕ್ಷ ರೂಪಾಯಿಗಳನ್ನು ಫ್ರೀಜ್ ಮಾಡುವಲ್ಲಿ ಯಶಸ್ವಿಯಾಗಿದ್ದು, ಉಳಿದ ಹಣಕ್ಕಾಗಿ 390 ಅಕೌಂಟ್‌ಗಳ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ಬಗ್ಗೆ ಎಚ್ಚರಿಕೆ ನೀಡಿರುವ ಕಮೀಷನರ್, ಕಾನೂನಿನಲ್ಲಿ 'ಡಿಜಿಟಲ್ ಅರೆಸ್ಟ್' ಎಂಬ ಪದ್ಧತಿಯೇ ಇಲ್ಲ. ಯಾರಾದರೂ ಇಂತಹ ಕರೆಗಳನ್ನು ಮಾಡಿದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ಮನವಿ ಮಾಡಿದ್ದಾರೆ. ಹೈಟೆಕ್ ವಂಚಕರ ಈ ಚಾಲಾಕಿತನ ಈಗ ಗಡಿ ಜಿಲ್ಲೆಯಲ್ಲಿ ಭಾರೀ ಸಂಚಲನ ಮೂಡಿಸಿದೆ.

ಬಂಟರ ಸಮಾಜದ ಕಾಯಕ ನಿಷ್ಠೆ ದೊಡ್ಡದು: ಬೆಲ್ಲದ



ಹುಬ್ಬಳ್ಳಿ: ನಗರದ ಖಾಸಗಿ ಹೋಟೆಲ್ ಭಾನುವಾರ ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮ ನಡೆಯಿತು.

ಶಾಸಕ ಹಾಗೂ ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಮಾತನಾಡಿ, ಬಂಟರ ಸಮಾಜ ಕಾಯಕ ನಿಷ್ಠೆಯಲ್ಲಿ ದೊಡ್ಡದಿದೆ. ಅವರ ಸಂಸ್ಕೃತಿ ಹಾಗೂ ಸಂಪ್ರದಾಯ ವಿಶಿಷ್ಟವೂ ಇದೆ ಎಂದು ತಿಳಿಸಿದರು.

ಸಮಾಜದವರು ಹಲವು ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ್ದಾರೆ. ಉದ್ಯೋಗ ಮಾಡುವ ಜತೆಗೆ ಇತರರನ್ನು ಬೆಳೆಸುವ ಗುಣ ಅನುಕರಣೀಯ. ನಾಡಿನ ಸಂಸ್ಕೃತಿ, ಹುಬ್ಬಳ್ಳಿ-ಧಾರವಾಡದ ಅಭಿವೃದ್ಧಿಗೂ ಈ ಸಮಾಜದವರ ಕೊಡುಗೆ ಅನನ್ಯವಾದದ್ದು ಎಂದು ಹೇಳಿದರು.

ಶಾಸಕ ಪ್ರಸಾದ ಅಬ್ಬಯ್ಯ ಮಾತನಾಡಿ, ಬಂಟ ಸಮಾಜದವರು ಆರ್ಥಿಕವಾಗಿ ಹಿಂದುಳಿದವರನ್ನು ಮೇಲೆತ್ತುವ ಕೆಲಸವನ್ನು ಮಾಡುತ್ತಿರುವುದು ಇತರ ಸಮಾಜದವರಿಗೆ ಮಾದರಿಯಾಗಿದೆ. ಒಗ್ಗಟ್ಟು ಬಂಟ ಸಮಾಜದ ಯಶಸ್ಸಿನ ಗುಟ್ಟು. ಬಂಟರ ಸಮಾಜ ಉಳಿದ ಸಮಾಜದೊಂದಿಗೆ ಪ್ರೀತಿ, ವಿಶ್ವಾಸದಿಂದ ಇದ್ದಾರೆ. ಈ ಸಮುದಾಯದವರು, ಹೋಟೆಲ್, ನಿರ್ಮಾಣ, ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳಲ್ಲಿ ಯಶಸ್ವಿಯಾಗಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಉದ್ಯಮ ಸ್ಥಾಪಿಸಿದ ಹೆಗ್ಗಳಿಕೆ ಇವರದ್ದು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಮಾತನಾಡಿ, ಬಂಟ ಸಮಾಜದವರು ಶ್ರಮಜೀವಿಗಳು. ಸತ್ಕಾರ್ಯಗಳಿಗೆ ದಾನ ಮಾಡುವುದರಲ್ಲಿ ಈ ಸಮಾಜದವರು ಸದಾ ಮುಂದೆ ಇರುತ್ತಾರೆ. ಬಡ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಣೆ ಮಾಡಿ, ಶಿಕ್ಷಣಕ್ಕೆ ಪ್ರೋತ್ಸಾಹಿಸುತ್ತಿರುವುದು ಉತ್ತಮ ಕಾರ್ಯ ಎಂದು ಹೇಳಿದರು.

ಹುಬ್ಬಳ್ಳಿ-ಧಾರವಾಡ ಬಂಟರ ಸಂಘದ ಅಧ್ಯಕ್ಷ ವಿಜಯಾನಂದ ಶೆಟ್ಟಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಸ್ಥಾಪಕ ಸದಸ್ಯರನ್ನು ಸನ್ಮಾನಿಸಲಾಯಿತು. ಕಟ್ಟೆರೆ ಶಂಕರಶೆಟ್ಟಿ ಸ್ಮರಣಾರ್ಥ 164 ವಿದ್ಯಾರ್ಥಿಗಳಿಗೆ 10 ಲಕ್ಷ ಮೊತ್ತದ ವಿದ್ಯಾರ್ಥಿವೇತನ ವಿತರಿಸಲಾಯಿತು.

ಎಂಆರ್‌ಜಿ ಗ್ರೂಪ್ ಚೇರ್‌ಮನ್ ಕೆ.ಪ್ರಕಾಶ ಶೆಟ್ಟಿ, ಉದ್ಯಮಿ ಪ್ರಸನ್ನ ಶಂಕರ ಶೆಟ್ಟಿ, ಉಪೇಂದ್ರ ಶೆಟ್ಟಿ, ಕೆ.ಸುರೇಶ ಶೆಟ್ಟಿ, ರಾಜೇಂದ್ರ ವಿ.ಶೆಟ್ಟಿ, ಪ್ರದೀಪ ಟಿ.ಪಕ್ಕಳ, ಹರ್ಷಕುಮಾರ ಶೆಟ್ಟಿ, ರತ್ನಾಕರ ಎಂ.ಶೆಟ್ಟಿ ಇದ್ದರು.

ಪ್ರಶಸ್ತಿ ಪ್ರದಾನ

ಸಮಾರೋಪ ಸಮಾರಂಭದಲ್ಲಿ ಆಳ್ವಾಸ್ ಫೌಂಡೇಷನ್ ಅಧ್ಯಕ್ಷ ಎಂ. ಮೋಹನ್ ಆಳ್ವ, ಕೆ.ಪ್ರಕಾಶ ಶೆಟ್ಟಿ, ಯು.ಸೀತಾರಾಮ ಶೆಟ್ಟಿ ಅವರಿಗೆ ಆರ್.ಎನ್.ಶೆಟ್ಟಿ ಸ್ಮಾರಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಘದ ಹಿಂದಿನ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಧಾರವಾಡದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸಂಘದ ಸುವರ್ಣ ಸೌಧ ಕಟ್ಟಡದ ನೀಲನಕ್ಷೆಯನ್ನು ಗಣ್ಯರು ಅನಾವರಣಗೊಳಿಸಿದರು. ವಿಧಾನ ಪರಿಷತ್ ಸಭಾಪತಿ ಬಸವಾಜ ಹೊರಟ್ಟಿ,ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಶಾಸಕರಾದ ಸುರೇಶ ಗುರ್ಮೆ, ಗುರುರಾಜ ಗಂಟಿಹೊಳೆ ಇದ್ದರು.

ರಾಜಾಪೂರ ಬ್ಯಾರೇಜ್‌ನಿಂದ ನೀರು: ಭರ್ತಿಯಾಗುತ್ತಿರುವ ಹಿಪ್ಪರಗಿ ಜಲಾಶಯ



ರಬಕವಿ-ಬನಹಟ್ಟಿ: ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಸಂಜೀವನಿಯಾಗಿರುವ ಹಿಪ್ಪರಗಿ ಜಲಾಶಯ ಸಂಪೂರ್ಣ ಬತ್ತಿ ಹೋಗುವ ಲಕ್ಷಣಗಳು ಗೋಚರಿಸುತ್ತಿರುವಾಗ ಶನಿವಾರ ಸಂಜೆ ಹೊತ್ತು ಮಹಾರಾಷ್ಟ್ರದ ರಾಜಾಪೂರ ಬ್ಯಾರೇಜ್‌ನಿಂದ ನೀರು ಬಿಡುಗಡೆಗೊಂಡಿರುವ ಹಿನ್ನೆಲೆ ಈ ಭಾಗದ ಜನತೆಗೆ ಕೊಂಚ ನಿರಾಳತೆಯಿಂದ ಬೇಸಿಗೆ ನೀಗಿಸುವಲ್ಲಿ ಕಾರಣವಾಗಲಿದೆ.

6 ಟಿಎಂಸಿ ಸಾಮರ್ಥ್ಯ ಹೊಂದಿರುವ ಹಿಪ್ಪರಗಿ ಜಲಾಶಯದಲ್ಲಿ ಕೇವಲ 2.37 ಟಿಎಂಸಿಯಷ್ಟು ಮಾತ್ರ ನೀರು ಇದೆ. ಬ್ಯಾರೇಜ್‌ನಿಂದ ದಿನಂಪ್ರತಿ 10 ರಿಂದ 15 ಸೆಮಿನಷ್ಟು ಅಂದರೆ ದಿನಂಪ್ರತಿ 0.07 ಟಿಎಂಸಿಯಷ್ಟು ನೀರು ಖಾಲಿಯಾಗುತ್ತಿತ್ತು. ಇದೀಗ ಶನಿವಾರದಿಂದ ಪ್ರತಿ ದಿನ 10 ಸೆ.ಮೀ.ನಷ್ಟು ಏರಿಕೆ ಕಂಡಿದೆ. ಈಚೆಗಷ್ಟೇ ನೀರಿನ ಮಟ್ಟ ಕೆಲ ದಿನಗಳಲ್ಲಿ ದಿಢೀರ್ ಆಗಿ ಭಾರೀ ಕುಸಿತ ಕಂಡ ಹಿನ್ನೆಲೆಯಲ್ಲಿ ಜನರಿಗೆ ಬೇಸಿಗೆಯ ಆತಂಕ ಶುರುವಾಗಿತ್ತು. ಇದೇ ರೀತಿ ಪ್ರತಿ ದಿನ ಖಾಲಿಯಾದರೆ ಬೇಸಿಗೆಯ ಕೊನೆಯ ದಿನಗಳಲ್ಲಿ ನೀರಿನ ಭವಣೆ ಎದುರಾಗಲಿದೆಯೆಂಬ ಆತಂಕವೂ ಇತ್ತು. ಇವೆಲ್ಲವೂ ಸದ್ಯಕ್ಕಿಲ್ಲವೆಂಬುದಕ್ಕೆ ಇದೀಗ ಮಹಾರಾಷ್ಟ್ರದಿಂದ ಬಿಟ್ಟ ನೀರು ಕಾರಣವಾಗಿದೆ. ಎಷ್ಟು ಪ್ರಮಾಣದಲ್ಲಿ ನೀರು ಬಿಡುಗಡೆಗೊಳಿಸಿದ್ದಾರೆಂಬುದು ಸ್ಪಷ್ಟ ಮಾಹಿತಿ ದೊರೆತಿಲ್ಲ. ಒಟ್ಟಾರೆಯಾಗಿ ಬೇಸಿಗೆ ನೀಗಿಸಲು ಈ ಭಾಗದ ಜನತೆಗೆ ಸಹಕಾರಿಯಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಪಾಟೀಲಗೆ ಪಿಎಚ್‌ಡಿ



◆ **ಬೆಳಗಾವಿ :** ಆರ್.ಸಿ.ಯು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಬೋಧಕ ಸಹಾಯಕ ಸೋಮನಗೌಡ ಶಂಕರಗೌಡ ಪಾಟೀಲ ಅವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ. ಸೋಮನಗೌಡ ಪಾಟೀಲ ಅವರು ರೀಡಿಂಗ್ ಹ್ಯಾಬಿಟ್ಸ್ ಆಫ್ ದಿ ಸ್ಟುಡೆಂಟ್ಸ್ ಆಫ್ ಪ್ರೀ-ಯುನಿವರ್ಸಿಟಿ ಕಾಲೇಜಸ್ ಆಫ್ ಬೆಳಗಾವಿ ಡಿಸ್ಟ್ರಿಕ್ಟ್: ಎ ಸ್ಟಡಿ ವಿಷಯದ ಕುರಿತಾದ ಸಂಶೋಧನಾ ಮಹಾಪ್ರಬಂಧವನ್ನು ಇತ್ತೀಚೆಗೆ ಆರ್.ಸಿ.ಯುಗೆ ಸಲ್ಲಿಸಿದ್ದರು. ಬೆಳಗಾವಿ ತಾಲೂಕಿನ ಬಸಾಪುರ ಗ್ರಾಮದ ನಿವಾಸಿ ಯಾಗಿದ್ದು, ಇವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರಮೇಶ್ ಬಿ. ಕುರಿ ಅವರು ಮಾರ್ಗದರ್ಶನ ನೀಡಿದ್ದಾರೆ.

ಕಾಂಬಳೆಗೆ ಪಿಎಚ್‌ಡಿ ಪದವಿ



◆ **ಬೆಳಗಾವಿ :** ಲಕ್ಷ್ಮೀ ಯಲ್ಲಪ್ಪ ಕಾಂಬಳೆ ಅವರಿಗೆ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ಪ್ರದಾನಿಸಿದೆ ಗೌರವಿಸಿದೆ. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಸಂಶೋಧನಾ ವಿದ್ಯಾರ್ಥಿನಿಯಾಗಿದ್ದ ಲಕ್ಷ್ಮಿ ಕಾಂಬಳೆ ಅವರು ಪರ್ಸೆಪ್ಷನ್ ಅಬೌಟ್ ಆಂಡ್ ಯುಜ್ ಆಫ್ ಸೋಷಿಯಲ್ ನೆಟ್ವರ್ಕಿಂಗ್ ಸೈಟ್ಸ್ ಬೈ ದಿ ಲೈಬ್ರರಿ ಯುಜರ್ಸ್ ಆಫ್ ಅಗ್ರಿಕಲ್ಚರಲ್ ಯುನಿವರ್ಸಿಟೀಸ್ ಇನ್ ಕರ್ನಾಟಕ: ಅ ಸ್ಟಡಿ ಎಂಬ ಮಹಾಪ್ರಬಂಧವನ್ನು ಇತ್ತೀಚೆಗೆ ಆರ್.ಸಿ.ಯುಗೆ ಸಲ್ಲಿಸಿದ್ದರು. ಬೆಳಗಾವಿ ನಗರ ನಿವಾಸಿ ಆಗಿದ್ದು, ಇವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ವಿನಾಯಕ ಎಂ. ಬಂಕಾಪುರ ಅವರು ಸಂಶೋಧನಾ ಮಾರ್ಗದರ್ಶನ ನೀಡಿದ್ದಾರೆ.

ಇಂದು ಹತ್ತರಗಿ ಜಯಂತಿ



◆ **ಯಮಕನಮರಡಿ :** ಸ್ಥಳೀಯ ಸಾವಿರದ ಎಂಟು ತೀರ್ಥಂಕರ ಜೈನ ಮಂದಿರದಲ್ಲಿ ಮಾ.30ರಂದು ಭಗವಾನ್ ಮಹಾವೀರ ಜಯಂತಿಯನ್ನು ಆಚರಿಸಲಾಗುವುದು. ಹತ್ತರಗಿ ಆನಂದಪುರ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣವಾದ ಜೈನಮಂದಿರದಲ್ಲಿ ಭಗವಾನ್ ಮಹಾವೀರರ ಜಯಂತಿಯನ್ನು ಆಚರಿಸಲಾಗುವುದು ಎಂದು ಉತ್ಸವ ಕಮಿಟಿ ತಿಳಿಸಿದೆ. ವಾದ್ಯ ಮೇಳದೊಂದಿಗೆ ಕುಂಭಮೇರವಣಿಗೆ ಹಾಗೂ ಕುಂಭ ಸವಾಲು ಮಹಾ ಅಭಿಷೇಕ ಇತ್ಯಾದಿ ಕಾರ್ಯಕ್ರಮಗಳು ಜರುಗಲಿವೆ. ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದು ಉತ್ಸವ ಕಮಿಟಿ ತಿಳಿಸಿದೆ.

ವಾಹನ ಡಿಕ್ಕಿ: ಪಾದಚಾರಿ ಸಾವು



◆ **ಸುರೇಬಾನ:** ಸಮೀಪದ ಸಣ್ಣ ಹಂಪಿಹೊಳಿ ಗ್ರಾಮದ ಅಂಗನವಾಡಿ ಹತ್ತಿರ ಅಶೋಕ ಲ್ಯಾನಂಡ್ ಗೂಡ್ಸ್ ವಾಹನ ಹಿಂದೆ ಚಲಾಯಿಸುವಾಗ ವ್ಯಕ್ತಿ ಓರ್ವನು ಮೃತಪಟ್ಟ ಘಟನೆ ಭಾನುವಾರ ಬೆಳಿಗ್ಗೆ ಸಂಭವಿಸಿದೆ. ಸುರೇಬಾನ ಸಮೀಪದ ಸಣ್ಣ ಹಂಪಿಹೊಳಿ ಗ್ರಾಮದ ಹನಮಪ್ಪ ರಾಮಪ್ಪ ಕೊಳಚಿ(82) ಮೃತಪಟ್ಟ ದುರ್ದೈವಿ.ಬೆಳಗಿನ ಜಾವ ಬಹಿರ್ದೆಸೆಗೆಂದು ತೆರಳುತ್ತಿದ್ದಾಗ ಗೂಡ್ಸ್ ವಾಹನ ಚಾಲಕನ ನಿರ್ಲಕ್ಷತನದಿಂದ ಈ ದುರ್ಘಟನೆ ಸಂಭಂವಿಸಿದೆ. ಅಂಗನವಾಡಿ ಹತ್ತಿರ ವ್ಯಕ್ತಿಗೆ ಭಾರಿ ಪ್ರಮಾಣದ ಗಾಯವಾಗಿದ್ದು, ಚಿಕಿತ್ಸೆಗೆಂದು ಬಾಗಲಕೋಟಿ ಖಾಸಗಿ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆಂದು ತಿಳಿದು ಬಂದಿದೆ. ಪ್ರಕರಣ ಸುರೇಬಾನ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ನಿಧನ ಸುದ್ದಿ

ಜೈಬುನ್ನೀಸಾ ನಾಯಕವಾಡಿ



◆ **ಚಿಕ್ಕೋಡಿ:** ಪಟ್ಟಣದ ಡಂಬಳ ಪ್ಲಾಟ್ ನಿವಾಸಿ ಜೈಬುನ್ನೀಸಾ ನಾಯಕವಾಡಿ (71) ಶನಿವಾರ ಆಕಸ್ಮಿಕವಾಗಿ ನಿಧನರಾಗಿದ್ದಾರೆ. ಮೃತರು ಪಂಚಾಯತ್ ರಾಜ್ ಎಂಜಿನಿಯರಿಂಗ್ ಚಿಕ್ಕೋಡಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಬಿ. ಡಿ. ನಾಯಕವಾಡಿ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.



ರಾಯಬಾಗ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ ಅಥಣಿ ಜಿಲ್ಲೆ ವ್ಯಾಪ್ತಿಯ ರಾಯಬಾಗ ಯೋಜನಾ ಕಚೇರಿಯ ಮಾವಿನಹೊಂಡ ಗ್ರಾಮದ ಅನಥೆ 70 ವರ್ಷದ ಲಿಂಬೆವ್ವಾ ಶಿವಪುರೆ ಅವರಿಗೆ ಜ್ಞಾನ ವಿಕಾಸ ಕಾರ್ಯಕ್ರಮದ ಯೋಜನೆಯಡಿಯಲ್ಲಿ ವಾತ್ಸಲ್ಯ ಮನೆ ನಿರ್ಮಿಸಿ ಹಸ್ತಾಂತರ ಮಾಡಲಾಯಿತು.

ಶಿಬಿರಕ್ಕೆ ಸಂಯೋಜನಾಧಿಕಾರಿಗಳ ಭೇಟಿ

◆ **ಮೂಡಲಗಿ :** ರಾಷ್ಟ್ರೀಯ ಸೇವಾ ಯೋಜನೆ ಶಿಬಿರವು ಸ್ವಯಂ ಸೇವಕ ಸೇವಕಿಯರ ವ್ಯಕ್ತಿತ್ವ ವಿಕಸನಕ್ಕೆ ಅವಕಾಶಗಳನ್ನು ನೀಡುತ್ತದೆ. ಅದರ ಸದುಪಯೋಗ ಪಡೆದುಕೊಳ್ಳಿ ಮತ್ತು ಏಳು ದಿನಗಳ ಈ ಶಿಬಿರವು ಯಶಸ್ವಿಯಾಗಲಿ ಎಂದು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಕನಕಪ್ಪ ಪೂಜಾರ ಹೇಳಿದರು.

ಶುಕ್ರವಾರ ತಾಲೂಕಿನ ಧರ್ಮಟ್ಟಿ ಗ್ರಾಮದಲ್ಲಿ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮದರ್ಜೆ ಕಾಲೇಜ್ ಮೂಡಲಗಿಯ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಮಾ.31 ರ ವರೆಗೆ 2025-26 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರಕ್ಕೆ ಭೇಟಿ ನೀಡಿ ಶಿಬಿರದ ಕಾರ್ಯವೈಖರಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಳಗಾವಿ ಜಿಲ್ಲೆಯ ನೋಡಲ್ ಅಧಿಕಾರಿ ಡಾ.ಸಂಜೀವ ತಳವಾರ, ಚಿಕ್ಕೋಡಿ ಜಿಲ್ಲೆ ಪ್ರಭಾರಿ ಸಂಯೋಜನಾಧಿಕಾರಿ ಶಂಕರ ನಿಂಗನೂರರವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮ ಅಧಿಕಾರಿ ಮತ್ತು ಶಿಬಿರಾಧಿಕಾರಿ ರಾಜೇಂದ್ರಪ್ರಸಾದ್ ಆಸಂಗಿ, ಸಹ ಶಿಬಿರಾಧಿಕಾರಿಗಳಾದ ಸರಸ್ವತಿ ರಬಕವಿ, ಹನುಮಂತ ಮರಡ್ಡಿ, ಸದಾಶಿವ ಹೊಸಮನಿ, ಮಹಾವಿದ್ಯಾಲಯದ ಉಪನ್ಯಾಸಕರು, ಧರ್ಮಟ್ಟಿ ಗ್ರಾಮದ ಹಿರಿಯರು ಹಾಗೂ ಶಿಬಿರಾರ್ಥಿಗಳು ಹಾಜರಿದ್ದರು.



ಮೂಡಲಗಿ : ತಾಲೂಕಿನ ಧರ್ಮಟ್ಟಿ ಗ್ರಾಮದಲ್ಲಿ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮದರ್ಜೆ ಕಾಲೇಜ್ ಮೂಡಲಗಿಯ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಮಾ.31 ರ ವರೆಗೆ ನಡೆದ 2025-26 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರಕ್ಕೆ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್ ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಕನಕಪ್ಪ ಪೂಜಾರ ಭೇಟಿ ನೀಡಿ ಶಿಬಿರದ ಕಾರ್ಯವೈಖರಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಸೌಕರ್ಯ ಒದಗಿಸಲು ಪ್ರಯಾಣಿಕರ ಒತ್ತಾಯ

ಮೂಲ ಸೌಲಭ್ಯ ವಂಚಿತ ಬಸ್ ನಿಲ್ದಾಣ

▸ ಎಸ್.ಆರ್.ಗುರುಬಸಣ್ಣವರ

ದಿಗಂತ ವಿಶೇಷ

◆ **ಸುರೇಬಾನ:** ಗ್ರಾಮದಲ್ಲಿ ಇರುವ ಬಸ್ ನಿಲ್ದಾಣವು ದಿನದಿಂದ ದಿನಕ್ಕೆ ಅವ್ಯವಸ್ಥೆಗೆ ಒಳಗಾಗುತ್ತಿದ್ದು, ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಮೂಲ ಸೌಲಭ್ಯಗಳ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಳೆದ ಐದಾರು ತಿಂಗಳುಗಳ ಹಿಂದೆ ವಿಭಾಗೀಯ ಎನ್ ಡಬ್ಲೂಕೆಎಸ್ ಆರ್‌ಟಿಸಿ ನಿಯಂತ್ರಣಾಧಿಕಾರಿ ಭೇಟಿ ನೀಡಿ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದ್ದು, ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಒಮ್ಮುಖವಾಗಿ ಒಂದರ ಹಿಂದೆ ಒಂದರಂತೆ ಸತತ ಮೂರು ಬಸ್‌ಗಳು ಸಂಚರಿಸುತ್ತಿವೆ. ಆನಂತರ ತಾಸುಗಟ್ಟಲೆ ಬಸ್ಸಗಳೇ ಬರುವುದಿಲ್ಲ. ಬಸ್‌ಗಾಗಿ ಪ್ರಯಾಣಿಕರು ಕಾಯುವ ಪರಿಸ್ಥಿತಿ ಬಂದೊದಗಿದೆ. ಈ ನಿಲ್ದಾಣಗಳಲ್ಲೂ ಕೆಲವು ಮಟ್ಟದ ಸೌಲಭ್ಯಗಳಿದ್ದರೂ, ಸುರೇಬಾನ ಭಾಗದ ಸುತ್ತಮುತ್ತಲಿನ 23 ಗ್ರಾಮಗಳಿಂದ ಸಂಚರಿಸುವ ಸಾವಿರಾರು ಪ್ರಯಾಣಿಕರಿಗೆ ಸಮರ್ಪಕ ಸೇವೆ ಸಿಗುತ್ತಿಲ್ಲ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ.

ಜನರ ಆಕ್ರೋಶ: ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಪ್ರತಿದಿನ ಶಾಲೆ, ಕಾಲೇಜು ಮತ್ತು ಉದ್ಯೋಗಕ್ಕೆ ಹೋಗಲು ಈ ಬಸ್ ನಿಲ್ದಾಣದ ಮೇಲೆ ಅವಲಂಬಿತರಾಗಿದ್ದಾರೆ. ಆದರೆ, ಅವ್ಯವಸ್ಥೆಯಿಂದಾಗಿ ಸಮಯ ವ್ಯರ್ಥವಾಗುವುದು ಹಾಗೂ ಸರಿಯಾದ ಸಮಯಕ್ಕೆ ಬಾರದ ಬಸ್ಸಗಳು, ಬಸ್ ನಿಲ್ದಾಣದಲ್ಲಿ ವೇಳಾಪಟ್ಟಿಯ ನಾಮಫಲಕ ಅಳವಡಿಸಿಲ್ಲ. ಬೇಡಿಕೆ: ಶೀಘ್ರದಲ್ಲಿ ಬಸ್ ನಿಲ್ದಾಣ ಅಭಿವೃದ್ಧಿ, ಮಹಿಳೆಯರಿಗೆ ಮತ್ತು ಪುರುಷರಿಗೆ ಶೌಚಾಲಯ ನಿರ್ಮಾಣ, ಶುದ್ಧವಾದ ಕುಡಿಯುವ ನೀರು, ಬಸ್ಸಳ ನಿಯಮಿತ ಸಂಚಾರ ವ್ಯವಸ್ಥೆ, ಸ್ವಚ್ಛತೆಗೆ ಆದ್ಯತೆ ನೀಡುವುದು.

ಒಟ್ಟಿನಲ್ಲಿ ಸುರೇಬಾನ ಬಸ್ ನಿಲ್ದಾಣವು ತಕ್ಷಣದ ಗಮನಕ್ಕೆ ಅರ್ಹವಾಗಿದ್ದು, ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಶೌಚಾಲಯ ಒದಗಿಸಿ

ಮಹಿಳೆಯರಿಗೆ ಸಿದ್ದರಾಮಯ್ಯ ಸರ್ಕಾರ ಉಚಿತ ಬಸ್ ಪ್ರಯಾಣದ ಭಾಗ್ಯ ಕೊಟ್ಟಿದ್ದಾರೆ. ಆದರೆ, ನಮಗೆ ಮಲ-ಮೂತ್ರ ವಿಸರ್ಜನೆ ಮಾಡಬೇಕಾದರೆ ಮರ್ಯಾದೆ ಇಲ್ಲದಂತಾಗಿದೆ. ನಮಗೆ ಶೌಚಾಲಯದ ಭಾಗ್ಯ ಕೊಡಬೇಕಾಗಿದೆ ಎಂದು ಮಹಿಳೆಯರು ಒತ್ತಾಯಿಸಿದ್ದಾರೆ.



ಪ್ರಮುಖ ಸಮಸ್ಯೆಗಳು

- ಬಸ್ ನಿಲ್ದಾಣ ದ್ವಾರದಲ್ಲಿ ಮಲ-ಮೂತ್ರ ವಿಸರ್ಜನೆ ಮಾಡಿರುವುದರಿಂದ ಗಬ್ಬೆದ್ದು ನಾರುತ್ತಿವೆ.
- ಕುಡಿಯುವ ನೀರು ಇಲ್ಲ
- ಮಹಿಳೆಯರಿಗೆ ಪ್ರತ್ಯೇಕ ಶೌಚಾಲವಿಲ್ಲ
- ಸಮರ್ಪಕ ಬಸ್‌ಗಳಿಲ್ಲ.

"ನಾನು ಈಗತಾನೆ ವರ್ಗಾವಣೆಗೊಂಡು ಬಂದಿದ್ದೇನೆ. ಕೆಲವು ಬಸ್ ನಿಲ್ದಾಣಗಳಲ್ಲಿ ಶೌಚಾಲಯವಿಲ್ಲದ್ದು ನನ್ನ ಗಮನಕ್ಕೂ ಬಂದಿದೆ ನಮ್ಮ ಎಮ್.ಡಿ ಅವರೊಂದಿಗೆ ಮಾತನಾಡಿ ಅವರ ಗಮನಕ್ಕೆ ತಂದು ಬೇಗನೆ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುತ್ತೇನೆ.

■ **ನಿತೀನ ಹೆಗಡೆ,** ವಿಭಾಗಿಯ ನಿಯಂತ್ರಣಾಧಿಕಾರಿ ಎನ್ ಡಬ್ಲೂಕೆಎಸ್‌ಆರ್‌ಟಿಸಿ ಧಾರವಾಡ.

"ಈ ಹಿಂದೆ ನಮ್ಮ ಇಲಾಖೆಯ ಡಿ.ಸಿ ಯವರು ಸುರೇಬಾನ ಬಸ್ ನಿಲ್ದಾಣಕ್ಕೆ ಭೇಟಿನೀಡಿದ ಸಂದರ್ಭದಲ್ಲಿ ಪ್ರಯಾಣಿಕರು ಅವರ ಗಮನಕ್ಕೆ ತಂದಿದ್ದಾರೆ. ಮುಂಬರುವ ದಿನಗಳಲ್ಲಿ ರಾಮದುರ್ಗ ತಾಲೂಕಿನ ಸುರೇಬಾನ ಮತ್ತು ಹುಲಕುಂದ ಗ್ರಾಮಗಳಲ್ಲಿನ ಬಸ್ ನಿಲ್ದಾಣಗಳಲ್ಲಿ ಶೌಚಾಲಯದ ವ್ಯವಸ್ಥೆ ಮಾಡಿಸಲು ಕ್ರಮ ಕೈಗೊಳ್ಳುತ್ತೇವೆ.

■ **ಕೆ.ಎಮ್.ಅಮ್ಮಣಗಿ,** ಘಟಕ ವ್ಯವಸ್ಥಾಪಕರು, ರಾಮದುರ್ಗ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



◆ **ಗೋಕಾಕ:** ಇಲ್ಲಿನ ನ್ಯಾಯಾಲಯಗಳ ಸಂಕೀರ್ಣದಲ್ಲಿ ವಕೀಲರ ಸಂಘದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಣೆ ಮಾಡಲಾಯಿತು.

ಪ್ರಧಾನ ಜೆಎಂಎಫ್‌ಸಿ ನ್ಯಾಯಾಧೀಶೆ ಚೈತ್ರಾ ಕುಲಕರ್ಣಿ, ಹಿರಿಯ ದಿವಾಣಿ ನ್ಯಾಯಾಧೀಶ ಮಹಾದೇವ ಕಾನಟ್ಟಿ , ಡಾ. ಕೀರ್ತಿ ಬೀರನಗಡ್ಡಿ ಮತ್ತು ವಕೀಲರ ಸಂಘದ ಅಧ್ಯಕ್ಷ ಎಸ್.ಜಿ. ಬಿ.ಪಾಟೀಲ, ವಕೀಲರ ಸಂಘದ ಪದಾಧಿಕಾರಿಗಳಾದ ವಿ.ವೈ.ಜಾಗನೂರ, ವಿ.ಬಿ.ಮೆಳವಂಕಿ. ಎ.ಬಿ. ಖಂಡ್ರಟ್ಟಿ, ಬಿ.ಐ.ವಡೇರಹಟ್ಟಿ, ವಿ.ಜಿ.ಸಿದ್ದಾಪೂರಮಠ ಮತ್ತಿತರರು ಇದ್ದರು. ಆರತಿ ನಾಡಗೌಡ ಹಾಗೂ ಬಳಗದವರು ಪ್ರಾರ್ಥಿಸಿದರು. ಸಂಗೀತಾ ಬನ್ನೂರ ಪ್ರಾಸ್ತಾವಿಕ ಮಾತನಾಡಿದರು. ಶಂಕರ ಗೋರೋಶಿ ಸ್ವಾಗತಿಸಿದರು. ಪ್ರತಿಭಾ ನಿಂಬಾಳ್ಕರ ನಿರೂಪಿಸಿ, ವಂದಿಸಿದರು.

ಯುನಿವರ್ಸಿಟಿ ಬ್ಲ್ಯೂ ಆಗಿ ಆಯ್ಕೆ





◆ **ಸವದತ್ತಿ:** ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವವಿದ್ಯಾಲಯವು ಸವದತ್ತಿಯ ಕೆಎಲ್‌ಇ ಸಂಸ್ಥೆಯ ಎಸ್‌ವಿಎಸ್ ಬೆಳ್ಳುಬ್ಬಿ ಮಹಾವಿದ್ಯಾಲಯದ ಆವರಣದಲ್ಲಿ ಏರ್ಪಡಿಸಿದ್ದ ಮಹಿಳೆಯರ ಖೋ ಖೋ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಪಟ್ಟಣದ ಕೆಎಲ್‌ಇ ಸಂಸ್ಥೆಯ ಎಸ್ ವಿಎಸ್ ಬೆಳ್ಳುಬ್ಬಿ ಮಹಾವಿದ್ಯಾಲಯದ ಬಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿಗಳಾದ ಪ್ರಿಯಾಂಕ ಬೋವಿ ಮತ್ತು ಪುಷ್ಪಾ ವಟ್ನಾಳ ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆಯಾಗಿದ್ದಾರೆ.ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಏ.1ರಿಂದ 4ರವರೆಗೆ ನಡೆಯುವ ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾಲಯಗಳ ಖೋ ಖೋ ಪಂದ್ಯಾಟದಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಶ್ರೀರಾಮನ ಜೀವನ ದಾರಿದೀಪ

◆ **ತೆಲಸಂಗ:** ರಾಮನು ಶಬರಿಯ ಎಂಜಲು ಹಣ್ಣನ್ನು ಸವಿಯುತ್ತಾನೆ, ನಿಷಾದರಾಜ ಗುಹನನ್ನು ಅಪ್ಪಿಕೊಳ್ಳುತ್ತಾನೆ. ಜಾತಿ-ಮತಗಳ ಸಂಘರ್ಷವಿರುವ ಇಂದಿನ ಸಮಾಜಕ್ಕೆ ರಾಮನ ಈ ಸಮರಸತೆಯ ಗುಣವೇ ನಿಜವಾದ ದಾರಿದೀಪ ಎಂದು ಕೀರ್ತನಕಾರ ವಿಠಲರಾವ ಉಪಾಧ್ಯ ಹೇಳಿದರು.

ಗ್ರಾಮದ ವೆಂಕಟರಮಣ ದೇವಸ್ಥಾನದಲ್ಲಿ ಶನಿವಾರ ರಾತ್ರಿ ರಾಮನವಮಿ ನಿಮಿತ್ತ ಹಮ್ಮಿಕೊಳ್ಳಲಾದ ಕೀರ್ತಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ರಾಮ ಎನ್ನುವ ಎರಡಕ್ಷರ ಕೇವಲ ಹೆಸರಲ್ಲ, ಅದೊಂದು ಸಂಸ್ಕೃತಿ. ರಾಮೋ ವಿಗ್ರಹವಾನ್ ಧರ್ಮಃ ಎಂದರೆ ಧರ್ಮವೇ ಮನುಷ್ಯ ರೂಪ ತಾಳಿ ಬಂದವನು ರಾಮ ಎಂದು ಅರ್ಥ. ಇಂದಿನ ಪ್ರಸ್ತುತ ದಿನಗಳಲ್ಲಿ ರಾಮನ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿದೆ. ಪ್ರಸ್ತುತ ಸಮಾಜಕ್ಕೆ ರಾಮನ ಅವಶ್ಯಕತೆ ಏನು ಎಂದು ಎಲ್ಲರೂ ತಿಳಿಯಬೇಕಿದೆ. ಇಂದಿನ ಸಮಾಜದಲ್ಲಿ ನಂಬಿಕೆ ಮತ್ತು ಪ್ರಾಮಾಣಿಕತೆ ಕಡಿಮೆಯಾಗುತ್ತಿದೆ. ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗಾಗಿ ರಾಜ್ಯವನ್ನೇ ತ್ಯಜಿಸಿದವನು. ಮಾತು ಕೊಟ್ಟರೆ ಪ್ರಾಣ ಹೋದರೂ ಮೀರಬಾರದು ಎಂಬುದು ಇಂದಿನ ಯುವ ಪೀಳಿಗೆಗೆ ಬಹುದೊಡ್ಡ ಪಾಠ. ಅಧಿಕಾರಕ್ಕಾಗಿ ಹಪಹಪಿಸುವ ಇಂದಿನ ಕಾಲದಲ್ಲಿ, ರಾಮನು ಅಧಿಕಾರವನ್ನು ಒಂದು ಸೇವೆಯಾಗಿ ನೋಡಿದನು. ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭಿಪ್ರಾಯಕ್ಕೂ ಬೆಲೆ ಕೊಡುವ ರಾಮರಾಜ್ಯದ ಕಲ್ಪನೆ ಇಂದಿನ ಆಡಳಿತಕ್ಕೆ ಮಾದರಿ.

ಕೀರ್ತನೆಗಳನ್ನು ಕೇಳುವುದರಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ ನಿಜ, ಆದರೆ ಆ ಕೀರ್ತನೆಗಳಲ್ಲಿರುವ ರಾಮನ ಆದರ್ಶಗಳು ನಮ್ಮ ಮನೆಯ ಹೊಸ್ತಿಲು ದಾಟಿ ಸಮಾಜಕ್ಕೆ ಬರಬೇಕು. ಪರಸ್ತ್ರೀಯನ್ನು ಗೌರವಿಸುವುದು, ಕಿರಿಯರನ್ನು ಪ್ರೀತಿಸುವುದು ಮತ್ತು ಸತ್ಯದ ಹಾದಿಯಲ್ಲಿ ನಡೆಯುವುದೇ ನಾವು ರಾಮನಿಗೆ ಸಲ್ಲಿಸುವ ನಿಜವಾದ ಭಕ್ತಿ. ದೇಹವೇ ಅಯೋಧ್ಯೆ, ಆತ್ಮವೇ ರಾಮ ಎಂದು ಭಾವಿಸಿ ನಮ್ಮೊಳಗಿನ ದುರ್ಗುಣಗಳನ್ನು ಸಂಹರಿಸೋಣ. ರಾಮ ಕೇವಲ ಗುಡಿಯಲ್ಲಿರುವ ವಿಗ್ರಹವಾಗದೆ, ನಮ್ಮ ನಡೆಯಾಗಲಿ ಎಂದರು.



1008 ಯುವಕರಿಂದ ಮಹಾಮಸ್ತಕಾಭಿಷೇಕ

◆ **ಹಲ್ಯಾಳ :** ಸಮೀಪ ನಂದಗಾಂವ ಗ್ರಾಮದಲ್ಲಿ ಭಾನುವಾರ ಪ. ಪೂ ಶ್ರೀ 108 ಶ್ರಮಣರತ್ನ ಆಚಾರ್ಯ ಸುಬಲಸಾಗರ ಮುನಿ ಮಹಾರಾಜರ ಧರ್ಮನಗರಿ ನಂದಗಾಂವ ಗ್ರಾಮದಲ್ಲಿ ಭಗವಾನ ಶ್ರೀ 1008 ಮಹಾವೀರ ಸ್ವಾಮಿಯ ಜನ್ಮ ಕಲ್ಯಾಣ ಮಹಾಮಹೋತ್ಸವ ನಿಮಿತ್ತ ಉತ್ತರ ಕರ್ನಾಟಕದ ಇತಿಹಾಸದಲ್ಲಿಯೇ ಮೊದಲ ಬಾರಿಗೆ 1008 ಯುವಕರಿಂದ ಮಹಾಮಸ್ತಕಾಭಿಷೇಕ ಕಾರ್ಯಕ್ರಮವನ್ನು ಬಹಳ ಸಂಭ್ರಮ ಸಡಗರದಿಂದ ನೆರವೇರಿಸಿದರು.

ಬೆಳಿಗ್ಗೆ 8.30 ಕ್ಕೆ ಪ.ಪೂಜ್ಯ ಆಚಾರ್ಯ ರತ್ನ ಬಾಹುಬಲಿ ಮಾಹಾರಾಜರ ಪರಮಶಿಷ್ಯರಾದ ಡಾ.108 ಬಾಲಾಚಾರ್ಯ ಸಿದ್ದಸೇನ ಮುನಿಮಾಹಾರಾಜರ ಪಾವನ ಸಾನಿಧ್ಯದಲ್ಲಿ 1008ಯುವಕರಿಂದ ಮಹಾಮಸ್ತಕಾಭಿಷೇಕ ಜರುಗಿತು.

ಕಾರ್ಯಕ್ರಮದಲ್ಲಿ ಸಮಸ್ತ ಜೈನ ಸಮಾಜ ನಂದಗಾಂವ ಹಾಗೂ ಸುತ್ತಮುತ್ತಲಿನ ಎಲ್ಲ ಜಿಲ್ಲೆ ಹಾಗೂ ತಾಲೂಕುಗಳ ಶ್ರಾವಕ ಶ್ರಾವಕೀಯರು ಅಪಾರ ಸಂಖ್ಯೆಯಲ್ಲಿ ಭಾಗಿಯಾಗಿದ್ದರು. ಈ ವೇಳೆ ಮುತ್ತಣ್ಣ ಕತ್ರಾಳ , ರವಸಾಬ್,ಎ ಬಿ ಪಾಟೀಲ , ಗೋಪು ಸಪ್ತಸಾಗರ್ ,ಸುಕುಮಾರ್ ಬಿ ಪಾಟೀಲ , ಪುಷ್ಪಕ್ ಪಾಟೀಲ , ಪದ್ಮಕುಮಾರ್ ಪಾಟೀಲ , ಶಾಂತಿನಾಥ ನಂದೇಶ್ವರ್ , ನಿಂಗಪ್ಪ ನಂದೇಶ್ವರ್ ಮತ್ತು ಇತರರು ಭಾಗಿಯಾಗಿದ್ದರು.



ಗರ್ಭಕಂಠದ ಕ್ಯಾನ್ಸರ್ ಲಸಿಕಾ ಅಭಿಯಾನಕ್ಕೆ ಚಾಲನೆ

◆ **ಸವದತ್ತಿ:** ಗರ್ಭಕಂಠದ ಕ್ಯಾನ್ಸರ್ ಲಸಿಕಾ ಅಭಿಯಾನಕ್ಕೆ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ. ಎಚ್.ಎಮ್. ಮಲ್ಲನಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗರ್ಭಕಂಠದ ಕ್ಯಾನ್ಸರ್ ಪ್ರಮುಖವಾಗಿ ಹ್ಯೂಮನ್ ಪ್ಯಾಪಿಲೋಮಾ ವೈರಸ್ (ಎಚ್.ಪಿ.ವಿ.) ನಿಂದ ಉಂಟಾಗುತ್ತದೆ. ಲಸಿಕೆಯ ಮೂಲಕ ತಡೆಗಟ್ಟಬಹುದಾದ ಏಕೈಕ ಕ್ಯಾನ್ಸರ್ ಇದಾಗಿದೆ ಎಂಬುದು ಗಮನಾರ್ಹ. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ನಿರ್ದೇಶನದಂತೆ, ಫೆಬ್ರವರಿ 28 ರಿಂದ ರಾಷ್ಟ್ರಮಟ್ಟದಲ್ಲಿ ಈ ಅಭಿಯಾನ ಆರಂಭವಾಗಿದೆ,14 ವರ್ಷ ಪೂರ್ಣಗೊಂಡು 15 ವರ್ಷ ಪೂರ್ಣವಾಗದ (14-15 ವರ್ಷದೊಳಗಿನ) ಹೆಣ್ಣುಮಕ್ಕಳಿಗೆ ಮಾತ್ರ ಲಸಿಕೆ ನೀಡಲಾಗುತ್ತಿದೆ. ಭವಿಷ್ಯದಲ್ಲಿ ಹೆಣ್ಣುಮಕ್ಕಳು ಗರ್ಭಕಂಠದ ಕ್ಯಾನ್ಸರ್‌ನಿಂದ ಮುಕ್ತರಾಗುವಂತೆ ಮಾಡುವುದು ಯೋಜನೆಯ ಉದ್ದೇಶ ಎಂದರು.

ತಾಲೂಕಾ ಆರೋಗ್ಯಾಧಿಕಾರಿ ಡಾ.ಶ್ರೀಪಾದ ಸಬನಿಸ ಮಾತನಾಡಿದರು. ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿ ಮತ್ತು ಶಾಲಾ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಕಂದಾಯ ನೌಕರರ ಕ್ರೀಡಾಕೂಟಕ್ಕೆ ಚಾಲನೆ



◆ **ಬೆಳಗಾವಿ:** ಬೆಳಗಾವಿ ಜಿಲ್ಲಾಡಳಿತದ ವತಿಯಿಂದ ನೆಹರು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 2025-26ನೇ ಸಾಲಿನ ಕಂದಾಯ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿತ್ತು. ಪ್ರಾದೇಶಿಕ ಬೆಳಗಾವಿ ಪ್ರಾದೇಶಿಕ ಆಯುಕ್ತರಾದ ಕೆ. ಎಂ. ಜಾನಕಿ ಅವರು ಕ್ರೀಡಾ ಧ್ವಜಾರೋಹಣ ನೆರವೇರಿಸಿದರು. ಬೆಳಗಾವಿ ನಗರ ಪೊಲೀಸ್ ಆಯುಕ್ತರಾದ ಭೂಷಣ್ ಬೋರಸೆ ಅವರು ಕ್ರೀಡಾ ಜ್ಯೋತಿಯನ್ನು ಬರಮಾಡಿಕೊಂಡರು. ನಂತರ ಕ್ರೀಡಾ ಫಲಕ ಅನಾವರಣಗೊಳಿಸಿ, ಬಲೂನ್ ಹಾರಿಸುವುದರ ಮೂಲಕ ಕ್ರೀಡಾಕೂಟವನ್ನು ಅಧಿಕೃತವಾಗಿ ಉದ್ಘಾಟಿಸಿದರು. ಇದೇ ವೇಳೆ ಕ್ರೀಡಾಕೂಟದ ಶಪಥವನ್ನು ಕೂಡ ಬೋಧಿಸಲಾಯಿತು.ಬಳಿಕ ಬೆಳಗಾವಿ ಆರ್. ಕೆ.ಎಂ ಜಾನಕಿ, ಜಿಲ್ಲಾಧಿಕಾರಿಗಳಾದ ಮೊಹ್ಮದ್ ರೋಷನ್, ಕಮಿಷ್ನರ್ ಭೂಷಣ್ ಬೋರಸೆ, ಎಸ್ಪಿ. ಕೆ. ರಾಮರಾಜನ್ ಅವರು ಸ್ವತಃ ವ್ಯಾಲಿಬಾಲ್ ಆಡುವ ಮೂಲಕ ಕ್ರೀಡಾ ಕೂಟಕ್ಕೆ ಚಾಲನೆಯನ್ನು ನೀಡಿದ್ದು, ವಿಶೇಷವಾಗಿತ್ತು.ಬೆಳಗಾವಿ ಉಪವಿಭಾಗಾಧಿಕಾರಿಗಳಾದ ಶ್ರವಣ ನಾಯ್ಕ ಅವರು ಅತಿಥಿಗಳನ್ನು ಸ್ವಾಗತಿಸಿದರು, ಬೈಲಹೊಂಗ ಉಪವಿಭಾಗಾಧಿಕಾರಿಗಳಾದ ಪ್ರವೀಣ ಜೈನ್ ಅವರು ವಂದಿಸಿದರು.

ಏ.10ರಂದು ರಾಜ್ಯಮಟ್ಟದ ಜನಸಮಾವೇಶ

◆ **ಬೆಳಗಾವಿ :** ಕೆಪಿಎಸ್ ಮ್ಯಾಗ್ನೆಟ್ ಯೋಜನೆ ವಿರೋಧಿಸಿ ಕಳೆದ ನಾಲ್ಕು ತಿಂಗಳುಗಳಿಂದ ನಡೆಯುತ್ತಿರುವ ಹೋರಾಟವನ್ನು ತೀವ್ರಗೊಳಿಸಿ ಸರ್ಕಾರಕ್ಕೆ ಬಿಸಿಮುಟ್ಟಿಸುವ ಉದ್ದೇಶದಿಂದ ಏಪ್ರಿಲ್ 10ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ರಾಜ್ಯ ಮಟ್ಟದ ಜನಸಮಾವೇಶವನ್ನು ಸಂಘಟಿಸಲಾಗಿದೆ.

ಭಾನುವಾರ ಇದರ ಕುರಿತು ನಗರದ ಅಂಬೇಡ್ಕರ್ ಗಾರ್ಡನ್ ನಲ್ಲಿ ಎಐಡಿಎಸ್‌ಓ ಹಾಗೂ ಬೆಳಗಾವಿ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯಿಂದ ಸಮಾವೇಶದ ಪೋಸ್ಟರ್ ಬಿಡುಗಡೆ ಗೊಳಿಸಲಾಯಿತು. ಸಮಿತಿಯ ಸಭೆ ನಡೆಸಿ, ಜಿಲ್ಲೆಯಾದ್ಯಂತ ಸಮಾವೇಶದ ತಯಾರಿ ಕುರಿತು ಯೋಜನೆ ರೂಪಿಸಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರಾದ ರಾಮು ಹನಗಂಡಿ, ಎಐಡಿಎಸ್‌ಓ ಜಿಲ್ಲಾ ಸಂಚಾಲಕರು ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಕಾರ್ಯದರ್ಶಿಗಳಾದ ಮಹಾಂತೇಶ ಬಿಳೂರ್, ಸಮಿತಿಯ ಅಧ್ಯಕ್ಷರಾದ ರಾಮು ಹನಗಂಡಿ, ಕಾರ್ಯದರ್ಶಿ ಮಹಾಂತೇಶ್ ಬೀಳೂರ್, ಸದಸ್ಯರಾದ ಭರಮು ಕುರ್ಲಿ, ರೇಷ್ಮಾ, ಗೌರಿ ಉಣಕಲ್, ರೇಖಾ ಹಂಚಿನಮನಿ, ಸಿದ್ದಪ್ಪ , ಹಾಲಪ್ಪ, ಕಮಲೇಶ ಹಲವರು ಇದ್ದರು.



ತೆಲಸಂಗ ಗ್ರಾಮದಲ್ಲಿ ಸಡಗರದ ಏಕಾದಶಿ



◆ **ತೆಲಸಂಗ:** ಗ್ರಾಮದ ಆರಾಧ್ಯ ದೈವ ವೆಂಕಟರಮಣ ದೇವಸ್ಥಾನಗಳಲ್ಲಿ ಏಕಾದಶಿ ನಿಮಿತ್ತ ಭಾನುವಾರ ಅತ್ಯಂತ ಸಡಗರ-ಸಂಭ್ರಮದಿಂದ ಪಲ್ಲಕ್ಕಿ ಸೇವೆ ಮತ್ತು ಗ್ರಾಮ ಪ್ರದಕ್ಷಿಣೆ ಕಾರ್ಯಕ್ರಮ ಜರುಗಿತು.

ಭಾನುವಾರ ಏಕಾದಶಿಯ ಪವಿತ್ರ ದಿನದಂದು ಮುಂಜಾನೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕ ಕಾರ್ಯಕ್ರಮಗಳು ನಡೆದವು. ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ದೇವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭದಲ್ಲಿ ಗ್ರಾಮಸ್ಥರು ತಮ್ಮ ಮನೆಗಳ ಮುಂದೆ ರಂಗೋಲಿ ಹಾಕಿ, ದೇವರಿಗೆ ನೈವೇದ್ಯ ಅರ್ಪಿಸಿ ಭಕ್ತಿ ಸಮರ್ಪಿಸಿದರು. ಮೆರವಣಿಗೆಯ ಉದ್ದಕ್ಕೂ ಭಜನಾ ಮಂಡಳಿಗಳಿಂದ ಹರಿನಾಮ ಸಂಕೀರ್ತನೆ, ತಮಟೆ ಹಾಗೂ ವಾದ್ಯಗೋಷ್ಠಿಗಳು ಭಕ್ತರ ಗಮನ ಸೆಳೆದವು. ಕಾರ್ಯಕ್ರಮದಲ್ಲಿ ನೂರಾರು ಭಕ್ತಾದಿಗಳು ಪಾಲ್ಗೊಂಡು ಪುನೀತರಾದರು. ಪಲ್ಲಕ್ಕಿ ಉತ್ಸವದ ನಂತರ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಮಹಾಪ್ರಸಾದ ವಿನಿಯೋಗಿಸಲಾಯಿತು. ಗ್ರಾಮದ ಹಿರಿಯರು ಹಾಗೂ ಯುವಕರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

ನಿವೃತ್ತ ಯೋಧನಿಗೆ ಅದ್ದೂರಿ ಸ್ವಾಗತ

◆ **ಹಲ್ಯಾಳ :** ಸಮೀಪದ ಸಪ್ತಸಾಗರ ಗ್ರಾಮಕ್ಕೆ ನಿವೃತ್ತಿ ಹೊಂದಿ ಆಗಮಿಸಿದ ಯೋಧ ಮಹೇಂದ್ರ ಮನೋಹರ್ ದುರದಂಡಿ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು. ಭಾರತೀಯ ಸೈನ್ಯದಲ್ಲಿ ಸುದೀರ್ಘ 17 ವರ್ಷಗಳ ಕಾಲ ಸೇವೆ ಮಾಡಿ ಸಪ್ತಸಾಗರ ಗ್ರಾಮಕ್ಕೆ ಆಗಮಿಸಿದ ಯೋಧ ಸೀಮೆ ಲಕ್ಕವ್ವ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದರು,

ನಂತರ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಯುವಕರ ಬೈಕ್ ರ್‍ಯಾಲಿ, ಧ್ವನಿ ವರ್ಧಕದಿಂದ ದೇಶಭಿಮಾನದ ಗೀತೆಯಿಂದ ನಿವೃತ್ತ ಯೋಧನಿಗೆ ಗೌರವ ಸಲ್ಲಿಸಲಾಯಿತು.ಸಪ್ತಸಾಗರ ಬಸವೇಶ್ವರ ಸರ್ಕಲ್ ದಲ್ಲಿ ವಿಶ್ವಗುರು ಬಸವಣ್ಣ ಅವರಿಗೆ ಮಾಲಾರ್ಪಣೆ ಮಾಡಿ ಮೆರವಣಿಗೆಯು ಊರಿನೊಳಗೆ ಸಾಗಿತು. ಎಲ್ಲರೂ ಪುಷ್ಪವೃಷ್ಟಿ ಸುರಿಸಿದರು. ಭಾರತ್ ಮಾತಾ ಕಿ ಜೈ ಎಂಬ ಘೋಷ ವಾಕ್ಯ ಎಲ್ಲೆಡೆ ಪ್ರತಿಧ್ವನಿಸಿದವು.ಈ ವೇಳೆ ಗ್ರಾಮಸ್ಥರು , ಹಿರಿಯರು, ರಾಜಕೀಯ ಮುಖಂಡರು, ಪ್ರಗತಿಪರ ರೈತರು, ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷ ಉಪಾಧ್ಯಕ್ಷ ಸರ್ವ ಸದಸ್ಯರು, ಹಾಗೂ ಎಲ್ಲಾ ನನ್ನ ಭವ್ಯ ಭಾರತದ ಮೆಚ್ಚಿನ ಯುವಕರು. ಈ ಮೆರವಣಿಗೆಯ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಕಿರುಸುದ್ದಿ

ಮಾ.31ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

ಚಿಕ್ಕೋಡಿ: ಪಟ್ಟಣದ ಹರಿನಗರ ಬಡಾವಣೆಯ ಪ್ರಸನ್ನಾಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತಿ ನಿಮಿತ್ಯ ಮಾ.31 ರಿಂದ ಏ.2ರವರೆಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಾ. 31ರಂದು ಸಂಜೆ 4ಕ್ಕೆ ಆಹಾರ ಮೇಳ, ಏ.1ರಂದು ಸಂಜೆ 4ಕ್ಕೆ ಭಕ್ತಿಗಾಯನ ಹಾಗೂ ಭಕ್ತಿ ನೃತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಏ.2ರಂದು ಬೆಳಿಗ್ಗೆ ಅಭಿಷೇಕ, ನಾಮಕರಣ, ಪಲ್ಲಕ್ಕಿ ಉತ್ತವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಮಧ್ಯಾಹ್ನ 12.30ಕ್ಕೆ ಮಹಾಪ್ರಸಾದ, ಸಂಜೆ 6ಕ್ಕೆ ಭಕ್ತಿ ಸಂಗೀತ ಸೌರಭ, ರಾತ್ರಿ 7ಕ್ಕೆ ವೀರೇಶ ಪಾಟೀಲರಿಂದ ಆಧ್ಯಾತ್ಮಿಕ ಚಿಂತನ ಕಾರ್ಯಕ್ರಮ ಜರುಗಲಿವೆ ಎಂದು ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ಹಾರೂಗೇರಿ: ಪಟ್ಟಣದ ಅಂಗನವಾಡಿ ಕೇಂದ್ರದಲ್ಲಿ 30 ವರ್ಷ ಸೇವೆ ಭಾರತಿ ಎಸ್ ಬಸ್ತವಾಡ (ಕಟ್ಟಿ) ಅವರ ಸೇವೆ ಸಲ್ಲಿಸುವುದನ್ನು ಹಾಗೂ ಸಮಾಜ ಸೇವೆಯನ್ನು ಗುರುತಿಸಿ ಅಥಣಿಯ ಸುಕಣ್ಯಾ ವೃದ್ಧಾಶ್ರಮದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಸಮಾರಂಭದಲ್ಲಿ ಸಮಾಜ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಿಭಾ ಕಾವ್ಯ ಪುರಸ್ಕಾರ

ಚಿಕ್ಕೋಡಿ: ತಾಲೂಕಿನ ಮಾಂಗನೂರತೋಟದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ, ಕವಿ ಶಿವರಾಜ ಅರಳಿ ಅವರ ಕಣ್ಣ ಬಾನಲ್ಲಿ ಬೆಂಕಿಯ ಚಿತ್ರ ಕೃತಿಗೆ 2025ನೇ ಸಾಲಿನ ಶಿಭಾ ಕಾವ್ಯ ಪುರಸ್ಕಾರ ದೊರೆತಿದೆ.



ತಾಲೂಕಿನ ವಡಗೋಲ ಗ್ರಾಮದ ಸಾಹಿತ್ಯ ಸೌರಭ ಫೌಂಡೇಶನ್ ಕೊಡಮಾಡುವ ಕಾವ್ಯ ಪುರಸ್ಕಾರ ಸ್ಮರಣಿಕೆ, ಪ್ರಶಸ್ತಿ ಪತ್ರ ಹಾಗೂ ಪುಸ್ತಕಗಳನ್ನು ಒಳಗೊಂಡಿದೆ. ಮೇ 1, 2026ರಂದು ಬೆಳಗಾವಿಯ ಕನ್ನಡ ಭವನದಲ್ಲಿ ನಡೆಯುವ ಫೌಂಡೇಶನ್ ನ 2ನೇ ವರ್ಷದ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಅಧ್ಯಾತ್ಮದಿಂದ ನೆಮ್ಮದಿ

ಗೋಕಾಕ: ನೆಮ್ಮದಿಯ ಜೀವನಕ್ಕೆ ಅಧ್ಯಾತ್ಮ ಸರಳ ಮಾರ್ಗವಾಗಿದೆ ಎಂದು ಬೆಂಗಳೂರಿನ ಬಸವ ಧರ್ಮ ಪೀಠದ ವಿಜಯಾಂಬಿಕಾ ಮಾತಾಜಿ ಹೇಳಿದರು.ಅವರು, ರವಿವಾರದಂದು ನಗರದ ಬಸವ ಮಂದಿರದಲ್ಲಿ ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಮಹಿಳಾ ಘಟಕ ಗೋಕಾಕ ಹಮ್ಮಿಕೊಂಡ ಬಸವ ಧರ್ಮ ಸಂಸ್ಕಾರ ಶಿಬಿರದ ನೇತ್ರತ್ವ ವಹಿಸಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ನೀಡಿದ ಇಷ್ಟಲಿಂಗ ಪೂಜೆಯನ್ನು ಪ್ರತಿ ದಿನ ಪೂಜಿಸಿ ಸದಾ ನೆಮ್ಮದಿ ಹಾಗೂ ಆನಂದದಿಂದ ಇರುವಂತೆ ತಿಳಿಸಿದರು.ರತ್ನಾ ಉದೋಶಿಯವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಬಣಜಿಗ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಮಹಾದೇವಿ ಉಪ್ಪಿನ ವಹಿಸಿದ್ದರು.ಈ ಸಂದರ್ಭದಲ್ಲಿ ರೇಖಾ ಕಲ್ಯಾಣಶೆಟ್ಟಿ, ಶೀಲಾ ಮಹಾಂತಶೆಟ್ಟಿ, ಹರ್ಷಿತಾ ಸವಣೂರ, ದೀಪಾ ಬೆಲ್ಲದ, ಶೈಲಾ ಬಿದರಿ ಇದ್ದರು.

ಸಂದೀಪ ಹರಿಹರ ನಿಧನ

ಚಿಕ್ಕೋಡಿ: ಪಟ್ಟಣದ ಪ್ರಭುವಾಡಿ ಬಡಾವಣೆಯ ನಿವಾಸಿ, ಹಿರಿಯ ಪತ್ರಿಕಾ ವಿತರಕ ಸಂದೀಪ ಪುಂಡಲೀಕ ಹರಿಹರ (44) ಶನಿವಾರ ನಿಧನರಾದರು. ಮೃತರು ತಂದೆ, ತಾಯಿ, ಹೊಸದಿಗಂತ ಪತ್ರಿಕಾ ವಿತರಕ ದಿಲೀಪ ಹರಿಹರ ಸೇರಿದಂತೆ ಇಬ್ಬರು ಸಹೋದರರು, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.





ಗೋಕಾಕ: ನಗರದ ಬಸವ ಮಂದಿರದಲ್ಲಿ ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಮಹಿಳಾ ಘಟಕ ಗೋಕಾಕ ಹಮ್ಮಿಕೊಂಡ ಬಸವ ಧರ್ಮ ಸಂಸ್ಕಾರ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಕಾಯಕದಿಂದ ನಾಯಕನ ನಿರ್ಮಾಣ

ಕುಡಚಿ: ಎನ್‌ಎಸ್‌ಎಸ್ ಬದುಕಲು ಕಲಿಸುವ ಗರಡಿ ಮನೆ ಇದ್ದಂತೆ ಎಂದು ಹಾರೂಗೇರಿಯ ಶ್ರೀ ಸಿದ್ದೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಟಿ.ಎಸ್. ಒಂಟಗೂಡಿ ಹೇಳಿದರು. ಸಮೀಪದ ಗುಂಡವಾಡ ಗ್ರಾಮದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ಡಾ ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಬಿ ಶಂಕರಾನಂದ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಕುಡಚಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆ ಘಟಕ 2025 26ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರದ ಎರಡನೇ ದಿನದ ನನ್ನ ಭಾರತಕ್ಕಾಗಿ ಯುವಕರು ಶೀರ್ಷಿಕೆ ಸಮಾರಂಭದಲ್ಲಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರ ವಾಣಿಯಂತೆ ಯುವಕರು ಸದೃಢ ಭಾರತವನ್ನು ಕಟ್ಟಬಲ್ಲರು. ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಕಾಯಕ ಮಾಡುವವನೇ ನಾಯಕನಾಗುತ್ತಾನೆ ಎಂದರು. ತಾಲೂಕು ಪಂಚಾಯತ್ ಸದಸ್ಯರಾದ ಸುಕುಮಾರಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಗೌರವ ಅತಿಥಿಗಳಾಗಿ ಪರಗೌಡ ಪಾಟೀಲ, ದೇವಗೌಡ ಪಾಟೀಲ, ಪಾರಿಸ್ ಪಾಟೀಲ, ಸುರೇಶ ಪಾಟೀಲ್ ಬರಮಪ್ಪ ಪಾಟೀಲ, ಶ್ರೀಮಂತ ಗಸ್ತಿ, ಎಸ್. ಪಿ. ಸೈದಾಪೂರ, ಎ.ಎಸ್ ಕಾಂಬಳೆ, ಬಾ. ಎಸ್. ಬಿ. ಕಲ್ಲೋಳಕರ, ಪ್ರೋ. ಶೋಭಾ ಕೊಕಟನೂರ್ ಡಾ. ಎಸ್ ಎ ಬೆಳಗಲಿ. ಸುಪ್ರಿಯಾ ಮುಚಂಡ್ಡಿ ಏನ್ ಎಸ್ ಎಸ್ ಕಾರ್ಯಕ್ರಮದ ಅಧಿಕಾರಿ ಆರ.ಎಂ. ಮಹೇಶವಾಡಗಿ, ಶಿಬಿರಾರ್ಥಿ ಗಳು ಇದ್ದರು.

ಪ್ರತೀಕ್ಷಾ ಕಾಂಬ್ಳೆ ಸ್ವಾಗತಿಸಿದರು, ಸೃಷ್ಟಿ ಪುಲಾರೆ ನಿರೂಪಿಸಿದರು ರೇಷ್ಮಾ ಕಾಂಬಳೆ ವಂದಿಸಿದರು.



ಕುಡುಚಿ: ಸಮೀಪದ ಗುಂಡವಾಡ ಗ್ರಾಮದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ಡಾ ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಬಿ ಶಂಕರಾನಂದ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಕುಡಚಿ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ 2025 26ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರದ ಎರಡನೇ ದಿನದ ನನ್ನ ಭಾರತಕ್ಕಾಗಿ ಯುವಕರು ಶೀರ್ಷಿಕೆ ಸಮಾರಂಭ ನಡೆಯಿತು.

ಕಾರ್ಯಕರ್ತೆಯರು ಸ್ವಚ್ಛತೆಗೆ ಆದ್ಯತೆ ನೀಡಿ



ರಾಮದುರ್ಗ: ಭವಿಷ್ಯದ ಪ್ರಜೆಗಳಿಗೆ ಮಧ್ಯಾಹ್ನದ ಬಿಸಿಯೂಟ ತಯಾರಿಸುವ ಕಾರ್ಯ ಮಾಡುವ ಕಾರ್ಯಕರ್ತೆಯರು ಅಡುಗೆ ಮಾಡುವ ಸಂದರ್ಭದಲ್ಲಿ ಸ್ವಚ್ಛತೆ ಕಾಪಾಡುವ ಮೂಲಕ ಗುಣಮಟ್ಟದ ಆಹಾರ ನೀಡಲು ಶ್ರಮಿಸಬೇಕು ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ಭಾನುವಾರ ಪಟ್ಟಣದ ಗುರುಭವನದಲ್ಲಿ ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ ((ಮಧ್ಯಾಹ್ನ ಉಪಹಾರ ಯೋಜನೆ) ಹಾಗೂ ತಾಲೂಕಾ ಪಂಚಾಯತ ಸಹಯೋಗದಲ್ಲಿ ಆಯೋಜಿಸಿದ್ದ ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ ಯಶಸ್ವಿ ಅನುಷ್ಠಾನಕ್ಕಾಗಿ 2025-26ನೇ ಸಾಲಿನ ತಾಲೂಕಿನ ಎಲ್ಲ ಅಡುಗೆ ಸಿಬ್ಬಂದಿಗೆ ಒಂದು ದಿನದ ತರಬೇತಿ ಕಾರ್ಯಾಗಾರ, ನಿವೃತ್ತಿ ಹೊಂದಿದ ಅಡುಗೆ ಸಿಬ್ಬಂದಿಗೆ ಇಡಗಂಟು ವಿತರಣಾ ಹಾಗೂ ಅಡುಗೆ ಸಿಬ್ಬಂದಿ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿಶೇಷವಾಗಿ ಅಡುಗೆ ತಯಾರಿಸುವ ಮೊದಲು ಕಾಯಿಪಲ್ಲೆಗಳನ್ನು ಸ್ವಚ್ಛಗೊಳಿಸಬೇಕು ಏಕೆಂದರೆ ಕಾಯಿಪಲ್ಲೆ ಹಾಳಾಗದಂತೆ ಔಷಧಿ ಸಿಂಪರಣೆ ಮಾಡುತ್ತಿದ್ದು, ಪ್ರತಿಸಲು ಸ್ವಚ್ಛಗೊಳಿಸಬೇಕು ಎಂದರು.

ಸರ್ಕಾರಿ ಶಾಲೆಗೆ ಬಡವರ ಮಕ್ಕಳು ಬರುತ್ತಾರೆ ಶಾಲೆಗೆ ಬರುವವರೆಲ್ಲ ನಿಮ್ಮ ಮಕ್ಕಳು ಎಂದು ತಿಳಿದು ಶುದ್ಧ ಮತ್ತು ಸ್ವಚ್ಛವಾದ ಅಡುಗೆ ತಯಾರಿಸಬೇಕು ಎಂದು ಸಲಹೆ ನೀಡಿದ ಅಶೋಕ ಪಟ್ಟಣ ಸರ್ಕಾರ ಸರ್ಕಾರಿ ಶಾಲೆಗಳ ಮಕ್ಕಳಿಗೆ ಊಟ, ಉಪಹಾರ, ಹಾಲು ಮತ್ತು ಪೌಷ್ಠಿಕಾಶಗಳ ಜೊತೆಗೆ ಪುಸ್ತಕ, ಸಮವಸ್ತ್ರ ನೀಡಿದರು ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚುತ್ತಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ, ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ, ಕಾಂಬಳೆ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ. ಎಸ್. ನಿಜಗುಲಿ, ಜಿಲ್ಲಾ ಕಾರ್ಯದರ್ಶಿ ಎಸ್. ವಿ. ಪಾಟೀಲ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಕೆ. ಎನ್. ಯಡ್ರಾಂವಿ, ಅಕ್ಷರ ದಾಸೋಹ ಅಡುಗೆದಾರರ ಸಂಘದ ತಾಲೂಕಾ ಅಧ್ಯಕ್ಷೆ ತುಳಸಾಬಾಯಿ ಮಾಳದಕರ ಸೇರಿದಂತೆ ಹಲವರಿದ್ದರು.

ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ರಾಜಶೇಖರ ಹಿರೇಮಠ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರು ಕಲ್ಲೂರ ನಿರೂಪಿಸಿದರು.

ರಕ್ತದಾನ ಪವಿತ್ರ ಕೆಲಸ: ಡಾ.ವಿಠ್ಠಲ ಮಾನೆ

ಸವದತ್ತಿ: ಅನ್ನದಾನ, ವಿದ್ಯಾದಾನಗಳಂತೆ ರಕ್ತದಾನವು ಒಂದು ಪವಿತ್ರ ಕೆಲಸ. ಒಂದು ಬಾರಿ ರಕ್ತದಾನ ಮಾಡಿದರೆ ಮೂರು ಜನರ ಪ್ರಾಣ ಉಳಿಸಿದಂತೆ. ಪ್ರತಿಯೊಬ್ಬ ವ್ಯಕ್ತಿ ಮೂರು ತಿಂಗಳಿಗೆ ಒಂದು ಬಾರಿಯಂತೆ ವರ್ಷಕ್ಕೆ ನಾಲ್ಕು ಸಲ ರಕ್ತದಾನ ಮಾಡುವುದರಿಂದ ಹನ್ನೆರಡು ಜನರಿಗೆ ಜೀವದಾನ ಮಾಡಿದ ಶ್ರೇಯಸ್ಸು ಲಭಿಸುತ್ತದೆ ಎಂದು ಬೆಳಗಾವಿಯ ಕೆ.ಎಲ್ .ಇ.ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆಯ ಆರೋಗ್ಯಾಧಿಕಾರಿಗಳಾದ ಡಾ.ವಿಠ್ಠಲ ಮಾನೆ ಹೇಳಿದರು.

ಇಲ್ಲಿನ ಕೆ.ಎಲ್.ಇ.ಸಂಸ್ಥೆಯ ಎಸ್ .ವಿ.ಎಸ್.ಬೆಳ್ಳುಬ್ಬಿ ಮಹಾವಿದ್ಯಾಲಯದ ಯೂತ್ ರೆಡ್ ಕ್ರಾಸ್ ಘಟಕ, ರೆಡ್ ರಿಬ್ಬನ್ ಕ್ಲಬ್, ಎನ್.ಎಸ್.ಎಸ್. ಘಟಕ ಮತ್ತು ಬೆಳಗಾವಿಯ ಕೆ.ಎಲ್ .ಇ.ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆಯ ಸಹಯೋಗದಲ್ಲಿ ಕೆ.ಎಲ್ .ಇ.ಸಂಸ್ಥೆಯ ಎಸ್.ವಿ.ಎಸ್.ಬೆಳ್ಳುಬ್ಬಿ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿದರು.

ರಕ್ತದಾನದಿಂದ ನಮ್ಮ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂದರು.

34 ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ರಕ್ತದಾನ ಮಾಡಿದರು.

ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಎನ್.ಆರ್.ಸವತಿಕರ ವಹಿಸಿದ್ದರು. ಈ ವೇಳೆ ಬೆಳಗಾವಿಯ ಕೆ.ಎಲ್.ಇ.ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆಯ ವೈದ್ಯರಾದ ಡಾ.ಗಂಗಾಧರ, ಡಾ.ಕ್ರಿನಾ ಮೆಹತಾ, ಸಾರ್ವಜನಿಕ ಸಂಪರ್ಕಾಧಿಕಾರಿ ರಮೇಶ್, ತಾಂತ್ರಿಕ ಸಿಬ್ಬಂದಿ ಅಮಿತ್, ಪ್ರಜ್ವಲ್, ಆರೋಗ್ಯ ಸಹಾಯಕರಾದ ಸುಮಂಗಲಾ, ಶೋಭಾ, ಸಂಗೀತಾ ಮತ್ತು ದೀಪಕ್, ರುದ್ರಪ್ಪ ಹಾಗೂ ವಿ.ಎಸ್.ಮೀಶಿ, ಶಿವಾನಂದ ಹೊಳಿ, ಮೋಹನ್ ಬೆಣಚಮರ್ಡಿ, ಎಂ.ಎನ್. ಸಂಗೊಳ್ಳಿ, ಪ್ರೊ. ಕೆ.ರಾಮರೆಡ್ಡಿ, ಅಶೋಕ ವಿಘ್ನೇಶಿ, ಭಾಗ್ಯಶ್ರೀ ಪೊಲೇಶಿ, ಅಮೃತ ಹೂಗಾರ, ಡಾ.ಎನ್.ಎ.ಕೌಜಗೇರಿ, ಎಂ.ಸಿ.ಹಾದಿಮನಿ, ಜಿ.ಐ.ಮಲ್ಲಾಪುರ, ಸುನಂದಾ ಹಟ್ಟಿ, ಕೆ.ಬಿ.ನರಗುಂದ, ಎಸ್.ಜೆ.ಮಜ್ಜಗಿ, ಎ.ಎಸ್.ಪಮ್ಮಾರ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕಿರಣ ರಾಣವಗೋಳ ಎಸ್‌ಗೆ ಪಿಎಚ್‌ಡಿ



ಬೆಳಗಾವಿ : ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಕಿರಣ ರಾಣವಗೋಳ ಎಸ್ ಅವರಿಗೆ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹ-ಪ್ರಾಧ್ಯಾಪಕರಾದ ಡಾ. ಕಿರಣ ಪಿ. ಸವಣೂರ ಅವರ ಮಾರ್ಗದರ್ಶನದಲ್ಲಿ, ಕಿರಣ ರಾವಳಗೋಳ ಎಸ್ ಅವರು ಇತ್ತೀಚೆಗೆ ಇನ್ಫಾರ್ಮೇಷನ್ ಗ್ಯಾದರಿಂಗ್ ಸ್ಕಿಲ್ಸ್ ಅಮಾಂಗ ಟ್ರೆಡಿಷನಲ್ ಮೆಡಿಸಿನ್ ಪ್ರಾಕ್ಟಿಷನರಸ್ ಇನ್ ವಿಜಯಪುರ ಡಿಸ್ಟ್ರಿಕ್ಟ್, ಕರ್ನಾಟಕ: ಆ್ಯನ್ ಎಕ್ಸ್‌ಪ್ಲೋರೇಟರಿ ಸ್ಟಡಿ ಎಂಬ ವಿಷಯದ ಕುರಿತಾಗಿ ಸಂಶೋಧನಾ ಮಹಾಪ್ರಬಂಧ ಆರ್.ಸಿ.ಯುಗೆ ಸಲ್ಲಿಸಿದ್ದರು. ಕಿರಣ ಅವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಡೋಣವಾಡ ಗ್ರಾಮದ ನಿವಾಸಿಯಾಗಿದ್ದಾರೆ.

ಶಾಂಭವಿ ಶ್ರೀ ಪ್ರಶಸ್ತಿ ಪ್ರದಾನ

ಬೈಲಹೊಂಗಲ: ಪಟ್ಟಣದ ಬಸವ ನಗರದ ಶ್ರೀ ಮಾತಾ ದುರ್ಗಾಪರಮೇಶ್ವರಿ ದೇವಸ್ಥಾನದ 17ನೇ ವರ್ಷದ ಜಾತ್ರಾ ಮಹೋತ್ಸವದ ಮೂರನೇ ದಿನದ ಕಾರ್ಯಕ್ರಮ ಭಕ್ತಿಭಾವ, ಸಾಂಸ್ಕೃತಿಕ ವೈಭವ ಹಾಗೂ ಆಧ್ಯಾತ್ಮಿಕ ಮೆರುಗುಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಹಾಗೂ ಶಾಂಭವಿ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ವಿಶೇಷ ಆಕರ್ಷಣೆಯಾಯಿತು. ಈ ವೇಳೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಬಳಗದ ಅಧ್ಯಕ್ಷ ಸುರೇಶ್ ಗೋಕಾಕ್ ಅವರಿಗೆ ಶಾಂಭವಿ ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಯುವ ಮುಖಂಡ ಸನತ್ ಜಾರಕಿಹೊಳಿ, ಧಾರ್ಮಿಕ ದತ್ತಿ ಇಲಾಖೆಯ ನಿರ್ದೇಶಕ ಡಾ. ಮಹಾಂತೇಶ ಶಾಸ್ತ್ರೀ ಆರಾದ್ರಿಮಠ ಮಾತನಾಡಿದರು. ದಿಕ್ಸೂಚಿ ಭಾಷಣಕಾರಿಯಾದ ಹಾರಿಕಾ ಮಂಜುನಾಥ ಮಾತನಾಡಿದರು.

ಖ್ಯಾತ ಗಾಯಕರಾದ ತರುಣ್ ಸುಧೀರ್ -ಸೋನಲ್ ದಂಪತಿ ಗ್ರಾಮೀಣ ಜಾತ್ರೆಗಳು ನಿಜವಾದ ಸಾಂಸ್ಕೃತಿಕ ವೇದಿಕೆಗಳಾಗಿವೆ ಎಂದು ಅಭಿಪ್ರಾಯಪಟ್ಟರು.

ಹುಬ್ಬಳ್ಳಿಯ ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಉಪಾಧ್ಯಕ್ಷ ಮಹಾಂತೇಶ ತುರಮರಿ, ಕಲಾವಿದ ಸಿ.ಕೆ.ಮೆಕ್ಕೆದ, ದಿಲೀಪ ಕುರಂದವಾಡಿ, ದೀಪಕ್ ಗುಡಗನಟ್ಟಿ, ಮುಕ್ತಾರ ಪಠಾನ್, ಜಗದೀಶ ಗೋಕಾಕ್, ವಿಠ್ಠಲ್ ಕಡಕೋಳ, ಶಿವರಾಜ್ ಪಟ್ಟಣಶೆಟ್ಟಿ, ಬಿ.ಬಿ. ಬೋಗುರು, ಸುನಿಲ್ ವರ್ಣೇಕರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಂಗವಾಗಿ ಉತ್ತರ ಕರ್ನಾಟಕದ ಜಾನಪದ ಕಲಾವಿದರು ತಮ್ಮ ಮನೋಹರ ಪ್ರದರ್ಶನಗಳಿಂದ ಪ್ರೇಕ್ಷಕರ ಮನರಂಜಿಸಿದರು. ಮ್ಯೂಸಿಕ್ ಮೈಲಾರಿ ವೀರು, ಜಮಖಂಡಿ ರಾಕ್ ಸ್ಟಾರ್ ಜ್ಯೋತಿ, ತೃಪ್ತಿ ಧಾರವಾಡ ಮತ್ತು ಲಕ್ಷ್ಮಿ ಬಿಜಾಪುರ ಅವರ ಜಾನಪದ ಹಾಡುಗಳು ವಿಶೇಷ ಮೆಚ್ಚುಗೆ ಗಳಿಸಿವೆ.



ಎಲ್ಲಕ್ಕಿಂತ ಶಿಕ್ಷಕ ವೃತ್ತಿ ಶ್ರೇಷ್ಠ

ಕಾಗವಾಡ: ಜಗತ್ತಿನ ಮುಂದುವರಿದ ರಾಷ್ಟಗಳಲ್ಲಿ ಶಿಕ್ಷಣ ಮೊದಲನೇ ಸ್ಥಾನವಿದೆ. ಎಲ್ಲ ವೃತ್ತಿಗಳಿಗಿಂತ ಶಿಕ್ಷಕರಿಗೆ ಹೆಚ್ಚಿನ ಸ್ಥಾನ ಗೌರವ ಸಂಬಳ ಮೌಲ್ಯಕೊಡುವುದರಿಂದ ಆ ರಾಷ್ಟಗಳು ಮುಂದುವರಿಯಲು ಕಾರಣವಾಗುತ್ತದೆ ಎಂದು ಅಥಣಿಯ ಅರ್ಚನಾ ಅಥಣಿಕರ ಹೇಳಿದರು.

ಐನಾಪುರ ಪಟ್ಟಣದಲ್ಲಿ 2025-26ನೇ ಸಾಲಿನ ಡಿಇಎಲ್‌ಇಡಿ ದ್ವಿತೀಯ ವರ್ಗದ ಪ್ರಶಿಕ್ಷಣಾರ್ಥಿಗಳ ಬಿಳ್ಕೊಡುವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಪ್ರಮಾಣ ಪತ್ರದ ಶಿಕ್ಷಕರು ನೀವಾಗದೆ. ಮಕ್ಕಳನ್ನು ನಮ್ಮನ್ನು ಗುರುತಿಸುವ ಶಿಕ್ಷಕರಾಗಬೇಕು ಎಂದರು.

ಸಂಸ್ಥೆಯ ಕಾರ್ಯಾಧ್ಯಕ್ಷ ಸಂತೋಷ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಚಿಕ್ಕೋಡಿಯ ಕೆ.ಟಿ ಕಾಂಬಳೆ, ಆಗಮಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಬಿಆರ್‌ಪಿ ಎ.ಎಸ್. ಖೋತ, ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಾದ ಸಂಜು ಭಿರಡಿ,ತಮ್ಮಣ್ಣಾ ಪಾರಶೆಟ್ಟಿ,ಸುರೇಶ ಗಾಣಿಗೇರ, ಉದಯ ನಿಡಗುಂದಿ, ಪ್ರದೀಪ ಕುಲಕರ್ಣಿ,ಮಾಜಿ ಅಧ್ಯಕ್ಷ ದಾದಾ ಪಾಟೀಲ ಸೇರಿದಂತೆ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಶಿಕ್ಷಕರು ವಿದ್ಯಾರ್ಥಿಗಳು ಇತರರು ಇದ್ದರು. ವೈಷ್ಣವಿ ಕಾಂಬಳೆ ನಿರೂಪಿಸಿದರು. ಪ್ರಾಚಾರ್ಯ ಎಸ್. ಎಂ. ಮಗದುಮ್ಮ ಸ್ವಾಗತಿಸಿದರು.



ಎಲ್ಲರೂ ಜೀವನದಲ್ಲಿ ಚಿಂತೆ ಬಿಟ್ಟು ಚಿಂತನ ಮಾಡಿ

ಯರಗಟ್ಟಿ: ಮನುಷ್ಯ ಜೀವನದಲ್ಲಿ ಚಿಂತೆಯನ್ನು ಬಿಟ್ಟು ಚಿಂತನ ಮಾಡಬೇಕು ಎಂದು ಹರ್ಲಾಪೂರ ಹರ್ತಿಮಠದ ವೇ.ಮೂರ್ತಿ ಸದಾನಂದ ಶಾಸ್ತ್ರಿಗಳು ಹೇಳಿದರು.

ಸಮೀಪದ ಆಲದಕಟ್ಟಿ ಕೆ.ಎಮ್ ಗ್ರಾಮದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶ್ರೀ ಶಿವಯೋಗೀಶ್ವರ ಜಾತ್ರಾ, ಮಹೋತ್ಸವ, ರಥದ ಲೋಕಾರ್ಪಣೆ, ಆಧ್ಯಾತ್ಮಿಕ ಪ್ರವಚನ, ಹಾಗೂ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಮಾತನಾಡಿದ ಅವರು, ಹುಟ್ಟಿನಿಂದ ಚಟ್ಟದವರೆಗೂ ಎಲ್ಲರೂ ಚಿಂತೆಯನ್ನು ಮಾಡುವವರೆ ಮಹಾತ್ಮರ ಚಿಂತೆ ನಮ್ಮನ್ನ ಕಾಯುತ್ತದೆ ಗಂಡ ಹೆಂಡತಿ ಇರುವ ತನಕ ಹೊಂದಾನಿಕೆಯಿಂದ ಇರಬೇಕು ಎಂದರು.

ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ, ಸ್ವಾಮೀಜಿ ಮಾತನಾಡಿ, ಒತ್ತಡ ಜೀವನದಿಂದಾಗಿ ಜನರು ದುಶ್ಚಟಗಳಿಗೆ ದಾಸರಾಗಿ ಆರೋಗ್ಯ ಹಾಳುಮಾಡಿಕೊಳ್ಳುತ್ತಿದ್ದರೆ. ಶರಣರ, ದಾಸರ ವಚನಗಳು, ತತ್ವಪದಗಳನ್ನು ಆಲಿಸಬೇಕು ಎಂದರು.

ವೇ.ಮೂ ಚಂದ್ರಯ್ಯ ಹಿರೇಮಠ, ಸಿದ್ದೇಶಕುಮಾರ ಹೊಳಲ, ಮಾಜಿ ಕೆಎಂಎಫ್ ಅಧ್ಯಕ್ಷ ಎಸ್.ಎಸ್.ಮುಗಳಿ, ಮುಖಂಡ ಸಿದ್ದಪ್ಪಾ ನಾಶಿಪೂಡಿ, ಬಸವಣ್ಣೆಪ್ಪ ದೊಡಲಿಂನವರ, ಸಂಗ್ರಾಮ ಗೌಡರ, ಪ್ರದೀಪ ಹಳೇಮನಿ, ಬಸವರಾಜ ಸಣ್ಣಗೌಡ್ರ, ಶಿವಪ್ಪ ಸಣ್ಣಗೌಡ್ರ, ಸಿದ್ದು ಜಗದಾಳೆ ಮತ್ತಿತರಿದ್ದರು.



ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪಾಲಕರ ಸಭೆ ಅಗತ್ಯ

ಮುಗಳಖೋಡ: ಪೋಷಕ-ಶಿಕ್ಷಕರ ಸಭೆಯ ಉದ್ದೇಶ ಮಗುವಿನ ಶೈಕ್ಷಣಿಕ ಪ್ರಗತಿ, ಶಿಸ್ತು, ನಡವಳಿಕೆ ಮತ್ತು ಸರ್ವತೋಮುಖ ಅಭಿವೃದ್ಧಿಯ ಕುರಿತು ಶಿಕ್ಷಕರು ಮತ್ತು ಪೋಷಕರ ನಡುವೆ ಮುಕ್ತ ಸಂವಹನವನ್ನು ಸ್ಥಾಪಿಸುವುದಾಗಿದೆ. ಈ ವರ್ಷ ಶಾಲೆಯಲ್ಲಿ ಬಾರಿ ಬದಲಾವಣೆಗಳನ್ನು ಮಾಡಿ ಮಕ್ಕಳ ಕಲಿಕೆಗೆ ಬಹಳಷ್ಟು ಒತ್ತು ನೀಡಲಾಗುತ್ತಿದೆ. ತಮ್ಮ ಮಕ್ಕಳ ಬೆಳವಣಿಗೆಯೇ ನಮ್ಮ ಗುರಿಯಾಗಿದೆ ಎಂದು ಶ್ರೀಚವಿವ ಸಂಘದ ಅಧ್ಯಕ್ಷ ಸಂಜಯ ಕುಲಿಗೋಡ ಹೇಳಿದರು.

ಅವರು ಭಾನುವಾರ ನಡೆದ ಶ್ರೀ ಚವಿವ ಸಂಘದ ರೈನಭೋ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳ ಪಾಲಕರ ಸಭೆಯ ಅಧ್ಯಕ್ಷ ಸ್ಥಾನ ವಹಿಸಿ ಮಾತನಾಡಿ ಮಗುವಿನ ಕಲಿಕೆಯಲ್ಲಿ ಪೋಷಕರು ಸಕ್ರಿಯವಾಗಿ ಪಾಲ್ಗೊಂಡು ಪ್ರೋತ್ಸಾಹಿಸುವುದು ಮಕ್ಕಳ ಯಶಸ್ಸಿಗೆ ಕಾರಣವಾಗುತ್ತದೆ ಎಂದರು.

ನಂತರ ಮಾತನಾಡಿದ ಮುಖ್ಯೋಪಾಧ್ಯಾಯ ವಿಜಯ ಮಗದುಮ್ಮ ಮಾತನಾಡಿ ಪಾಲಕರ ಸಭೆಗಳು ಮಗುವಿನ ಕಲಿಕೆಯ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು, ಸಮಸ್ಯೆಗಳನ್ನು ಪರಿಹರಿಸಲು ಮತ್ತು ಕಲಿಕೆಯ ವಾತಾವರಣವನ್ನು ಸುಧಾರಿಸಲು ಜಂಟಿ ಪ್ರಯತ್ನವನ್ನು ಉತ್ತೇಜಿಸುತ್ತವೆ. ಶಿಕ್ಷಕರು ಮತ್ತು ಪೋಷಕರ ನಡುವೆ ನೇರ ಸಂಪರ್ಕವನ್ನು ಏರ್ಪಡಿಸುವುದರಿಂದ, ಮಗುವಿನ ಮನೆಯ ವಾತಾವರಣ ಮತ್ತು ಶಾಲಾ ಪರಿಸರದ ಬಗ್ಗೆ ಪರಸ್ಪರ ಮಾಹಿತಿ ಹಂಚಿಕೊಳ್ಳಲು ಈ ಸಭೆ ಸಂವಹನದ ಸೇತುವೆಯಾಗಿದೆ ಎಂದರು.



ನಂತರ ಪಾಲಕರು ಶಿಕ್ಷಕರು ಮಕ್ಕಳ ಪರೀಕ್ಷಾ ಫಲಿತಾಂಶ, ಕಾರ್ಯಯೋಜನೆಗಳು, ವಾಹನ ವ್ಯವಸ್ಥೆ, ಸಮವಸ್ತ್ರ ವಿಷಯವಾರು ಮಾಹಿತಿ ಜೊತೆಗೆ ಶೈಕ್ಷಣಿಕ ಸಾಮರ್ಥ್ಯಗಳು ಮತ್ತು ಸುಧಾರಣೆಯ ಅಗತ್ಯವಿರುವ ಕ್ಷೇತ್ರಗಳ ಕುರಿತು ಅವುಗಳ ಪ್ರಗತಿಯ ಬಗ್ಗೆ ಚರ್ಚಿಸಿ, ಚಟುವಟಿಕೆಗಳು, ಶಾಲಾ ನಿಯಮಗಳು ಮತ್ತು ಮುಂಬರುವ ಕಾರ್ಯಕ್ರಮಗಳ ಬಗ್ಗೆ ಪೋಷಕರಿಗೆ ತಿಳಿಸಿದರು.

ಪಾಲಕರಿಂದ ಕುಂದುಕೊರತೆಗಳ ಜೊತೆಗೆ ಮಗುವಿನ ಬೆಳವಣಿಗೆಯ ಕುರಿತು ಮಾಹಿತಿ ಪಡೆದ ಶಾಲಾ ಆಡಳಿಯ ಮಂಡಳಿ ಮತ್ತು ಸಿಬ್ಬಂದಿ ವರ್ಗ ಮಗುವಿನ ಕಲಿಕೆಗೆ ಸಂಬಂಧಿಸಿದ ಸಂಭಾವ್ಯ ತೊಂದರೆಗಳನ್ನು ಗುರುತಿಸಿ, ತಕ್ಷಣದ ಹಸ್ತಕ್ಷೇಪ ಅಥವಾ ಪರಿಹಾರೋಪಾಯಗಳನ್ನು ಮಾಡುವುದಾಗಿ ತಿಳಿಸಿದರು.ಪಾಲಕರು, ಶಿಕ್ಷಕರು, ಆಡಳಿತ ಮಂಡಳಿ ವಿವಿಧ ವಿಷಯಗಳ ಕುರಿತು ಚರ್ಚಿಸಿದರು ಎಪ್ರಿಲ್ 1 ರಿಂದ ತರಗತಿಗಳನ್ನು ನಡೆಸಲು ನಿರ್ಧರಿಸಿದರು.ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಸಂಜಯ ಕುಲಿಗೋಡ, ಆಡಳಿತ ಮಂಡಳಿ ಸದಸ್ಯರು, ಮುಖ್ಯೋಪಾಧ್ಯಾಯ ವಿಜಯ ಮಗದುಮ್ಮ ಶಿವಾನಂದ ಮರನೂರ, ಸಿಬ್ಬಂದಿ ವರ್ಗ, ಪಾಲಕರು, ವ್ಯವಸ್ಥಾಪಕ ಶ್ರೀಮಂತ ಆಳಂದ, ಶ್ರೀಶೈಲ ಕುಲಿಗೋಡ, ಕಚೇರಿ ವ್ಯವಸ್ಥಾಪಕ ಕೃಷ್ಣಾ ಬದ್ನಿಕಾಯಿ, ವಾಹನ ಚಾಲಕರು ಇದ್ದರು.

ಸಹಕಾರಿ ಸಂಘಗಳಿಂದ ರೈತರ ಅಭಿವೃದ್ಧಿ: ಜಾರಕಿಹೊಳಿ

ಚನ್ನಮ್ಮನ ಕಿತ್ತೂರು : ಬೆಳಗಾವಿ ಡಿಸಿಸಿ ಬ್ಯಾಂಕ್ ಚುನಾವಣೆ ಪಕ್ಷಾತೀತವಾಗಿ ಜ್ಯಾತ್ಯಾತೀತವಾಗಿ ಚುನಾವಣೆ ನಡೆದಿದೆ. ಯಾವುದೇ ಪಕ್ಷದ ಚಿನ್ನೆಯಲ್ಲಿ ಚುನಾವಣೆ ನಡೆದಿಲ್ಲ. ಸೋಲು ಗೆಲುವು ಅನಿವಾರ್ಯ ಎಂದು ಬೆಳಗಾವಿ ಹಾಲು ಒಕ್ಕೂಟದ ಅಧ್ಯಕ್ಷ ಹಾಗೂ ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಪಟ್ಟಣದ ರಾಣಿ ಚನ್ನಮ್ಮಾ ಸ್ಮಾರಕ ಭವನದಲ್ಲಿ ಭಾನುವಾರ ನಡೆದ ಚನ್ನಮ್ಮನ ಕಿತ್ತೂರು ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಮತ್ತು ಹಾಲು ಉತ್ಪಾದಕರ ಸಂಘಗಳ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕೆಲವೊಂದು ಜನ ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಮಾಡುತ್ತಾರೆ. ಆದರೆ, ಸಹಕಾರಿ ರಂಗದಲ್ಲಿ ರಾಜಕೀಯ ಹೊರತು ಪಡಿಸಿ ಕೆಲಸ ಮಾಡಬೇಕು. ಸಹಕಾರಿ ಗಟ್ಟಿಯಾಗಿದ್ದರೆ ರೈತರು ಗಟ್ಟಿಯಾಗಿರುತ್ತಾರೆ. ಸಹಕಾರಿ ಕ್ಷೇತ್ರದಲ್ಲಿ ಶಾಸಕರು ಎಲ್ಲರು ಕೂಡಿಕೊಂಡು ಒಗ್ಗಟಿನಿಂದ ಕೆಲಸ ಮಾಡಬೇಕು. ನಮ್ಮ ಗ್ರಾಮೀಣ ಜನ ಹೈನುಗಾರಿಕೆಗೆ ಹೆಚ್ಚು ಗಮನ ಹರಿಸಬೇಕು. ಸಹಕಾರಿ ಕ್ಷೇತ್ರದಲ್ಲಿ ರೈತರಿಗೆ ಬೆನ್ನೆಲುಬಾಗಿ ನಿಂತು ಕೆಲಸ ಮಾಡಿ ಸಹಕಾರಿ ಸಂಘಗಳು ಗಟ್ಟಿಯಾಗಿದ್ದರೆ. ರೈತರು ಗಟ್ಟಿಯಾಗಿರಲು ಸಾಧ್ಯವಾಗುತ್ತದೆ ಎಂದು ಹೇಳಿದರು.



ಒಗ್ಗಟ್ಟಿನಿಂದ ಶ್ರಮಿಸಿ

ಡಾ. ಬಸವರಾಜ ಪರವಣ್ಣವರ ಕಿತ್ತೂರು ಭಾಗದಲ್ಲಿ ಬಿಜೆಪಿ ನಾಯಕರಿದ್ದಾರೆ. ರಾಜ್ಯಾಧ್ಯಕ್ಷರ ಮೂಲಕ ಅವರನ್ನು ಪಕ್ಷದ ಸಂಘಟನೆಯ ದೃಷ್ಟಿಯಿಂದ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯರನ್ನಾಗಿ ನೇಮಿಸಲಾಗಿದೆ. ಅವರನ್ನು ಕೈ ಬಿಡುವ ಪ್ರಶ್ನೆ ಇಲ್ಲ. ಕಿತ್ತೂರು ಬಿಜೆಪಿಯಲ್ಲಿ ವಿಧಾನಸಭಾ ಟಿಕೆಟ್ ಗೆ 4 ಜನ ಟಿಕೆಟ್ ಆಕಾಂಕ್ಷಿ ಗಳಿದ್ದಾರೆ. ಟಿಕೆಟ್ ಕೇಳುವುದರಲ್ಲಿ ತಪ್ಪಿಲ್ಲ. ಪಕ್ಷ ಟಿಕೆಟ್ ನೀಡಿದವರಿಗೆ ಎಲ್ಲರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಾರೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿದರು.

ಬೆಳಗಾವಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ನಾನಾಸಾಹೇಬ ಪಾಟೀಲ, ಕೆ.ಎಂ.ಎಫ್. ನಿರ್ದೇಶಕ ಬಸವರಾಜ ಪರವಣ್ಣವರ, ಕೆ.ಎಂ.ಎಫ್ ನಿರ್ದೇಶಕ ಬಾಬು ಕಟ್ಟಿ, ಮಾತನಾಡಿದರು. ಪಟ್ಟಣ ಪಂಚಾಯತಿ ಅಧ್ಯಕ್ಷ ಜಯಸಿದ್ದರಾಮ ಮಾರಿಹಾಳ, ಸಿ.ಆರ್.ಪಾಟೀಲ, ರಮೇಶ ಪರವಿನಾಯ್ಕರ, ರಮೇಶ ಬಾಳೇಕುಂದರಗಿ ಉಪಸ್ಥಿತರಿದ್ದರು. ಮಲಪ್ರಭಾ ಸಹಕಾರಿ ಸಕ್ಕರೆ, ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಯ ನಿರ್ದೇಶಕರು ಉಪಸ್ಥಿತರಿದ್ದರು. ಪ್ರಾಥಮಿಕ ಕೃಷಿ ಪತ್ತಿನ ಮತ್ತು ಹಾಲು ಉತ್ಪಾದಕರ ಸಂಘಗಳ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಸಿಬ್ಬಂದಿ ವರ್ಗದವರನ್ನು ಸನ್ಮಾನಿಸಲಾಯಿತು.

ಕಿರುಸುದ್ದಿ

ಪೋಸ್ಟರ್ ತಾಣವಾದ ಬಸ್ ನಿಲ್ದಾಣ



• ಗುಳೇದಗುಡ್ಡ: ನಗರದ ಬಾದಾಮಿ ನಾಕಾದಲ್ಲಿರುವ ಬಸ್ ತಂಗುದಾನದ ಗೋಡೆ ಜಾಹೀರಾತು ಪೋಸ್ಟರ್ ಅಂಟಿಸುವ ತಾಣವಾಗಿದೆ. ಈ ಹಿಂದೆ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಾದಾಮಿ ಮತಕ್ಷೇತ್ರದ ಶಾಸಕರಾಗಿದ್ದಾಗ ಅವರ ಅನುದಾನದಲ್ಲಿ ಗ್ರಾನೈಟ್ ಕಲ್ಲುಗಳನ್ನು ಉಪಯೋಗಿಸಿ, ಸುಂದರವಾದ ಬಸ್ ತಂಗುದಾನ ನಿರ್ಮಿಸಲಾಗಿತ್ತು. ಇಂತಹ ಸುಂದರ ಬಸ್‌ತಂಗುದಾನದ ಈಗನ ಪರಿಸ್ಥಿತಿ ನೋಡಿ, ಒಳಗೆ ಮತ್ತು ಹೊರಗೆ ಪೋಸ್ಟರ್‌ಗಳನ್ನು ಅಂಟಿಸಿ ಅದರ ಸೌಂದರ್ಯವನ್ನು ಹಾಳುಮಾಡಲಾಗಿದೆ. ಅಲ್ಲದೇ ಇಂತಹ ಜಾಹೀರುಗಳಿಂದ ಪ್ರಯಾಣಿಕರಿಗೆ ಕಿರಿಕಿರಿ ಉಂಟುಮಾಡುತ್ತವೆ ಎಂದು ಪ್ರಯಾಣಿಕರು ದೂರಿದ್ದಾರೆ.

ಬಸ್ ತಂಗುದಾನದಲ್ಲಿ ಕಿರಿಕಿರಿ ಉಂಟಾಗುವಂತೆ ಹಾಗೂ ಬಸ್ ತಂಗುದಾನ ಸೌಂದರ್ಯ ಹಾಳಾಗುವಂತೆ ಗೋಡೆಗಳಿಗೆ ಅಂಟಿಸಿರುವ ಜಾಹಿರಾತು ಪೋಸ್ಟರ್‌ಗಳನ್ನು ಸಂಬಂದಿಸಿದ ಇಲಾಖೆ ಅಧಿಕಾರಿಗಳು ತೆಗೆಸಿ, ಪುನಃ ಜಾಹಿರಾತು ಫೋಸ್ಟರಗಳನ್ನು ಅಂಟಿಸದಂತೆ ಎಚ್ಚರಿಕೆ ಬೋರ್ಡ್ ಹಾಕಬೇಕು ಎಂದು ಗುಳೇದಗುಡ್ಡ ಸೋಶಿಯಲ್ ವರ್ಕರ್ಸ್ ಸದಸ್ಯ ಉಮೇಶ ಶಿವನಗೌಡರ ಆಗ್ರಹಿಸಿದರು.

ಹಿಂದಿ ಭಾಷೆ ಕೈಬಿಟ್ಟಿರುವುದು ಸ್ವಾಗತಾರ್ಹ: ಪೂಜಾರಿ

• ಇಳಕಲ್: ರಾಜ್ಯ ಸರ್ಕಾರ ದ್ವಿಭಾಷೆ ನೀತಿ ಜಾರಿ ಹಿನ್ನೆಲೆಯಲ್ಲಿ ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿ ಹಿಂದಿ ಭಾಷೆ ಕೈ ಬಿಟ್ಟಿರುವುದು ಸ್ವಾಗತಾರ್ಹ ಎಂದು ತಾಲೂಕು ಅಧ್ಯಕ್ಷ ಅಶೋಕ ಪೂಜಾರಿ ಹೇಳಿದರು. ಈ ಬಗ್ಗೆ ವಿವರ ನೀಡಿ ಮಾತನಾಡಿ, ರಾಜ್ಯದಲ್ಲಿ ದ್ವಿಭಾಷೆ ನೀತಿ ಜಾರಿಗೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡರ ಸಂಘಟನೆ ಕಳೆದ 15 ವರ್ಷಗಳಿಂದ ಸತತವಾಗಿ ಹೋರಾಟ ಮಾಡುತ್ತಾ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುತ್ತಾ ಬಂದಿದೆ ಇದಕ್ಕಾಗಿ ಕರವೇ ಹೋರಾಟಗಾರರ ಮೇಲೆ ಸಾಕಷ್ಟು ಪ್ರಕರಣ ದಾಖಲಾಗಿ ಹೋರಾಟಗಾರರು ಜೈಲುವಾಸ ಅನುಭವಿಸಿದರು, ರಾಜ್ಯವನ್ನಾಳಿದ ಸರ್ಕಾರಗಳು ಕ್ರಮ ಕೈಗೊಳ್ಳದೆ ನಿರ್ಲಕ್ಷ ವಹಿಸಿದ್ದವು, ಆದರೆ ಕೇಂದ್ರ ಸರ್ಕಾರ ಬಹುತೇಕ ಕಡೆಗಳಲ್ಲಿ ಹಿಂದಿ ಭಾಷೆ ಹೇರಿಕೆ ಮಾಡಲು ಹೊರಟಿದ್ದನ್ನು ವಿರೋಧಿಸಿ ಹೋರಾಟ ಮಾಡಲಾಗಿದೆ.



ಆದರೆ ಆಡಳಿತ ಭಾಷೆ ಕನ್ನಡ ಭಾಷೆಯಾಗಿ ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ, ರಾಜ್ಯ ಸರ್ಕಾರದ ಆಡಳಿತ ಸುತ್ತೋಲೆಗಳಿಂದಲೂ ಹಿಡಿದು ಬಹುತೇಕ ಕಡೆಗಳಲ್ಲಿ ಕನ್ನಡ ಭಾಷೆಗೆ ಸೂಕ್ತ ಸ್ಥಾನ ಮಾನ ಸಿಗುತ್ತಿಲ್ಲ, ಪ್ರಾಥಮಿಕ, ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿ ಜಾರಿಯಾದ ದ್ವಿಭಾಷಾ ನಿಲುವು ರಾಜ್ಯದ ಆಡಾಳಿತರೂಢ ಎಲ್ಲಾ ವಲಯದಲ್ಲಿ, ಎಲ್ಲಾ ಹಂತದಲ್ಲೂ ಕನ್ನಡ ಭಾಷೆಗೆ ಸೂಕ್ತ ಮನ್ನಣೆ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕು. ಕನ್ನಡ ಭಾಷೆ ಆಡಳಿತ ವ್ಯವಸ್ಥೆ ಪರಿಣಾಮಕಾರಿ ಜಾರಿ ನಿಟ್ಟಿನಲ್ಲಿ ಮತ್ತಷ್ಟು ಹೋರಾಟ ರೂಪಿಸಲಾಗುವುದು, ಸರ್ಕಾರ ಇದಕ್ಕೆ ಆಸ್ಪದ ನೀಡದೆ ಕೇವಲ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದ್ದನ್ನೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದರು.

ಶವ ಪತ್ತೆ

• ಜಮಖಂಡಿ: ತಾಲೂಕಿನ ಕಲಹಳ್ಳಿಯ ಸಿದ್ದಾಪೂರ ರಸ್ತೆಯ ಅರಣ್ಯ ಪ್ರದೇಶದಲ್ಲಿ ವ್ಯಕ್ತಿಯ ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. 35 ರಿಂದ 45 ವರ್ಷದ ಅಪರಿಚಿತ ವ್ಯಕ್ತಿಯ ಶವಪತ್ತೆಯಾಗಿದೆ. ಕಳೆದ ಬಹುದಿನಗಳಿಂದ ಈ ವ್ಯಕ್ತಿಯು ಮೃತನಾಗಿದ್ದು ಕೊಲೆಯಾಗಿದೆ ಎಂದು ಅಂದಾಜಿಸಲಾಗಿದೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ದ್ಯಾಮವ್ವ ನಾವಿ ನಿಧನ

• ಕಲಾದಗಿ: ಉದಗಟ್ಟಿ ಗ್ರಾಮದ ಹಿರಿಯ ಜೀವಿ ದ್ಯಾಮವ್ವ ರಾ ನಾವಿ (95) ರವಿವಾರದಂದು ನಿಧನರಾದರು. ಮೃತರಿಗೆ ಐದು ಪುತ್ರರು, ಓರ್ವ ಪುತ್ರಿ, ಸೇರಿದಂತೆ ಅಪಾರ ಬಂಧುಬಳಗ ಇದ್ದಾರೆ.





ಇಳಕಲ್: ನಗರದಲ್ಲಿ ನೂತನವಾಗಿ ಹೋಟೆಲ್ ಅದಿತಿ ಕಂಫರ್ಟ್ಸ್ ಮತ್ತು ಉಡುಪಿ ಕೃಷ್ಣವಿಹಾರವನ್ನು ಶಾಸಕ ವಿಜಯಾನಂದ ಎಸ್. ಕಾಶಪ್ಪನವರ ಉದ್ಘಾಟಿಸಿದರು. ಮೋತಿಲಾಲಸಾ ನಾರಾಯಣಸಾ ರಾಯಬಾಗಿ, ನಾಗರಾಜ ರಾಯಬಾಗಿ, ಸಾರಿಕಾ ನಾಗರಾಜ ರಾಯಬಾಗಿ, ಅದಿತಿ ರಾಯಬಾಗಿ, ಆರೋಹಿ ರಾಯಬಾಗಿ, ಆರತಿ ಶೆಟ್ಟಿ, ಚಂದ್ರು ಶೆಟ್ಟಿ ಹಾಗೂ ಅನೇಕರು ಉಪಸ್ಥಿತರಿದ್ದರು.

ದೇವಸ್ಥಾನ ಜೀರ್ಣೋದ್ಧಾರಕ್ಕೆ ಸಹಾಯಧನ

• ಬೀಳಗಿ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರತಿಯೊಂದು ಗ್ರಾಮೀಣ ಮಟ್ಟದಲ್ಲಿ ಹತ್ತು ಹಲವಾರು ಯೋಜನೆಗಳ ಮುಖಾಂತರ ಸೌಲಭ್ಯಗಳನ್ನು ದೊರಕಿಸಿ ಕೊಡುವಂತ ಏಕೈಕ ಸಂಸ್ಥೆಯಾಗಿದೆ ಎಂದು ಕೊಪ್ಪಳ ಪ್ರಾದೇಶಿಕ ಕಚೇರಿಯ ವಿಭಾಗದ ಪ್ರಾದೇಶಿಕ ನಿರ್ದೇಶಕ ಚಂದ್ರಶೇಖರ ಜೆ. ಹೇಳಿದರು. ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಕಾಶಿಲಿಂಗೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಡಾ.ಡಿ ವೀರೇಂದ್ರ ಹೆಗಡೆಯವರು ಬಿಡುಗಡೆ ಮಾಡಿದ ಸಹಾಯಧನದ ಡಿಡಿಯನ್ನು ದೇವಸ್ಥಾನದ ಕಮಿಟಿಯ ಅಧ್ಯಕ್ಷ ರಂಗಪ್ಪ ಜೋಗಿ ಅವರಿಗೆ ಹಸ್ತಾಂತರಿಸಿ ಮಾತನಾಡಿದರು. ಪ್ರತಿ ಗ್ರಾಮದಲ್ಲಿರುವಂತ ದೇವಸ್ಥಾನಗಳು ಧಾರ್ಮಿಕ ಸಬಲೀಕರಣ ಆಗಬೇಕೆಂದು ಉದ್ದೇಶದಿಂದ ಪೂಜ್ಯರು 2.50 ಲಕ್ಷ ರೂ. ಜೀರ್ಣೋದ್ಧಾರಕ್ಕೆ ಸಹಾಯ ಧನ ಮಂಜೂರು ಮಾಡಿರುತ್ತಾರೆ. ಈ ಸಂಸ್ಥೆಯು ಮುಖಾಂತರ ಧಾರ್ಮಿಕ ಸಬಲೀಕರಣ, ಮಹಿಳಾ ಸಬಲೀಕರಣ, ಶಿಕ್ಷಣ ಸಬಲೀಕರಣ ಸೇರಿದಂತೆ 10 ಹಲವಾರು ಸಬಲೀಕರಣಗಳನ್ನು ಒಳಗೊಂಡಿರುತ್ತದೆ. ಗ್ರಾಮಸ್ಥರು ಯೋಜನೆಯ ಮುಖಾಂತರ ಸಿಗುವಂತ ಸೌಲಭ್ಯಗಳು ಪ್ರತಿಯೊಬ್ಬರೂ ಪಡೆಯಬೇಕೆಂದು ತಿಳಿಸಿದರು. ಜಿಲ್ಲಾ ನಿರ್ದೇಶಕ ಚನ್ನಕೇಶವ ಹಾಗೂ ತಾಲೂಕಿನ ಕ್ಷೇತ್ರ ಯೋಜನಾಧಿಕಾರಿ ಸುಬ್ರಾಯಗೌಡ ಕೆ ಮತ್ತು ಮುಖಂಡರಾದ ಮಲ್ಲಣ್ಣ ಹೋಳಿ, ಸಾವಿತ್ರಿ ದೇಶಪಾಂಡೆ, ವಲಯದ ಮೇಲ್ವಿಚಾರಕರು ಅಜ್ಜಪ್ಪ ಕದಡಿ, ಸದಾಶಿವ ಪಾವಡದ, ಪೀರಸಾಬ ಬುಡ್ನೇಶಿ, ಹೊಳಬಸು ಖೋತಿನ, ದೇವಸ್ಥಾನ ಜೀರ್ಣೋದ್ಧಾರ ಕಮಿಟಿ ಸದಸ್ಯರು, ಸ್ವಸಹಾಯ ಸಂಘದ ಸದಸ್ಯರು, ಸೇವಾ ಪ್ರತಿನಿಧಿ ಭಾರತಿ ತಳವಾರ, ಸೇವಾದಾರ ಬಸವರಾಜ ಕರೆನ್ನವರ ಉಪಸ್ಥಿತರಿದ್ದರು.



ಬೀಳಗಿ: ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಕಾಶಿಲಿಂಗೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಡಾ.ಡಿ ವೀರೇಂದ್ರ ಹೆಗಡೆಯವರು ಬಿಡುಗಡೆ ಮಾಡಿದ ಸಹಾಯಧನದ ಡಿಡಿಯನ್ನು ದೇವಸ್ಥಾನದ ಕಮಿಟಿಯ ಅಧ್ಯಕ್ಷ ರಂಗಪ್ಪ ಜೋಗಿ ಅವರಿಗೆ ಕೊಪ್ಪಳ ಪ್ರಾದೇಶಿಕ ಕಚೇರಿಯ ವಿಭಾಗದ ಪ್ರಾದೇಶಿಕ ನಿರ್ದೇಶಕ ಚಂದ್ರಶೇಖರ ಜೆ. ಹಸ್ತಾಂತರಿಸಿದರು. ಜಿಲ್ಲಾ ನಿರ್ದೇಶಕ ಚನ್ನಕೇಶವ ಹಾಗೂ ತಾಲೂಕಿನ ಕ್ಷೇತ್ರ ಯೋಜನಾಧಿಕಾರಿ ಸುಬ್ರಾಯಗೌಡ ಕೆ ಇದ್ದರು.

ಬಾಗಲಕೋಟೆ ಉಪಚುನಾವಣೆ | ರಾಜಕೀಯ ಗಣ್ಯರಿಂದ ಪ್ರಚಾರ ಜೋರು

ಬಿಸಿಲಿನ ತಾಪದಲ್ಲಿ ಪ್ರಚಾರದ ಅಬ್ಬರ

▸ ಜಗದೀಶ ಎಂ.ಗಾಣಿಗೇರ

ದಿಗಂತ ವಿಶೇಷ

• ಬಾಗಲಕೋಟೆ: ಬಾಗಲಕೋಟೆಯ ಉಪಚುನಾವಣೆಯ ಕಾವು ದಿನದಿಂದ ದಿನಕ್ಕೆ ಕಾವು ಪಡೆದುಕೊಳ್ಳುತ್ತಿದೆ. ಏರು ಬಿಸಿಲಿನ ಮಧ್ಯೆಯೂ ಚುನಾವಣೆಯ ಪ್ರಚಾರ ಅಬ್ಬರ ಜೋರಾಗಿದೆ. ಬಾಗಲಕೋಟೆ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿಯವರು ತಮ್ಮ ಅಭಿಮಾನಿಗಳು, ಕಾರ್ಯಕರ್ತರೊಂದಿಗೆ ಬೆಳಗ್ಗೆ ಮತ್ತು ಸಂಜೆ ಪ್ರಚಾರ ಸಭೆ ಮತ್ತು ಪಾದಯಾತ್ರೆ ಮೂಲಕ ಮತಯಾಚಿಸುತ್ತಿರುವುದು ಸಾಮಾನ್ಯವಾಗಿದೆ. ಇದರ ಮಧ್ಯೆ ಮಧ್ಯಾಹ್ನ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಮಧ್ಯಾಹ್ನ ಕಾರ್ಯಕರ್ತರ ಸೇರ್ಪಡೆ ಹಾಗೂ ಕಾರ್ಯಕರ್ತರೊಂದಿಗೆ ಚುನಾವಣೆಯ ರಣತಂತ್ರ ಕುರಿತು ನಾಯಕರು ಚರ್ಚೆ ನಡೆಸುತ್ತಿದ್ದಾರೆ.

ಗ್ರಾಮಮಟ್ಟದಲ್ಲಿ ರಾಜಕೀಯ ನಾಯಕರ ಪ್ರಚಾರ ನಡೆಯುತ್ತಿದೆ. ಪ್ರತಿ ಗ್ರಾಮ ಪಂಚಾಯ್ತಿ ಹಾಗೂ ಹೆಚ್ಚು ಮತದಾರರು ಹೊಂದಿರು ಗ್ರಾಮ ಸೇರಿದಂತೆ ಸಣ್ಣ ಸಣ್ಣ ಗ್ರಾಮಗಳಲ್ಲಿಯೂ ಕೂಡ ಸಚಿವರು, ಶಾಸಕರು, ಸಂಸದರು ಪ್ರಚಾರ ನಡೆಸಿ ಮತಯಾಚಿಸುತ್ತಿದ್ದಾರೆ.

ಗ್ಯಾರಂಟಿ-ಅಭಿವೃದ್ಧಿ: ರಾಜ್ಯ ಸರ್ಕಾರ ನುಡಿದಂತೆ ನಡೆದಿದ್ದೇವೆ, ಗ್ಯಾರಂಟಿ ಯೋಜನೆ ನೀಡಿದ್ದೇವೆ ಇವುಗಳನ್ನು ನೋಡಿ ನಮಗೆ ಮತ ನೀಡಿ ಎಂದು ಕೇಳಿಕೊಂಡರೆ ಅಭಿವೃದ್ಧಿಗೆ ಮತ ನೀಡಿ ಎಂದು ಬಿಜೆಪಿಯವರು ಮತ ಕೇಳುತ್ತಿದ್ದಾರೆ.

ರಾಜಕೀಯ ಗಣ್ಯರ ದಂಡು: ಬಾಗಲಕೋಟೆಯ ಉಪಚುನಾವಣೆಯ ಹಿನ್ನಲೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕರು, ಮಂತ್ರಿಗಳು, ಶಾಸಕರು, ಮಾಜಿ ಸಚಿವರು, ಪಕ್ಷದಲ್ಲಿ ಉನ್ನತ ಹುದ್ದೆಯನ್ನು ಹೊಂದಿದವರು ತಮ್ಮ ತಮ್ಮ ಅಭ್ಯರ್ಥಿಗಳ ಪರ ಮತಯಾಚಿಸಲು ಆಗಮಿಸುತ್ತಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ಬಿಜೆಪಿಯ ಸಂಸದ ಗೋವಿಂದ ಕಾರಜೋಳ, ಶ್ರೀರಾಮುಲು, ಅರುಣ ಶಹಾಪುರ ಸೇರಿದಂತೆ ಅನೇಕ ನಾಯಕರು ಬಾಗಲಕೋಟೆಯಲ್ಲಿ ಬಿಡಾರ ಹೂಡಿ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ಕಾಂಗ್ರೆಸ್ ತಂತ್ರಕ್ಕೆ ಪ್ರತಿತಂತ್ರವನ್ನು ಹೆಣೆಯುತ್ತಿದ್ದಾರೆ. ಇದಲ್ಲದೇ ಇನ್ನೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕೂಡ ನಾಲ್ಕೈದು ದಿನ ಬಾಗಲಕೋಟೆಯಲ್ಲಿ ಪ್ರಚಾರ ನಡೆಸಲಿದ್ದಾರೆಂದು ಹೇಳಲಾಗುತ್ತಿದೆ.

ಐದು ದಿನ ಸಿಎಂ ಬಿಡಾರ: ಬಾಗಲಕೋಟೆಯ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿಯವರ ಪರ ಪ್ರಚಾರ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಾಗಲಕೋಟೆಯಲ್ಲಿ ಐದು ದಿನ ವಾಸ್ತವ್ಯ ಹೂಡಿ ಗ್ರಾಮಗಳಲ್ಲಿ ಹಾಗ ನಗರ ಮಟ್ಟದಲ್ಲಿ ಪ್ರಚಾರ ಸಭೆ ನಡೆಸಿ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ ಮಾಡಲಿದ್ದಾರೆ. ಈ ವೇಳೆ ಜನಸಂಖ್ಯೆ ಹೆಚ್ಚಾಗಿರುವ ಗ್ರಾಮಗಳಲ್ಲಿ ರೋಡ ಶೋ ಕೂಡ ನಡೆಸಲಿದ್ದಾರೆ. ಮಾ.30 ಮತ್ತು 31 ರಂದು ಪ್ರಚಾರ ನಡೆಸಿ ನಂತರ ಏ.3,4,6 ರಂದು ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ.



> ಬಾಗಲಕೋಟೆಯಲ್ಲಿ ಬಿಸಿಲು ಜಾಸ್ತಿಯಾಗಿದೆ ಬೆಳಿಗ್ಗೆ ಪಾದಯಾತ್ರೆ ಮೂಲಕ ಮತಯಾಚಿಸಿ ಮಧ್ಯಾಹ್ನ ಪಕ್ಷದ ಕಾರ್ಯಾಲಯದಲ್ಲಿ ಹಾಗೂ ಕಾರ್ಯಕರ್ತರೊಂದಿಗೆ ಚುನಾವಣೆಯ ಕುರಿತು ಚರ್ಚೆ ನಡೆಸುತ್ತೇವೆ. ಸಂಜೆ ಗ್ರಾಮಗಳಲ್ಲಿ ಪ್ರಚಾರ ನಡೆಸುತ್ತೇವೆ.
> ■ ಶಾಂತಗೌಡ ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷ

> ಬಾಗಲಕೋಟೆಯ ಉಪಚುನಾವಣೆಯ ಕಾವು ಹೆಚ್ಚಿದೆ. ಬಿಸಿಲಿನ ತಾಪ ಜಾಸ್ತಿ ಇರುವುದರಿಂದ, ಆರೋಗ್ಯಕ್ಕೂ ಆದ್ಯತೆ ನೀಡಬೇಕಾಗಿದೆ. ಹೀಗಾಗಿ ಬೆಳಿಗಿನ ಜಾವ ಪಾದಯಾತ್ರೆ ಮಾಡಿ ಮನೆ ಮನೆಗೆ ತೆರಳಿ ಮತ ಯಾಚಿಸುತ್ತಿದ್ದೇವೆ.
> ■ ನಾಗರಾಜ ಹದ್ಲಿ, ಕಾಂಗ್ರೆಸ್ ಪಕ್ಷದ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ

ಕಾಂಗ್ರೆಸ್ ಪತನಕ್ಕೆ ಉಪಚುನಾವಣೆ ಮುನ್ನುಡಿ: ನಾರಾಯಣಸಾ ಭಾಂಡಗೆ

• ಬಾಗಲಕೋಟೆ: ಉಪಚುನಾವಣೆಯಿಂದಲೇ ಕಾಂಗ್ರೆಸ್ ಪತನ ಶುರುವಾಗಲಿದ್ದು 25 ಸಾವಿರ ಮತಗಳ ಅಂತರದಲ್ಲಿ ಬಿಜೆಪಿ ವಿಜಯ ಪತಾಕೆ ಹಾರಿಸಲಿದೆ. ಬಾಗಲಕೋಟೆಯ ಭವಿಷ್ಯದ ಭರವಸೆಗಾಗಿ ವೀರಣ್ಣ ಚರಂತಿಮಠರಿಗೆ ಮತ ನೀಡಿ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.


ನಗರದ ವಾರ್ಡ್ ನಂ. 18 ಮತ್ತು 35ರಲ್ಲಿ ವೀರಣ್ಣ ಚರಂತಿಮಠ ಪರವಾಗಿ ನೂರಾರು ಕಾರ್ಯಕರ್ತರ ಜೊತೆಗೆ ಪಂಚಮುಖಿ ಆಂಜನೇಯನಿಗೆ ಪೂಜೆ ಸಲ್ಲಿಸಿ ಮನೆಮನೆಗೆ ತೆರಳಿ ಮತಯಾಚಿಸಿ ಅವರು ಮಾತನಾಡಿದರು.

ಉಪಚುನಾವಣೆಯಲ್ಲಿ ಬಿಜೆಪಿಗೆ ಭಾರಿ ಬೆಂಬಲ ವ್ಯಕ್ತವಾಗುತ್ತಿದು, ಬಾಗಲಕೋಟೆ ಮತಕ್ಷೇತ್ರದಾದ್ಯಂತ ಮತದಾರರಿಂದ ಬಿಜೆಪಿಯ ಕಡೆ ನಮ್ಮ ನಡೆ ಎಂಬ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಉಪಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋಲಪ್ಪಲಿದ್ದು ದುರಾಡಳಿತದ ಸರ್ಕಾರದ ಪಥನವಾಗಲಿದೆ. ಜನ ಬದಲಾವಣೆ ಕೇಳುತ್ತಿದ್ದಾರೆ ಬಿಜೆಪಿಯ ನಾಯಕರೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ಕಾಂಗ್ರೆಸ್ ಕುತಂತ್ರಕ್ಕೆ ಬಲಿಯಾಗದಂತೆ ಮತದಾರರು ಎಚ್ಚೆತ್ತುಕೊಂಡಿದ್ದಾರೆ ಬಾಗಲಕೋಟೆ ಅಭಿವೃದ್ಧಿಗೆ ಬಿಜೆಪಿ ಅಭ್ಯರ್ಥಿಯ ಗೆಲುವು ಅವಶ್ಯಕ ಎಂದರು.

ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಮಾತನಾಡಿ, ಬಾಗಲಕೋಟೆ ಸರ್ವಾಂಗೀಣ ಅಭಿವೃದ್ಧಿಯಲ್ಲಿ ವೀರಣ್ಣ ಚರಂತಿಮಠರ ಪರಿಶ್ರಮ ಅಭೂತಪೂರ್ವವಾಗಿದ್ದು, ಕ್ರಿಯಾಶೀಲ ವ್ಯಕ್ತಿಗಳಾಗಿ, ಸಮಾಜದ ಏಳಿಗೆಗಾಗಿ ಹಗಲಿರುಳು ಕಾರ್ಯಪ್ರವೃತ್ತರಾಗಿ ಕೆಲಸ ಮಾಡಿದ್ದಾರೆ ಎಂದರು.

ಸುರಪೂರ ಮಾಜಿ ಸಚಿವ ರಾಜುಗೌಡ ನಾಯಕ ಮಾತನಾಡಿ, ಉಪಚುನಾವಣೆಯಲ್ಲಿ ಚರಂತಿಮಠರನ್ನು ಗೆಲ್ಲಿಸಿ ಸಮಗ್ರ ಅಭಿವೃದ್ಧಿಗಾಗಿ ಎಲ್ಲರೂ ಕೈ ಜೋಡಿಸಬೇಕು ಎಂದರು.

ಕಿತ್ತೂರು ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ, ಬಾಗಲಕೋಟೆಯಲ್ಲಿ ಮೂರು ಭಾರಿ ಶಾಸಕರಾಗಿ ಕೆಲಸ ಮಾಡಿದ ವೀರಣ್ಣ ಚರಂತಿಮಠರು ಯಾವುದನ್ನು ಕಡೆಗಣಿಸದೆ ಕೆಲಸಮಾಡಿದ್ದಾರೆ. ಅಸಮರ್ಥ ಕಾಂಗ್ರೆಸ್ ಸರಕಾರ ಚಿಕಿತ್ಸೆಯ ಮೇಲೆ ಹೆಜ್ಜೆ ಹಾಕುತ್ತಿದೆ. ಅನಭಿವೃದ್ಧಿಯನ್ನು ಹೊಗಲಾಡಿಸಲು ಮತದಾರರು ಉಪಚುನಾವಣೆಯ ಕಡೆಗಣಿಸದೇ ಮತಹಾಕಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎಂದರು.



ಸುಳ್ಳು ಭರವಸೆಯ ರಾಜ್ಯ ಸರ್ಕಾರ: ಶ್ರೀರಾಮುಲು

• ಕಮತಗಿ: ಪಟ್ಟಣದಲ್ಲಿ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆ ನಿಮಿತ್ತ ಶ್ರೀರಾಮುಲು ಅವರಿಂದ ವೀರಣ್ಣ ಚರಂತಿಮಠ ಅವರ ಪರವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಶ್ರೀರಾಮುಲು ಅವರು, ರಾಜ್ಯ ಸರ್ಕಾರವು ಎಲ್ಲ ವರ್ಗದವರಿಗೂ ಅನ್ಯಾಯ ಮಾಡಿದೆ. ಸುಳ್ಳು ಭರವಸೆಯ ಸರಕಾರ ಎಂದು ಕಟುವಾಗಿ ಟೀಕಿಸಿದರು. ವೀರಣ್ಣ ಚರಂತಿಮಠ ಅವರು ಈ ಬಾರಿ ಪ್ರಚಂಡ ಬಹುಮತದಿಂದ ಆರಿಸಿ ತರುವಲ್ಲಿ ಕಾರ್ಯಕರ್ತರ ಪಾತ್ರ ಬಹಳ ಮುಖ್ಯವಾಗಿದೆ. ಹಗಲಿರುಳು ಎನ್ನದೆ ಚರಂತಿಮಠ ಅವರನ್ನು ಪ್ರಚಂಡ ಬಹುಮತದಿಂದ ಆರಿಸಿ ತರಬೇಕು. ದಾವಣಗೆರೆ ಮತ್ತು ಬಾಗಲಕೋಟದ ಫಲಿತಾಂಶದಿಂದ ಕಾಂಗ್ರೆಸ್ ಸರ್ಕಾರಕ್ಕೆ 2028 ರ ಕರ್ನಾಟಕ ರಾಜ್ಯದ ಚುನಾವಣೆಯ ಕಾಂಗ್ರೆಸ್ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಧೂಳಿಪಟ ವಾಗುವ ಕಾಲ ಬಹಳ ದಿನ ಇಲ್ಲ ಎಂದು ಹೇಳಿದರು.

ನಮ್ಮ ಯಡಿಯೂರಪ್ಪ ಸರಕಾರ ಇದ್ದಾಗ ರೈತರಿಗೆ ನಾಲ್ಕು ಸಾವಿರ ರೂಪಾಯಿಗಳನ್ನು ನೀಡುತ್ತಿದ್ದು ಅದನ್ನು ಸಹ ಈ ಸರ್ಕಾರ ಬಂದ ಮೇಲೆ ಬಂದ್ ಮಾಡಿದರು. ಇದರಿಂದ ನಮ್ಮ ರೈತರಿಗೂ ಕೂಡ ಮೋಸ ಮಾಡಿದ್ದಾರೆ. ಮತ್ತು ಈ ಭಾಗದಲ್ಲಿ ಇರುವಂತಹ ಎಲ್ಲ ನೇಕಾರರಿಗೆ ಸರಿಯಾದ ಮಾರುಕಟ್ಟೆ ಇಲ್ಲದಿರುವುದರಿಂದ ಮತ್ತು ಕಚ್ಚಾ ಮಾಲುಗಳ ದರಗಳು ಗಗನಕ್ಕೆ ಏರಿದ್ದರಿಂದ ಅವರು ನೇಯ್ದದಂತಹ ಸೀರೆಗಳಿಗೆ ಉತ್ತಮವಾದ ದರ ವಿಲ್ಲದೆ ನೇಕಾರರು ಚಿಂತೆಗೀಡಾಗಿದ್ದಾರೆ. ಈ ಸರ್ಕಾರವು ನೇಕಾರರ ಬದುಕನ್ನು ಸಹ ಕಸಿದುಕೊಂಡಿದೆ ಎಂದು ಹೇಳಿದರು. ಹುನಗುಂದ ತಾಲೂಕಿನ ಶಾಸಕರಾದ ಕಾಶಪ್ಪನವರು ವಿಧಾನಸೌಧದಲ್ಲಿ ಅಧಿವೇಶನ ನಡೆದ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲೆಯ ಸಮಸ್ಯೆಯನ್ನು ಮಾತನಾಡುತ್ತಾರೆ ಎಂದು ನಾವು ಅಂದುಕೊಂಡಿದ್ದೆವು. ಆದರೆ ಅವರಿಗೆ ಐಪಿಎಲ್ ಕ್ರಿಕೆಟ್ ನೋಡಲು ಟಿಕೆಟ್ ಕೊಡಿಸಬೇಕೆಂದು ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿದ್ದನ್ನು ನೋಡಿದರೆ ಇವರು ಜಿಲ್ಲೆಯ ಸಮಸ್ಯೆಯನ್ನು ಏನು ಬಗೆಹರಿಸುತ್ತಾರೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ್, ಡಾ.ಮಾನೆ, ರಾಜು ನಾಯ್ಕರ, ಹಾಗೂ ಬಿಜೆಪಿಯ ಎಲ್ಲ ಕಾರ್ಯಕರ್ತರು ಮುಖಂಡರು ಭಾಗವಹಿಸಿದ್ದರು.



ಏಕತೆಯಿಂದ ಕಾಂಗ್ರೆಸ್ ಗೆಲ್ಲಿಸೋಣ: ಮಲ್ಲಿಕಾರ್ಜುನ ಮೇಟಿ

• ಬಾಗಲಕೋಟೆ: ನಾವೆಲ್ಲರೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸಿ ಉಮೇಶ ಮೇಟಿ ಅವರನ್ನು ಗೆಲ್ಲಿಸೋಣ ಎಂದು ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಮೇಟಿ ಹೇಳಿದರು.

ಮುಚಖಂಡಿ ಎಲ್‌ಟಿ 1, ಎಲ್‌ಟಿ 2 ಗ್ರಾಮಗಳಲ್ಲಿ ಭಾನುವಾರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. ಬಡವರ ಪಕ್ಷವಾದ ಕಾಂಗ್ರೆಸ್ ಎಲ್ಲ ಪಕ್ಷಗಳ ತಾಯಿ ಎನಿಸಿದೆ. ಸರಕಾರದಿಂದ ಬಡವರಿಗಾಗಿ ಯೋಜನೆಗಳನ್ನು ರೂಪಿಸಿದ್ದೆ ಕಾಂಗ್ರೆಸ್ ಪಕ್ಷ. ಬುದ್ಧ, ಬಸವ ಅಂಬೇಡ್ಕರ್ ಸಿದ್ಧಾಂತಗಳ ಮೇಲೆ ಸಾಮಾಜಿಕ ನ್ಯಾಯ ಒದಗಿಸುವ ನಾಯಕರು ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ಎಚ್.ವೈ.ಮೇಟಿ ಅವರ ಅಭಿವೃದ್ಧಿ ಕಾರ್ಯ ಗಮನಿಸಿ ಉಮೇಶ ಮೇಟಿ ಅವರ ಕೈ ಬಲಪಡಿಸಬೇಕು ಎಂದು ಕೋರಿದರು. ಅಭ್ಯರ್ಥಿ ಉಮೇಶಮೇಟಿ, ಆನಂದಜಿಗಜಿನ್ನಿ ಉಪಸ್ಥಿತರಿದ್ದರು.



ಅಪಾರ ಬೆಂಬಲಿಗರೊಂದಿಗೆ ಸಂಜೆರಾಮತಾಳ, ಹೂವಿನಹಳ್ಳಿ, ಮುಳ್ಳೂರ, ಕಳ್ಳಿಗುಡ್ಡ, ನಿಂಬಲಗುಂದಿ, ಐಹೊಳೆ ಮತ್ತಿತರ ಭಾಗಗಳಲ್ಲೂ ಉಮೇಶ ಮೇಟಿ ಪ್ರಚಾರ ನಡೆಸಿದರು. ನಗರದ ವಿವಿಧ ಭಾಗಗಳಲ್ಲಿ ಮಾಜಿ ಸಚಿವ ಅಜಯಕುಮಾರ್ ಸರನಾಯಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಮಲ್ಲಿಕಾರ್ಜುನ ಚರಂತಿಮಠ, ನಾಗರಾಜ ಹದ್ಲಿ, ಸಂತೋಷ ಹೊಕ್ರಾಣಿ, ಶಿವಕುಮಾರ ನಂದಿಕೋಲಮಠ, ಬಸವಪ್ರಭು ಸರನಾಡಗೌಡ, ಅಬ್ದುಲರಜಾಕ್ ಬೇನೂರ, ಅಕ್ಬರ್ ಮುಲ್ಲಾ, ಜಾಫರ್ ಬೇಪಾರಿ ಇತರರು ಪ್ರಚಾರಕೈಗೊಂಡು ಮತ ಯಾಚಿಸಿದರು. ತಾಲೂಕಿನ ಸೀತಿಮನಿ ಸ್ಟೇಷನ್‌ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರ ಪರ ಪ್ರಚಾರ ನಡೆಸಿದ ಶಾಸಕ ಅಪ್ಪಾಜಿ ನಾಡಗೌಡ, ದಿ.ಎಚ್.ವೈ.ಮೇಟಿ ಜನಪರ ಕಾರ್ಯಗಳೇ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರೀರಕ್ಷೆಯಾಗಲಿವೆ ಎಂದರು.

ಎಲ್ಲ ಕ್ಷೇತ್ರದಲ್ಲಿ ಮಹಿಳೆಯರೇ ಸಿಂಹಪಾಲು: ಚಂದಾವರಕರ

• ಜಮಖಂಡಿ: ಮಹಿಳೆಯಲ್ಲಿ ಮಾತೆ, ದೇವತೆಯ ರೂಪ ಕಾಣುವ ದೇಶ ನಮ್ಮದು. ಆದರೂ ಈ ಹಿಂದೆ ಮಹಿಳೆಯರಿಗೆ ಸಮಾನತೆಯಿಲ್ಲ ಎಂದು ಹೇಳಿದ ನಾವು ಈಗ ನೋಡಿದರೆ ಮಹಿಳೆಯರೇ ಎಲ್ಲ ಕ್ಷೇತ್ರದಲ್ಲಿ ಸಿಂಹಪಾಲು ಅಲಂಕರಿಸಿದ್ದಾರೆ ಎಂದು ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮೀನಾ ಚಂದಾವರಕರ ಹೇಳಿದರು.

ನಗರದ ಬಸವ ಭವನದಲ್ಲಿ ಸ್ವಾ ಸೇ ಪದ್ಮಾವತಿಬಾಯಿ ದೇಸಾಯಿ ಅಭಿಮಾನಿ ಬಳಗ, ಜಿಲ್ಲಾ ಕಸಾಪ, ಹಿಂದುಸ್ತಾನಿ ಸೇವಾದಳ, ಟ್ರಸ್ಟ ಸಹಯೋಗದಲ್ಲಿ ಡಾ.ತಾತಾಸಾಹೇಬ ಬಾಂಗಿ ಸಂಶೋಧನಾ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಓರ್ವ ಮಹಿಳೆಯು ಏನಾದರೂ ಸಾಧಿಸಬಹುದು ಎಂದರೆ ಇಲ್ಲಿಯ ಇವತ್ತಿನ ಕಥಾ ವಸ್ತುವಾಗಿದ್ದ ಸ್ವಾತಂತ್ರ್ಯ ಸೇನಾನಿ ಪದ್ಮಾವತಿಬಾಯಿ ದೇಸಾಯಿವರು. ಹುದುಗಿದ್ದ ಇತಿಹಾಸ ಹೆಕ್ಕಿ ತೆಗೆಯಬೇಕು. ಆಗ ಮಾತ್ರ ನಮ್ಮ ಯೋಧರ ಪರಿಚಯವಾಗುತ್ತದೆ ಎಂದು ಹೇಳಿದರು.

ಗ್ರಂಥ ಕರ್ತೃ ಡಾ.ತಾತಾಸಾಹೇಬ ಬಾಂಗಿ ಮಾತನಾಡಿ, ನಾನು ಮೂರು ಜನರ ಸಂಶೋಧನೆಯ ಗ್ರಂತ ಮಾಡಿದ್ದೇನೆ. ಅದರಲ್ಲಿ ಮಹರ್ಷಿ ಶಿಂಧೆ ಮತ್ತು ದೇಸಾಯಿವರು ಸ್ಥಳೀಯರೆ ಆಗಿದ್ದಾರೆ. ಇಂದು ಹುದುಗಿಹೋದ ಸ್ವಾತಂತ್ರ್ಯ ಯೋಧರ ಇತಿಹಾಸ ಹೊರತೆಗಯಬೇಕಿದೆ ಎಂದರು.



ಸಂಯುಕ್ತ ಕರ್ನಾಟಕ ವಿಶ್ರಾಂತ ಸಂಪಾದಕ ಸಾಹಿತಿ ಪತ್ರಕರ್ತ ಮನೋಜ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಿದ್ದ ಕ್ಷೇತ್ರದ ಸಿದ್ದಮುತ್ಯಾ, ಮಹಾದೇವ ಬಸರಕೋಡ ಮಾತನಾಡಿದರು. ಸವಿತಾ ಬೆಳಗಲಿ, ಪ್ರೊ.ಕೆ.ಚನ್ನಬಸಪ್ಪಾ, ಸುಬೇದಾರ ಮೇಜರ ನಿವೃತ್ತ ರಾಮು ಶಿರೋಳ, ಬಸವರಾಜ ಹಟ್ಟಿಗೌಡರ, ಡಾ.ಎಚ್.ಬಿ.ಚೌಧರಿ, ವಿಶೇಷ ಗೌರವಾನ್ವಿತ ಡಾ.ಪ್ರಹ್ಲಾದ ಹುಲ್ಯಾಳಕರ, ಡಾ.ಪ್ರಕಾಶ ಬಾಳಾದಿಕ್ಷೀತ ಹೊನವಾಡ, ನಿ ಕ್ಯಾಪ್ಟನ ಗಿರಿ ಮಲ್ಲಪ್ಪ ಹಂಚಿನಾಳ, ಕಾಡು ಮಾಳಿ, ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಎ.ಆರ್.ಪಾಟೀಲ, ಹಿಂದುಸ್ತಾನಿ ಸೇವಾದಳ ವ್ಯವಸ್ಥಾಪಕ ಧರ್ಮದರ್ಶಿ ಶ್ರೀನಿವಾಸ ಛಬ್ಬಿ, ಕಸಾಪ ತಾಲೂಕಾಧ್ಯಕ್ಷ ಸಂತೋಷ ತಲಕೇರಿ ಸರಿತಾ ಶಿರಗುಪ್ಪಿ, ಪ್ರಭು ಹಿಡಕಲ್, ಉಪಪ್ರಾಚಾರ್ಯ ಮಹಾಂತೇಶ ನರಸಗೌಡರ ಇದ್ದರು.

ಕಪ್ಪರ ಪಡಿಯಮ್ಮದೇವಿ ರಥೋತ್ಸವ



• ಬೀಳಗಿ: ತಾಲೂಕಿನ ನಾಗರಾಳ ಗ್ರಾಮದ ಆರಾಧ್ಯ ದೇವತೆ ಕಪ್ಪರಪಡಿಯಮ್ಮ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಶನಿವಾರ ರಥೋತ್ಸವ ಸಡಗರದಿಂದ ಜರುಗಿತು. ಪಲ್ಲಕ್ಕಿ, ಸಕಲ ವಾದ್ಯ ವೈಭವದೊಂದಿಗೆ ದಿಗಂಬರೇಶ್ವರ ಮಠದ ಪೂಜ್ಯರಾದ ಶೇಷಪ್ಪಯ್ಯ ಸ್ವಾಮೀಜಿ, ನಿಂಗಪ್ಪಯ್ಯ ಸ್ವಾಮೀಜಿ ವಿವಿಧ ಸುಮಗಳಿಂದ ಅಲಂಕೃತವಾದ ರಥದ ಮೇಲೇರಿ ಆಸೀನರಾಗುತ್ತಿದ್ದಂತೆ ಭಕ್ತರು ತೇರನ್ನೆಳೆದು ಪಾದಗಟ್ಟೆ ತಲುಪಿದ ಬಳಿಕ ಮರಳಿ ಶ್ರೀಮಠಕ್ಕೆ ರಥ ಎಳೆದು ತಂದರು. ರಥ ದೇವಸ್ಥಾನ ತಲುಪಿದ ನಂತರ ಶ್ರೀಗಳು ಭಕ್ತರನ್ನು ಕೈಬೀಸಿ ಆಶೀರ್ವದಿಸಿದರು. ವಿವಿಧೆಡೆಯಿಂದ ಆಗಮಿಸಿದ್ದ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಉತ್ತತ್ತಿ ರಥಕ್ಕೆ ಹಾರಿಸಿ ಭಕ್ತಿ ಮೆರೆದರು. ಮದ್ದು ಸುಡುವ ಕಾರ್ಯಕ್ರಮ ಜರುಗಿತು. ರಾತ್ರಿ ಯುವರತ್ನ ವೇದಿಕೆ ಸಹಯೋಗದಲ್ಲಿ ಚಿಕ್ಕಾಲಗುಂಡಿಯ ಅಂಜನಿಪುತ್ರ ನಾಟ್ಯ ಸಂಘದಿಂದ 'ತಾಯಿ ಋಣ, ಮಣ್ಣಿನ ಗುಣ' ನಾಟಕ ಪ್ರದರ್ಶನಗೊಂಡಿತು.

ಹೇಮರೆಡ್ಡಿ ಮಲ್ಲಮ್ಮನ ಮೂರ್ತಿ ಮೆರವಣಿಗೆ

• ಇಳಕಲ್: ನಗರಕ್ಕೆ ಸಮೀಪದ ಚಿಕ್ಕ ಓತಗೇರಿ ಗ್ರಾಮದಲ್ಲಿ ಮಹಾಶಿವ ಶರಣೆ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದ ಉದ್ಘಾಟನೆ ನಿಮಿತ್ತ ಇಳಕಲ್ ನಗರದಲ್ಲಿನ ಬಸವೇಶ್ವರ ವೃತ್ತದಿಂದ ಮಲ್ಲಮ್ಮನ ಮೂರ್ತಿ ಕುಂಭ ಕಳಸದ ಮೆರವಣಿಗೆ ಮೆರವಣಿಗೆಯು ವಿಜೃಂಭಣೆಯಿಂದ ನಡೆಯಿತು. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ವೃತ್ತದಿಂದ ಇಳಕಲ್ ನಗರದ ಹೃದಯ ಭಾಗವಾದ ಎಸ್.ಆರ್.ಕಂಠಿ ಅವರ ವೃತ್ತದ ಮಾರ್ಗವಾಗಿ ಬಿಸಿಲು ಲೆಕ್ಕಿಸದೆ ಗೊರಬಾಳನಾಕಾ, ಸರ್ಕಾರಿ ಆಸ್ಪತ್ರೆ, ಮುರ್ತುಜಾಖಾದ್ರಿ ದರ್ಗಾ, ಮಾರುತೇಶ್ವರ ದೇವಸ್ಥಾನದ ಮಾರ್ಗವಾಗಿ ಮಾಳಿಪರವಾಗಿ ಮಂಗಳಮ್ಮ ದೇವಸ್ಥಾನದ ಮೂಲಕ ಹಿರೇ ಓತಗೇರಿ ಮಾರ್ಗವಾಗಿ ಚಿಕ್ಕ ಓತಗೇರಿಗೆ ಮೆರವಣಿಗೆ ಮೂಲಕ ಮಹಾಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಮೂರ್ತಿಯು ದೇವಸ್ಥಾನದ ಆವರಣಕ್ಕೆ ಬಂದು ತಲುಪಿತು. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಮೂರ್ತಿ ಮೆರವಣಿಗೆಯಲ್ಲಿ ಅನೇಕ ಕಲಾ ಮೇಳಗಳು ಆಗಮಿಸಿದ್ದವು, ಮಹಿಳೆಯರು ಹಲವು ಗಂಟೆಗಳ ಕಾಲ ಕುಂಭ ಹೊತ್ತು ಭಕ್ತಿ ಸೇವೆಗೈದರು. ಮಲ್ಲಮ್ಮನವರ ಮೂರ್ತಿ ಮೆರವಣಿಗೆಯಲ್ಲಿ ಚಿಕ್ಕ ಓತಗೇರಿ ಗ್ರಾಮದ ಗುರು ಹಿರಿಯರು, ಯುವ ಮಿತ್ರರು ಮಹಿಳೆಯರು, ಇಳಕಲ್ -ಹುನಗುಂದ ತಾಲೂಕಿನ ರೆಡ್ಡಿ ಸಮಾಜ ಬಾಂಧವರು ಹಾಗೂ ಸರ್ವ ಸಮಾಜದ ಗುರುಹಿರಿಯರು ಯುವ ಮಿತ್ರರು ಪಾಲ್ಗೊಂಡು ತಾಯಿಯ ಆಶೀರ್ವಾದಕ್ಕೆ ಪಾತ್ರರಾದರು.



ವೈಭವದ ರಾಚೋಟೇಶ್ವರ ರಥೋತ್ಸವ



• ಕೆರೂರ: ಪಟ್ಟಣದ ಭದ್ರಕಾಳಿ ಸಮೇತ ರಾಚೋಟೇಶ್ವರ ರಥೋತ್ಸವವು ಶನಿವಾರ ಸಂಜೆ ವೈಭವದಿಂದ ಜರುಗಿತು. ಬೆಳಗ್ಗೆ ದೇವಸ್ಥಾನದಲ್ಲಿ ರಾಚೋಟೇಶ್ವರ ದೇವರಿಗೆ ಮಹಾಭಿಷೇಕ, ರುದ್ರಾಭಿಷೇಕ ಹಾಗೂ ವಿವಿಧ ಪೂಜಾ ಕಾರ್ಯಗಳು ನಡೆದವು. ಜಾತ್ರೆಯ ಅಂಗವಾಗಿ ದೇವಸ್ಥಾನವನ್ನು ಶೃಂಗರಿಸಲಾಗಿತ್ತು. ಬೆಳಗ್ಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕಳಸದ ಮೆರವಣಿಗೆಯು ಸಕಲ ಮಂಗಲವಾದ್ಯಗಳೊಂದಿಗೆ ನಡೆಯಿತು. ಸಂಜೆ ಗೋಧೂಳಿ ಮೂಹೂರ್ತದಲ್ಲಿ ರಾಚೋಟೇಶ್ವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ತಂದು ರಥದಲ್ಲಿ ಪ್ರತಿಷ್ಠಾಪಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ದೇವಸ್ಥಾನದ ಆವರಣದಲ್ಲಿ ಸೇರಿದ್ದ ಅಪಾರ ಭಕ್ತರ ಸಮ್ಮುಖದಲ್ಲಿ ರಥೋತ್ಸವವು ವಿಜೃಂಭಣೆಯಿಂದ ಜರಗಿತು, ಭಕ್ತರು ರಥಕ್ಕೆ ಉತ್ತತ್ತಿ ಹಾಗೂ ಬಾಳೆ ಹಣ್ಣು ಎಸೆದು ಭಕ್ತಿಯನ್ನು ಸಮರ್ಪಿಸಿದರು. ದೇವಸ್ಥಾನದ ಅರ್ಚಕ ಬಸಯ್ಯ ಮಠಪತಿ, ದೇವಾಲಯದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಆರ್.ಆರ್.ಶೆಟ್ಟರ, ಅಶೋಕ ಜಿಗಳೂರ, ಪರಶುರಾಮ ಮಲ್ಲಾಡದ, ಸಿದ್ದನಗೌಡ ಪಾಟೀಲ, ಜಗದೀಶ ಕೊಣ್ಣೂರ, ಪಿಎಸ್‌ಐಗಳಾದ ಭೀಮಪ್ಪ ರಬಕವಿ, ಸಿದ್ದಪ್ಪ ಯಡಹಳ್ಳಿ, ಹನಮಂತ ನೆರಳ ನೇತೃತ್ವದಲ್ಲಿ ಸೂಕ್ತ ಬಂದೂಬಸ್ತ ಒದಗಿಸಲಾಗಿತ್ತು.

ಎನ್‌ಎಸ್‌ಎಸ್‌ನಿಂದ ವ್ಯಕ್ತಿತ್ವ ನಿರ್ಮಾಣ

• ಗುಳೇದಗುಡ್ಡ: ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಭಾಗವಹಿಸುವುದರಿಂದ ಅವರಲ್ಲಿ ನಮ್ಮ ಗ್ರಾಮೀಣ ಭಾಗದ ಬಗ್ಗೆ ಅರಿವು ಹಾಗೂ ಸಮಾಜ ಸೇವಾ ಮನೋಭಾವನೆ ಬೆಳೆಯುತ್ತದೆ. ಅಲ್ಲದೇ ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ಎನ್‌ಎಸ್‌ಎಸ್ ಸಹಕಾರಿಯಾಗಿದೆ ಎಂದು ಕಾಳಿದಾಸ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಎಚ್.ಎಂ.ಸಂಗಮದ ಹೇಳಿದರು. ತಾಲೂಕಿನ ರಾಘಾಪೂರ ಗ್ರಾಮದಲ್ಲಿ ಬಾದಾಮಿಯ ಕಾಳಿದಾಸ ಬಿಎಸ್‌ಡಬ್ಲ್ಯೂ, ಬಿ.ಎ, ಬಿಕಾಂ ಪದವಿ ಮಹಾವಿದ್ಯಾಲಯ ಹಾಗೂ ಬಾಗಲಕೋಟ ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರದ ಸಮರೂಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉಪನ್ಯಾಸಕ ಎಸ್.ಎಚ್.ಕರಿಗಾರ ಮಾತನಾಡಿ, ಎನ್‌ಎಸ್‌ಎಸ್ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಶಿಸ್ತು, ನಾಯಕತ್ವ, ದೇಶಭಕ್ತಿ ಭಾವನೆ ಬೆಳೆಯುತ್ತದೆ. ವಿದ್ಯಾರ್ಥಿಗಳು ಹೆಚ್ಚುಹೆಚ್ಚಾಗಿ ಎನ್‌ಎಸ್‌ಎಸ್ ಶಿಬಿರಗಳಲ್ಲಿ ಭಾಗವಹಿಸಬೇಕು ಎಂದರು. ಹಂಸನೂರು ಶಿವಾನಂದ ಮಠದ ಅಭಿನವ ಬಸವರಾಜ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಗ್ರಾಪಂ ಪಿಡಿಒ ಮಂಜುನಾಥ ಅರಳಿಕಟ್ಟಿ, ಯಮನಪ್ಪ ಗಿಡ್ಡನಾಯಕನಾಳ, ಬಾಲು ಉಂಡಿ, ರಂಗಪ್ಪ ಡಂಬೂರ, ಎಸ್‌ಡಿಎಂಸಿ ಅಧ್ಯಕ್ಷ ಕಲ್ಲಯ್ಯ ಒಡೆಯರ್, ರಂಗಪ್ಪ ದಾದಿ, ಯಮನಪ್ಪ ಕಟಾಪುರ, ಉಮೇಶ್ ಮಮಟಗೇರಿ, ಎನ್‌ಎಸ್‌ಎಸ್ ಸಂಯೋಜಕ ಪಿ.ಆರ್.ವಾಗ್ಮೋಡೆ, ಡಿ.ಎಫ್.ಮಾದರ, ಎಂ.ಎಸ್. ಗುಡಿಸಾಗರ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ರಾಮನವಮಿ ಉತ್ಸವ

ತಾಳಿಕೋಟೆ: ಪಟ್ಟಣದ ಶ್ರೀರಾಮ ನವಮಿ ಉತ್ಸವ ಸಮಿತಿ(ರಿ) ವತಿಯಿಂದ ಶ್ರೀರಾಮಚಂದ್ರರ ಜನ್ಮದಿನದ ಪ್ರಯುಕ್ತವಾಗಿ ಆಯೋಜಿಸಿದ ಎರಡನೇ ವರ್ಷದ ರಾಮನವಮಿ ಉತ್ಸವ ಹಾಗೂ ಭವ್ಯ ಶೋಭಾಯಾತ್ರೆ ಮಾ.30ರಂದು ನಡೆಯಲಿದೆ. ಉತ್ಸವದ ಅಂಗವಾಗಿ ಇಂದು ಸಂಜೆ ಗಂಟೆಗೆ ಮಹಾರಾಣಾ ಪ್ರತಾಪ ಸಿಂಹಜೀ ವೃತ್ತದಲ್ಲಿ ನಡೆಯಲಿರುವ ಬಹಿರಂಗ ಸಭೆಯ ಸಾನಿಧ್ಯವನ್ನು ಖಾಸ್ಗತೇಶ್ವರ ಮಠದ ಸಿದ್ದಲಿಂಗ ದೇವರು, ಗುಂಡಕನಾಳ ಬೃಹನ್ಮಠದ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಕೆಸರಟ್ಟಿ ಶಂಕರಲಿಂಗ ಮಠದ ಸೋಮಲಿಂಗ ಸ್ವಾಮಿಗಳು ಹಾಗೂ ವೇದ ಮೂರ್ತಿ ವೆಂಕಟೇಶಾಚಾರ್ಯ ಗ್ರಾಮಪುರೋಹಿತ ವಹಿಸುವರು. ವಿಜಯಪುರ ನಗರ ಶಾಸಕ ಬಸನಗೌಡ ಆರ್.ಪಾಟೀಲ ಯತ್ನಾಳ ಸಮಾರಂಭ ಉದ್ಘಾಟಿಸುವರು. ಪುರಸಭೆ ಮಾಜಿ ಅಧ್ಯಕ್ಷ ದಶರಥಸಿಂಗ್ ಎನ್.ಮನಗೂಳಿ ಅಧ್ಯಕ್ಷತೆ ವಹಿಸುವರು. ವಿಜಯಪುರ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಮುಖ್ಯ ಅತಿಥಿಗಳಾಗಿ ಆಗಮಿಸುವರು. ವೇದಿಕೆ ಕಾರ್ಯಕ್ರಮದ ನಂತರ ಭವ್ಯ ಶೋಭಾಯಾತ್ರೆ ಪಟ್ಟಣದ ಮಹಾರಾಣಾ ಪ್ರತಾಪ್ ಸಿಂಹಜೀ ವೃತದಿಂದ ಛತ್ರಪತಿ ಶಿವಾಜಿ ಮಹಾರಾಜ ವೃತ್ತ, ಕತ್ರಿ ಬಜಾರ್, ಅಂಬಾಭವಾನಿ ದೇವಸ್ಥಾನ ಮಾರ್ಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಬಸವೇಶ್ವರ ವೃತ್ತದಲ್ಲಿ ಸಂಪನ್ನವಾಗುವುದು ಎಂದು ರಾಮನವಮಿ ಉತ್ಸವ ಸಮಿತಿಯ ಅಧ್ಯಕ್ಷರು ತಿಳಿಸಿದ್ದಾರೆ.

ಮಹಾತ್ಮರ ಹೋರಾಟ ಇಂದಿನ ಪೀಳಿಗೆಗೆ ಸ್ಫೂರ್ತಿ

ಇಂಡಿ: ಇಂಚಗೇರಿ ಮಠವು ಆಧ್ಯಾತ್ಮಿಕತೆಯ ಜೊತೆಗೆ ಸ್ವಾತಂತ್ರ್ಯ ಸಂಗ್ರಾಮ, ಗೋರಕ್ಷಾ ಹೋರಾಟ ಮತ್ತು ಸರ್ವೋದಯದ ಪ್ರಮುಖ ಕೇಂದ್ರವಾಗಿದ್ದು, ಇಲ್ಲಿನ ಅನೇಕ ಮಹಾತ್ಮರ ಹೋರಾಟವು ಇಂದಿನ ಪೀಳಿಗೆಗೆ ಸ್ಫೂರ್ತಿಯಾಗಿದೆ ಎಂದು ಶಿಕ್ಷಕಿ ಸರೋಜಿನಿ ಮಾವಿನಮರ ಹೇಳಿದರು. ಭೀಮಾಂತರಂಗ ಆನ್‌ಲೈನ್ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಜಗಲಿ ಕೇಂದ್ರದ ವತಿಯಿಂದ ಹಮ್ಮಿಕೊಂಡ 'ಇಂಚಗೇರಿ ಮಾಧವಾನಂದರು' ಕುರಿತ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಅವರು ಮಾತನಾಡಿದರು. ಇಂಚಗೇರಿ ಮಠದ ಮಾಧವಾನಂದರು ಓರ್ವ ಮಠಾಧೀಶರಾಗಿ ಬ್ರಿಟಿಷರ ವಿರುದ್ಧ ಭಕ್ತರೊಂದಿಗೆ ಸಶಸ್ತ್ರವಾಗಿ ಹೋರಾಡಿದ ಕ್ರಾಂತಿಕಾರಿ ಸಂತ. ಕಳೆದ 50 ವರ್ಷಗಳಿಂದ ಈ ಮಠದಲ್ಲಿ ಅಂತರಜಾತಿ ಮತ್ತು ಅಂತರಧರ್ಮದ ವಿವಾಹಗಳನ್ನು ಆಯೋಜಿಸುತ್ತಿದ್ದು, ಈ ವಿಶಿಷ್ಟ ಸಂಪ್ರದಾಯಕ್ಕೆ ಅಡಿಪಾಯ ಹಾಕಿದ್ದೇ ದಾರ್ಶನಿಕ ಮಾಧವಾನಂದರು ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಸಮಾರೋಪ ಭಾಷಣ ಮಾಡಿ ಮಾಧವಾನಂದರು ತಮ್ಮ ಕ್ರಾಂತಿಕಾರಿ ಚಿಂತನೆಯ ಜತೆ ಮಠವನ್ನು ಸಮಾಜದ ಎಲ್ಲ ವರ್ಗಕ್ಕೆ ತಲುಪಿಸಿ, ಸಾಮಾಜಿಕ ಸುಧಾರಣೆ ತಂದರು. ಭಾರತ ಸ್ವಾತಂತ್ರ್ಯ ಹಾಗೂ ಕರ್ನಾಟಕ ಏಕೀಕರಣಕ್ಕೆ ದುಡಿದ ಇಂಚಗೇರಿ ಮಠ ಇಂದಿಗೂ ತನ್ನ ಹಿರಿಮೆ ಉಳಿಸಿಕೊಂಡಿದ್ದು, ತಮ್ಮ ಮಠದ ಸಾವಿರಾರು ಭಕ್ತರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿಸಿದ ರಾಷ್ಟ್ರದ ಏಕೈಕ ಸಂತ ಮಾಧವಾನಂದರು ಎಂದು ಹೇಳಿದರು. ಚಿದಂಬರ ಬಂಡಗರ, ಡಾ.ರಾಘವೇಂದ್ರ ಕುಲಕರ್ಣಿ, ಗೀತಯೋಗಿ, ಬಸವರಾಜ ಕಿರಣಗಿ, ಸಿ.ಆರ್.ಮ್ಯಾಕೇರಿ, ಸದಾನಂದ ಈರಣಕೇರಿ, ಭವಾನಿ ಗಲಗಲಿ, ಲಕ್ಷ್ಮಣ ಝುಳಕಿ, ರಾಚು ಕೊಪ್ಪ, ನಿಂಗಣ್ಣ ಬಿರಾದಾರ, ಡಾ.ರಾಜಶ್ರೀ ಮಾರನೂರ, ರವಿ ಆರಳಿ, ಆರ್.ವಿ.ಪಾಟೀಲ, ಸಂಗನಗೌಡ ಹಚಡದ ಭಾಗವಹಿಸಿದ್ದರು. ಸಿಆರ್‌ಪಿ ಶ್ರೀಧರ ಹಿಪ್ಪರಗಿ ನಿರೂಪಿಸಿದರು. ಶಿಕ್ಷಕ ವೈ.ಜಿ.ಬಿರಾದಾರ ಸ್ವಾಗತಿಸಿದರು.

ಮೂರು ಲಿಪಿಗಳಲ್ಲಿ ಶಾಸನ ಬರೆಸಿದ ಅಶೋಕ: ರೆಡ್ಡಿ

ವಿಜಯಪುರ: ಭರತ ಖಂಡದಲ್ಲಿ ಸಾಮ್ರಾಟ ಅಶೋಕ ನಾಲ್ಕು ಭಾಷೆಗಳು, ಮೂರು ಲಿಪಿಗಳಲ್ಲಿ ಶಾಸನ ಬರೆಸಿದ್ದಾನೆ ಎಂದು ಖ್ಯಾತ ಶಾಸನ ತಜ್ಞ ಡಾ.ದೇವರಕೊಂಡ ರೆಡ್ಡಿ ಹೇಳಿದರು. ನಗರದ ಚೇತನಾ ಕಾಲೇಜು ಸಭಾಭವನದಲ್ಲಿ ಹಮ್ಮಿಕೊಂಡ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಜಿಲ್ಲಾ ಸಮಿತಿ ಹಮ್ಮಿಕೊಂಡ ಭರತ ಖಂಡದಲ್ಲಿನ ಅಶೋಕನ ಶಾಸನಗಳ ವಿಷಯದ ಕುರಿತು ಉಪನ್ಯಾಸ ನೀಡಿ ಅವರು ಮಾತನಾಡಿದರು. ಸಾಮ್ರಾಟ ಅಶೋಕನಿಗಿಂತ ಪೂರ್ವದಲ್ಲಿ ಭಾರತದಲ್ಲಿ ಗಟ್ಟಿಯಾದ ವಸ್ತುಗಳ ಮೇಲೆ ಬರವಣಿಗೆ ನಿಷಿದ್ಧವಾಗಿತ್ತು, ಪರ್ಷಿಯಾ, ಗ್ರೀಕ್ ಪ್ರಭಾವದಿಂದ ಅಶೋಕ ಗಟ್ಟಿಯಾದ ಬಂಡೆಗಲ್ಲುಗಳ ಮೇಲೆ ಶಾಸನಗಳನ್ನು ಬರೆಸಿದ. ಕರ್ನಾಟಕದಲ್ಲಿ ಒಟ್ಟು ಏಳು ಅಶೋಕನ ಶಾಸನಗಳು ಸಿಕ್ಕಿವೆ. ವಿಶೇಷವೆಂದರೆ ಉಳಿದ ಕಡೆಗಳಲ್ಲಿ ದೇವನಾಂಪ್ರಿಯ ಪ್ರಿಯದರ್ಶಿ ಅಂತಿದ್ದರೆ, ಕರ್ನಾಟಕ ಮಸ್ಕಿ ಸೇರಿದಂತೆ ಅನೇಕ ಕಡೆ ದೇವನಾಪ್ರಿಯ ಪ್ರಿಯದರ್ಶಿ ರಾಜ ಅಶೋಕ ಅಂತಿದೆ ಎಂದರು. ಅಭಾಸಾಪ ಜಿಲ್ಲಾಧ್ಯಕ್ಷ ವಿವೇಕ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾವತಿ ಬೆಣ್ಣೂರು, ಶ್ರೀರಂಗ ಕುಲಕರ್ಣಿ, ಮಾಧುರಿ ಕುಲಕರ್ಣಿ, ವಿಠ್ಠಲ ಜಾಧವ, ಆನಂದ ಗೋಡಸೆ, ಸುಕಾಂತ ಕುಲಕರ್ಣಿ, ರಮೇಶ ಕುಲಕರ್ಣಿ, ಶ್ರೀರಂಗ ಪುರಾಣಿಕ, ಗರೀಶ ಹನುಮಂತ ರೆಡ್ಡಿ, ವಿಶ್ವನಾಥ ದಬಾಡೆ, ಭಾರತಿ ಗೋಡಸೆ, ಗೀತಾ ವೈದ್ಯ ಇದ್ದರು.





ವಿಜಯಪುರ: ತಾಲೂಕಿನ ಜಂಬಗಿ ಗ್ರಾಮದ ಶರಣ ಶಿವಶಂಕರ ದಿಂಡವಾರ ಅವರ ತೋಟದಲ್ಲಿ ಕೊಡೆಕಲ್ ಬಸವೇಶ್ವರ ದೇವಾಲಯದಲ್ಲಿ ಜಾತ್ರೆ ಹಮ್ಮಿಕೊಳ್ಳಲಾಯಿತು.

ಕಾರ್ಯಕರ್ತರಿಗೆ ನಿರಂತರ ಅಭಿಯಾನವಾಗಲಿ

ಕೋಲ್ಹಾರ: ಬೂತ್ ಮಟ್ಟದಲ್ಲಿ ಬಿಜೆಪಿ ಕಾರ್ಯಕರ್ತರು ಗಟ್ಟಿಯಾಗಿರಲು ಮೇಲಿಂದ ಮೇಲೆ ಪ್ರಶಿಕ್ಷಣದಂತಹ ಅಭಿಯಾನಗಳು ನಡೆಯುತ್ತಿರಬೇಕು ಅಂದಾಗ ಮಾತ್ರ ಪಕ್ಷ ಬಲಿಷ್ಠವಾಗಿರಲು ಸಾಧ್ಯ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಗುರುಲಿಂಗಪ್ಪ ಅಂಗಡಿ ಹೇಳಿದರು. ಸ್ಥಳೀಯ ವಿಶ್ವಭಾರತಿ ವಿದ್ಯಾವರ್ಧಕ ಸಂಘದ ಯಲ್ಲಮ್ಮ ದೇವಿ ಸಿಬಿಎಸ್‌ಸಿ ಶಾಲಾ ಆವರಣದಲ್ಲಿ ಬಸವನಬಾಗೇವಾಡಿ ಮಂಡಲದಿಂದ ಮೂರು ದಿನಗಳವರೆಗೆ ಹಮ್ಮಿಕೊಂಡ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಬಿಟ್ಟು ಕೊಡುತ್ತಾರೆ ಅನ್ನುವ ಊಹಾಪೋಹಕ್ಕೆ ಕಿವಿಗೊಡಬೇಡಿ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿಯವರನ್ನು ಪಕ್ಷವು ಗುರುತಿಸಿದೆ ಎನ್ನುವುದನ್ನು ಕಾರ್ಯಕರ್ತರು ಮರೆಯದೆ ಮುನ್ನುಗ್ಗಬೇಕು ಎಂದರು. ಬಿಜೆಪಿ ಮುಖಂಡ ಚಂದ್ರಶೇಖರ ಕವಟಗಿ ಮಾತನಾಡಿ ಕಷ್ಟಕಾಲದಲ್ಲಿ ಪಕ್ಷದ ಹಿರಿಯರು ಬೆಳೆಸಿಕೊಂಡುಬಂದಿರುವ ಪರಿಣಾಮವಾಗಿ ಬಿಜೆಪಿ ಪಕ್ಷವೂ ಇಂದು ವಿಶ್ವದಲ್ಲಿಯೇ ಅತ್ಯಂತ ದೊಡ್ಡ ರಾಜಕೀಯ ಪಕ್ಷವಾಗಿ ಗುರುತಿಸಿಕೊಂಡಿದೆ ಆದ್ದರಿಂದ ಹಿರಿಯರ ಜೋತೆ ಯುವಕರು ಕೈಜೋಡಿಸಿ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸಲು ಪ್ರಯತ್ನಿಸಬೇಕು ಎಂದರು. ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಮಲ್ಲಿಕಾರ್ಜುನ ಜೋಗುರ, ಮಂಡಲ ಅಧ್ಯಕ್ಷ ಸಿದ್ದರಾಮ ಕಾಖಂಡಕಿ, ಸಂಗನಗೌಡ ಚಿಕೊಂಡ, ಮಲ್ಲಿಕಾರ್ಜುನ ದೇವರಮನಿ, ಶಂಕರಗೌಡ ಪಾಟೀಲ್, ರಾಮಣ್ಣ ಮಂಟೂರ, ಸವಿತಾ ಬೆಳ್ಳುಬ್ಬಿ, ಶಾಂತಾ ಬೀಳಗಿ, ರಾಜೇಶ್ವರಿ ಯರನಾಳ ಇದ್ದರು.



ಕೋಲ್ಹಾರ: ಸ್ಥಳೀಯ ವಿಶ್ವಭಾರತಿ ವಿದ್ಯಾವರ್ಧಕ ಸಂಘದ ಯಲ್ಲಮ್ಮ ದೇವಿ ಸಿಬಿಎಸ್‌ಸಿ ಶಾಲಾ ಆವರಣದಲ್ಲಿ ಬಸವನಬಾಗೇವಾಡಿ ಮಂಡಲದಿಂದ ಮೂರು ದಿನಗಳವರೆಗೆ ಹಮ್ಮಿಕೊಂಡ ಪಂಡಿತ್ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ನಡೆಯಿತು. ಬಿಜೆಪಿ ಜಿಲ್ಲಾ ಅಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಬಿಜೆಪಿ ಮುಖಂಡ ಚಂದ್ರಶೇಖರ ಕವಟಗಿ, ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಮಲ್ಲಿಕಾರ್ಜುನ ಜೋಗುರ, ಮಂಡಲ ಅಧ್ಯಕ್ಷ ಸಿದ್ದರಾಮ ಕಾಖಂಡಕಿ, ಸಂಗನಗೌಡ ಚಿಕೊಂಡ, ಮಲ್ಲಿಕಾರ್ಜುನ ದೇವರಮನಿ ಇದ್ದರು.

ಏ.27, 28ರಂದು 21ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ | ಮನಗೂಳಿ ಸಲಹೆ

ಸಾಹಿತ್ಯ ಸಮ್ಮೇಳನ ಯಶಸ್ಸಿಗೆ ಶ್ರಮಿಸಿ

ಸಿಂದಗಿ: ಏ.27 ಮತ್ತು 28ರಂದು 21ನೇ ಜಿಲ್ಲಾ ಕನ್ನಡ ಸಾಹಿತ್ಯದ ಸಮ್ಮೇಳನ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದ್ದು, ಅಧಿಕೃತ ದಿನಾಂಕವನ್ನು ಮುಂದಿನ ಸಭೆಯಲ್ಲಿ ತಿಳಿಸಲಾಗುವುದು ಎಂದು ಶಾಸಕ ಅಶೋಕ ಮನಗೂಳಿ ಕರೆ ನೀಡಿದರು.



ಸಿಂದಗಿ ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಹಮ್ಮಿಕೊಂಡ 21ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸುದೀರ್ಘ 14ವರ್ಷಗಳ ಅವಧಿಯ ನಂತರ ಸಿಂದಗಿ ತಾಲೂಕಿಗೆ ಜಿಲ್ಲಾ ಸಾಹಿತ್ಯ ಸಮ್ಮೇಳನದ ಭಾಗ್ಯ ಒದಗಿ ಬಂದಿದ್ದು, ಸಮ್ಮೇಳನದ ಯಶಸ್ಸಿಗೆ ಎಲ್ಲ ಇಲಾಖೆಯ ಅಧಿಕಾರಿಗಳು, ಸಾರ್ವಜನಿಕರು, ಮಹಿಳೆಯರು, ಹಿರಿಯ ಮತ್ತು ಕಿರಿಯ ಕವಿಗಳು, ಸಾಹಿತ್ಯಾಸಕ್ತರು ಮತ್ತು ಮಕ್ಕಳು ಕಂಕಣಬದ್ಧರಾಗಬೇಕು. ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರು ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಪದಾಧಿಕಾರಿಗಳ ಮುತುವರ್ಜಿ ಹಾಗೂ ಆಸಕ್ತಿಯಿಂದಾಗಿ ಸಮ್ಮೇಳನ ಆಯೋಜನೆಯಾಗಿರುವುದು ಹರ್ಷದಾಯಕ. ಸಮ್ಮೇಳನಕ್ಕೆ ಸಾಕಷ್ಟು ಖರ್ಚು ವೆಚ್ಚಗಳಿದ್ದು ದಾನಿಗಳು ಉದಾರ ಹಸ್ತದಿಂದ ಸಾಕಾರ ನೀಡಬೇಕು. ಅಲ್ಲದೇ ತಾಲೂಕಿನ ಎಲ್ಲ ಇಲಾಖೆಗಳ ಅಧಿಕಾರಿಗಳಿಗೂ ಕನ್ನಡ ನಾಡು ನುಡಿಯ ಅಸ್ಮಿತೆಯ ಬಗ್ಗೆ ಅಪಾರ ಗೌರವವಿದ್ದು, ಸಮ್ಮೇಳನ ಸಮಯದಲ್ಲಿ ಅದನ್ನು ಅವರು ಸಾದರಪಡಿಸಬೇಕು. ಅಲ್ಲದೆ ಸಕ್ರಿಯವಾಗಿ ಪಾಲ್ಗೊಂಡು ಕೆಲಸ ಕಾರ್ಯಗಳಲ್ಲಿ ಕೈಜೋಡಿಸಬೇಕು. ಸಮ್ಮೇಳನದಲ್ಲಿ ಸರ್ವಾಧ್ಯಕ್ಷರ ಮೆರವಣಿಗೆ, ಕುಂಭಮೇಳ, ಬುತ್ತಿ ಜಾತ್ರೆ, ವಿವಿಧ ಕಲಾತಂಡಗಳಿಂದ ಮೆರವಣಿಗೆ ಕಾರ್ಯಕ್ರಮ ಇರುತ್ತವೆ. ಇವೆಲ್ಲವುಗಳ ಜೊತೆಗೆ ಊಟೋಪಚಾರ, ವಸತಿ ಸೌಲಭ್ಯಗಳನ್ನು ಅಚ್ಚುಕಟ್ಟಾಗಿ ಆಯೋಜಿಸಿದಾಗ ಮಾತ್ರ ಸಮ್ಮೇಳನ ಯಶಸ್ವಿಯಾಗುತ್ತದೆ. ಸಿಂದಗಿ ನಗರದ ಕೀರ್ತಿ ನಾಡಿ ಗೆಲ್ಲ ಹಬ್ಬುವಂತೆ ಸಮ್ಮೇಳನದಲ್ಲಿ ಸಾಹಿತ್ಯಾಸಕ್ತರು, ಸಾರ್ವಜನಿಕರು, ಮಕ್ಕಳು, ಮಹಿಳೆಯರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ನವಿ ಮಾಡಿದರು.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ತಾಲೂಕಾಧ್ಯಕ್ಷ ವಾಯ್.ಸಿ ಮಯೂರ್ ಮಾತನಾಡಿ, ಕನ್ನಡದ ಸಹೃದಯಿ ಮನಸುಗಳೆಲ್ಲ ಸೇರಿ ಕನ್ನಡದ ನುಡಿ ಜಾತ್ರೆಯನ್ನು ಯಶಸ್ವಿಯಾಗಿ ಸಂಪನ್ನಗೊಳಿಸುವಲ್ಲಿ ತನು, ಮನ, ದನದಿಂದ ಸಹಕಾರ ನೀಡಬೇಕೆಂದು ವಿನಂತಿಸಿದರು.

ಸಿಂದಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಮಹಾಂತೇಶ ಪಟ್ಟಣಶೆಟ್ಟಿ, ದೇವರ ಹಿಪ್ಪರಗಿ ತಾಲೂಕಾಧ್ಯಕ್ಷ, ಸಿದ್ದು ಮೇಲಿನಮನಿ, ಆಲಮೇಲ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಅಶೋಕ ಕೊಳಾರಿ, ತಾಲೂಕು ಪಂಚಾಯತ್ ಇಒ ರಾಮು ಅಗ್ನಿ ಇದ್ದರು. ಸಿಂದಗಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಆನಂದ್ ಶಾಬಾದಿ ಕಾರ್ಯಕ್ರಮ ನಿರ್ವಹಿಸಿದರು. ಅಧಿಕಾರಿಗಳು ಉಪಸ್ಥಿತರಿದ್ದರು.

ಏಪ್ರಿಲ್‌ವರೆಗೂ ಕಾಲುವೆಗೆ ನೀರು ಹರಿಸಿ

ವಿಜಯಪುರ: ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ ಶೇಂಗಾ, ಮೆಕ್ಕೆಜೋಳ, ಈರುಳ್ಳಿ ಹಾಗೂ ತಡಮಾಡಿ ಬಿತ್ತನೆ ಮಾಡಿದ ಗೋಧಿ ಈ ಎಲ್ಲ ಬೆಳೆಗಳು ರೈತರ ಕೈ ಸೇರಬೇಕೆಂದರೆ ಏಪ್ರಿಲ್ ಅಂತ್ಯದವರೆಗೂ ಕಾಲುವೆಗೆ ನೀರು ಹರಿಸಬೇಕು ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಒತ್ತಾಯಿಸಿದರು.



ಈ ಕುರಿತು ಪ್ರಕಟಣೆ ನೀಡಿದ ಅವರು, ನೀರಾವರಿ ಉದ್ದೇಶಕ್ಕಾಗಿ ಆಲಮಟ್ಟಿ ಜಲಾಶಯ ವ್ಯಾಪ್ತಿಯ ಕಾಲುವೆಗಳಿಗೆ ಇನ್ನೂ ಕೇವಲ 3 ದಿನ ನೀರು ಹರಿಸಿ ಬಂದ್ ಮಾಡಲಾಗುವುದೆಂದು ಅಧಿಕಾರಿಗಳು ತಿಳಿಸಿದ್ದಾರೆ. ನ. 14, 2025 ರಂದು ಬೆಂಗಳೂರಿನಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆ ನಡೆಸುವ ಸಂದರ್ಭದಲ್ಲಿಯೇ ಏಪ್ರಿಲ್ ಅಂತ್ಯದವರೆಗೂ ಕಾಲುವೆಗೆ ನೀರು ಹರಿಸಲು ನಿರ್ಣಯ ತೆಗೆದುಕೊಳ್ಳಬೇಕೆಂದು ಹೋರಾಟ ಮಾಡಿ ಮನವಿ ಸಲ್ಲಿಸಲಾಗಿತ್ತು. ಆದರೆ ಹೋರಾಟವನ್ನು ಪರಿಗಣಿಸದೆ ಏಪ್ರಿಲ್ 3 ರಂದು ಕಾಲುವೆಗೆ ನಿರು ಹರಿಸುವುದನ್ನು ಐಸಿಸಿ ಸಭೆಯಲ್ಲಿ ತೀರ್ಮಾನಿಸಿದಂತೆ ಬಂದ್ ಮಾಡಲಾಗುವುದೆಂದು ಹೇಳಲಾಗಿದೆ. ಒಂದು ವೇಳೆ ಏ.3ರಂದು ನೀರು ಸ್ಥಗಿತಗೊಳಿಸದರೆ ಹಿಂಗಾರು ಹಂಗಾಮಿನ ಬೆಳೆಗಳು ಇಂತಹ ಉರಿಬಿಸಿಲಿಗೆ ಬೆಳೆಗಳು ಬಾಡಿಹೋಗುತ್ತವೆ. ಇದರಿಂದ ರೈತರು ಮತ್ತಷ್ಟು ತೊಂದರೆ ಎದುರಿಸಬೇಕಾಗುತ್ತದೆ. ಮೊದಲೇ ಮುಂಗಾರು ಹಂಗಾಮಿನ ಬೆಳೆಗಳು ಕೈ ಕೊಟ್ಟಿದ್ದರಿಂದ ರೈತರು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ, ಇಂತಹದರಲ್ಲಿ ಹಿಂಗಾರು ಹಂಗಾಮಿನ ಬೆಳೆಗಳಿಗೆ ಅಗತ್ಯವಿರುವಷ್ಟು ನೀರು ಕೊಡದಿದ್ದರೆ ರೈತರಿಗೆ ಗಾಯದ ಮೇಲೆ ಬರೆಎಳೆದಂತಾಗುತ್ತದೆ. ಆಲಮಟ್ಟಿ ಜಲಾಶಯದಲ್ಲಿ ಇನ್ನು 41.223 ಟಿಎಮ್‌ಸಿ ನೀರು ಸಂಗ್ರಹ ಇದ್ದು, ಅದರಲ್ಲಿ 17 ಟಿಎಮ್‌ಸಿ ಬಳಕೆಯ ನಿರ್ಭಂದವನ್ನು ಹೊರತುಪಡಿಸಿದರು ಇನ್ನು 23.603 ಟಿಎಮ್‌ಸಿ ನೀರು ಲಭ್ಯವಿದೆ. ಕಳೆದ ವರ್ಷಕ್ಕಿಂತಲೂ 7.76 ಟಿಎಮ್‌ಸಿ ನೀರು ಹೆಚ್ಚಿಗೆ ಲಭ್ಯವಿದೆ. ಹಿಂಗಾರು ಬೆಳೆಗಳಿಗೋಸ್ಕರ ಏಪ್ರಿಲ್ ಅಂತ್ಯದವರೆಗೂ ಕಾಲುವೆಗೆ ನೀರು ಹರಿಸಿದರೆ ಏನು ತೊಂದರೆಯಾಗುವುದಿಲ್ಲ, ಮುಂದಿನ ದಿನ ಮಾನಗಳಲ್ಲಿ ರೈತರನ್ನು ಐಸಿಸಿ ಸಭೆಗೆ ಆವ್ಹಾನಿಸಿ ರೈತರ ಅಭಿಪ್ರಾಯ ಪಡೆದುಕೊಂಡು, ನೀರು ಹರಿಸುವುದನ್ನು ಪ್ರಾರಂಭಿಸಬೇಕು. ಈ ಸದ್ಯ ತೆಗೆದುಕೊಂಡ ನಿರ್ಣಯವನ್ನು ಕೈ ಬಿಟ್ಟು ಏಪ್ರಿಲ್ ಅಂತ್ಯದವರೆಗೂ ಕಾಲುವೆಗೆ ನೀರು ಹರಿಸುವದನ್ನು ಮುಂದುವರೆಸಬೇಕು. ಇಲ್ಲದಿದ್ದರೆ ಅಖಂಡ ಕರ್ನಾಟಕ ರೈತ ಸಂಘದ ವತಿಯಿಂದ ಕೆಬಿಜೆಎನ್ ಎಲ್ ಮುಖ್ಯ ಅಭಿಯಂತರರ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹಕ್ಕೆ ಅಣಿಯಾಗಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ವಿಚಾರ ಸಂಕಿರಣ ಇಂದು

ಮುದ್ದೇಬಿಹಾಳ: ಸ್ಥಳೀಯ ಎಂಜಿವಿಸಿ ಮಹಾ ವಿದ್ಯಾಲಯ ಕನ್ನಡ ವಿಭಾಗದ ವತಿಯಿಂದ ಮಾ.30ರಂದು ಸೋಮವಾರ ಬೆಳಗ್ಗೆ 10.30 ಗಂಟೆಗೆ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯ; ತಾತ್ವಿಕ ಚಿಂತನೆಗಳು ಎಂಬ ವಿಷಯದ ಕುರಿತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಬಸವ ಸಮಿತಿಯ ಅಧ್ಯಕ್ಷ ಡಾ.ಅರವಿಂದ ಜತ್ತಿ ಕಾರ್ಯಕ್ರಮ ಉದ್ಘಾಟಿಸುವರು. ಆಂಧ್ರಪ್ರದೇಶದ ಕುಪ್ಪಂ ವಿಶ್ವವಿದ್ಯಾಲಯದ ಡಾ.ಎಂ.ಎಸ್.ದುರ್ಗಾಪ್ರಸಾದ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಹಾಗೂ ಪ್ರಾಧ್ಯಾಪಕ ಡಾ.ಮೈತ್ರೇಯಿಣಿ ಗದಗೆಪ್ಪಗೌಡರ ವಿಶೇಷ ಉಪನ್ಯಾಸ ನೀಡಲಿದ್ದಾರೆ. ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯದ ಕುರಿತು ಪ್ರಬಂಧ ಮಂಡಿಸುವ ಇಚ್ಛೆ ಉಳ್ಳವರು ದೂರವಾಣಿ 9986767832 ಸಂಖ್ಯೆಗೆ ಕರೆ ಮಾಡಬಹುದು ಎಂದು ಕನ್ನಡ ವಿಭಾಗದ ಮುಖ್ಯಸ್ಥ ಡಾ.ಪ್ರಕಾಶ ಎನ್.ನರಗುಂದ ತಿಳಿಸಿದ್ದಾರೆ.

ಜನಗಣತಿ ಕಾರ್ಯದ ಸಿಬ್ಬಂದಿಗೆ ತರಬೇತಿ ನೀಡಿ

ವಿಜಯಪುರ: ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ಭಾರತ ಜನಗಣತಿ 2027ರ ಕಾರ್ಯಕ್ಕೆ ನಿಯೋಜಿಸುವ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಿ, ನಿಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾರತ ಜನಗಣತಿ 2027ರ ಜನಗಣತಿ ಕುರಿತು ಪೂರ್ವಭಾವಿ ಸಿದ್ಧತೆ ಹಾಗೂ ತರಬೇತುದಾರರಿಗೆ ವಿಡಿಯೋ ಸಂವಾದ ಮೂಲಕ ಅವರು ಮಾತನಾಡಿದರು. ಗಣತಿ ಕಾರ್ಯಕ್ಕೆ ನಿಯೋಜಿಸಿದ ಸಿಬ್ಬಂದಿಗಳು ಕಾಲ ಕಾಲಕ್ಕೆ ನೀಡುವ ತರಬೇತಿಯ ಪ್ರಯೋಜನೆ ಪಡೆದುಕೊಂಡು ಗಣತಿ ಕಾರ್ಯವನ್ನು ಯಾವುದೇ ಲೋಪ, ದೋಷಗಳಾಗದಂತೆ ಕಾರ್ಯ ನಿರ್ವಹಿಸಬೇಕು. ಮೊದಲನೆ ಹಂತವಾಗಿ ಏಪ್ರಿಲ್ 1ರಿಂದ 15ರ ವರೆಗೆ ಸ್ವಯಂ ಗಣತಿ ಕಾರ್ಯ ನಡೆಯಲಿದ್ದು, ಏಪ್ರಿಲ್ 16ರಿಂದ ಮೇ 15ರ ವರೆಗೆ ಮನೆ ಪಟ್ಟಿ ಕ್ಷೇತ್ರ ಕಾರ್ಯ ಕೈಗೊಳ್ಳಲಾಗುವುದು. ಫೆಬ್ರವರಿ 2027ರಿಂದ ಜನಗಣತಿ ಕಾರ್ಯ ನಡೆಯಲಿದೆ ಎಂದರು.

ಜಿಲ್ಲೆಯ ಎಲ್ಲ ನಗರ ಮತ್ತು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಾಡಿಗೆಗೆ ಇರುವ ಕುಟುಂಬಗಳು ಒಳಗೊಂಡಂತೆ, ಎಲ್ಲ ಮನೆಗಳು, ತೋಟದ ವಸ್ತಿ, ಸ್ಲಂ, ಎಲ್ಲ ಕುಟುಂಬಗಳ ಮನೆ ಪಟ್ಟಿ ಕಾರ್ಯ ಕೈಗೊಳ್ಳಬೇಕು. ಜನಗಣತಿಯಿಂದ ಯಾವುದೇ ಕುಟುಂಬ ಕೈಬಿಟ್ಟು ಹೋಗದಂತೆ ಅತಿ ಎಚ್ಚರಿಕೆಯಿಂದ ಜನಗಣತಿ ಕಾರ್ಯ ನಿರ್ವಹಿಸಬೇಕು. 50 ಗಣತಿದಾರರ ಸಿಬ್ಬಂದಿಗಳಿಗೆ ಗುಂಪು ಮಾಡಿ ತರಬೇತಿ ನೀಡಬೇಕು. ತರಬೇತಿಗೆ ನಿಯೋಜಿಸುವ ಸಿಬ್ಬಂದಿಗಳಿಗೆ 2 ರಿಂದ 3 ಬಾರಿಗೆ ತರಬೇತಿ ನೀಡಿ ಪೂರ್ಣ ಪ್ರಮಾಣದ ತಿಳುವಳಿಕೆ ಹೊಂದುವಂತೆ ತರಬೇತಿ ನೀಡಬೇಕು. ಈ ಕಾರ್ಯದಲ್ಲಿ ಮುಖ್ಯವಾಗಿ ಒಂದು ವಾರ್ಡಿನಲ್ಲಿ ಮತ್ತೊಂದು ವಾರ್ಡ್ ವಿಲೀನವಾಗದಂತೆ ಬ್ಲಾಕುಗಳನ್ನು ರಚಿಸಿ ಅಂತಿಮಗೊಳಿಸಬೇಕು ಎಂದರು.

ತಹಶೀಲ್ದಾರರು ಹಾಗೂ ಮುಖ್ಯಾಧಿಕಾರಿಗಳು ಶೀಘ್ರವಾಗಿ ತರಬೇತಿ ನೀಡಬೇಕು. ಮನೆ ಪಟ್ಟಿ ಕ್ಷೇತ್ರ ಕಾರ್ಯ ಒಂದು ತಿಂಗಳ ಕಾಲ ನಡಯಲಿದ್ದು ಯಾರು ನಿರ್ಲಕ್ಷ್ಯ ಮಾಡದೆ ಈ ಕಾರ್ಯ ಪೂರ್ಣಗೊಳಿಸಿ ಕಟ್ಟುನಿಟ್ಟಾಗಿ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ, ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಇಂಡಿ ತಹಶೀಲ್ದಾರ ಬಿ.ಎಸ್.ಕಡಕಬಾವಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವೀರಯ್ಯ ಸಾಲಿಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದೀನ ಸೌದಾಗರ ಇದ್ದರು.



ಹಕ್ಕಿಗೊಂದು ಹನಿ ನೀರು ಅಭಿಯಾನ

ಇಂಡಿ: ಇಂದು ಅಳಿವಿನ ಅಂಚಿನಲ್ಲಿರುವ ಪಕ್ಷಿ, ಪ್ರಾಣಿ ಸಂಕುಲ ಉಳಿಯಬೇಕಾದರೆ ಅವುಗಳಿಗೆ ಮುಖ್ಯವಾಗಿ ಕುಡಿಯಲು ನೀರು ಬೇಕು. ಹಾಗಾಗಿ ಹಕ್ಕಿಗೊಂದು ಹನಿ ನೀರು ಅಭಿಯಾನ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಪ್ರತಿಯೊಬ್ಬರು ಸ್ವ ಇಚ್ಛೆಯಿಂದ ಅಲ್ಲಲ್ಲಿ ನೀರಿನ ತೊಟ್ಟಿಗಳನ್ನು ಅಳವಡಿಸಿ ಅಳವಿನ ಅಂಚಿನಲ್ಲಿರುವ ಪಕ್ಷಿಗಳ ಉಳಿವಿಗಾಗಿ ಶ್ರಮಿಸಬೇಕು ಎಂದು ಶಾಸಕರ ಪುತ್ರ ಯಶವಂತರಾಯಗೌಡ ವಿ.ಪಾಟೀಲ ಫೌಂಡೇಶನ್ ಅಧ್ಯಕ್ಷ ವಿಠ್ಠಲಗೌಡ ಪಾಟೀಲ ಹೇಳಿದರು.

ನಗರದ ಸಿಂದಗಿ ರಸ್ತೆಯ ವಾರ್ಡ್ 15ರ ಸಿದ್ದೇಶ್ವರ ಉದ್ಯಾನವನದಲಿ ಯಶವಂತರಾಯಗೌಡ ವಿ.ಪಾಟೀಲ ಫೌಂಡೇಶನ್(ರಿ) ಪಡನೂರ ವತಿಯಿಂದ ಹಮ್ಮಿಕೊಂಡ ಹಕ್ಕಿಗೊಂದು ಹನಿ ನೀರು ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇಂದು ಬೀರು ಬೇಸಿಗೆ ಕಾಲವಾಗಿದ್ದು ಪಕ್ಷೀಗಳಿಗೆ ಕುಡಿಯಲು ನೀರು ಅವಶ್ಯಕವಾಗಿರುತ್ತದೆ. ಆ ನಿಟ್ಟಿನಲ್ಲಿ ತಮ್ಮ ತಮ್ಮ ಮನೆ ಕಂಪೌಡ ಆವರಣ, ಗೀಡ ಮರಗಳಿಗೆ ನೀರಿನ ತೊಟ್ಟಿಗಳನ್ನು ಅಳವಡಿಸಿ ಪಕ್ಷೀಗಳ ಉಳಿವಿಗಾಗಿ ಕೈ ಜೊಡಿಸಬೇಕು ಎಂದು ಮನವಿ ಮಾಡಿದರು.



ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಆರ್‌ಎಫ್‌ಒ ಸಂಗಾಲಕ, ಅರಣ್ಯಾಧಿಕಾರಿ ಮಂಜುನಾಥ ಧೂಳೆ, ಜಾವಿಧ ಮೋಮಿನ, ಧನರಾಜ ಮುಜಗೊಂಡ, ಅವಿನಾಶ ಬಗಲಿ ಮಾತನಾಡಿದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಜೀತ ಧನಶೆಟ್ಟಿ, ಪೌರಾಯುಕ್ತ ಶಿವಾನಂದ ಪೂಜಾರಿ, ನೀಲಕಂಠಗೌಡ ಪಾಟೀಲ, ಸಣ್ಣಪ್ಪ ತಳವಾರ, ಸತೀಶ ಕುಂಬಾರ, ಸುಧೀರ ಕರಕಟ್ಟಿ, ಧರ್ಮಸ್ಥಳದ ಯೋಜನಾಧಿಕಾರಿ ನಟರಾಜ, ಸತೀಶ ಹತಿ, ಮಹೇಶ ಹೊನ್ನಬಿಂದಗಿ, ಸಂತೋಷ ಪರಶೆನ್ನವರ, ಪುಂಡಲಿಕ ಹೂಗಾರ, ಅಶೋಕ ಕನ್ನೂರ, ಜಟ್ಟೆಪ್ಪ ಹುನ್ನೂರ, ಅಕ್ಷಯ ಮುಜಗೊಂಡ, ಶಿವು ಬಿಸನಾಳ, ಜ್ಯೋತಿ ವಂದಾಲ, ರಾಹುಲ ಮಸಳಿ, ಪ್ರೀತು ದಶವಂತ, ವಿನೋದ ಶಹಾಪೂರ ಇದ್ದರು.

ನೀರಿನ ಸಮಸ್ಯೆ ಪರಿಹರಿಸಿ: ಕೋರವಾರ ಆಗ್ರಹ

ಸಿಂದಗಿ: ತಾಲೂಕಿನ ಗೋಲಗೇರಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಮಾಜಿ ಗ್ರಾಮ ಪಂಚಾಯತ್ ಸದಸ್ಯ ಎ.ಡಿ.ಕೋರವಾರ ಆಗ್ರಹಿಸಿದ್ದಾರೆ. ತಾಲೂಕಿನ ಗೋಲಗೇರಿ ಗ್ರಾಮದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಗೋಲಗೇರಿ ಗ್ರಾಮವು ಸುಮಾರು 8ಸಾವಿರ ಜನರನ್ನು ಹೊಂದಿರುವ ಗ್ರಾಮವಾಗಿದೆ. ಎರಡನೇ ಶ್ರೀಶೈಲ ಎಂದೇ ಖ್ಯಾತಿಯಾಗಿರುವ ಗೊಲ್ಲಾಳೇಶ್ವರ ದೇವಸ್ಥಾನವು ಗೋಲಗೇರಿಯಲ್ಲಿದೆ. ಲಕ್ಷಾಂತರ ಭಕ್ತರು ದೇವಸ್ಥಾನಕ್ಕೆ ದರ್ಶನ ಪಡೆಯಲು ಬರುತ್ತಾರೆ. ಈ ಗ್ರಾಮಕ್ಕೆ ಸರ್ಕಾರದ ಯೋಜನೆಯಲ್ಲಿ ಸಾಕಷ್ಟು ಅನುದಾನ ಬಂದರೂ ಸಹ ಈ ಗ್ರಾಮದಲ್ಲಿ ಮಾತ್ರ ಕುಡಿಯುವ ನೀರು ಮಾತ್ರ ಪೂರೈಕೆಯಾಗುತ್ತಿಲ್ಲ. ಜಲಜೀವನ ಮಿಷನ್ ಅಡಿಯಲ್ಲಿ ಸುಮಾರು ರೂ.3ಕೋಟಿ ವೆಚ್ಚದ ಕಾಮಗಾರಿಯಾಗಿದೆ. ಆದರೆ ಆ ಕಾಮಗಾರಿಯು ಅರ್ಥಪೂರ್ಣವಾಗಿಲ್ಲ ಮತ್ತು ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಇದರ ಕುರಿತಾಗಿ ಸ್ಥಳೀಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗಮನಕ್ಕೂ ತಂದಿದ್ದೇವೆ. ಜಿಲ್ಲಾ ಪಂಚಾಯಿತ್ ಅನುದಾನದಲ್ಲಿ ಸುಮಾರು 4ತೆರೆದೆ ಬಾವಿಗಳು ಇದಾವೆ. ಆದರೆ ಅದು ನೀರನ್ನು ರಾಜಕಾರಣಿಗಳ ಪಾಲಾಗಿದ್ದು, ಸಾರ್ವಜನಿಕರಿಗೆ ಉಪಯೋಗ ಇಲ್ಲದಂತಾಗಿದೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಳಕ್ಕೆ ಭೇಟಿ ನೀಡಿ ನೀರಿನ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದ್ದಾರೆ. ಬಸನಗೌಡ ಮೇಲಿನಮನಿ, ವಾಸುದೇವ ಪತ್ತಾರ, ಶಾಂತಗೌಡ ಪಾಟೀಲ ಇದ್ದರು.



ಪರೀಕ್ಷಾ ಕೇಂದ್ರಕ್ಕೆ ತಹಶೀಲ್ದಾರ್ ಭೇಟಿ

ನಾಲತವಾಡ: ಪಟ್ಟಣದ ವೀರೇಶ್ವರ ಪ್ರೌಢ ಶಾಲೆಯ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ಶನಿವಾರ ಮುದ್ದೇಬಿಹಾಳ ತಹಶೀಲ್ದಾರ್ ಕೀರ್ತಿ ಚಾಲಕ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪಟ್ಟಣದ ವೀರೇಶ್ವರ ವಿದ್ಯಾಸಂಸ್ಥೆಯ ಪರೀಕ್ಷಾ ಕೇಂದ್ರದಲ್ಲಿ ಶನಿವಾರ ನಡೆದ ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಪರೀಕ್ಷೆಗೆ ಒಟ್ಟು 377 ವಿದ್ಯಾರ್ಥಿಗಳು ನೋಂದಾಯಿತರಾಗಿದ್ದು, ಅವರಲ್ಲಿ 367 ವಿದ್ಯಾರ್ಥಿಗಳು ಹಾಜರಾಗಿ ಪರೀಕ್ಷೆ ಬರೆದರು. 11 ವಿದ್ಯಾರ್ಥಿಗಳು ಗೈರಾಗಿದ್ದರು ಎಂದು ಪರೀಕ್ಷಾ ಕೇಂದ್ರದ ಅಧೀಕ್ಷಕರಾದ ಬಿ.ಕೆ.ರುದ್ರಗಂಟಿ ತಿಳಿಸಿದ್ದಾರೆ. ಪರೀಕ್ಷಾ ಕೇಂದ್ರದಲ್ಲಿ ನಡೆಯುತ್ತಿರುವ ವ್ಯವಸ್ಥೆಗಳನ್ನು ತಹಶೀಲ್ದಾರರು ಪರಿಶೀಲಿಸಿ, ಪರೀಕ್ಷಾ ಕೊಠಡಿಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಪರೀಕ್ಷೆಯನ್ನು ನಿಯಮಾನುಸಾರ ಹಾಗೂ ಶಾಂತಿಯುತವಾಗಿ ನಡೆಸುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಿದರು.



ತಾಳಿಕೋಟೆ ಧರಣಿಗೆ ಬೋಳವಾಡ ಗ್ರಾಮಸ್ಥರಿಂದ ಬೆಂಬಲ

ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಸಮೀಪ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ತೀವ್ರವಾಗಿ ವಿರೋಧಿಸಿ, ಪ್ರಜಾಸೌಧವನ್ನು ತಾಳಿಕೋಟೆ ಪಟ್ಟಣದಲ್ಲಿಯೇ ನಿರ್ಮಿಸಬೇಕು ಎಂಬ ಒತ್ತಾಯದೊಂದಿಗೆ ಆರಂಭಗೊಂಡ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ 34ನೇ ದಿನಕ್ಕೂ ಮುಂದುವರಿದು ಹೋರಾಟಗಾರರ ಸಂಕಲ್ಪವನ್ನು ಮತ್ತಷ್ಟು ಗಟ್ಟಿಗೊಳಿಸಿದೆ.

ಪಟ್ಟಣದ ಹೃದಯ ಭಾಗವಾದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಈ ಧರಣಿ ದಿನೇ ದಿನೇ ಜನಮದ್ದತ್ತ ಪಡೆದುಕೊಳ್ಳುತ್ತಿದ್ದು, ವಿವಿಧ ಗ್ರಾಮಗಳಿಂದ ಸಾರ್ವಜನಿಕರು ಆಗಮಿಸಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ. ರವಿವಾರ ನಡೆದ 33ನೇ ದಿನದ ಸತ್ಯಾಗ್ರಹವು ವಿಶೇಷವಾಗಿ ಗಮನಸೆಳೆದಿದ್ದು, ತಾಲೂಕಿನ ಬೋಳವಾಡ ಗ್ರಾಮದ ಹಿರಿಯರು, ಯುವಕರು ಮತ್ತು ಎಲ್ಲಾ ಸಮುದಾಯದ ಜನರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಶಕ್ತಿ ತುಂಬಿದರು.

ಬೋಳವಾಡ ಗ್ರಾಮದ ಹಿರಿಯರಾದ ಪರಪ್ಪ ಹರಿಜನ ಮತ್ತು ಶಾಂತಗೌಡ ಪಾಟೀಲ ಮಾತನಾಡಿ, ಪ್ರಜಾಸೌಧ ನಿರ್ಮಾಣಕ್ಕೆ ಆಯ್ಕೆ ಮಾಡಿರುವ ಸ್ಥಳವು ಪಟ್ಟಣದಿಂದ ದೂರವಾಗಿದ್ದು, ನಿರ್ಜನ ಪ್ರದೇಶದಲ್ಲಿದೆ ಎಂದು ಆಕ್ಷೇಪಿಸಿದರು. ಇಂತಹ ಸ್ಥಳದಲ್ಲಿ ಸರ್ಕಾರಿ ಕಚೇರಿ ನಿರ್ಮಾಣವಾದರೆ ಮಹಿಳೆಯರು, ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರಿಗೆ ಭದ್ರತೆ ಮತ್ತು ಸೌಲಭ್ಯಗಳ ಕೊರತೆ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಾರ್ವಜನಿಕರಿಗೆ ಸುಲಭವಾಗಿ ತಲುಪುವಂತಹ ಸ್ಥಳದಲ್ಲಿ, ಅಂದರೆ ತಾಳಿಕೋಟಿ ಪಟ್ಟಣದಲ್ಲಿಯೇ ಲಭ್ಯವಿರುವ ಸರ್ಕಾರಿ ಜಾಗದಲ್ಲಿ ಪ್ರಜಾಸೌಧ ನಿರ್ಮಿಸಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆ ಎಂದು ಅವರು ಒತ್ತಾಯಿಸಿದರು. ಈಗಾಗಲೇ ಗುರುತಿಸಲಾದ ಸ್ಥಳವನ್ನು ತಕ್ಷಣವೇ ರದ್ದುಪಡಿಸಬೇಕು ಹಾಗೂ ಹೊಸ ಸ್ಥಳವನ್ನು ಪಟ್ಟಣದೊಳಗೆ ಆಯ್ಕೆ ಮಾಡಬೇಕು ಎಂದು ಆಗ್ರಹಿಸಿದರು.



ಶಾಸಕರು ಹಾಗೂ ಜಿಲ್ಲಾಡಳಿತಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳದಿರುವುದಕ್ಕೆ ಹೋರಾಟಗಾರರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಜನಾಭಿಪ್ರಾಯವನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿದ ಅವರು, ಜಾಗ ನೀಡಿದವರಲ್ಲಿ ಸ್ವಹಿತಾಸಕ್ತಿ ಅಡಗಿದೆ ಎಂಬ ಶಂಕೆಯನ್ನೂ ವ್ಯಕ್ತಪಡಿಸಿದರು.

ಬಸವರಾಜ ಅಮಲ್ಯಾಳ, ಪ್ರಶಾಂತ ಹಿರೇಮಠ, ಮಲಕಪ್ಪ ಹರಿಜನ, ಪರಶುರಾಮ ಹರಿಜನ, ನಂದನಗೌಡ ಪಾಟೀಲ, ಸಿದ್ದನಗೌಡ ಪಾಟೀಲ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್.ಎಸ್. ಪಾಟೀಲ (ಕುಚಬಾಳ), ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ದತ್ತು ಹೆಬಸೂರ ಸೇರಿದಂತೆ ಹಲವಾರು ಮುಖಂಡರು ಹಾಗೂ ಪಟ್ಟಣದ ಗಣ್ಯರು ಹಾಜರಿದ್ದು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ದಾಸಿಮಯ್ಯ, ಅಲ್ಲಮಪ್ರಭು ವಚನ ಸಾಹಿತ್ಯದ ಮೇರು ಪರ್ವತಗಳು

ವಿಜಯಪುರ: ಹೆಣ್ಣು- ಗಂಡು, ಮೇಲು- ಕೀಳು ಎಂಬ ಆಚರಣೆ ಭೇದ ವಿರೋಧಿಸಿ, ಸಾಮಾಜಿಕ ವ್ಯವಸ್ಥೆಯ ಅನ್ಯಾಯಗಳನ್ನು ಖಂಡಿಸಿದ ಕನ್ನಡದ ಆದ್ಯ ವಚನಕಾರ ದಾಸಿಮಯ್ಯ. ಜೇಡರ ದಾಸಿಮಯ್ಯ ಹಾಗೂ ಅಲ್ಲಮಪ್ರಭುದೇವರು ವಚನ ಸಾಹಿತ್ಯದ ಮೇರು ಪರ್ವತ ಎಂದು ಪ್ರೊ.ಪಿ.ಬಿ.ಬಿರಾದಾರ ಹೇಳಿದರು.



ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಹಮ್ಮಿಕೊಂಡ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಹಿಸಿ ಅವರು ಮಾತನಾಡಿದರು.

12ನೇ ಶತಮಾನದ ಪ್ರಸಿದ್ಧ ವಚನಕಾರರು, ನೇರ ನಿಷ್ಠುರವಾದಿಯಾಗಿದ್ದ ಅನೇಕ ಶಿವಶರಣ- ಶರಣೆಯರಿಗೆ ಭಕ್ತಿ, ವೈರಾಗ್ಯಗಳನ್ನು ಬೋಧಿಸಿದ ಅಲ್ಲಮಪ್ರಭುಗಳು ತಮ್ಮ ವಚನಗಳ ಮೂಲಕ ಅಂತರಂಗ ಬಹಿರಂಗಗಳನ್ನು ಶೋಧಿಸಲೆತ್ನಿಸಿದ ವಚನಕಾರರಲ್ಲಿ ಅಲ್ಲಮಪ್ರಭುಗಳು ಕೂಡ ಮೇಲ್ಪಂಕ್ತಿಗಳಲ್ಲಿ ನಿಲ್ಲುವವರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶರಣ ಚಿಂತಕ ಮೋಹನ ಕಟ್ಟಿಮನಿ ಮಾತನಾಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಾಡು- ನುಡಿ, ನೆಲ- ಜಲ, ಭಾಷೆ- ಭಾವ, ಉಳಿಸಿ ಬೆಳೆಸುವ ಮೂಲಕ ಕನ್ನಡಾಂಬೆಯ ಸೇವೆಯನ್ನು ನಿರಂತರ ಮಾಡುತ್ತಿರುವ ಸಂಘಟನೆ ಎಂದರೆ ಅದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಎಂದರು.

ಶರಣ ಚಿಂತಕಿ ಶಾಂತಾ ಬಿರಾದಾರ ಮಾತನಾಡಿ, ಕನ್ನಡದ ಆದ್ಯ ವಚನಕಾರರಾದ ದಾಸಿಮಯ್ಯನವರು ತಮ್ಮ ನೇಯ್ಗೆಯ ವೃತ್ತಿಯೊಂದಿಗೆ ಕಾಯಕ, ಅನುಭವಗಳ ಸಾರವನ್ನು ಬಳಸಿಕೊಂಡು ಅನೇಕ ವಚನಗಳನ್ನು ರಚಿಸಿ ನಮ್ಮನ್ನೆಲ್ಲ ಎಚ್ಚರಿಸಿದ ಮಹಾನ್ ಶಿವಶರಣ ಎಂದರು.

ಕವಯಿತ್ರಿ ಸುನಂದಾ ಕೋರಿ ಮಾತನಾಡಿ, ಬೆರಗು ಮತ್ತು ಬೆಡಗಿನ ವಚನಕಾರರಾದ ಅಲ್ಲಮಪ್ರಭುಗಳು ತಮ್ಮ ವಚನಗಳ ಮೂಲಕ ಆತ್ಮಜ್ಞಾನವನ್ನು ವೈರಾಗ್ಯವನ್ನೂ ಬೋಧಿಸಿದ ಮಹಾನ್ ಶರಣರು ಅಲ್ಲಮಪ್ರಭುಗಳು ಎಂದರು.

ಗೀತಾ ಕುಗನೂರ, ವಿಜಯಲಕ್ಷ್ಮಿ ಹಳಕಟ್ಟಿ, ರಶ್ಮಿ ಬದ್ನೂರ, ನೀಲಾ ಇಂಗಳೆ, ಸುಧಾ ಪಾಟೀಲ, ಅರ್ಜುನ ಶಿರೂರ, ವಿಶ್ರಾಂತ ಕ್ಷೇತ್ರ ಶಿಕ್ಷಣಾಧಿಕಾರಿ ವಿಠ್ಠಲ ದೇವಣಗಾವಿ, ಶಿಕ್ಷಕಿ ಭಾರತಿ ಗೊಂಗಡಿ, ರಿಯಾಜ್ ಪಿಂಜಾರನ ಡಾ. ಮಾಧವ ಗುಡಿ, ಶಿಲ್ಪಾ ಭಸ್ಮೆ, ಶೋಭಾ ಬಡಿಗೇರ, ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ಕಮಲಾ ಮುರಾಳ, ಭಾಗೀರಥಿ ಸಿಂಧೆ, ಬಸನಗೌಡ ಬಿರಾದಾರ, ಮಹಾದೇವಿ ತೆಲಗಿ, ಗಂಗಮ್ಮ ರಡ್ಡಿ, ಜಿ.ಎಸ್.ಬಳ್ಳೂರ, ಸುಖದೇವಿ ಅಲಬಾಳಮಠ ಇದ್ದರು.

ಕಿರುಸುದ್ದಿ

ಸಂಭ್ರಮದಿಂದ ಶ್ರೀರಾಮ ನವಮಿ ಆಚರಣೆ

ಲಿಂಗಸುಗೂರು: ಪಟ್ಟಣದ ಶಿರಡಿ ಸಾಯಿಬಾಬಾ ಮಂದಿರದಲ್ಲಿ ರಾಮನವಮಿಯ ಪ್ರಯುಕ್ತ ನೂರಾರು ಭಕ್ತರು ಆಗಮಿಸಿ ಸಾಯಿಬಾಬಾರ ದರ್ಶನಾಶೀರ್ವಾದ ಪಡೆದ ಭಕ್ತರು ಸಂಜೆ ಪಲ್ಲಕ್ಕಿ ಸೇವೆ ಮಾಡಿ ಪುನಿತರಾದರು. ಬೆಳಿಗ್ಗೆ ಶ್ರೀಸಾಯಿ ಬಾಬಾ ಮಂದಿರದಲ್ಲಿ ಬೆಳಗ್ಗೆ 6.30ಕ್ಕೆ ಕಾಕಡ ಆರತಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 12.30 ಮತ್ತು ಸಂಜೆ 6ಕ್ಕೆ ಸಾಯಿಬಾಬಾರ ಭಾವಚಿತ್ರ ಹಾಗೂ ಉತ್ಸವ ಮೂರ್ತಿ ಮೆರವಣಿಗೆ ಭಕ್ತರಿಂದ ಪಲ್ಲಕ್ಕಿ ಸೇವೆಯನ್ನು ಸಡಗರ ಸಂಭ್ರಮದಿಂದ ಮಾಡಿದರು ವಿಶೇಷವಾಗಿ ಮಹಿಳೆಯರು ಪಲ್ಲಕ್ಕಿ ಸೇವೆಯನ್ನು ಮಾಡುವುದರ ಮುಖಾಂತರ ಭಕ್ತಿಯನ್ನು ಮೆರೆದರು. ನಂತರ 6.30ಕ್ಕೆ ಧೂಪಾರತಿ ಹಾಗೂ 8 ಗಂಟೆಗೆ ಶೇಜಾರತಿ ಕಾರ್ಯಕ್ರಮಗಳು ಜರುಗಿದವು.

ಸಾಯಿ ಸೇವಾ ಸಮಿತಿಯ ಪ್ರಮುಖರಾದ ಚಂದ್ರಶೇಖರ ಪಾಟೀಲ್, ಡಾ.ಶರಣಗೌಡ, ಎಲ್. ಆರ್.ಮೇಟಿ, ವರದಾರಡ್ಡಿ, ರಾಚಣ್ಣ, ರಮೇಶ ಖಂಡೇಲವಾಲ, ಈಶ್ವರಯ್ಯ ಸೇರಿದಂತೆ ಇತರರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಶ್ರೀರಾಮ ನವಮಿ: ಪಾನಕ ವಿತರಣೆ



ಸಿಂಧನೂರು: ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಛತ್ರಪತಿ ಶಿವಾಜಿ ಸೇವಾ ಟ್ರಸ್ಟ್ ವತಿಯಿಂದ ಶ್ರೀರಾಮ ನವಮಿಯನ್ನು ಶುಕ್ರವಾರ ಗುರುಪ್ರಸಾದ ಹೋಟೆಲ್ ಮುಂಭಾಗದಲ್ಲಿ ಸಾರ್ವಜನಿಕರಿಗೆ ಪಾನಕ ವಿತರಣೆ ಮಾಡುವುದರ ಮುಖಾಂತರ ಸಂಭ್ರಮದಿಂದ ಆಚರಿಸಲಾಯಿತು. ಬಂಗಾರಿ ಕ್ಯಾಂಪಿನ ಸಿದ್ಧಾಶ್ರಮದ ಸದಾನಂದ ಶರಣರು ಶ್ರೀರಾಮನ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿ ಮುಖಾಂತರ ಪಾನಕ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಬಿಜೆಪಿ ಮುಖಂಡ ಕೆ.ಕರಿಯಪ್ಪ, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಬಸವರಾಜ್ ನಾಡಗೌಡ,ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ವಿಶ್ವ ಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ದೇವರಾಜ್ ಪಾಟೀಲ್, ಛತ್ರಪತಿ ಶಿವಾಜಿ ಮಹಾರಾಜ್ ಸೇವಾ ಟ್ರಸ್ಟ್‌ನ ಅಧ್ಯಕ್ಷ ವಿಶ್ವನಾಥ್ ಚೌದ್ರಿ, ಕಾರ್ಯದರ್ಶಿ ಕೆ.ಜಗದೀಶ್, ಉಪಾಧ್ಯಕ್ಷ ಉಮೇಶರಾವ್ ಪವರ್, ಖಜಾಂಚಿ ಕಿಶೋರ್ ಟಿ. ಸದಸ್ಯರಾದ ರಾಮಾಂಜನೇಯ, ನೆಕ್ಕಂಟಿ ಸುರೇಶ್, ಅಜಯ್ ದಾಸರಿ,ತೋಂಟದಾರ್ಯ ಸಿದ್ಧಾಂತಿಮಠ, ದೀಪಾ ಸಾಲಿಮಠ, ನಾಗೇಶ್ ಪವರ್, ಕಾರ್ಯಕಾರಿ ಸದಸ್ಯರು ಶುಕರಾಜ್, ಸುಭಾಷ್ ಪವಾರ್, ಶಿವು ಎಸ್ ಆರ್‌ಕೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪೆಟ್ರೋಲ್, ಡೀಸೆಲ್ ಕೊರತೆಯಿಲ್ಲ: ಡಿಸಿ

ರಾಯಚೂರು: ಜಿಲ್ಲೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಕೊರತೆಯಿಲ್ಲ ಮತ್ತು ಬೇಡಿಕೆಯನ್ನು ಪೂರೈಸಲು ಸಾಕಷ್ಟು ಸರಬರಾಜು ಲಭ್ಯವಿದೆ ಎಂದು ಜಿಲ್ಲಾಧಿಕಾರಿ ನಿತೀಶ್ ಕೆ. ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಪೆಟ್ರೋಲ್ ಪಂಪ್‌ಗಳಲ್ಲಿ ಅಸಾಮಾನ್ಯ ಜನದಟ್ಟಣೆ ಕಂಡುಬಂದಿದ್ದು, ನಾಗರಿಕರು ಪೆಟ್ರೋಲ್ ಹಾಗೂ ಡೀಸೆಲ್ ಖರೀದಿಯಲ್ಲಿ ಆತಂಕಗೊಂಡಿದ್ದಾರೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತವು ರಾಯಚೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಅವರ ಮಾಹಿತಿಯ ಆಧಾರದ ಮೇಲೆ ಜಿಲ್ಲೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಯಾವುದೇ ಕೊರತೆಯಿಲ್ಲ ಮತ್ತು ಬೇಡಿಕೆಯನ್ನು ಪೂರೈಸಲು ಸಾಕಷ್ಟು ಸರಬರಾಜು ಲಭ್ಯವಿದೆ ಎಂದು ಸ್ಪಷ್ಟಪಡಿಸಿದ್ದಾರೆ. ನಾಗರಿಕರು ಭಯಭೀತಿಯಿಂದ ಖರೀದಿಯಲ್ಲಿ ತೊಡಗಬೇಡಿ ಎಂದು ವಿನಂತಿಸಲಾಗಿದೆ. ಏಕೆಂದರೆ ಅಂತಹ ಕ್ರಮಗಳು ಅನಗತ್ಯ ಅನಾನುಕೂಲತೆ ಉಂಟುಮಾಡಬಹುದು ಮತ್ತು ಸಾಮಾನ್ಯ ಪೂರೈಕೆ ಕಾರ್ಯ ವಿಧಾನಗಳನ್ನು ಅಡ್ಡಿಪಡಿಸಬಹುದು. ಪೆಟ್ರೋಲಿಯಂ ಕಾಯ್ದೆ 1934 ಮತ್ತು ಪೆಟ್ರೋಲಿಯಂ ನಿಯಮಗಳು, 2002 ಕ್ಲಾಜ್(5) ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ಪೆಟ್ರೋಲ್ ಮಾರಾಟವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಇದರಿಂದ ಗಂಭೀರ ಸುರಕ್ಷತಾ ಅಪಘಾತಗಳನ್ನುಂಟು ಮಾಡುತ್ತದೆ. ಜಿಲ್ಲೆಯ ಎಲ್ಲ ಪೆಟ್ರೋಲ್ ಪಂಪ್ ಮಾಲೀಕರಿಗೆ ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ, ಕ್ಯಾನ್, ಬ್ಯಾರಲ್‌ಗಳಲ್ಲಿ ಪೆಟ್ರೋಲ್ ಮಾರಾಟ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.



ಲಿಂಗಸುಗೂರು: ಪಟ್ಟಣದ ಶಿರಡಿ ಸಾಯಿಬಾಬಾ ಮಂದಿರದಲ್ಲಿ ರಾಮನವಮಿಯ ಪ್ರಯುಕ್ತ ನೂರಾರು ಭಕ್ತರು ಆಗಮಿಸಿ ಸಾಯಿಬಾಬಾರ ದರ್ಶನಾಶೀರ್ವಾದ ಪಡೆದ ಭಕ್ತರು ಸಂಜೆ ಪಲ್ಲಕ್ಕಿ ಸೇವೆ ಮಾಡಿ ಪುನಿತರಾದರು.

ವಿದ್ಯಾರ್ಥಿಗಳಿಂದ ಗುರುಗಳಿಗೆ ಅಭಿನಂದನೆ

ಕನಕಗಿರಿ: ಪಟ್ಟಣದ ಕೆಪಿಎಸ್ ಶಾಲೆಯ 4ನೇ ತರಗತಿ ಮಕ್ಕಳಿಂದ ರಾಜ್ಯಮಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪಡೆದು ಕೊಂಡ ಕೆಪಿಎಸ್ ಶಾಲೆಯ ಕ್ರಿಯಾಶೀಲ ಶಿಕ್ಷಕಿಯರಾದ ವಿಮಲಾಬಾಯಿ ಜೋಶಿ ಹಾಗೂ ಬೇರೆ ಶಾಲೆಗೆ ವರ್ಗಾ ವಣೆಗೊಂಡ ಲಕ್ಷ್ಮೀ ಅವರಿಗೆ, ಮತ್ತು ಶಾಲೆಯ ಮುಖ್ಯ ಗುರುಗಳಾದ ತುಳಜಾನಾಯಕ್ ಇವರಿಗೆ ಗುರುವಂದನಾ ಮತ್ತು ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಕ್ಕಳಿಂದ ಅಭಿನಂದನೆ ಸ್ವೀಕರಿಸಿ ನಂತರ ಮಾತನಾಡಿದ 'ಸಾವಿತ್ರಿಬಾಯಿ ಫುಲೆ' ರಾಜ್ಯ ಪ್ರಶಸ್ತಿ ಪುರಸ್ಕೃತ ವಿಮ ಲಾಭಾಯಿ ಜೋಶಿಯವರು ನಮ್ಮ ಮಕ್ಕಳು ಶಿಸ್ತು ಮೈಗೂಡಿಸಿಕೊಂಡು ಉತ್ತಮ ಅಭ್ಯಾಸದೊಂದಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆದು ಕೊಂಡಾಗ ಅವರತಂದೆ ತಾಯಿಗಿಂತ ಹೆಚ್ಚು ಗೌರವ ಸಿಗುವುದು ಮತ್ತು ಅತಿ ಹೆಚ್ಚು ಸಂತೋಷವಾಗುವುದು ನಮಗೆ ಆದ್ದರಿಂದ ನೀವೆಲ್ಲ ಸಮಾಜದಲ್ಲಿ ಗುರುತಿಸುವ ವ್ಯಕ್ತಿಗಳಾಗಿ ಬೆಳೆಯಬೇಕೆಂಬುದು ನಮ್ಮ ಆಸೆ ಎಂದರು. ನಂತರ ಮಕ್ಕಳಿಂದ ಬೀಳ್ಕೊಡುಗೆ ಸ್ವೀಕರಿಸಿ, ಬೇರೆ ಶಾಲೆಗೆ ವರ್ಗಾವಣೆ ಗೊಂಡ ಶಿಕ್ಷಕಿ ಲಕ್ಷ್ಮಿ ಮಾತನಾಡಿ, ಇಂತಿ ನಿಮ್ಮ ಪ್ರೀತಿಯ ಲಕ್ಷ್ಮೀ ಟೀಚರ್ ಎಂಬ ಕವಿತೆಯ ಮೂಲಕ ತಮ್ಮ ಭಾವ ನೆಯನ್ನು ಹೊರ ಹಾಕಿದರು. ಜೊತೆಗೆ ಮಕ್ಕಳೊಂದಿಗೆ ಕಳೆದ ಎಲ್ಲ ಕ್ಷಣಗಳನ್ನು ಕವಿತೆಯೊಂದಿಗೆ ನೆನಪಿಸಿಕೊಂಡು ಧನ್ಯತೆ ಮೆರೆದವರು. ಶಾಲೆಯ ಮುಖ್ಯ ಗುರುಗಳಾದ ತುಳಜಾ ನಾಯಕ, ವಿಮಲಾಭಾಯಿ ಜೋಶಿ ಸ.ಶಿ., ಲಕ್ಷ್ಮೀ ಸ.ಶಿ., ಅತಿಥಿ ಉಪನ್ಯಾಸಕರು, ಪಾಲಕರಾದ ಗುರುನಾಥ್ ರೆಡ್ಡಿ, ಮಕ್ಕಳ ಪಾಲಕರು, ಪೋಷಕರು, ಮಕ್ಕಳು ಉಪಸ್ಥಿತರಿದ್ದರು.



ಕನಕಗಿರಿ: ಪಟ್ಟಣದ ಕೆಪಿಎಸ್ ಶಾಲೆಯ 4ನೇ ತರಗತಿ ಮಕ್ಕಳಿಂದ ರಾಜ್ಯಮಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪಡೆದು ಕೊಂಡ ಕೆಪಿಎಸ್ ಶಾಲೆಯ ಕ್ರಿಯಾಶೀಲ ಶಿಕ್ಷಕಿಯರಾದ ವಿಮಲಾಬಾಯಿ ಜೋಶಿ ಹಾಗೂ ಬೇರೆ ಶಾಲೆಗೆ ವರ್ಗಾ ವಣೆಗೊಂಡ ಲಕ್ಷ್ಮೀ ಅವರಿಗೆ, ಮತ್ತು ಶಾಲೆಯ ಮುಖ್ಯ ಗುರುಗಳಾದ ತುಳಜಾನಾಯಕ್ ಇವರಿಗೆ ಗುರುವಂದನಾ ಮತ್ತು ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಅಫಜಲಪುರ, ಆಳಂದದಲ್ಲಿ ಬಿಜೆಪಿ ಪ್ರಶಿಕ್ಷಣ ಮಹಾಭಿಯಾನ ಸಮಾರೋಪ

ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ

ಕಲಬುರಗಿ: ಭಾರತೀಯ ಜನತಾ ಪಕ್ಷದ ಜೀವಾಳ ಪಕ್ಷದ ಕಾರ್ಯಕರ್ತರು.ಪಕ್ಷದ ಕಾರ್ಯಕರ್ತರಿಂದಲೇ, ವಿಶ್ವದಲ್ಲಿಯೇ ಅತೀ ಹೆಚ್ಚು ನೋಂದಣಿ ಹೊಂದಿರುವ ಏಕೈಕ ರಾಷ್ಟ್ರೀಯ ಪಕ್ಷ ಬಿಜೆಪಿಯಾಗಿದ್ದು, ಪಕ್ಷವನ್ನು ಸಂಘಟನಾತ್ಮಕವಾಗಿ ಬಲಪಡಿಸಬೇಕಾದರೇ ಬೂತ್ ಮಟ್ಟದಿಂದ ಮಾತ್ರ ಸಾಧ್ಯ ಎಂದು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕಾರ್ಯಕರ್ತರಿಗೆ ಕರೆ ನೀಡಿದರು.

ಭಾನುವಾರ ಜಿಲ್ಲೆಯ ಆಳಂದ ಪಟ್ಟಣದ ಎಸ್. ಆರ್.ಜಿ ಆಂಗ್ಲ ಶಾಲಾ ಆವರಣದಲ್ಲಿ ಬಿಜೆಪಿ ಮಂಡಲದ ವತಿಯಿಂದ ಪಂಡಿತ ದೀನದಯಾಳ ಉಪಾಧ್ಯಯ ಪ್ರಶಿಕ್ಷಣ ಮಹಾಭಿಯಾನ?2026ರ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು,ಬಿಜೆಪಿ ಪಕ್ಷದಲ್ಲಿ ವ್ಯಕ್ತಿಗಿಂತ ದೇಶವೇ ಮೊದಲಾದುದು ಎಂಬ ತತ್ವಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ.ಪಕ್ಷದಲ್ಲಿ ಸರಿಯಾದ ವ್ಯಕ್ತಿಗೆ ಸರಿಯಾದ ಸಮಯದಲ್ಲಿ ಅವಕಾಶ ಕಲ್ಪಿಸುವುದು ಪಕ್ಷದ ಪ್ರಮುಖ ಅಂಶವಾಗಿದ್ದು, ಕಾರ್ಯಕರ್ತರು ಅದನ್ನು ಅರ್ಥೈಸಿಕೊಂಡು ಪಕ್ಷದ ಸಂಘಟನೆ ಬಲಪಡಿಸಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಪ್ರಶಿಕ್ಷಣ ಮಹಾಭಿಯಾನವು ಪಕ್ಷದ ವಿಶೇಷ ಕಾರ್ಯಕ್ರಮ.ಇದರಲ್ಲಿ ಪಕ್ಷದ ನೀತಿ ನಿಲುವು, ಸಿದ್ಧಾಂತ,ಶಿಸ್ತು ಹಾಗೂ ಜವಾಬ್ದಾರಿ ಕುರಿತು ಕಾರ್ಯಕರ್ತರಿಗೆಮಾರ್ಗದರ್ಶನನೀಡಲಾಗುತ್ತದೆ. ಈ ತರಬೇತಿಯಲ್ಲಿ ಪಾಲ್ಗೊಂಡವರು ಬೂತ್ ಮಟ್ಟದಿಂದ ಪಕ್ಷವನ್ನು ಬಲಪಡಿಸುವ ದಿಸೆಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ಸಲಹೆ ನೀಡಿದರು.

ಮಾಜಿ ಶಾಸಕ ಸುಭಾಷ ಗುತ್ತೇದಾರ ಮಾತನಾಡಿ, ಬಿಜೆಪಿ ಪಕ್ಷದಲ್ಲಿ ಶಿಸ್ತು, ದೇಶಭಕ್ತಿ ಮತ್ತು ಸಂಘಟನೆಯ ಮಹತ್ವವನ್ನು ಕಾರ್ಯಕರ್ತರಿಗೆ ಬೋಧಿಸಲಾಗುತ್ತದೆ. ಇತರೆ ಪಕ್ಷಗಳಿಗಿಂತ ಬಿಜೆಪಿ ಪಕ್ಷ ವಿಭಿನ್ನವಾಗಿದ್ದು, ಪ್ರಶಿಕ್ಷಣದ ಮೂಲಕ ಕಾರ್ಯಕರ್ತರಲ್ಲಿ ಹೆಚ್ಚಿನ ಜವಾಬ್ದಾರಿತನ ಮೂಡಿಸುತ್ತದೆ.ಪ್ರಶಿಕ್ಷಣ ವರ್ಗದಲ್ಲಿ ನೀಡುವ ಹಲವು ಜವಾಬ್ದಾರಿ ಪಕ್ಷದ ಕಾರ್ಯಕರ್ತರಿಗೆ ಪಕ್ಷಕ್ಕೆ ದುಡಿಯುವ ಹುಮ್ಮಸ್ಸು ನೀಡಲಿದೆ ಎಂದರು.



ಮುಂಬರುವ 2028ರ ವಿಧಾನಸಭಾ ಚುನಾವಣೆಗೆ ಮುನ್ನ ಪಕ್ಷವನ್ನು ಬೂತ್ ಮಟ್ಟದಿಂದ ಬಲಪಡಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವ ಸಂಕಲ್ಪ ನಾವೆಲ್ಲರೂ ಮಾಡಬೇಕಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವಕೇಂದ್ರ ಸರ್ಕಾರದ ಜನಪರ ಆಡಳಿತ ಹಾಗೂ ದೂರದೃಷ್ಟಿ ಯೋಜನೆಯ ಜನರಿಗೆ ತಿಳಿಸುವ ಮೂಲಕ ವಿಕಸಿತ ಭಾರತದ ಕನಸು ನನಸಾಗುವ ಕೆಲಸ ನಮ್ಮಿಂದಾಗಬೇಕಿದೆ.

■ **ಅಶೋಕ್ ಬಗಲಿ, ಕಲಬುರಗಿ ಗ್ರಾ. ಜಿಲ್ಲಾಧ್ಯಕ್ಷ**

ಇದಕ್ಕೂ ಮುನ್ನ ಅಫಜಲಪುರ ಮಂಡಲದ ಪ್ರಶಿಕ್ಷಣ ಮಹಾಭಿಯಾನದಲ್ಲಿ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಭಾಗಿಯಾಗಿ ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು. ಆಳಂದ ಪ್ರಶಿಕ್ಷಣ ಮಂಡಲ ಸಂಚಾಲಕ ಹರ್ಷಾ ಗುತ್ತೇದಾರ, ಮತ್ತು ವಿಭಾಗೀಯ ಸಹ ಪ್ರಭಾರಿ ಶರಣಪ್ಪ ತಳವಾರ ಪ್ರಶಿಕ್ಷಣ ಮಹಾಭಿಯಾನ ಕುರಿತು ಮಾತನಾಡಿದರು. ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಕಂದಗೂಳೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶೋಭಾ ಭಾಣಿ,ಶಶಿಕಲಾ ಟೆಂಗಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಬೆಣ್ಣೂರ, ಧರ್ಮಣ್ಣಾ ಇಟಗಾ, ಸಂಜಯ ಮಿಸ್ಕಿನ, ಗೌರಿ ಚಿಚಕೋಟಿ, ಸಹನಾ ಪಾಟೀಲ್, ಸುರೇಶ ರಾಠೋಡ, ಬಸವರಾಜ ಬಿರಾದಾರ, ಶ್ರೀಶೈಲ ಪಾಟೀಲವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಕಾಶ ಮಾನೆ ಸ್ವಾಗತ ಕೋರಿದರು, ಸೀತಾರಾಮ ಜಮಾದಾರ ನಿರೂಪಿಸಿ, ಸುನೀಲ ಹಿರೋಳ್ಳಿಕರ ವಂದಿಸಿದರು.

50 ಲಕ್ಷ ವೆಚ್ಚದಲ್ಲಿ ಬಸವೇಶ್ವರ ಪುತ್ಥಳಿ ನಿರ್ಮಾಣ

ಯಲಬುರ್ಗಾ: ಪಟ್ಟಣದ ಹಳೇ ಜಿಪಂ ಕಚೇರಿಯ ಆವರಣದ ಮುಂಭಾಗದಲ್ಲಿ ಸಾಂಸ್ಕೃತಿಕ ಮಹಾನಾಯಕ ಹಾಗೂ ಜಗಜ್ಯೋತಿ ಶ್ರೀಬಸವೇಶ್ವರ ಅವರ ನೂತನ ಪುತ್ಥಳಿ ಮತ್ತು ಉದ್ಯಾವನ ನಿರ್ಮಾಣದ ಸ್ಥಳವನ್ನು ಸಿಎಂ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರೆಡ್ಡಿ ವೀಕ್ಷಿಸಿದರು.

ಬಳಿಕ ಮಾತನಾಡಿದ ಅವರು, ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಮಾಣ ಕಾಮಗಾರಿಗೆ ಅಂದಾಜು ಪತ್ರಿಕೆ ತಯಾರಿಸುವಂತೆ ಸೂಚಿಸುವ ಮೂಲಕ ಪಟ್ಟಣದಲ್ಲಿಸುಂದರವಾದಶ್ರೀಬಸವೇಶ್ವರರ ಪುತ್ಥಳಿ ಹಾಗೂ ಉದ್ಯಾನವನ ನಿರ್ಮಾಣ ಕಾರ್ಯ ಗುಣಮಟ್ಟದಿಂದ ಕೂಡಿರಬೇಕು ಆದಷ್ಟು ಶೀಘ್ರದಲ್ಲೇ ಪ್ರಾರಂಭಗೊಳ್ಳಲಿದೆ. ಸುಮಾರು 50ಲಕ್ಷ ರೂ., ಅನುದಾನವನ್ನು ಸರಕಾರದಿಂದ ಬಿಡುಗಡೆಗೊಳಿಸಲಾಗುವುದು. ಜತೆಗೆ ಕುಕನೂರು ಪಟ್ಟಣದಲ್ಲೂ ಬಸವೇಶ್ವರ, ಡಾ.ಬಿ.ಆರ್.ಅಂಬೇಡ್ಕರ, ವೀರರಾಣಿ ಚನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗಳನ್ನು ಸರಕಾರದ ಅನುದಾನದಲ್ಲಿಯೇ ಪ್ರತಿಷ್ಠಾಪಿಸಲಾಗುತ್ತಿದೆ. ಪಟ್ಟಣದ ಹೃದಯ ಭಾಗದಲ್ಲಿಲಭ್ಯವಿರುವ ಸ್ಥಳದಲ್ಲಿ 1.50ಕೋಟಿ ವೆಚ್ಚದಲ್ಲಿ ಸಮುದಾಯ ಭವನಕ್ಕೆ ಕ್ರಮವಹಿಸಲಾಗುವುದು ಎಂದರು.

ಪಟ್ಟಣದ ತಾಪಂ ಕಚೇರಿಯ ಆವರಣದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 22 ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಶಾಸಕ ರಾಯರಡ್ಡಿವರು ವಿತರಣೆ ಮಾಡಿದರು.

ತಹಶೀಲ್ದಾರ್ ಪ್ರಕಾಶ ನಾಶಿ, ತಾಪಂ ಇಒ ನೀಲಗಂಗಾ ಬಬಲಾದಿ, ಪಪಂ ಮುಖ್ಯಾಧಿಕಾರಿ ನಾಗೇಶ, ಅಧಿಕಾರಿಗಳಾದ ರಾಜಶೇಖರ ಮಳಿಮಠ, ಅನೀಲ್ ಪಾಟೀಲ,ಇಂಜನೀಯರ ಉಮೇಶ ಬೇಲಿ, ಸಿಪಿಐ ಮೌನೇಶ್ವರ ಪಾಟೀಲ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆರಿಬಸಪ್ಪ ನಿಡಗುಂದಿ, ಮುಖಂಡರಾದ ಬಸವಲಿಂಗಪ್ಪ ಭೂತೆ, ವೀರನಗೌಡ ಬಳೂಟಗಿ, ಮಂಜುನಾಥ ಕಡೇಮನಿ, ವೀರನಗೌಡ ಬನ್ನಪ್ಪಗೌಡ್ರ, ಡಾ.ಶಿವನಗೌಡ ದಾನರಡ್ಡಿ, ಶರಣಪ್ಪ ಗಾಂಜಿ, ಸುರೇಶಗೌಡ ಶಿವನಗೌಡ್ರ, ಆನಂದ ಉಳ್ಳಾಗಡ್ಡಿ, ರೇವಣೆಪ್ಪ ಹಿರೇಕುರಬರ, ತಿಮ್ಮಣ್ಣ ತಳಕಲ್, ಸಿದ್ದರಾಮೇಶ ಬೇಲೇರಿ, ಅಶೋಕ ಮಾಲಿಪಾಟೀಲ, ಮಲ್ಲು ಜಕ್ಕಲಿ, ಶಿವು ರಾಜೂರ, ಈಶ್ವರ ಅಟಮಾಳಗಿ, ದಾನನಗೌಡ ತೊಂಡಿಹಾಳ, ರೀಜ್ವಾನ ವಾಲಿಕಾರ, ಶರಣಗೌಡ ಬಸಾಪೂರ, ರಹಿಮಾನ ನಾಯಕ ಮತ್ತಿತರರಿದ್ದರು.



ರೈತ ಸಂಘದ ಪದಾಧಿಕಾರಿಗಳ ಪದಗ್ರಹಣ

ಕುಕನೂರ: ಶಾಸಕ ಬಸವರಾಜ್ ರಾಯರೆಡ್ಡಿಯವರು 30 ವರ್ಷದ ರಾಜಕೀಯದಲ್ಲಿ ರೈತರಿಗೆ ಉಪಯೋಗವಾಗುವಂತ ಒಂದು ಕೆಲಸ ಅವರು ಮಾಡಿಲ್ಲ ಇದು ಬೇಸರದ ಸಂಗತಿ ಎಂದು ರೈತ ಸಂಘದ ತಾಲೂಕು ಅಧ್ಯಕ್ಷ ದೇವಪ್ಪ ಸೊಬಾನಾದ್ ಹೇಳಿದರು.

ತಾಲೂಕಿನ ಬೆಣಕಲ್ ಗ್ರಾಮದಲ್ಲಿ ನಡೆದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆನೂತನಗ್ರಾಮ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಇಂದಿನ ರಾಜಕಾರಣಿಗಳು ಕೇವಲ ತಮ್ಮ ವೈಯಕ್ತಿಕ ಅಭಿವೃದ್ಧಿಯನ್ನು ಮಾಡುತ್ತಿದ್ದಾರೆ. ವಿನಃ ಯಾವುದೇ ರೈತರ ಅನುಕೂಲವಾಗುವ ಕೆಲಸ ಒಂದು ಆಗಿಲ್ಲಾ, ಅದರಲ್ಲಿ ಶಾಸಕ ಬಸವರಾಜ್ ರಾಯರೆಡ್ಡಿಯವರು ಕೂಡ ಒಬ್ಬರು ಅವರ ಅಭಿವೃದ್ಧಿ ಕೇವಲ ಪ್ರತಿ ಜಾತಿ, ಜಾತಿಗೆ ಒಂದು ಸಮುದಾಯದ ಭವನ ಕಟ್ಟುವುದು ಮಾತ್ರ. ರೈತರು ಉಳಿಯುವಂತ ಕೆಲಸ ನಡೆಯಬೇಕು. ತಾಲೂಕಿನಲ್ಲಿ ಮತ್ತು ರಾಜ್ಯದಲ್ಲಿ ರಾಯರೆಡ್ಡಿಯವರೇ ಎಂದು ಹೇಳಿದರು.

ನಂತರ ರೈತ ಸಂಘದ ತಾಲೂಕ ಉಪಾಧ್ಯಕ್ಷರು ಮಲ್ಲಪ್ಪ ಚಳಮರದ್ ಮಾತನಾಡಿ, ರೈತರಿಗೆ ಕುಲವಿಲ್ಲಾ ರೈತರ ಒಗ್ಗೂಡಿವಿಕೆಗಾಗಿ ರೈತ ಸಂಘಟನೆ ರೈತನ ಹಿತರಕ್ಷಣೆಗಾಗಿ ರೈತನ ಬೆಂಬಲಕ್ಕಾಗಿ ರೈತ ಸಂಘಟನೆಯಾಗಬೇಕು ಎಂದು ಸಲಹೆ ನೀಡಿದರು.

ನಂತರ ನಾಗರಿಕ ಹಿತರಕ್ಷಣ ವೇದಿಕೆಯ ಅಧ್ಯಕ್ಷ ಅಂದಪ್ಪ ಜವಳಿ ಮಾತನಾಡಿ, ಸಮಯ ಪ್ರಜ್ಞೆಯನ್ನು ಇಟ್ಟುಕೊಂಡು ಸಂಘಟನೆಯನ್ನು ಮುನ್ನುಡಿಸಲು ಮುಂದಾಗಬೇಕು ರೈತ ಸಂಘ ಎಂದು ಹೇಳಿದರು.

ದಿವ್ಯ ಸಾನಿಧ್ಯವನ್ನು ಅನ್ನದಾನೇಶ್ವರ ಮಠದ ಮಹಾದೇವ ಮಹಾಸ್ವಾಮಿಗಳು ವಹಿಸಿದ್ದರು. ರಾಜ್ಯ ಉಪಾಧ್ಯಕ್ಷ ಅಂದಪ್ಪ ಹುರಳಿ, ಶರಣಪ್ಪ ಚಂಡೂರು, ಕಳಕಪ್ಪ ಕ್ಯಾದಗುಪ್ಪಿ, ಬಸಪ್ಪ ಮಂಡಲಗೇರಿ, ವಜಿಸಾಬ್ ತಲಕಲ್ಲ, ಉಮೇಶ್ ಬೆದವಟ್ಟಿ, ಮಲ್ಲಪ್ಪ ಹೂಗಾರ್, ಚಂದ್ರಶೇಖರ ವಸ್ತ್ರದ್, ಮಲಪ್ಪ ಪಟ್ಟೆದ್, ಗವಿಸಿದ್ದಪ್ಪ ಲೇಬಗೇರಿ ಇತರರಿದ್ದರು.



ಎಕರೆಗೆ 1 ಲಕ್ಷ ರೂ. ಪರಿಹಾರ ಕೊಡಿ: ಬಸವರಾಜ ಕ್ಯಾವಟರ್

ಕೊಪ್ಪಳ: ತಾಲೂಕಿನ ಬಂಡಿಹರ್ಲಾಪೂರ-ಬಸಾಪೂರ ಗ್ರಾಮದ ಬಳಿ ಕಾಲುವೆ ಒಡೆದು ಅಪಾರ ಹಾನಿಗೊಳಗೆ ಒಳಗಾಗಿರುವ ರೈತರಿಗೆ ಎಕರೆಗೆ 1,ಲಕ್ಷ ರೂ. ಪರಿಹಾರ ನೀಡಬೇಕೆಂದು ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಬಿಜೆಪಿ ಅಭ್ಯರ್ಥಿ ಬಸವರಾಜ ಕ್ಯಾವಟರ್ ಆಗ್ರಹಿಸಿದ್ದಾರೆ.



ಈ ಕುರಿತು ಪ್ರಕಟಣೆ ಬಿಡುಗಡೆ ಮಾಡಿರುವ ಅವರು, 90 ಎಕರೆಗೂ ಹೆಚ್ಚು ಭತ್ತದ ಬೆಳೆ ಹಾಳಾಗಿದೆ. ಎರಡನೇ ಬೆಳೆಗೆ ನೀರಿಲ್ಲದಿದ್ದರೂ ಕಾಲುವೆಯ ಮೂಲಕ ಇರುವ ಅಲ್ಪ- ಸಲ್ಪ ನೀರಿನಲ್ಲಿಯೇ ಈ ಭಾಗದ ವ್ಯಾಪ್ತಿಯ ನೂರಾರು ರೈತರು ಭತ್ತ ಬೆಳೆದಿದ್ದರು.

ಆದರೆ, ವಾರದ ಹಿಂದೆ ಏಕಾಏಕಿ ಕಾಲುವೆ ಒಡೆದು ಹೊಲಗಳಿಗೆ ನೀರು ಹೊಕ್ಕಿದ ಪರಿಣಾಮ 90 ಎಕರೆಗೂ ಹೆಚ್ಚು ಭತ್ತದ ಬೆಳೆ ಬೆಳೆದಿದ್ದಾರೆ.

ಪ್ರತಿಯೊಬ್ಬ ರೈತ ಎಕರೆಗೆ ಕನಿಷ್ಠ 1.5 ಲಕ್ಷ ರೂ.ವರೆಗೆ ಆದಾಯ ಪಡೆಯುತ್ತಿದ್ದ. ಆದರೆ, ಅಧಿಕಾರಿಗಳು ಹಾಗೂ ಆಡಳಿತ ಪಕ್ಷದ ಜನಪ್ರತಿನಿಧಿಗಳ ಅಸಡ್ಡೆಯ ಪರಿಣಾಮ ಕಾಲುವೆ ಹೋಡೆದು ಹೋಯಿತು ಎಂದರು.

ಸಕಾಲಕ್ಕೆ ನಿರ್ವಹಣೆ ಮಾಡಿದ್ದರೇ ಅನ್ನದಾತನಿಗೆ ಸಮಸ್ಯೆಯಾಗುತ್ತಿರಲಿಲ್ಲ. ಮೇಲಿಂದ ಮೇಲೆ ರೈತರು ಕಾಲುವೆ ದುರಸ್ತಿ ಮಾಡುವಂತೆ ಒತ್ತಾಯ ಮಾಡಿದರೂ ಅಧಿಕಾರಿಗಳು ಕಿವಿಗೊಡಲಿಲ್ಲ. ತತ್ಪರಿಣಾಮ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಹಾನಿಯಾಗಿದೆ. ಅಲ್ಲದೆ, ಇದೀಗ ಬೆಳೆ ಹಾನಿಯಾದ ಪ್ರದೇಶವನ್ನು ಸರ್ವೆ ಮಾಡಲು ಕಂದಾಯ ಇಲಾಖೆ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳು ಸರ್ವೆ ಮಾಡಲು ಮಿನಮೇಷ ಎಣಿಸುತ್ತಿರುವುದು ಸರಿಯಲ್ಲ ಎಂದು ತಿಳಿಸಿದರು.

ಕೂಡಲೇ ಸಮರ್ಪಕ ಸರ್ವೆ ನಡೆಸಿ, ರೈತರಿಗೆ ಪರಿಹಾರ ಒದಗಿಸಬೇಕು. ಜತೆಗೆ ಕಾಲುವೆ ಒಡೆದ ಪರಿಣಾಮ ಬಿರು ಬೇಸಿಗೆಯ ಈ ಅವಧಿಯಲ್ಲಿ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಜನರಿಗೆ ಕುಡಿಯುವ ನೀರಿನ ಅಭಾವದ ಆತಂಕ ಶುರುವಾಗಿದೆ. ಹೀಗಾಗಿ ಕಾಲುವೆ ದುರಸ್ತಿ ಕಾರ್ಯ ಕೂಡ ತ್ವರಿತವಾಗಿ ಮುಗಿಸುವುದಕ್ಕೆ ಸರಕಾರ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ದೇವಾಂಗ ಜ್ಯೋತಿಗೆ ಧಾರ್ಮಿಕ ಪೂಜೆ

ಹನುಮಸಾಗರ: ಪಟ್ಟಣದ ಬನಶಂಕರಿ ದೇವಸ್ಥಾನಕ್ಕೆ ಆಗಮಿಸಿದ ದೇವಾಂಗ ಜ್ಯೋತಿಯನ್ನು ಅರ್ಚಕರಾದ ರಾಘವೇಂದ್ರ ಸಿನ್ನೂರ ಹಾಗೂ ಮಂಜುನಾಥ ಸಿನ್ನೂರ ಪೂಜೆ ಸಲ್ಲಿಸಿ ದೇವಾಂಗ ಜಾಗೃತಿ ಜ್ಯೋತಿಯನ್ನು ಬಿಳ್ಕೊಡಲಾಯಿತು.

ಅಖಿಲ ಭಾರತ ದೇವಾಂಗ (ನೇಕಾರ) ಜಾಗೃತ ಸಮಾವೇಶದ ಅಂಗವಾಗಿ ಹಂಪಿ ಹೇಮ ಕೂಟ ಪೀಠಾಧಿಪತಿಯಾದ ದಯಾನಂದಪುರಿ ಮಹಾಸ್ವಾಮೀಜಿಯವರ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭದ ಅಂಗವಾಗಿ ದೇವಾಂಗ ಸಮಾಜ ಬಾಂದವರ ಜಾಗೃತಿಗಾಗಿ ಬದಾಮಿ ಬನಶಂಕರಿ ದೇವಸ್ಥಾನದಲ್ಲಿ ಪೂಜೆಗೊಂಡು ರಾಜ್ಯಾದ್ಯಂತ ಜಾಗೃತಿಯನ್ನು ಮೂಡಿಸಿ ಮೇ 9 ಮತ್ತು 10ರಂದು ಬಾದಾಮಿ ಬನಶಂಕರಿಯಲ್ಲಿ ನಡೆಯುವ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭಕ್ಕೆ ಆಗಮಿಸುವಂತೆ ದೇವಾಂಗ ಜ್ಯೋತಿಯ ಮೂಲಕ ಆಹ್ವಾನವನ್ನು ನೀಡುವ ಉದ್ದೇಶದಿಂದ ದೇವಾಂಗ ಜ್ಯೋತಿಯನ್ನು ಕಳುಹಿಸಲಾಗಿದೆ ಎಂದು ಜಾಗೃತಿ ಸಮಿತಿ ತಿಳಿಸಿತು.



ದೇವಾಂಗ ಸಮಾಜದ ಅಧ್ಯಕ್ಷರಾದ ಶಂಕ್ರಪ್ಪ ಸಿನ್ನೂರ, ಉಪಾಧ್ಯಕ್ಷರಾದ ಸೂರೇಶ ಸಿನ್ನೂರ, ಮಹೇಶ ಹುಲಮನಿ, ಶಂಕ್ರಪ್ಪ ಸಪ್ಪಂಡಿ, ಬಸವಂತಪ್ಪ ಸಿನ್ನೂರ, , ರವಿ ಸಿನ್ನೂರ , ರಾಜೇಂದ್ರ ಹುಲಮನಿ , ವಿಶಾಲ ಸಿನ್ನೂರ, ಶಂಕರ ಹುಲಮನಿ, ಅನಿಲ ಸಿನ್ನೂರ, ಮಹಿಳೆಯರಾದ ವತ್ಸಲ, ಭೂವನೇಶ್ವರಿ, ಭಾರತಿ ಕಾಳಗಿ, ಸರಸ್ವತಿ, ಸೇರಿದಂತೆ ದೇವಾಂಗ ಸಮಾಜದ ಹಿರಿಯರು, ಮಹಿಳೆಯರು ಹಾಗೂ ಯುವಕರು ಇದ್ದರು.

ರೇಣುಕಾಚಾರ್ಯರ ಜಯಂತ್ಯುತ್ಸವ



ಮಸ್ಕಿ: ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಪಟ್ಟಣದ ಗಚ್ಚಿನಮಠದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದ ಗಚ್ಚಿನಮಠದಲ್ಲಿ ರೇಣುಕಾಚಾರ್ಯರ 26ನೇ ವರ್ಷದ ಜಯಂತಿ ಅಂಗವಾಗಿ ಶ್ರೀವರರುದ್ರಮುನಿ ಶಿವಾಚಾರ್ಯ ಶ್ರೀಗಳ ನೇತೃತ್ವದಲ್ಲಿ ಭಾನುವಾರ ಬೆಳಗ್ಗೆ ಪ್ರಾತಃಕಾಲ 5:30 ನಿ.ಕತೃ ಗದ್ದುಗೆಗೆ ರುದ್ರಾಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳು ನಂತರ ಪಂಚಾಚಾರ್ಯರ ಧ್ವಜಾರೋಹಣ ಹಾಗೂ ಮಹಾಮಂಗಳಾರತಿ ನೇರವೇರಿಸಲಾಯಿತು.

ಪಟ್ಟಣದಲ್ಲಿ ಇಂದು ನಡೆದ ರೇಣುಕಾಚಾರ್ಯರ ಜಯಂತ್ಯುತ್ಸವದ ಅಂಗವಾಗಿ ಮಸ್ಕಿ ವರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ರವರು ಭವ್ಯ ಮೆರವಣಿಗೆಗೆ ಚಾಲನೆ ನೀಡಿದರು.

ಬೆಳಿಗ್ಗೆ 10ಗಂಟೆಗೆ ಗಚ್ಚಿನಮಠದಿಂದ ಜಗದ್ಗುರು ರೇಣುಕಾಚಾರ್ಯರ ಅಲಂಕೃತ ಭಾವಚಿತ್ರದ ಮೆರವಣಿಗೆ ಸಕಲ ವಾದ್ಯಗಳೊಂದಿಗೆ, ಸುಮಂಗಲೆಯರ ಕಳಸ ಕನ್ನಡಿಯೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಈ ವೇಳೆ ವೀರಶೈವ ಜಂಗಮ ಸಮಾಜದ ಪ್ರಮುಖರು, ವಿವಿಧ ಸಮಾಜದ ಮುಖಂಡರು,ಭಕ್ತರು ಉಪಸ್ಥಿತಿ ಇದ್ದರು.

ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದ ಶಾಸಕ ದದ್ದಲ್

ಮಾನ್ವಿ: ತಾಲೂಕಿನ ಕುರ್ಡಿ ಗ್ರಾಮಕ್ಕೆ ರಾಯಚೂರು ಗ್ರಾಮೀಣ ಶಾಸಕ ಹಾಗೂ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ ಅಂತ್ಯಸಂಸ್ಕಾರಕ್ಕಾಗಿ ವೈಯುಕ್ತಿಕವಾಗಿ 50 ಸಾವಿರ ನಗದು ನೀಡಿದರು.

ಕುರ್ಡಿ ಗ್ರಾಮದ ಒಂದೆ ಕುಟುಂಬದ ಸಂಬಂದಿಗಳು ಆಂಧ್ರಪ್ರದೇಶದಲ್ಲಿನ ಸಮಾರಂಭಕ್ಕೆ ತೆರಳಿದಾಗ ನಡೆದ ದುರ್ಗಟನೆಯಲ್ಲಿ ಮೃತರಾಗಿದ್ದರೆ ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ತಿಳಿಸಿದರು.

ತುಂಗಭದ್ರ ನದಿಯಲ್ಲಿಸ್ನಾನ ಮಾಡುವ ಸಮಯದಲ್ಲಿ ಮೃತಪಟ್ಟ ಕುರ್ಡಿ ಗ್ರಾಮದ ಉಮಾವತಿ, ಶಿವಾನಂದ, ಮಹಾಂತೇಶ್, ಸುಂಕೇಶ್ವರ ಗ್ರಾಮದ ರತ್ನಮ್ಮರವರ ಮೃತ ದೇಹವನ್ನು ಗ್ರಾಮಕ್ಕೆ ತಂದ ವೇಳೆ ಗ್ರಾಮಸ್ಥಾರ ಹಾಗೂ ಬಂಧುಗಳ ರೋದನ ಮುಗಿಲು ಮುಟ್ಟಿತ್ತು.

ಕಂದಯ ನಿರೀಕ್ಷಕರಾದ ಹನುಮಂತನಾಯಕ ಜಲ್ಲಿ, ಮುಖಂಡರಾದ ಸೋಮಶೇಖರ ಪಾಟೀಲ್, ಶ್ರೀನಿವಾಸ ಸಾಹುಕರ್, ಮೌನೇಶನಾಯಕ, ಮನೋಜಗೌಡ, ಪ್ರವೀಣ, ಮಲ್ಲೇಶ, ಯಂಕೋಬ, ರಮೇಶ, ಮಹಾದೇವನಾಯಕ ಸೇರಿದಂತೆ ಗ್ರಾಮದ ಮುಖಂಡರು ಭಾಗವಹಿಸಿದರು.

ಸಂಸ್ಕಾರವು ಶಿಕ್ಷಣಕ್ಕೆ ನಿಜವಾದ ಆಭರಣ: ಶ್ರೀಗಳು

ಕುಷ್ಟಗಿ: ಪಟ್ಟಣದ ಮಾಸ್ಟರ್ ಮೈಂಡ್ ಕಿಡ್ಸ್ ಶಾಲೆಯಲ್ಲಿ ಚಿಣ್ಣರ ಅಂಗಳ, ಸರಸ್ವತಿ ಪೂಜಾ ಹಾಗೂ ವಾರ್ಷಿಕೋತ್ಸವ ಸಮಾರಂಭ ಜರುಗಿತು.

ಸಾನಿಧ್ಯ ವಹಿಸಿ ಮಾತನಾಡಿದಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಮದ್ದಾನೇಶ್ವರ ಮಠ ಕುಷ್ಟಗಿ ಮಾತನಾಡಿ, ಸಂಸ್ಕಾರವು ಶಿಕ್ಷಣಕ್ಕೆ ನಿಜವಾದ ಆಭರಣ ಅದನ್ನು ಮಕ್ಕಳಿಗೆ ಕಲಿಸಬೇಕು. ಮಾಸ್ಟರ್ ಮೈಂಡ್ ಕಿಡ್ಸ್‌ನ ಸಾಗರ್ ಪಾಟೀಲ ಅವರ ಶಿಕ್ಷಣ ಸೇವೆಯನ್ನು ಕೊಂಡಾಡಿ ಸಂಸ್ಥೆಯು ಉತ್ತರೋತ್ತರವಾಗಿ ಯಶಸ್ಸು ಕಾಣಲಿ ಎಂದು ಆಶೀರ್ವದಿಸಿದರು.

ರವಿಕುಮಾರ ಹಿರೇಮಠ ಸಮಾಜ ಸೇವಕರು ಸಸಿಗೆ ನೀರುಣಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರಾಚೀನ ಕಾಲದಿಂದಲೂ ನಮ್ಮ ಭಾರತ ದೇಶವು ಕಲೆ ಸಾಹಿತ್ಯ ಶಿಕ್ಷಣ ವಾಸ್ತು ಶಿಲ್ಪ, ವಿಜ್ಞಾನ ತಂತ್ರಜ್ಞಾನ ಇತ್ಯಾದಿ ಮನುಕುಲದ ಎಲ್ಲಾ ರಂಗಗಳಲ್ಲಿಯೂ ತನ್ನದೇ ಆದ ಛಾಪು ಮೂಡಿಸಿತ್ತು ಎಂದರಲ್ಲದೆ, ನಳಂದಾ ಶಿಲೆಯ ವಿಶ್ವವಿದ್ಯಾಲಯಗಳು ಪ್ರಾಚೀನ ಭಾರತದ ಜ್ಞಾನ ಸಂಪತ್ತಿಗೆ ಸಾಕ್ಷಿಯಾಗಿದ್ದವು ಎಂದರು.



ಅಧ್ಯಕ್ಷತೆಯನ್ನು ಮಾಸ್ಟರ್ ಮೈಂಡ್ ಕಿಡ್ಸ್‌ನ ಅಧ್ಯಕ್ಷ ಸಾಗರ್ ಎಸ್.ಪಾಟೀಲ ವಹಿಸಿಕೊಂಡಿದ್ದರು

ನಿವೃತ್ತತಹಶೀಲ್ದಾರ್‌ಸಿ.ಎಂ.ಹಿರೇಮಠ ಮಾತನಾಡಿ, ಮಕ್ಕಳಿಗೆ ಸಂಸ್ಕಾರ ಅತ್ಯಂತ ಮುಖ್ಯ, ಸಂಸ್ಕಾರವಿಲ್ಲದ ಶಿಕ್ಷಣ ಎಂದು - ಸಂಸ್ಕಾರ ರಹಿತ ಶಿಕ್ಷಣ ಕ್ಷಣ ಕಾಲ, ಆದರೆ ಸಂಸ್ಕಾರ ಭರಿತ ಶಿಕ್ಷಣ ಚಿರಕಾಲ ಎಂದು ಹೇಳುತ್ತಾ ಶಿಕ್ಷಣದ ಮೌಲ್ಯವನ್ನು ಪಾಲಕರಿಗೆ ತಿಳಿಸಿದರು.

ಉಪನ್ಯಾಸ ನೀಡಿದ ಉಪನ್ಯಾಸಕ ಎಸ್.ಎಸ್.ತೆಮ್ಮಿನಾಳ ಮಾತನಾಡಿ, ಮಕ್ಕಳಿಗೆ ಗುರುಗಳು ಹಿರಿಯರು ಹಾಗೂ ವೃದ್ಧರ ಬಗ್ಗೆ ವಿಶೇಷ ಗೌರವ ಕಾಳಜಿಯ ಪ್ರಜ್ಞೆ ಮೂಡಬೇಕು ಹಾಗೂ ಪಾಲಕರನ್ನು ಮತ್ತು ಅಜ್ಜ ಅಜ್ಜಿಯರನ್ನು ಸದಾ ಸಂತೋಷವಾಗಿರುವಂತೆ ನೋಡಿಕೊಳ್ಳುವುದೇ ನಿಜವಾದ ಶಿಕ್ಷಣ ಎಂದರು.

ಶಿಕ್ಷಣದ ಜೊತೆ ಜೊತೆಗೆ ನೈತಿಕ ಮೌಲ್ಯಗಳ ಜೇಣ್ಣ ಮಕ್ಕಳಿಗೆ ಅಷ್ಟೇ ಮುಖ್ಯ ಎಂದರು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿತು ಸಿ.ವಿ.ಪಾಟೀಲರ ಹಾಗೂ ಮಹೇಶ ಎಚ್. ನಿರ್ವಹಿಸಿದರು. ವೆ.ಶರಣಪ್ಪ ನಿವೃತ್ತ ಶಿಕ್ಷಕರು, ಪುರಸಭೆ ಮಾಜಿ ಸದಸ್ಯರಾದ ರಾಜೇಶ್ ಪತ್ತಾರ್, ರಾಜಕೀಯ ಧುರೀಣರಾದ ಹಾಗೂ ಶಿಕ್ಷಣ ಪ್ರೇಮಿಯಾದ ಕೆಶಶಿಧರ ಮುದೇನೂರು ಹಾಗೂ ಸಿಬ್ಬಂದಿ ವರ್ಗದವರು ಮಕ್ಕಳು ಪಾಲಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಕರಿಯಮ್ಮದೇವಿ ದೇವಸ್ಥಾನದ ಕಳಸಾರೋಹಣ

ಕೊಟ್ಟೂರು: ತಾಲೂಕಿನ ಹರಾಳು ಗ್ರಾಮದಲ್ಲಿ ಅಧಿದೇವತೆ ಶ್ರೀಕರಿಯಮ್ಮದೇವಿ ದೇವಸ್ಥಾನದ ಕಳಸಾರೋಹಣ, ನೂತನ ಕರಿಗಲ್ಲು ಪ್ರತಿಷ್ಠಾಪನೆ, ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ವಿವಿಧ ಪೂಜಾ ಕಾರ್ಯಕ್ರಮಗಳು ಏ.2, 3ರಂದು ವೈಭವದಿಂದ ಜರುಗಲಿವೆ. ಏ.2ರಂದು ಧರ್ಮಸಭೆಯ ದಿವ್ಯ ಸಾನಿಧ್ಯ ವಹಿಸಲಿರುವ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ ಹಾಗೂ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಚಾನುಕೋಟಿ ಮಠ ಕೊಟ್ಟೂರು, ನರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ತೆಗ್ಗಿನಮಠ ಹರಪನಹಳ್ಳಿ, ಪಂಚಾಕ್ಷರಿ ಶಿವಾಚಾರ್ಯ ಸ್ವಾಮೀಜಿ ಹಿರೇಮಠ ಬೆಣ್ಣೆಹಳ್ಳಿ, ಮಹೇಶ್ವರ ಸ್ವಾಮಿಗಳು ನಂದೀಪುರ, ಸದ್ಗುರು ಶಿವಯೋಗಿ ಹಾಲಸ್ವಾಮಿಗಳು ಗುರು ಹಾಲಸ್ವಾಮಿಮಠ ಹಿರೇಹಡಗಲಿ ಅವರ ಉಪಸ್ಥಿತಿಯಲ್ಲಿ ನೆರವೇರಲಿವೆ. ಸಂಜೆ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಉದ್ಘಾಟನೆಯನ್ನು ಶಾಸಕ ನೇಮಿರಾಜನಾಯ್ಕ ಹಾಗೂ ಮುಖ್ಯ ಅತಿಥಿಗಳಾಗಿ ಉಜ್ಜಯಿನಿ ಜ್ಞಾನಗುರು ವಿದ್ಯಾಪೀಠ ಕಾರ್ಯದರ್ಶಿ ಎಂ.ಎಂ.ಜೆ.ಹರ್ಷವರ್ಧನ್, ಜಿಪಂ ಮಾಜಿ ಉಪಾಧ್ಯಕ್ಷ ಪಿ.ಎಚ್.ದೊಡ್ಡರಾಮಣ್ಣ, ಬಣಕಾರ ಕೊಟ್ರೇಶಪ್ಪ ನಾಗರಕಟ್ಟೆ ಅವರು ಆಗಮಿಸಲಿದ್ದಾರೆ. ಪತ್ರಕರ್ತರು ಹಾಗೂ ಲೇಖಕರಾದ ಭೀಮಣ್ಣ ಗಜಾಪುರ ಅವರ ಸಾಹಿತ್ಯ ರಚನೆಯ ಹರಾಳು ಕರಿಯಮ್ಮ ದೇವಿಯ ಪ್ರಥಮ ಧ್ವನಿ ಸುರುಳಿ (ಸಿ.ಡಿ) ಬಿಡುಗಡೆಯಾಗಲಿದೆ. ಏ.3ರಂದು ಕಳಸಾರೋಹಣ ಹಾಗೂ ನೂತನ ಕರಿಗಲ್ಲು ಪ್ರತಿಷ್ಠಾಪನೆಯನ್ನು ಉಜ್ಜಯಿನಿ ಮಹಾಸನ್ನಿಧಿಯ ಸಾನಿಧ್ಯದಲ್ಲಿ ನಡೆಯಲಿವೆ. ಅದೇ ದಿನ ಮಧ್ಯಾಹ್ನ ಕೊಪ್ಪಳದ ಪರಮಪೂಜ್ಯ, ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಧರ್ಮಸಭೆ ಹಾಗೂ ಆಶೀರ್ವಚನ ಕಾರ್ಯಕ್ರಮ ನಡೆಯಲಿದೆ. ಸಂಸದ ಈ.ತುಕಾರಾಂ, ಅಧ್ಯಕ್ಷತೆ ಹಾಗೂ ವಿಶೇಷ ಆಹ್ವಾನಿತರಾಗಿ ಮಾಜಿ ಶಾಸಕ ಎಸ್.ಭೀಮಾನಾಯ್ಕ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಅಚ್ಚುಕಟ್ಟಾಗಿ ಕ್ರಿಕೆಟ್ ಪಂದ್ಯ ನಡೆಸಿ



ಕೆಂಭಾವಿ: ಎಲ್ಲ ಯುವಕರನ್ನು ಒಗ್ಗೂಡಿಸುವ ಮೂಲಕ ಸ್ನೇಹಭಾವದಿಂದ ಅಚ್ಚುಕಟ್ಟಾಗಿ ಕ್ರಿಕೆಟ್ ಪಂದ್ಯಗಳನ್ನು ನಡೆಸಿಕೊಡಬೇಕೆಂದು ಅಮೀನ್ ರೆಡ್ಡಿ ಪಾಟೀಲ ಹೇಳಿದರು. ಕೆಂಭಾವಿ ಸಮೀಪದ ಚಾಮನಾಳ ಗ್ರಾಮದಲ್ಲಿ ಭಜರಂಗಿ ಬಾಯ್ಸ್ ಕ್ರಿಕೆಟ್ ಕ್ಲಬ್ ವತಿಯಿಂದ ಹಮ್ಮಿಕೊಂಡಿರುವ ಓಪನ್ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಾಮೆಂಟ್ ಅನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿಯೊಬ್ಬರು ಕ್ರೀಡೆಯಲ್ಲಿ ಭಾಗವಹಿಸಬೇಕು. ಕ್ರೀಡೆಯಿಂದ ದೈಹಿಕ ಹಾಗೂ ಮಾನಸಿಕ ಸ್ಥೈರ್ಯ ಹೆಚ್ಚುತ್ತದೆ. ಆಟಗಾರರು ಕ್ರೀಡೆಯಲ್ಲಿ ಸೋಲು-ಗೆಲುವು ಸಮಾನವಾಗಿ ಸ್ವೀಕರಿಸಬೇಕು. ಯಾವುದೇ ರೀತಿಯ ಗಲಭೆಗಳಿಗೆ ಅವಕಾಶ ನೀಡದೆ ವ್ಯವಸ್ಥಾಪಕರು ನೀಡುವ ತೀರ್ಮಾನಗಳಿಗೆ ಬದ್ಧರಾಗಿ ಟೂರ್ನಿ ಅನ್ನು ಉತ್ತಮವಾಗಿ ನಡೆಸಿಕೊಂಡು ಹೋಗುವಂತೆ ತಿಳಿಸಿದರು. ಆನಂದ ಸ್ವಾಮೀಜಿ ಅವರು ದಿವ್ಯ ಸಾನಿಧ್ಯ ವಹಿಸಿದ್ದರು. ಬಸವೇಶ್ವರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಆಲೂರ, ಮಹಾಂತಗೌಡ ಪೊಲೀಸ್ ಪಾಟೀಲ್, ಚಂದಾಸಾಬ ಕುರೇಶಿ, ಬಸಣ್ಣ ದೊಡ್ಮನಿ, ನಿಂಗಣ್ಣ ಹುಜರಾತಿ, ಅಮರೇಶ್ ಜಾಗೀರದಾರ್, ಹನಮಂತ ಹುಲಕಲ್, ಅಕ್ಬರ ಸಾಬ, ಪವನ ಕುಲಕರ್ಣಿ, ಗೊಲ್ಲಾಳಪ್ಪ ಪೂಜಾರಿ, ಮಡಿವಾಳಪ್ಪ ಆಲಗೂರ್, ಕಾಳಪ್ಪ ದೊಡ್ಮನಿ, ರಾಮಚಂದ್ರನಾಯಕ ಗ್ರಾಮ ಒನ್, ವಿಜಯ ರಾಥೋಡ್, ರೆಡ್ಡಿ ರಾಥೋಡ್ ಸೇರಿದಂತೆ ಮುಂತಾದವರಿದ್ದರು. ಅತಿಥಿ ಶಿಕ್ಷಕರಾದ ಸಿ.ಎಂ.ಪೂಜಾರಿ ನಿರೂಪಿಸಿದರು.



ಕುರುಗೋಡು: ಸಮೀಪದ ಎಮ್ಮಿಗನೂರಿನ ಹೊಸೂರಿನಲ್ಲಿ ಕಾರ್ಯ ಕ್ಷೇತ್ರದಲ್ಲಿ ಜನಮಂಗಳ ಕಾರ್ಯಕ್ರಮದಡಿಯಲ್ಲಿ ಸದಸ್ಯರ ಫಲಾನುಭವಿ ಮಮ್ಮದ್ ರಿಯಾಜ್ ಅವರಿಗೆ ಜಿಲ್ಲಾ ನಿರ್ದೇಶಕ ವ್ಹೀಲ್‌ಚೇರ್ ವಿತರಿಸಿದರು. ಖಾಜಾ ಹುಸೇನ್, ಅಬ್ದುಲ್, ವಲಯದ ಮೇಲ್ವಿಚಾರಕ ಮಂಜುನಾಥ , ಸ್ಥಳೀಯ ಸೇವಾ ಪ್ರತಿನಿಧಿ ಲಕ್ಷ್ಮೀ, ಶಾಹಿದ ಸ್ವಸಹಾಯ ಸಂಘದ ಸದಸ್ಯರು ಇತರರಿದ್ದರು.

ದೇವಸ್ಥಾನಕ್ಕೆ 2 ಲಕ್ಷ ರೂ. ಚೆಕ್ ವಿತರಣೆ

ಕುರುಗೋಡು: ಎಮ್ಮಿಗನೂರು ಗ್ರಾಮದ ಬೈಪಾಸ್ ರಸ್ತೆಯಲ್ಲಿ ಬರುವವ ತಳವಾರಪೇಟೆಯ ಶ್ರೀಗಂಗಾಪರಮೇಶ್ವರಿ ದೇವಸ್ಥಾನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ ವತಿಯಿಂದ ಎರಡು ಲಕ್ಷ ರೂ. ಮೊತ್ತದ ಚೆಕ್ ವಿತರಿಸಲಾಯಿತು.

ಈ ವೇಳೆ ಜಿಲ್ಲಾ ನಿರ್ದೇಶಕ ರೋಹಿತಾಕ್ಷ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ದೇವಸ್ಥಾನಗಳು ಸಂಸ್ಕೃತಿ ಮತ್ತು ಸಂಸ್ಕಾರದ ಪ್ರತೀಕವಾಗಿದ್ದು, ಆಧ್ಯಾತ್ಮಿಕತೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುವೆ ಎಂದರು.

ನಂತರ ತಾಲೂಕು ಯೋಜನಾಧಿಕಾರಿ ರಾಘವೇಂದ್ರ ಎಲ್. ಮಾತನಾಡಿ, ಸಂಸ್ಥೆಯು 64 ಯೋಜನೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ನೀಡುವ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸುಸಕ್ತ ರನ್ನಾಗಿಸುವುದು ಮೂಲ ಉದ್ದೇಶವಾಗಿದೆ ಎಂದರು.

ಕೃಷಿ ಮೇಲ್ವಿಚಾರಕ ಸಂಜುಕುಮಾರ್ ವಲಯದ ಮೇಲ್ವಿಚಾರಕ ಮಂಜುನಾಥ್ ಸಂಪನ್ಮೂಲ ವ್ಯಕ್ತಿ ಎಸ್.ರಾಮಪ್ಪ ಸೇವಾ ಪ್ರತಿನಿಧಿ ಲಕ್ಷ್ಮಿ, ದೇವಸ್ಥಾನದ ಸೇವಾ ಸಮಿತಿಯ ಅಧ್ಯಕ್ಷರಾದ ಕಾಗಿ ಈರಣ್ಣ ಪ್ರಮುಖರಾದ ಆದಿಮನೆ ಗುಂಡಯ್ಯ, ಬಡಿಗೇರ್ ವೀರೇಶ್. ಯಮನೂರಪ್ಪ, ಎಚ್.ರಂಗಪ್ಪ, ಜಿ.ಜಡಪ್ಪ, ಗಂಗಾಧರ, ನಾಗಪ್ಪ, ಲಕ್ಷ್ಮಿಕಾಂತ ಸೇರಿದಂತೆ ಗಂಗಾಮತ ಸಮಾಜದ ಹಿರಿಯರು, ಯುವಕರು ಸಮಿತಿಯ ಪದಾಧಿಕಾರಿಗಳು ಇದ್ದರು.



ಕುರುಗೋಡು: ಎಮ್ಮಿಗನೂರು ಗ್ರಾಮದ ಬೈಪಾಸ್ ರಸ್ತೆಯಲ್ಲಿ ಬರುವವ ತಳವಾರಪೇಟೆಯ ಶ್ರೀಗಂಗಾಪರಮೇಶ್ವರಿ ದೇವಸ್ಥಾನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ ವತಿಯಿಂದ ಎರಡು ಲಕ್ಷ ರೂ. ಮೊತ್ತದ ಚೆಕ್ ವಿತರಿಸಲಾಯಿತು.

ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅಭಿಪ್ರಾಯ

ಪ್ರಧಾನಿ ಮೋದಿ ದೇಶದ ಶಕ್ತಿ

ಬಳ್ಳಾರಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಮ್ಮ ದೇಶದ ಶಕ್ತಿ, ವಿವಿಧ ರೀತಿಯಲ್ಲಿ ದೇಶವನ್ನು ಅಭಿವೃದ್ಧಿ ಪಡಿಸುವ ಮೂಲಕ ಇಡೀ ವಿಶ್ವವೇ ದೇಶವನ್ನು ಗಮನಸೆಳೆಯುವಂತೆ ಮಾಡಿದ್ದಾರೆ, ಇದು ನಮ್ಮ ಮೋದಿ ಅವರ ತಾಕತ್ತು ಎಂದು ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಹೇಳಿದರು.

ಕುರುಗೋಡು ತಾಲೂಕಿನ ದಮ್ಮೂರು ಗ್ರಾಮದ ಶ್ರೀಸದ್ಗುರು ವೆಂಕವಧೂತ ಮಠದಲ್ಲಿ ಭಾನುವಾರ ಕಂಪ್ಲಿ ಕ್ಷೇತ್ರದ ಕುರುಗೋಡು ಬಿಜೆಪಿ ಮಂಡಲದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಂಡಲ ಮಟ್ಟದ ಪ್ರಶಿಕ್ಷಣ ವರ್ಗದಲ್ಲಿ ಮಾತನಾಡಿದರು.

ಕೊರೋನಾ ವೇಳೆ ನಮ್ಮ ಮೋದಿ ಅವರು ಕೈಗೊಂಡಿರುವ ಕ್ರಮಗಳನ್ನು ಇಡೀ ವಿಶ್ವವೇ ಕೊಂಡಾಡಿದೆ. ಎಲ್ಲರಿಗೂ ಉಚಿತ ಲಸಿಕೆ ನೀಡುವ ಮೂಲಕ ದೇಶದ ಜನರ ಆರೋಗ್ಯ ಕಾಪಾಡಿದ್ದಾರೆ. ಸದ್ಯ ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಮಧ್ಯೆ ನಡೆಯುತ್ತಿರುವ ವೈಮಾನಿಕ ದಾಳಿಯಿಂದ ಅನೇಕ ರಾಷ್ಟ್ರಗಳು ನಲುಗಿವೆ. ಪೆಟ್ರೋಲ್, ಡೀಸೆಲ್, ಅನಿಲದ ಅಭಾವದಿಂದ ತತ್ತರಿಸಿವೆ. ಆದರೆ, ನಮ್ಮ ದೇಶದಲ್ಲಿ ಯಾವುದೇ ಕೊರತೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದಾರೆ. ಅತ್ಯಂತ ಪ್ರೀತಿ, ಸಹಬಾಳ್ವೆಯಿಂದ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮರ್ಥವಾಗಿ ನಿಭಾಯಿಸುವ ಮೂಲಕ ಇಡೀ ವಿಶ್ವದ ಗಮನಸೆಳೆದಿದ್ದಾರೆ, ಇದು ನಮ್ಮ ಮೋದಿ ಅವರ ತಾಕತ್ತು. ಕೈ ನಾಯಕರಿಗೆ ಟೀಕೆ ಮಾಡುವುದು ಬಿಟ್ಟರೆ ಅವರಿಗೆ ಏನೂ ಗೊತ್ತಿಲ್ಲ, ನಮ್ಮ ಮೋದಿ ಅವರ ಜನಪ್ರಿಯತೆ ಕಂಡು ಬಿಜೆಪಿ ವಿರುದ್ಧ ಅಪಪ್ರಚಾರಕ್ಕೆ ಇಳಿದಿದ್ದಾರೆ, ದೇಶದ ಜನರು ಬರುವ ದಿನಗಳಲ್ಲಿ ಕಾಂಗ್ರೆಸ್ ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ ಅವರು ಮಾತನಾಡಿದರು.

ಕಂಪ್ಲಿ ಕ್ಷೇತ್ರದ ಮಾಜಿ ಶಾಸಕ ಟಿ.ಎಚ್.ಸುರೇಶ್ ಬಾಬು, ಕುರುಗೋಡು ಮಂಡಲ ಅಧ್ಯಕ್ಷ ಮದಿರೆ ಕುಮಾರಸ್ವಾಮಿ ಮಾತನಾಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ಬಳ್ಳಾರಿ ನಗರ ಅಧ್ಯಕ್ಷ ಜಿ.ವೆಂಕಟರಮಣ, ರಾಜ್ಯ ಕಾರ್ಯದರ್ಶಿ ಕೆ.ಎಸ್.ದಿವಾಕರ್, ಮಹಾನಗರ ಪಾಲಿಕೆ ಸದಸ್ಯರಾದ ಕೆ.ಹನುಮಂತಪ್ಪ, ಗುಡಿಗಂಟೆ ಹನುಮಂತಪ್ಪ, ಶ್ರೀನಿವಾಸ್ ಮೊತ್ಕರ್, ಕಲ್ಪನಾ ಸುರೇಂದ್ರ, ಗಣಪಾಲ್ ಐನಾಥ್ ರೆಡ್ಡಿ, ಕೆ.ರಾಮಲಿಂಗಪ್ಪ, ಡಾ.ಮಹಿಪಾಲ, ಸೋಮಶೇಖರ್, ಷಣ್ಮುಖ, ಹನುಮೇಶ ಉಪ್ಪಾರ, ರಾಮಾಂಜನೇಯ, ಸುಗುಣ ರೆಡ್ಡಿ, ಓಂ.ಪ್ರಕಾಶ, ಸಿದ್ದೇಶ್ ಉಳುರ್, ರಾಮಚಂದ್ರಪ್ಪ ಸೇರಿದಂತೆ ಪಕ್ಷದ ಅನೇಕ ಪ್ರಮುಖರು, ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.



ಮನ್ ಕೀ ಬಾತ್ ವೀಕ್ಷಣೆ

ಮಾಜಿ ಶಾಸಕ ಗಾಲಿ ಸೋಮಶೇಖರ್ ಸೇರಿದಂತೆ ಅನೇಕ ಗಣ್ಯರು, ಪದಾಧಿಕಾರಿಗಳು, ನೂರಾರು ಕಾರ್ಯಕರ್ತರು, ಭಾನುವಾರ ಆಕಾಶವಾಣಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ನಡೆಸಿಕೊಟ್ಟ ಮನ್ ಕೀ ಬಾತ್ ವೀಕ್ಷಣೆ ಮಾಡಿದರು. ಮಾಜಿ ಶಾಸಕ ಪ್ರಧಾನ ಮಂತ್ರಿ, ನರೇಂದ್ರ, ಮೋದಿ ಅವರು, ದೇಶದ ಜನರಿಗೆ ಮನ್ ಕೀ ಬಾತ್ ಮೂಲಕ ನೀಡಿದ ಸಂದೇಶಗಳು ಎಲ್ಲರಲ್ಲೂ ಮತ್ತಷ್ಟು ಶಕ್ತಿ ಹಾಗೂ ವಿಶ್ವಾಸವನ್ನು ಹೆಚ್ಚಿಸಿದೆ. ಜಾಗತಿಕ ಮಟ್ಟದಲ್ಲಿ ಗಲ್ಫ್ ರಾಷ್ಟ್ರಗಳೊಂದಿಗೆ ಭಾರತದ ಸ್ನೇಹ ಸಂಬಂಧಗಳ ಕುರಿತು ಉಲ್ಲೇಖಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸ್ಥಾನಮಾನ ಹೆಚ್ಚುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಬಿಜೆಪಿ ಕಾರ್ಯಕರ್ತರಿಗೆ ಸಂಘಟನಾ ತರಬೇತಿ

ಹಗರಿಬೊಮ್ಮನಹಳ್ಳಿ: ಬಿಜೆಪಿಯ ವಿವಿಧ ವಿಭಾಗೀಯ ಪದಾಧಿಕಾರಿಗಳಿಗೆ ಪಕ್ಷದ ಕಾರ್ಯಕರ್ತರಿಗೆ ಸಂಘಟನೆ ವಿಷಯವಾಗಿ ತರಬೇತಿ ನೀಡುವ ಉದ್ದೇಶದಿಂದ ಮಹಾಭಿಯಾನ ಸಭೆ ನಡೆಸಲಾಗಿದೆ ಎಂದು ಬಿಜೆಪಿ ಪಕ್ಷದ ವಿಜಯನಗರ ಜಿಲ್ಲೆಯ ಜಿಲ್ಲಾಧ್ಯಕ್ಷ ಸಂಜೀವ್ ರೆಡ್ಡಿ ತಿಳಿಸಿದರು.

ಪಟ್ಟಣದ ಶ್ರೀಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಮಂಡಲ ಹಾಗೂ ನಗರ ಘಟಕ ವತಿಯಿಂದ ಆಯೋಜಿಸಲಾಗಿದ್ದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರ-ಶಿಕ್ಷಣ ಮಹಾಅಭಿಯಾನದ ಪದಾಧಿಕಾರಿಗಳ ತರಬೇತಿ ಸಭೆಯಲ್ಲಿ ಮಾತನಾಡಿದರು.

ಜನಸಂಘದ ದೇವಮಾನವೆಂದೆ ಪ್ರಖ್ಯಾತಿ ಪಡೆದ ಗೌರವಾನ್ವಿತ ಪಂಡಿತ್ ದೀನದಯಾಳ್ ಬಿಜೆಪಿ ಸಂಘಟನಾ ತರಬೇತಿ ಕಾರ್ಯಕ್ರಮ ಪಕ್ಷದ ಬಲವರ್ಧನೆಗಾಗಿ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತ ಪಕ್ಷಕ್ಕಾಗಿ ಯಾವ ರೀತಿ ಕೆಲಸ ಮಾಡಬೇಕು ಎಂಬುದನ್ನು ತಿಳಿಸುವುದಾಗಿದೆ ಎಂದರು. ಬಿಜೆಪಿ ಪಕ್ಷದ ಪರಾಜಿತ ಅಭ್ಯರ್ಥಿ ಬಲ್ಲಾಹುಣಸಿ ರಾಮಣ್ಣ ಮಾತನಾಡಿ, ವ್ಯಕ್ತಿಗಿಂತ ಪಕ್ಷ ಮುಖ್ಯ ಪಕ್ಷಕ್ಕಿಂತ ದೇಶವೇ ಮುಖ್ಯವಾಗಿದೆ.ದೇಶದ ಅಭಿವೃದ್ಧಿಗೆ ದೇಶದ ಹಿತಕ್ಕಾಗಿ ಬಿಜೆಪಿ ಅಧಿಕಾರಕ್ಕೆ ಮತ್ತೆ ಬರಬೇಕಿದೆ ಆದ್ದರಿಂದ ಎಲ್ಲಾರೂ ಒಂದುಗೂಡಿ ಪಕ್ಷದ ಬಲವರ್ಧನೆಗೆ ಶ್ರಮಿಸಬೇಕಿದೆ ಎಂದರು.

ಈ ವೇಳೆ ಪಕ್ಷದ ಹಿರಿಯರು ಪಕ್ಷದ ಸಂಘಟನಾ ಮುಖ್ಯಸ್ಥರಾದ ಪೂಜ್ಯಪ್ಪ, ರೊಟ್ಟಿ ಕೊಟ್ರಪ್ಪ, 7 ಹಂತದಲ್ಲಿ ಪ್ರಶಿಕ್ಷಣ ಉಪನ್ಯಾಸ ನೀಡಿದರು.

ಜಿಲ್ಲಾ ಉಪಾಧ್ಯಕ್ಷ ಸಂದೀಪ್ ಸಿಂಗ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣಾ ನಾಯ್ಕ್, ಜಿಲ್ಲಾ ಕಾರ್ಯದರ್ಶಿ ಕನಕಪ್ಪ ಕಿಚಿಡಿ ಕೊಟ್ರೇಶ್, ಮಂಡಲ ಅಧ್ಯಕ್ಷ ಬೆಣಕಲ್ಲು ಪ್ರಕಾಶ್, ಮಹಿಳಾ ಅಧ್ಯಕ್ಷರಾದ ಶಂತಮ್ಮ, ಪ್ರಧಾನ ಕಾರ್ಯದರ್ಶಿ ಕವಿತಾ ಪುರಸಭೆ ಸದಸ್ಯರಾದ ನವೀನ್ ಕುಮಾರ್, ಜೋಗಿ ಹನುಮಂತಪ್ಪ, ಕಾರ್ಯದರ್ಶಿ ಕೋಗಳಿ ಹನುಮಂತಪ್ಪ, ಎಸ್.ಸಿ.ಮೋರ್ಚಾದ ಮರಿಯಪ್ಪ, ನಗರ ಘಟಕದ ಅಧ್ಯಕ್ಷ ಮಂಜುನಾಥ ಹಿರೇಮಠ ಹಂಪಾಪಟ್ಟಣದ ಮಹೇಂದ್ರ, ಗೋವಿಂದಪ್ಪ, ನರೇಗಲ್ಲ ಮಲ್ಲಿಕಾರ್ಜುನ ಸಾಲುಮನಿ ನಾಗರಾಜ ನಗರಘಟಕದ ಮಲ್ಲಯ್ಯ, ಸುರೇಶ್, ನವೀನ್, ಕಾಳೇಶ್,ಅಜ್ಜಯ್ಯ ಗಜಪುರ ಮಂಜುನಾಥ ಗೋಣೆಪ್ಪ,ರಾಚಪ್ಪ, ಮಂಜುನಾಥ, ಮಲ್ಲಿಕಾರ್ಜುನ, ಬಸವರಾಜ್, ಸಂಪತ್ ಮೂರ್ತಿ, ಯುವರಾಜ್, ಲೋಕೇಶ್ ಇತರರಿದ್ದರು.



ಗಣತಿದಾರರು, ಮೇಲ್ವಿಚಾರಕರಿಗೆ ತರಬೇತಿ

ಸಿರುಗುಪ್ಪ: 2027ರ ಜನಗಣತಿಗಾಗಿ ಗಣತಿದಾರರಿಗೆ ಮೂರು ಹಂತದಲ್ಲಿ ತರಬೇತಿ ನೀಡಲಾಗುವುದು, ಇದು ಸಂಪೂರ್ಣ ಡಿಜಿಟಲ್ ಆಧಾರಿತ ಪ್ರಕ್ರಿಯೆಯಾಗಿದೆ. ಮೊದಲ ಹಂತದ ಮನೆಪಟ್ಟಿ ಮತ್ತು ಮನೆ ಗಣತಿಗಾಗಿ ಮೊಬೈಲ್ ಅಪ್ಲಿಕೇಶನ್ ಗಳು, ಜಿಯೋಟ್ಯಾಗಿಂಗ್ ಮತ್ತು ಸ್ವಯಂ-ಗಣತಿ ವ್ಯವಸ್ಥೆ ಬಳಸಲು ತರಬೇತಿ ನೀಡಲಾಗುತ್ತಿದೆ. ಈ ತರಬೇತಿಯು ದೋಷ-ಮುಕ್ತ ಮತ್ತು ಪಾರದರ್ಶಕ ಮಾಹಿತಿ ಸಂಗ್ರಹಣೆಯನ್ನು ಖಚಿತ ಪಡಿಸಲು ಸಹಾಯವಾಗಲಿದೆ ಎಂದು ತಹಶೀಲ್ದಾರ್ ಗೌಸಿಯ ಬೇಗಂ ಹೇಳಿದರು.

ನಗರದ ವಿವೇಕಾನಂದ ಪಬ್ಲಿಕ್ ಶಾಲೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ, ನಗರಸಭೆ, ಪಟ್ಟಣ ಪಂಚಾಯಿತಿ ಸಹಯೋಗದೊಂದಿಗೆ ಭಾನುವಾರ ನಡೆದ 2027ರ ಜನಗಣತಿಯ ಗಣತಿದಾರರಿಗೆ ಹಾಗೂ ಮೇಲ್ವಿಚಾರಕರಿಗೆ ತರಬೇತಿ ಕಾರ್ಯಾಗಾರರದಲ್ಲಿ ಮಾತನಾಡಿದರು.

ಜನಗಣತಿಯು ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿ ನಡೆಯಲಿದ್ದು, ಇದಕ್ಕೆ ವಿಶೇಷ ತರಬೇತಿ ನೀಡಲಾಗುತ್ತದೆ. ತರಬೇತಿಯಲ್ಲಿ ರಚನೆ, ನಕ್ಷೆಗಳ ತಯಾರಿಕೆ, ಮತ್ತು ಜನಗಣತಿ ನಿರ್ವಹಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆ ಸೇರಿದೆ. ಗಣತಿದಾರರಿಗೆ ಮಾಹಿತಿಯನ್ನು ಗೌಪ್ಯವಾಗಿಡಲು ಮತ್ತು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲು ತರಬೇತಿಯಲ್ಲಿ ಸೂಚನೆ ನೀಡಲಾಗಿದೆ.

ನಾಗರಿಕರು ಆನ್‌ಲೈನ್‌ನಲ್ಲಿ ಮಾಹಿತಿ ಸಲ್ಲಿಸುವ 'ಸ್ವಯಂ-ಗಣತಿ' ವ್ಯವಸ್ಥೆಯು ಇದರಲ್ಲಿ ಸೇರಿದೆ, ಇದಕ್ಕಾಗಿ ವಿಶೇಷ ತರಬೇತಿ ನೀಡಲಾಗುತ್ತಿದೆ ಎಂದರು.

ತಾಲೂಕು ಆಡಳಿತದಿಂದ ಗ್ರಾಮೀಣ ಭಾಗದಲ್ಲಿ 469 ಗಣತಿದಾರರು, 68 ಮೇಲ್ವಿಚಾರಕರು, 10 ತರಬೇತಿದಾರರು. ಸಿರುಗುಪ್ಪ ನಗರಸಭೆ ವ್ಯಾಪ್ತಿಯಲ್ಲಿ 90 ಗಣತಿದಾರರು, 15 ಮೇಲ್ವಿಚಾರಕರು, 2 ತರಬೇತಿದಾರರು, 16 ಕಾಯ್ದಿರಿಸಿದ ಗಣತಿದಾರರು. ತೆಕ್ಕಲಕೋಟೆ ಪಟ್ಟಣ ಪಂಚಾಯಿತ ವ್ಯಾಪ್ತಿಯಲ್ಲಿ 45 ಗಣತಿದಾರರು, 2 ತರಬೇತಿದಾರರನ್ನು ನೇಮಿಸಲಾಗಿದೆ. ಸಂಪೂರ್ಣ ಮಾಹಿತಿ ಪಿಪಿಟಿ ಮೂಲಕ ತರಬೇತಿಯನ್ನು ನೀಡಲಾಗುವುದು ಎಂದರು. ಜನಗಣತಿಯ ಜಿಲ್ಲಾ ಡಿಎಸ್‌ಒ ಅಧಿಕಾರಿ ಪತ್ರಿಬಸಪ್ಪ, ಜಿಲ್ಲಾ ಜನಗಣತಿ ನೋಡಲ್ ಅಧಿಕಾರಿ ಶ್ರೀನಾಥ್, ಬಿಇಒ ಎಚ್.ಗುರಪ್ಪ, ಬಿಸಿಎಂ ಸಹಾಯಕ ನಿರ್ದೇಶಕ ಕೆ.ಮಲ್ಲಿಕಾರ್ಜುನ, ಪೌರಾಯುಕ್ತ ಗಂಗಾಧರ, ಪ.ಪಂ.ಮುಖ್ಯಾಧಿಕಾರಿ ಪರಶುರಾಮ, ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಡಾ.ಕೆ. ಎಂ.ಚಂದ್ರಕಾಂತ ಭಾಗವಹಿಸಿದ್ದರು.



ನಮ್ಮೂರ ಶಾಲೆ ಉಳಿಸಲು ರಾಜ್ಯಮಟ್ಟದ ಸಮಾವೇಶದ ಪೋಸ್ಟರ್ ಬಿಡುಗಡೆ

ವಿಜಯನಗರ: ಜಿಲ್ಲಾ ಮಟ್ಟದ ಶಿಕ್ಷಣ ಉಳಿಸಿ ಸಮಿತಿಯ ಸಭೆ ಮಾಡಿ ಸರ್ಕಾರಿ ಶಾಲೆಗಳನ್ನು ಉಳಿಸಲು ಏಪ್ರಿಲ್ 10 ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜಮಟ್ಟದ ಸಮಾವೇಶದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಎಐಡಿಎಸ್ ಜಿಲ್ಲಾ ಅಧ್ಯಕ್ಷ ರವಿಕಿರಣ್ ಜೆ. ಪಿ ಅವರು ಮಾತನಾಡಿ, ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ ರಾಜ್ಯದಲ್ಲಿ 40,000 ಸರ್ಕಾರಿ ಶಾಲೆ ಹಾಗೂ ವಿಜಯನಗರ ಜಿಲ್ಲೆಯ 700 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದ್ದು, ಈ ನೀತಿಯ ವಿರುದ್ಧ ಎಐಡಿಎಸ್ ನೇತೃತ್ವದಲ್ಲಿ ಈಗಾಗಲೇ ಜಿಲ್ಲೆಯ ಜನತೆ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳನ್ನು ರಚಿಸಿಕೊಂಡು ಕಳೆದ ನಾಲ್ಕು ತಿಂಗಳಿನಿಂದ ಎಐಡಿಎಓ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದಾರೆ. ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಕೈ ಬಿಟ್ಟು, ನಮ್ಮೂರ ಶಾಲೆ ಉಳಿಸಿ ಎಂದು ಆಗ್ರಹಿಸಿ ಹಳ್ಳಿಯಲ್ಲಿ ಹೋರಾಟ ನಡೆಸಿ ತಾಲೂಕ ಹಾಗೂ ಜಿಲ್ಲಾ ಮಟ್ಟದ ವಿದ್ಯಾರ್ಥಿ ಪೋಷಕರ ಪ್ರತಿಭಟನಾ ಸಮಾವೇಶಗಳು ನಡೆದಿವೆ. ಈ ಹೋರಾಟದ ಮುಂದುವರಿಕೆಯಾಗಿ ಕೆಪಿಎಸ್ ಯೋಜನೆ ಕೈ ಬಿಟ್ಟು ನಮ್ಮೂರ ಶಾಲೆ ಉಳಿಸಿ ಎಂಬ ಧ್ವನಿಯನ್ನು ರಾಜಧಾನಿಯಲ್ಲಿ ಮೊಳಗಿಸಲು ಏ.10ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ವಿಜಯನಗರ ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾವೇಶದಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.

ಎಐಡಿಎಸ್ ಜಿಲ್ಲಾ ಕಾರ್ಯದರ್ಶಿ ಯು. ಉಮಾದೇವಿ, ಪಂಪಾಪತಿ, ಪ್ರಕಾಶ್ ನಾಯಕ್, ಪಾಲಾಕ್ಷ ಕೆ., ಶ್ರೀನಿವಾಸ್ ಡಿ., ಉಪಸ್ಥಿತರಿದ್ದರು.



ಪಟ್ಟಣದಲ್ಲಿ ಬೀದಿನಾಯಿಗಳ ಹಾವಳಿ: ಸಾರ್ವಜನಿಕರ ಆಕ್ರೋಶ

ಅಕ್ಕಂಡಿ ಬಸವರಾಜ್ ಮಾಲವಿ

ದಿಗಂತ ವಿಶೇಷ

ಹಗರಿಬೊಮ್ಮನಹಳ್ಳಿ: ಪಟ್ಟಣದಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಮಕ್ಕಳು ಮಹಿಳೆಯರು ವಿಕಲಚೇತನರು ಹಿರಿಯ ವಯಸ್ಕರು ಸೈಕಲ್ ಮತ್ತು ದ್ವಿಚಕ್ರವಾಹನ ಸವಾರರು ಆತಂಕದಲ್ಲಿಯೇ ಓಡಾಡಬೇಕಾದ ಪರಿಸ್ಥಿತಿ ಎದುರಾಗಿದೆ.

ಸಾರ್ವಜನಿಕರ ಹಿತ ದೃಷ್ಟಿಯಿಂದ ನಾಯಿಗಳ ನಿಯಂತ್ರಣಕ್ಕೆ ಕ್ರಮ ವಹಿಸಲಾಗುತ್ತಿದೆ ಎಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆ ಪುರಸಭೆಯವರು ಹೇಳುತ್ತಾ ಬಂದಿದ್ದಾರೆ. ಆದರೂ ನಾಯಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಕಡಿಮೆ ಆಗುತ್ತಿಲ್ಲ.

ಪಟ್ಟಣದ ಬಹುತೇಕ ಜನವಸತಿ ಪ್ರದೇಶದಲ್ಲಿ ನಾಯಿಗಳು ಬೀಡು ಬಿಟ್ಟಿವೆ. ದ್ವಿಚಕ್ರವಾಹನ ಸವಾರರನ್ನು ಬೀದಿ ನಾಯಿಗಳು ಬೆನ್ನಟ್ಟುತ್ತಿದ್ದು, ಸವಾರರು ದಾಳಿಯಿಂದ ತಪ್ಪಿಸಿಕೊಳ್ಳಲು ಹೋಗಿ ಅಪಾಯಕ್ಕೆ ಸಿಲುಕಿಕೊಂಡ ಹಲವು ಉಧಾಹರಣೆಗಳಿವೆ. ನಾಯಿಗಳನ್ನು ನಿಯಂತ್ರಿಸುವ ಕ್ರಮವನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸರಿಯಾಗಿ ನಿಭಾಯಿಸುತ್ತಿಲ್ಲ ಎಂಬುದು ಸಾರ್ವಜನಿಕ ಆಕ್ರೋಶವಾಗಿದೆ.



> ಪುರಸಭೆ ವ್ಯಾಪ್ತಿಯ 7ನೇ ವಾರ್ಡ್‌ನಲ್ಲಿ ಐದು ದಿನಗಳ ಹಿಂದೆ ತರಕಾರಿ ಮಾರಾಟ ಮಾಡಲು ಬಂದಿದ್ದ ಬಾಲಕನನ್ನು ನಾಯಿಗಳು ಕಚ್ಚಿದ್ದವು. ಇಂದು ಭಾನುವಾರ ಬೆಳಿಗ್ಗೆ ಶಿವ ಟ್ರೇಡರ್ಸ್ ರಾಮಲಿಂಗಪ್ಪ ಎಂಬವರಿಗೆ ನಾಯಿ ಕಚ್ಚಿ ಗಾಯವಾಗಿದೆ. ಇದೇ ರೀತಿ ಬೇರೆ ಬೇರೆ ವಾರ್ಡಿನಲ್ಲಿ ನಾಯಿ ಕಚ್ಚಿದ ಹಲವು ಪ್ರಸಂಗಗಳಿದ್ದು ಅಧಿಕಾರಿಗಳ ನಿರ್ಲಕ್ಷ್ಯವೇ ನಾಯಿ ಹೆಚ್ಚಳಕ್ಕೆ ಕಾರಣವಾಗಿದೆ. ಕೂಡಲೇ ನಾಯಿಗಳ ನಿಯಂತ್ರಣಕ್ಕೆ ಕ್ರಮ ವಹಿಸಲಿ ಎಂದು ಅಗ್ರಹಿಸುತ್ತೇನೆ.
>
> ■ ದೀಪಕ್ ಸಾ ಕಠಾರೆ, ಪುರಸಭೆ ಸದಸ್ಯ

'ನಶಾ ಮುಕ್ತ ಭಾರತ ಅಭಿಯಾನ' ಯಶಸ್ವಿ: ಅಭಿನಂದನೆ

ಬೀದರ್: ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರೀಯ ವಿಶ್ವವಿದ್ಯಾಲಯದ ಪಾವನಧಾಮ ಬೀದರ್ ವತಿಯಿಂದ 'ನಶಾ ಮುಕ್ತ ಭಾರತ ಅಭಿಯಾನ' ಯಶಸ್ವಿಯಾಗಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಭವ್ಯ ಅಭಿನಂದನಾ ಸಮಾರಂಭವನ್ನು ನಗರದ ಪಾಪನಾಶ ಗೇಟ್‌ನ ಸಾಯಿ ರಾಮ ಸಮರ್ಥ ಫಂಕ್ಷನ್ ಹಾಲ್‌ನಲ್ಲಿ ಆಯೋಜಿಸಲಾಯಿತು.

ಸಮಾಜದಲ್ಲಿ ನಶೆ ವಿರೋಧಿ ಜಾಗೃತಿ ಮೂಡಿಸುವ ಹಾಗೂ ವ್ಯಸನಮುಕ್ತ ಜೀವನಕ್ಕೆ ಪ್ರೇರಣೆ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಬ್ರಹ್ಮಾಕುಮಾರಿಸ್ ಪಾವನಧಾಮ ಸಂಸ್ಥೆಯ ಜಿಲ್ಲಾ ಮುಖ್ಯಸ್ಥರಾದ ರಾಜಯೋಗಿನಿ ಬಿ.ಕೆ.ಪ್ರತಿಮಾ ಬಹನ್‌ಜಿ ದಿವ್ಯ ಸಾನ್ನಿಧ್ಯ ವಹಿಸಿ, ಆತ್ಮಶಕ್ತಿ ಹಾಗೂ ಮನೋಬಲದ ಮೂಲಕ ವ್ಯಸನದಿಂದ ದೂರವಿರುವ ಮಹತ್ವವನ್ನು ವಿವರಿಸಿದರು.

ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಶೆ ಇಂದಿನ ಸಮಾಜಕ್ಕೆ ಗಂಭೀರ ಸವಾಲಾಗಿದ್ದು, ಅದು ವ್ಯಕ್ತಿಯ ಬದುಕಿನಷ್ಟೇ ಅಲ್ಲದೆ ಕುಟುಂಬ ಹಾಗೂ ಸಮಾಜದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದು ಹೇಳಿದರು.

ಮುಖ್ಯ ಭಾಷಣಕಾರರಾಗಿ ಬ್ರಹ್ಮಾಕುಮಾರಿಸ್ ಪ್ರಧಾನ ಕೇಂದ್ರ ಮೌಂಟ್ ಅಬು ವೈದ್ಯಕೀಯ ವಿಭಾಗದ ಅಧ್ಯಕ್ಷರು ಹಾಗೂ ಅಭಿಯಾನದ ನಿರ್ದೇಶಕರಾದ ರಾಜಯೋಗಿ ಡಾ. ಬನಾರಸಿಲಾಲ್ ಶಾ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಡಾ. ಶಿವಪ್ರಕಾಶ, ಬೀದರ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ರವೀಂದ್ರ ಗಬಾಡೆ ಭಾಗವಹಿಸಿದ್ದರು. ಗೌರವ ಅತಿಥಿಗಳಾಗಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಡಾ.ಪೂರ್ಣಿಮಾ ಜಾರ್ಜ್ ಹಾಗೂ ಎಚ್‌ಕೆಇ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ. ರಾಜನೀಶ ಎಸ್ ವಾಲಿ, ಡಾ.ಬಸವರಾಜ ಜಿ. ಪಾಟೀಲ್, ಡಾ.ರಾಜಶೇಖರ್ ಸೇಡಂಕರ್ ಉಪಸ್ಥಿತರಿದ್ದರು.

ಜಿಲ್ಲೆಯ ವಿವಿಧ ಭಾಗಗಳಿಂದ ವ್ಯಸನಮುಕ್ತರಾಗಿರುವ 150ಕ್ಕೂ ಹೆಚ್ಚು ಮಂದಿಯನ್ನು ಗೌರವ ಸನ್ಮಾನ ಮಾಡಿ ಅಭಿನಂದಿಸಲಾಯಿತು. ಬಿ.ಕೆ.ಸುಮನ್ ಬಹೆನಜಿ, ಬಿ.ಕೆ ಉಷಾ ಬಹೆನಜಿ, ಬಿ.ಕೆ.ಮಂದಾ ಬಹೆನಜಿ ಸೇರಿದಂತೆ ವಿವಿಧ ಸೇವಾ ಕೇಂದ್ರಗಳಿಂದ ಬಂದ ಬ್ರಹ್ಮಾಕುಮಾರಿ ಸಹೋದರರು ಹಾಗೂ ಸಹೋದರಿಯರು ಉಪಸ್ಥಿತರಿದ್ದರು. ಬಿ.ಕೆ ಗುರುದೇವಿ ಬಹೆನಜಿ ಅತಿಥಿಗಳನ್ನು ಸ್ವಾಗತಿಸಿ, ಬಿ.ಕೆ ರಾಧಾ ಬಹೆನಜಿ ನಿರೂಪಿಸಿದರು.



ಸಾಹಿತ್ಯದಿಂದ ಸೌಹಾರ್ದ ಸಮಾಜ: ಯಲಿಗಾರ

ಹೂವಿನಹಡಗಲಿ: ಸಾಹಿತ್ಯದಿಂದ ಸೌಹಾರ್ದ ಸಮಾಜ ಕಟ್ಟುವ ಕೆಲಸ ನಿರಂತರವಾಗಿ ಆಗಬೇಕು ಎಂದು ಸಾಹಿತಿ ಇಸ್ಮಾಯಿಲ್ ಯಲಿಗಾರ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಭಾನುವಾರ ಸಿಂಚನ ಪ್ರಕಾಶನ ಮೇ ಸಾಹಿತ್ಯ ಮೇಳ ಬಳಗದ ಸಹಯೋಗದಲ್ಲಿ ಆಯೋಜಿಸಿದ್ದ 2023 ಹಾಗೂ 2024ರ ಸಿಂಚನ ಕಾವ್ಯ ಪ್ರಶಸ್ತಿ ಪ್ರದಾನ, ಕವಿ ಎ.ಎಸ್.ಮಕಾನದಾರ ಅವರ ದರ್ವೇಶಿ ಪದ್ಯ ಕೃತಿ ಲೋಕಾರ್ಪಣೆ, ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕವಿ ವರ್ತಮಾನದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಗಂಭೀರ ಸಾಹಿತ್ಯ ಕೃಷಿಯತ್ತ ಗಮನ ಹರಿಸಬೇಕು.ಯುದ್ಧ ವಿರೋಧ ವಿಷಯ ಹೆಚ್ಚು ಕಾವ್ಯದ ವಸ್ತುವನ್ನಾಗಿಸಿ ಜಾಗೃತಿ ಮೂಡಿಸುವತ್ತ ಚಿತ್ತವಿರಲಿ ಎಂದು ಹೇಳಿದರು.

ಎ.ಎಸ್.ಮಕಾನದಾರ ರವರ ದರ್ವೇಶಿ ಪದ್ಯಗಳು ಸಮಕಾಲೀನ ಚಿಂತನೆಗೆ ಹಚ್ಚುವಂತೆ ವ್ಯಕ್ತವಾಗಿವೆ ಎಂದು ಹಾವೇರಿ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯೆ ಡಾ.ಪುಷ್ಪಾ ಶಲವಡಿಮಠ ಹೇಳಿದರು. ಸಿಂಚನ ಕಾವ್ಯ ಪ್ರಶಸ್ತಿ ಪುರಸ್ಕೃತರ ಕೃತಿಗಳಾದ ಗೋರಿ ಮತ್ತು ಧರ್ಮ ಹಾಗೂ ಕನ್ನಡೆಮೆನಿಪ್ಪಾ ನಾಡು ಕುರಿತು ಕವಿ ರಾಮಪ್ಪ ಕೋಟಿಹಾಳ ಮಾಹಿತಿ ನೀಡಿದರು.

ಪ್ರಶಸ್ತಿ ಪ್ರದಾನ: 2023 ಹಾಗೂ 2024ರ ಸಿಂಚನ ಕಾವ್ಯ ಪ್ರಶಸ್ತಿಯನ್ನು ಬೀಳಗಿಯ ಸೋಮಲಿಂಗ ಬೇಡರ ಆಲೂರ ಹಾಗೂ ಹುರಕಡ್ಲಿ ಶಿವಕುಮಾರ ರವರಿಗೆ 5,000 ರೂ. ನಗದು ಬಹುಮಾನ, 2000 ರೂ. ಮೌಲ್ಯದ ಪುಸ್ತಕಗಳನ್ನು ನೀಡಿ ಗೌರವಿಸಲಾಯಿತು.

ಶಾಖಾ ಗ್ರಂಥಾಲಯಾಧಿಕಾರಿ ಬಿ.ನಾರಾಯಣ್ ದಾಸ್, ಪ್ರಕಾಶಕಿ ಸವಿತಾ ಅಂಗಡಿ ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ್ದ ಸಾಹಿತಿ ತೋ.ಮ.ಶಂಕ್ರಯ್ಯ ಮಾತನಾಡಿದರು. ಸಿಂಚನ ಪ್ರಕಾಶನದ ಸಾಹಿತ್ಯ, ಓದು ಜನಮೇಜಯ ಪುಸ್ತಕ ಅಭಿಯಾನ ಬಗ್ಗೆ ಸುರೇಶ ಅಂಗಡಿ ವಿವರ ಒದಗಿಸಿದರು.

ಚಂದನಾ ಕಲಾ ಬಳಗದ ಎಎಂಪಿ ಪ್ರಶಾಂತ್, ಜಡೇಶ್ ಕನ್ನಡ ಭಾವಗೀತೆಗಳನ್ನು ಹಾಡಿದರು. ಪತ್ರಕರ್ತ ಎಂ.ದಯಾನಂದ ನಾಗರಾಜ ಮಲ್ಕಿಒಡೆಯರ್ ನಯನಾ ಅಂಗಡಿ ನಿರ್ವಹಿಸಿದರು. ತುಂಗಭದ್ರಾ ಪ್ರೌಢಶಾಲೆಯ 2024-25ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಗೌರವಿಸಲಾಯಿತು.

